# ಮಹಾಯೋಗಿ ವೇಮನ
# ಮತ್ತು
# ತಿರುವಳ್ಳುವರ

ಲೇಖಕರು

**ಡಾ. ಆರ್. ಬಿ. ಚಿಲಮಿ**

ಪ್ರಕಾಶಕರು

**ಮಹಾಯೋಗಿ ವೇಮನ ಪೀಠ**

ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೦೧೯

**ಮಹಾಯೋಗಿ ವೇಮನ ಮತ್ತು ತಿರುವಳ್ಳುವರ**

| | | |
|---|---|---|
| ಲೇಖಕರು | : | ಡಾ. ಆರ್. ಬಿ. ಚಿಲಮಿ<br>ಪ್ರಾಚಾರ್ಯರು (ನಿವೃತ್ತ)<br>"ಹೊಂಬೆಳಕು", ಮನೆ ನಂ. ೦೩<br>ಓಂ ಸ್ಕೂಲ್ ಹತ್ತಿರ, ಜಲದರ್ಶಿನಿ ನಗರ<br>ಧಾರವಾಡ–೫೮೦೦೦೩ |
| ಪ್ರಕಾಶಕರು | : | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಪ್ರಥಮ ಮುದ್ರಣ | : | ೨೦೧೯ |
| ಪುಟ ಸಂಖ್ಯೆ | : | xii+೨೨೪ |
| ಬೆಲೆ | : | ₹ ೩೦೦–೦೦ |
| ಪ್ರತಿಗಳು | : | ೬೦೦ |
| ಪ್ರಕಾಶಕರು | : | **ಡಾ. ಹರಿಲಾಲ ಪವಾರ**<br>ನಿರ್ದೇಶಕರು, ಪ್ರಸಾರಾಂಗ,<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| ಮುದ್ರಕರು | : | **ಡಾ. ವೇದಮೂರ್ತಿ ಎ. ಬಿ.**<br>ನಿರ್ದೇಶಕರು, ಮುದ್ರಣಾಲಯ<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |




## ಕುಲಪತಿಗಳ ನುಡಿ

ವಿಶ್ವವಿದ್ಯಾಲಯಗಳು ಪ್ರಪಂಚದ ವಿವಿಧ ವಿಷಯಗಳ ಜ್ಞಾನವನ್ನು ಸಮಗ್ರವಾಗಿ ಒಟ್ಟುಗೂಡಿಸಿ ಜನಸಮುದಾಯಕ್ಕೆ ತಲುಪಿಸುವ ಉದ್ದೇಶದಿಂದ ಸ್ಥಾಪಿತವಾದವುಗಳು ಎಂಬುದನ್ನು ನಾವು ಮರೆಯುವಂತಿಲ್ಲ. ಮುಖ್ಯವಾಗಿ ಇವುಗಳ ಗುರಿ ಸಂಗ್ರಹಿತ ಜ್ಞಾನವನ್ನು ಹಂಚುವುದು, ಹೊಸ ಜ್ಞಾನಧಾರೆಗಳನ್ನು ಸೃಷ್ಟಿಸುವುದು, ಬೆಳೆಸುವುದು ಮತ್ತು ಇದನ್ನು ಜನಸಾಮಾನ್ಯರಿಗೆ ತಲುಪಿಸುವುದು ಆಗಿದೆ. ಅಂದರೆ ಇದರ ಉದ್ದೇಶ ಮನುಕುಲದ ಸರ್ವತೋಮುಖ ಏಳಿಗೆಯಾಗಿದೆ. ಮನುಕುಲದ ಭೌತಿಕ ಪ್ರತಿಯೊಂದಿಗೆ ಆಧ್ಯಾತ್ಮಿಕ ಚಿಂತನೆಯನ್ನೂ ಸಹ ಬೆಳೆಸಲು ಪ್ರೇರಣೆ ಮಾಡುವುದು ವಿಶ್ವವಿದ್ಯಾಲಯಗಳ ಗುರಿಯೂ ಆಗಿದೆ.

ಶ್ರೇಷ್ಠವಾದ ತತ್ವ ಚಿಂತನೆಗಳನ್ನು ಮನುಕುಲಕ್ಕೆ ನೀಡಿದ ತೆಲುಗಿನ ಮಹಾಯೋಗಿ ವೇಮನರು ಕನ್ನಡದ ಸರ್ವಜ್ಞನಂತೆ. ಮಹಾಯೋಗಿ ವೇಮನರು ತೆಲುಗಿನ ಆಶುಕವಿ. ಅವರು ಸರಳ, ಸುಲಭ ಭಾಷೆಯಲ್ಲಿ ಸಾಮಾನ್ಯ ವಿಷಯದಿಂದ ಹಿಡಿದು ಗಹನವಾದ ವಿಷಯದವರೆಗೆ ಜನಹಿತ ವಿಷಯಗಳನ್ನು ಸಾರಿದ ಸಂತಕವಿ. ಈ ಪ್ರಜಾಕವಿಯು ಸಾವಿರಾರು ಪದ್ಯಗಳನ್ನು ರಚಿಸಿರುವರು. ಮೂಲ ತೆಲುಗಿನಲ್ಲಿದ್ದ ಪದ್ಯಗಳನ್ನೆಲ್ಲವನ್ನೂ ಒಟ್ಟುಗೂಡಿಸಿ ಕನ್ನಡಕ್ಕೆ ತರ್ಜುಮೆ ಮಾಡಿ "ವೇಮನರ ವಿಶ್ವಗೀತೆ" ಎಂಬ ಹೆಸರಿನಡಿಯಲ್ಲಿ ಶ್ರೀ ಎಸ್. ಆರ್. ಪಾಟೀಲರು ಪ್ರಕಟಿಸಿರುವುದು ತುಂಬಾ ಹೆಮ್ಮೆಯ ಸಂಗತಿ. ಈಗಿರುವ ಸಂಯೋಜಕರಾಗಿರುವ ಡಾ. ಎಚ್. ಬಿ. ನೀಲಗುಂದ ಅವರು ವೇಮನ ಪೀಠವನ್ನು ಮುಂದುವರೆಸಿಕೊಂಡು ನಡೆದಿರುವರು.

ಇಂಥ ಶ್ರೇಷ್ಠ ಚಿಂತಕರ ಚಿಂತನೆಗಳನ್ನು, ತಾತ್ವಿಕಾಂಶಗಳನ್ನು, ದರ್ಶನಗಳನ್ನು, ಸಿದ್ಧಾಂತಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದರಿಂದ ಹೊಸ ಹೊಸ ಆಲೋಚನಾ ಕ್ರಮಗಳು, ಚಿಂತನೆಗಳು ಉದ್ಭವವಾಗಲು ಸಹಕಾರಿಯಾಗುತ್ತದೆ ಎಂಬ ಚಿಂತನೆಯೊಂದಿಗೆ ಮಹಾಯೋಗಿ ವೇಮನ ಮತ್ತು ತಿರುವಳ್ಳವರ ತತ್ವಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಮಹಾಯೋಗಿ ವೇಮನ ಪೀಠದ ಪ್ರಸಾರೋಪನ್ಯಾಸ ಮಾಲೆಯ ವತಿಯಿಂದ ಪ್ರಕಟಮಾಡುತ್ತಿರುವುದು ಗೌರವಾರ್ಹ ಸಂಗತಿಯಾಗಿದೆ. ಪ್ರಸ್ತುತ "ಮಹಾಯೋಗಿ ವೇಮನ ಮತ್ತು ತಿರುವಳ್ಳವರ" ಗ್ರಂಥವನ್ನು ಬರೆದಿರುವ ಡಾ. ರುದ್ರಣ್ಣ ಬ. ಚಿಲುಮಿ ಅವರು ಅಭಿನಂದನಾರ್ಹರು. ಕನ್ನಡ ಪ್ರಾಧ್ಯಾಪಕರಾಗಿ ಮತ್ತು ಹಾರೂಗೇರಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ

ನಿವೃತ್ತಿಹೊಂದಿದ ಶ್ರೀಯುತರು ಶ್ರೇಷ್ಠ ಚಿಂತಕರು, ಆಧ್ಯಾತ್ಮದ ಅನುಭಾವಿಗಳು, ಸಮಾಜ ಸೇವೆಯಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡು ಇಂಥ ಮಹಾಪುರುಷರ ಕುರಿತು ಅನೇಕ ಗ್ರಂಥಗಳನ್ನು ಬರೆದಿರುವರು. ಅವರ ಅನುಭಾವದ ಮೂಸೆಯಲ್ಲಿ ಮೂಡಿ ಬಂದುದೇ "ಮಹಾಯೋಗಿ ವೇಮನ ಮತ್ತು ತಿರುವಳ್ಳವರ" ಎಂಬ ಈ ತೌಲನಿಕ ತಾತ್ವಿಕ ಗ್ರಂಥ. ಇಂತಿರುವ ಇವರ ಗ್ರಂಥವು ಅತ್ಯಂತ ಸ್ತುತ್ಯಾರ್ಹವಾದುದು.

ಮಹಾಯೋಗಿ ವೇಮನ ಮತ್ತು ತಮಿಳುನಾಡಿನ ಮಹರ್ಷಿ ಎಂದೇ ಖ್ಯಾತರಾದ ತ್ರಿಗರ್ತದ ಕವಿ, ಮಹರ್ಷಿ ತಿರುವಳ್ಳವರರ ಕುರಿತು ಆಳವಾದ ಅಧ್ಯಯನ ಮಾಡಿದುದಲ್ಲದೇ ಇವರೀರ್ವರ ಚಿಂತನೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿರುವ ಡಾ. ಚಿಲುಮಿಯವರ ಶ್ರಮ ಈ ಗ್ರಂಥದಲ್ಲಿ ಸಾರ್ಥಕವಾಗಿದೆ. ಇದು ಇಂದಿನ ಯುವಕರಿಗೆ, ಚಿಂತಕರಿಗೆ ಮಾರ್ಗದರ್ಶಕ ಗ್ರಂಥವಿದ್ದಂತಿದೆ. ಇಂಥ ಉತ್ತಮೋತ್ತಮ ಗ್ರಂಥವನ್ನು ಮುದ್ರಿಸಿ ಜನಸಾಮಾನ್ಯರಿಗೆ ದೊರೆಯುವಂತೆ ಮಾಡಿರುವ ಕರ್ನಾಟಕ ವಿಶ್ವವಿದ್ಯಾಲಯದ ಮಹಾಯೋಗಿ ವೇಮನ ಪೀಠಕ್ಕೆ ಅಭಿನಂದನೆಗಳು. ಇದೇ ರೀತಿ ವೇಮನ ಪೀಠವು ತನ್ನ ಕಾರ್ಯಚಟುವಟಿಕೆಗಳನ್ನು ವಿಭಿನ್ನ ಆಯಾಮಗಳಲ್ಲಿ ವಿಸ್ತರಿಕೊಳ್ಳುವುದರ ಮೂಲಕ ಮಾನವ ಕಲ್ಯಾಣದ ಕೆಲಸವನ್ನು ಮುಂದುವರೆಸಲೆಂದು ತುಂಬು ಮನದಿಂದ ಹಾರೈಸುತ್ತೇವೆ.

ದಿನಾಂಕ : ೧ ಜುಲೈ, ೨೦೧೯
ಧಾರವಾಡ

**ಪ್ರೊ. ಎ.ಎಸ್. ಶಿರಾಳಶೆಟ್ಟಿ**
ಪ್ರಭಾರ ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ



## ಸಂಯೋಜಕರ ನುಡಿ

ಪುಣ್ಯಪುರುಷರ ಭೂಮಿ ಭಾರತವೆಂದು ಪ್ರಾಚೀನ ಕಾಲದಿಂದಲೂ ಈ ದೇಶ ಕರೆಯಿಸಿಕೊಂಡಿದೆ. ಭಾರತವೆಂದರೆ ಅದೊಂದು ಭೌಗೋಳಿಕ ಪ್ರದೇಶವಲ್ಲ. 'ಭಾ' ಎಂದರೆ ಜ್ಞಾನ, 'ರತಿ' ಎಂದರೆ ರಮಿಸುವುದು ಎಂದರ್ಥ. ಅಂದರೆ ಪರಮ ಸತ್ಯದಲ್ಲಿ ಯಾರು ರಮಿಸುವರೋ, ಆನಂದಿಸುವರೋ ಅವರು ಭಾರತೀಯರು. ಇಂಥ ದರ್ಶನ ನೀಡಿದ ಅನೇಕ ದಾರ್ಶನಿಕರಲ್ಲಿ ಮಹಾಯೋಗಿ ವೇಮನ ಮತ್ತು ಮಹರ್ಷಿ ತಿರುವಳ್ಳವರ ಅವರು ಪ್ರಮುಖರು. ಇವರಿಬ್ಬರೂ ಭಾರತೀಯ ದಾರ್ಶನಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹಾನ್ ಸಂತ–ಮಹಂತರು. ಪರಮ ಜ್ಞಾನಿಗಳಾದ ಇವರು ಸ್ಥಾಪಿತ ಧರ್ಮ ಜಾತಿ, ಜನಾಂಗ, ದೇಶ, ಭಾಷೆ ಮತ್ತು ವ್ಯಕ್ತಿಗತ ಪ್ರಚಾರದಂತಹ ಮಾನವ ಕಲ್ಪಿತ ವಿಷಯಗಳನ್ನು ಮೀರಿ ಇರುವ ಪರಮ ಶಾಂತಿಯನ್ನು ದರ್ಶಿಸಲು ಮಾರ್ಗ ತೋರಿದ ಮಹಾನುಭಾವಿಗಳು. ಅದರಲ್ಲೂ ಮಹಾಯೋಗಿ ವೇಮನರು ಯಾವುದೇ ಸಂಘ–ಸಂಸ್ಥೆಗಳನ್ನು, ಮತ–ಸಂಪ್ರದಾಯಗಳನ್ನು ಸ್ಥಾಪಿಸದೇ ಕೇವಲ ಸತ್ಸಂಗದ ಮೂಲಕ ಸಮಾನ ಮನಸ್ಕರನ್ನು ಆಕರ್ಷಿಸಿ ಸಾಧನಾ ಪಥವನ್ನು ಉಪದೇಶಿಸಿದ್ದಾರೆ.

ಇಂಥ ಮಹಾಯೋಗಿ ವೇಮನರನ್ನು ಕನ್ನಡ ನಾಡು–ನುಡಿಗೆ ಪರಿಚಯಿಸಲು ತಮ್ಮ ಜೀವನವನ್ನು ಸಮರ್ಪಿಸಿದ ಹುಲಕೋಟಿಯ ಪೂಜ್ಯ ಶ್ರೀ ಎಸ್. ಆರ್. ಪಾಟೀಲರು ಮೂಲ ತೆಲುಗಿನಲ್ಲಿರುವ ವೇಮನರ ಬಹುಭಾಗ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸಿದರು. ಇವರ ಸಾಹಸದಿಂದ ಕನ್ನಡಿಗರು ವೇಮನರನ್ನು ತಿಳಿದುಕೊಳ್ಳುವಂತಾಯಿತು. ವೇಮನರ ಸಾಹಿತ್ಯವು ಸರ್ವರಿಗೂ ದೊರೆಯಲು ಸಹಾಯವಾಗುವಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಹಾಯೋಗಿ ವೇಮನ ಪೀಠವನ್ನು ಸ್ಥಾಪಿಸಿ, ವೇಮನರ ಬಹುಭಾಗ ಸಾಹಿತ್ಯವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಪ್ರಕಟಿಸಿದರು.

ಮಹಾಯೋಗಿ ವೇಮನಪೀಠವು ವೇಮನರ ತತ್ವ ಸಿದ್ಧಾಂತಗಳನ್ನು ಜನಸಮುದಾಯಕ್ಕೆ ತಲುಪಿಸಲು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂದಿದೆ. ಇದರ ಭಾಗವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರಚಾರೋಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬರಲಾಗಿದೆ. "ಮಹಾಯೋಗಿ ವೇಮನ ಮತ್ತು ತಿರುವಳ್ಳವರ" ತತ್ವ–ಸಿದ್ಧಾಂತಗಳನ್ನು ಆಳವಾಗಿ ಅಧ್ಯಯನ ಮಾಡಿರುವ ಡಾ. ರುದ್ರಣ್ಣ ಬ. ಚಿಲುಮಿಯವರು ಹಾರೂಗೇರಿ ಪದವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ನಿವೃತ್ತಿ ಹೊಂದಿ ಧಾರವಾಡದಲ್ಲಿ ವಾಸಿಸಿರುವರು.

ಆದರೆ ಅವರು ವಿಶ್ರಾಂತದ ಬದುಕಿಗೆ ಆಸರೆಯಾಗದೇ ಅವಿಶ್ರಾಂತವಾಗಿ ಸಾಹಿತ್ಯದ ರಚನೆ ಮತ್ತು ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಹಾಗೂ ಧಾರವಾಡದಲ್ಲಿ ಸ್ಥಾಪಿತವಾಗಿರುವ ಉನ್ನತ ಶಿಕ್ಷಣ ಅಕಾಡೆಮಿಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸುತ್ತಲಿರುವರು. ವೇಮನ ಪೀಠದ ಓಇಸಿ (ಮುಕ್ತ ಆಯ್ಕೆ ಪತ್ರಿಕೆ) ಕೋರ್ಸಿನ ಅತಿಥಿ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ವೇಮನರ ಸಾಹಿತ್ಯವನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಚಿಲುಮಿಯವರು ಈಗಾಗಲೇ ವೇಮನ ಮತ್ತು ಸರ್ವಜ್ಞರ ಬಗೆಗೆ ತೌಲನಿಕ ಗ್ರಂಥವನ್ನು ರಚಿಸಿರುವರು. ಅದು ೨೦೧೮ ರಲ್ಲಿ ಕ.ವಿ.ವಿ. ಪ್ರಸಾರಾಂಗದಿಂದ ಪ್ರಕಟಗೊಂಡಿದೆ. ಸದಾ ಲವಲವಿಕೆಯಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡ ಚಿಲುಮಿಯವರ ಅಧ್ಯಯನ ಮತ್ತು ಚಿಂತನೆಯ ಫಲವಾಗಿ "ಮಹಾಯೋಗಿ ವೇಮನ ಮತ್ತು ತಿರುವಳ್ಳವರ" ಎಂಬ ಈ ಗ್ರಂಥವು ಪ್ರಕಟವಾಗುತ್ತಿರುವುದು ನಮಗೆ ಸಂತಸ ತಂದಿದೆ. ಈ ಕಾರಣದಿಂದ ಡಾ.ಚಿಲುಮಿಯವರು ಅಭಿನಂದನಾರ್ಹರು.

ಇಂಥ ಅಮೂಲ್ಯ ಕಾರ್ಯವನ್ನು ನೆರವೇರಿಸಲು ಅನುಮತಿಯನ್ನಿತ್ತ ಮಹಾಯೋಗಿ ವೇಮನ ಪೀಠದ ಸಲಹಾ ಸಮಿತಿಯ ಸರ್ವ ಸದಸ್ಯರಿಗೂ, ಗೌರವಾನ್ವಿತ ವಿಶ್ರಾಂತ ಕುಲಪತಿಗಳಾದ ಪ್ರೊ. ಭೀ. ಗಾಯಿ ಅವರಿಗೂ, ಪ್ರಸ್ತುತ ಪ್ರಭಾರಿ ಕುಲಪತಿಗಳಾಗಿರುವ ಪ್ರೊ. ಎ.ಎಸ್. ಶಿರಾಳ ಶೆಟ್ಟಿ ಅವರಿಗೂ ಹೃದಯಪೂರ್ವಕ ಧನ್ಯವಾದಗಳು. ಕುಲಸಚಿವರಾಗಿರುವ ಪ್ರೊ. ಸಿ. ಬಿ. ಹೊನ್ನು ಸಿದ್ಧಾರ್ಥ ಅವರಿಗೂ ಧನ್ಯವಾದಗಳು. ಸುಂದರವಾಗಿ ಮುದ್ರಣ ಮಾಡಿಕೊಟ್ಟ ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಸಿಬ್ಬಂದಿಗಳಿಗೂ ಧನ್ಯವಾದಗಳು. ಪ್ರಸಾರದ ಜವಾಬ್ದಾರಿಯನ್ನು ಹೊತ್ತಿರುವ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಿಗೂ ಹಾಗೂ ಸರ್ವ ಸಿಬ್ಬಂದಿಯವರಿಗೂ ಪ್ರಣಾಮಗಳು. ಈ ಕೃತಿಯ ಡಿ.ಟಿ.ಪಿ. ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿರುವ ಶ್ರೀ ಆರ್. ಕೆ. ಹೆಗಡೆ ಅವರಿಗೂ ಹಾಗೂ ಮುಖಪುಟ ವಿನ್ಯಾಸಗೊಳಿಸಿದ ಚಿತ್ತಾರ ಗ್ರಾಫಿಕ್ಸ್‌ನ ಶ್ರೀ ಮಾರುತಿ ಅವರಿಗೂ ನನ್ನ ಅನಂತ ಕೃತಜ್ಞತೆಗಳು. ಪರೋಕ್ಷ ಮತ್ತು ಅಪರೋಕ್ಷವಾಗಿ ಈ ಪವಿತ್ರ ಕಾರ್ಯಕ್ಕೆ ಸಹಾಯ-ಸಹಕಾರ ಸಲ್ಲಿಸಿದ ಸರ್ವರಿಗೂ ವಂದನೆಗಳು.

ದಿನಾಂಕ : ೧ ಜುಲೈ, ೨೦೧೯

**ಡಾ. ಎಚ್. ಬಿ. ನೀಲಗುಂದ**
ಸಂಯೋಜಕರು
ಮಹಾಯೋಗಿ ವೇಮನ ಪೀಠ
ಕ.ವಿ.ವಿ., ಧಾರವಾಡ



## ಲೇಖಕರ ಮಾತು

ಪ್ರಪಂಚದಲ್ಲಿಯೇ ಭಾರತ ದೇಶವು ಅಧ್ಯಾತ್ಮ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಪಾರ, ಅನನ್ಯವಾದುದು. ಪುಣ್ಯ ಪುರುಷರ ಭೂಮಿ ಭಾರತವೆಂದು ಪ್ರಾಚೀನ ಕಾಲದಿಂದಲೂ ಕರೆಯಿಸಿಕೊಂಡಿದೆ. ಭರತ ಭೂಮಿಯನ್ನು ಅನೇಕ ಋಷಿ-ಮುನಿಗಳು ಪವಿತ್ರಗೊಳಿಸಿದ್ದಾರೆ. ಪ್ರಪಂಚದಲ್ಲಿಯೇ ಮಾನವ ಧರ್ಮಕ್ಕೆ ಮೆರುಗು ತಂದ ದೇಶವೆಂಬ ಅಗ್ಗಳಿಕೆಗೆ ಪಾತ್ರವಾಗಿದೆ. ಕನ್ನಡದ ಆದಿಕವಿ ಪಂಪ ಮಹಾಕವಿಯು ಹೇಳಿದಂತೆ 'ಮಾನವಕುಲಂ ತಾನೊಂದೇವಲಂ' ಎಂಬೋಕ್ತಿಯಂತೆ ಮಾನವ ಧರ್ಮ ಅಥವಾ ಮಾನವ ಕುಲ (ಜಾತಿ) ಒಂದೇ ಒಂದು ಮಾತ್ರ. ಮಾನವರಲ್ಲಿ ಬೇರೆ ಬೇರೆ ಜಾತಿಗಳೆಂಬುದಿಲ್ಲವೇ ಇಲ್ಲವೆಂದು ಹೇಳಿದ ಮಹಾಕವಿ ಪಂಪ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ತಮ್ಮ ಕಾವ್ಯಗಳ ಮುಖಾಂತರ ಹೇಳಿದ್ದುಂಟು! ಕಾವ್ಯ ಧರ್ಮ ಮತ್ತು ಮಾನವ ಧರ್ಮಗಳೆರಡನ್ನೂ ಸಮಾನತೆಯಿಂದ ಕಂಡವರು. ಅಂತೆಯೇ ಅವರೆನಿಸಿಕೊಂಡರು ಋಷಿ ಕವಿಗಳು! ಅವರಾದರೂ ಬರಹದಂತೆ ಬದುಕಿದವರು - ಬದುಕಿದಂತೆ ಬರೆದವರು. ಅಂದರೆ ಬದುಕು ಮತ್ತು ಬರಹಗಳೆರಡೂ ಒಂದೇಯಾಗಿದ್ದವು. 'ಆಚಾರಕ್ಕರಸಾಗು, ನೀತಿಗೆ ಪ್ರಭುವಾಗು, ಮಾತಿನಲಿ ಚೂಡಾಮಣಿಯಾಗು, ಹಾಗೆಯೇ ಜ್ಯೋತಿಯೇ ಆಗು ಈ ಜಗಕೆಲ್ಲ ಎಂದಿದ್ದಾರೆ. ಮಾನವನು ಈ ಸಮಾಜದಲ್ಲಿ ಕೂಡಿ ಬಾಳಬೇಕು. ಸಹಕಾರ ತತ್ತ್ವವೇ ನಮ್ಮೆಲ್ಲರ ಉಸಿರಾಗಬೇಕು. ಮಾನವನನ್ನು ಬಿಟ್ಟು ಧರ್ಮವಿಲ್ಲ  ಧರ್ಮವನ್ನು ಬಿಟ್ಟು ಮಾನವ ಬದುಕಬಾರದು ಎಂಬ ಎಚ್ಚರಿಕೆಯನ್ನು ಮನುಕುಲಕ್ಕೆ ಆಗಾಗ ಕೊಡುತ್ತಲೇ ಬಂದಿದ್ದಾರೆ. ನನ್ನ ದೃಷ್ಟಿಯಲ್ಲಿ ಋಷಿ-ಮುನಿಗಳು ಬೇರೆಯಲ್ಲ ಕವಿಗಳು ಬೇರೆಯಲ್ಲ. ಇಬ್ಬರೂ ಮಹಾ ತಪಸ್ವಿಗಳೇ! ಆದುದರಿಂದ ಅವರು ಹೇಳಿದ ಮಾತುಗಳು ನಮಗೆ ವೇದ ವಾಕ್ಯಗಳಂತೆ ಪರಿಣಮಿಸಿವೆ. ಇವು ನಮ್ಮೆಲ್ಲರ ಬದುಕಿಗೆ ದಾರಿದೀಪದಂತಿವೆ. ಮಾನವ ಬಯಸುವುದು ಇದನ್ನೇ. ತನ್ನೊಂದಿಗೆ ಇತರರೂ ಜ್ಞಾನಿಯಾಗಬೇಕು. ಸರ್ವಾಂಗೀಣ ಪ್ರಗತಿಗಾಗಿ ಹಂಬಲಿಸುತ್ತಿರಬೇಕು. ಅರಿವು ಇಲ್ಲವೆ ಜ್ಞಾನದಿಂದ ನಮ್ಮ ಬದುಕನ್ನು ಅರ್ಥವತ್ತಾಗಿ ರೂಪಿಸಿಕೊಳ್ಳಬಹುದು. ಆದರೆ ಜ್ಞಾನ ಎನ್ನುವುದು ಎರವಲು ರೂಪದಲ್ಲಿ ಅಂದರೆ ಇನ್ನೊಬ್ಬರಿಂದ ಬಂದ ವಸ್ತು. ಒಬ್ಬ ತಿಳಿದುಕೊಂಡದ್ದನ್ನು ಇನ್ನೊಬ್ಬನಿಗೆ ಹೇಳಿದಾಗ, ಹೇಳಿದಾತ ತಿಳಿದುಕೊಂಡದ್ದನ್ನು ಸ್ವಲ್ಪ ಮಟ್ಟಿಗಾದರೂ ಕೇಳುವವನು ತಿಳಿದುಕೊಳ್ಳಬಲ್ಲ ಎನ್ನುವುದು ನಮ್ಮ ಅನುಭವ. ಹಾಗೆಯೇ ತಿಳಿದುಕೊಂಡವನು ಅದನ್ನು ಇನ್ನೊಬ್ಬರಿಗೆ ಸ್ವಲ್ಪ

ಮಟ್ಟಿಗಾದರೂ ಮತ್ತೆ ತಿಳಿಯ ಹೇಳಬಲ್ಲ. ಅದನ್ನು ಗುರು–ಶಿಷ್ಯರ ಪರಂಪರೆಯೆಂದು ಕರೆಯಬಹುದು. ಇದರಿಂದಾಗಿ ಜ್ಞಾನ ಎನ್ನುವುದು ದೀಪದಿಂದ ದೀಪ ಹಚ್ಚುವ ಹಾಗೆ ಅಥವಾ ನದಿ ಹರಿಯುತ್ತಲೇ ಸಮುದ್ರ ಸೇರುವ ಹಾಗೆ ನಿರಂತರ ಒಬ್ಬರಿಂದ ಇನ್ನೊಬ್ಬರ ಕಡೆಗೆ ಸದಾ ಪ್ರವಹಿಸುತ್ತಿರುವ ಒಂದು ಅದ್ಭುತವಾದ ವಸ್ತು ಎನ್ನುವುದು ಸತ್ಯವೇ ಆಗಿದೆ. ಆದರೆ ಜ್ಞಾನವು ಈ ಕಾರಣದಿಂದಲೇ ಹೇಳುವವನಿಗೆ ಹೇಳುವ ಅಧಿಕಾರಕ್ಕೆ ಮತ್ತು ಕೇಳುವವನಲ್ಲಿ ಕೇಳುವ ವಿನಯ ಇರಬೇಕೆಂಬ ಹೇಳುವವನ ಅಹಂಕಾರಕ್ಕೂ ಕಾರಣವಾಗುತ್ತದೆ. ಇದರಿಂದಾಗಿ ಜ್ಞಾನ ಎನ್ನುವದು ಪರೋಕ್ಷವಾಗಿ ಮನುಷ್ಯರಲ್ಲಿ ಅಸಮಾನತೆಯನ್ನು ಹುಟ್ಟು ಹಾಕುತ್ತದೆ. ಈ ಅಸಮಾನತೆಯು ಇಲ್ಲವಾಗ ಬೇಕಾದರೆ ಆತ ಅಕಾಯ ಚರಿತ್ರನಾದರೆ ಸಾಧ್ಯವಾಗುತ್ತದೆ. ಆಗ ಇಂಥ ಮಹಾಯೋಗಿಗಳ ಪುಣ್ಯ ಪುರುಷರ ಮಾರ್ಗದರ್ಶನದ ಕಡೆಗೆ ಗಮನ ಹರಿಸುವುದು ಸಜಹ 'ಕ್ರಿಯೆ' ! ಅಷ್ಟ ಮದಗಳಾಗಲಿ, ಅರಿಷಡ್ ವರ್ಗಗಳಾಗಲಿ ಮನುಷ್ಯನಲ್ಲಿಯೇ ಉತ್ಪತ್ತಿಯಾಗುವ ದುರ್ಗುಣಗಳವು. ಅವುಗಳನ್ನು ಅಳಿಸಿ ಹಾಕಿದಾಗಲೇ ಜ್ಞಾನದ ಶಿಸ್ತು, ಸತ್ಯದ ಬಿತ್ತು ಸಾಧ್ಯವಾದೀತು. ಇಲ್ಲದಿರೆ ಅವುಗಳ ದಾಸನಾಗಿ ತನ್ನ ಬದುಕನ್ನೇ ಹಾಳು ಮಾಡಿಕೊಳ್ಳಲು ಸಾಧ್ಯವಿದೆ. ಅದರಲ್ಲೂ ಮನುಷ್ಯನಿಗೆ 'ಅಹಂಕಾರ'ವೆಂಬ ಮೋಹ ಸೇರಿಬಿಟ್ಟರೆ ಆತನಿಗೆ ಜಗತ್ತೇ ಕಾಣುವುದಿಲ್ಲ. ಅಹಂಕಾರ ನಿರಸನವೇ ಜ್ಞಾನ ಸಂಪಾದನೆಯ ಕೀಲಿಯ ಕೈಯಿದ್ದಂತೆ! ವಿದ್ಯೆ, ವಿನಯ, ಪರೋಪಕಾರ, ಭಕ್ತಿ, ಶ್ರದ್ಧೆ, ತ್ಯಾಗ, ಸತ್ಯ, ಧರ್ಮ, ಪ್ರಾಮಾಣಿಕತೆ, ಕರ್ತವ್ಯ ಪ್ರಜ್ಞೆ ಅಥವಾ ಕಾಯಕ ಪ್ರಜ್ಞೆ, ಸಮಯ ಪ್ರಜ್ಞೆ, ಶಿಸ್ತು, ಸಂಯಮ, ಅಹಿಂಸೆ, ನಿಸ್ವಾರ್ಥ ಸೇವೆ, ಸದ್ಗುಣ ಸಂಪಾದನೆ, ಸಹಕಾರ ತತ್ತ್ವ ಈ ಮುಂತಾದ ನೀತಿಯ ತತ್ತ್ವಗಳ ದಾಸನಾದವನಿಗೆ ಜ್ಞಾನ ಸಂಪಾದನೆಯಾಗಲು ಸಾಧ್ಯವಾಗುತ್ತದೆ. ಇಂತಹ ಸದ್ಗುಣಿಗೆ ಕತ್ತಲೆಯೆಂಬುದು ತನ್ನಿಂದ ತಾನೆ ಪಲಾಯನಗೊಂಡು ಬೆಳಕು (ಜ್ಞಾನ) ಪ್ರಾಪ್ತವಾಗುತ್ತದೆ. ಅರಿತರೆ ಶರಣ ಮರೆತರೆ ಮಾನವ ಎಂದುದಾಗಿ ಬಸವಾದಿ ಶಿವಶರಣರು ಇದೇ ಅರ್ಥದಲ್ಲಿಯೇ ಹೇಳಿರಬೇಕೆನಿಸುತ್ತದೆ. ಇಂಥ ಜ್ಞಾನ ಪ್ರಾಪ್ತಿಯ ಜೊತೆ ಜೊತೆಗೆ ಮೋಕ್ಷವೂ ಪ್ರಾಪ್ತಿಯಾಗಲು ಸಾಧ್ಯವಾಗುತ್ತದೆ. ಮೋಕ್ಷವೆಂದರೆ ಶಾಶ್ವತ ಸುಖ ಶಾಂತಿ ನೆಮ್ಮದಿ ಜೀವನದಲ್ಲಿ ನೆಲೆಸುವಿಕೆ. ಸತ್ಯದ ದರ್ಶನವೇ ಅಥವಾ ಸಾಕ್ಷಾತ್ಕಾರವೇ ತತ್ತ್ವಜ್ಞಾನದ ಧ್ಯೇಯೋದ್ದೇಶವಾಗಿದೆ. ತತ್ತ್ವಜ್ಞಾನಕ್ಕೆ ಅನುಭವವೇ ಅಡಿಪಾಯ. ಇಂಥ ಅನುಭಾವದ ಅಡಿಗೆಯನು ಮಾಡಿ ತಾನೂ ಉಂಡು, ಇತರರಿಗೂ ಅದರ ಸವಿಯನ್ನು ಹಂಚಿ ಉಣಬಡಿಸುವವರು ಮಹಾಯೋಗಿ ವೇಮನ ಮತ್ತು ತಿರುವಳ್ಳುವರರಂತಹ ಮಹಾಜ್ಞಾನಿಗಳು. ಅವರು ಜನ್ಮಧರಿಸಿ ಬಂದದ್ದು ಮನು ಕುಲದ ಉದ್ಧಾರಕ್ಕಾಗಿ, ಲೋಕೋದ್ಧಾರಕ್ಕಾಗಿ ಎಂಬುದನ್ನು ನಾವು ಮರೆಯಕೂಡದು. ಇಂತಹ ಮಹಾಯೋಗಿಗಳ ದಿವ್ಯ ಚರಿತ್ರೆ ಮತ್ತು ಅವರ ತತ್ತ್ವ ಸಿದ್ಧಾಂತಗಳ ದಿವ್ಯ



ದರ್ಶನ ಮಾಡಿಸುವುದೇ ಈ ಗ್ರಂಥ ರಚನೆಯ ಮುಖ್ಯ ಉದ್ದೇಶ, ಇವರಿಬ್ಬರೂ ಜಾಗತಿಕ ತತ್ತ್ವಜ್ಞಾನಿ ದಾರ್ಶನಿಕರಲ್ಲಿಯೇ, ಅನುಭಾವಿ ಕವಿ ಪುಂಗವರುಗಳಲ್ಲಿಯೇ, ವೈಚಾರಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ತತ್ತ್ವಜ್ಞಾನದಲ್ಲಿಯೇ ಮಹಾನ್ ಶ್ರೇಷ್ಠ ಚಿಂತಕರು. ಆದುದರಿಂದ ಈ ಇಬ್ಬರೂ ಮಹಾತ್ಮರ ಜೀವನ–ಸಾಧನೆ ಮತ್ತು ಸಿದ್ಧಿಯ ಹೆಜ್ಜೆಯ ಗುರುತುಗಳನ್ನು ಈ ಕೃತಿಯಲ್ಲಿ ಕಟ್ಟಿಕೊಡಲು ಪ್ರಯತ್ನ ಮಾಡಲಾಗಿದೆ. ಇವರು ಬಿತ್ತರಿಸಿದ ಧರ್ಮ–ಅರ್ಥ–ಕಾಮ–ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ತಮ್ಮ ತಮ್ಮ ಪದ ಪದ್ಯಗಳಲ್ಲಿ ಬಹಳ ಅರ್ಥವತ್ತಾಗಿ ಸಾಮಾನ್ಯನಿಗೂ ತಿಳಿಯುವ ರೀತಿಯಲ್ಲಿ ತಮ್ಮ ಮೂಲ ಭಾಷೆ ತೆಲುಗು–ತಮಿಳುಗಳಲ್ಲಿ ಪ್ರಕಟಿಪಡಿಸಿದ್ದಾರೆ. ಅವು ಕನ್ನಡಕ್ಕೆ ಅನುವಾದಗೊಂಡು ನಮಗೂ ಉಪಕಾರವಾದದ್ದುಂಟು!

ಈ ಇಬ್ಬರೂ ಮಹಾಪುರುಷರ ದಿವ್ಯ ಸಂದೇಶಗಳನ್ನು ತಾತ್ತ್ವಿಕ ನೆಲೆಯಲ್ಲಿ ಈ ನಾಡಿನಲ್ಲಿ ಜನತೆಗೆ ತಿಳಿಯುವ ತಿಳಿಸುವ ಸುವಿಚಾರದ ದೃಷ್ಟಿಯಿಂದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹು ವರ್ಷಗಳಿಂದ ಸ್ಥಾಪಿತವಾದ "ಮಹಾಯೋಗಿ ವೇಮನ ಪೀಠ" ಧಾರವಾಡವು ಕ್ರಿಯಾಶೀಲವಾಗಿ, ವ್ಯಾಸಂಗ ಮಾಡುತ್ತಿರುವಂತಹ ವಿದ್ಯಾರ್ಥಿಗಳ ಅಧ್ಯಯನದ ಶಿಸ್ತಿಗಾಗಿ ಈ ಗ್ರಂಥವನ್ನು ಬರೆಯಲು ಪ್ರಯತ್ನಿಸಲಾಗಿದೆ. ಇದಕ್ಕೆ ಪ್ರೋತ್ಸಾಹದ ಉತ್ಸಾಹ ತುಂಬಿದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪ್ರಮೋದ ಭೀ.ಗಾಯಿ ಅವರನ್ನು, ಕುಲಸಚಿವರಾದ ಡಾ. ಹೊನ್ನು ಸಿದ್ಧಾರ್ಥ ಅವರನ್ನೂ, ವೇಮನ ಪೀಠದ ಸಂಯೋಜಕರಾದ ಡಾ. ಎಚ್.ಬಿ.ನೀಲಗುಂದ ಅವರನ್ನು, ಕನಕ ಪೀಠದ ಸಂಯೋಜಕರಾದ ಡಾ. ಬಿ.ವ್ಹಿ.ಯಕ್ಕುಂಡಿಮಠ ಅವರನ್ನು, ಡಾ. ಆರ್.ಸಿ.ಹಿರೇಮಠ, ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಜೆ.ಎಮ್.ನಾಗಯ್ಯ ಅವರನ್ನು, ಆತ್ಮೀಯ ಮಿತ್ರರಾದ ಡಾ. ಧನವಂತ ಹಾಜವಗೋಳ ಅವರನ್ನು, ಈ ಗ್ರಂಥದ ಅಕ್ಷರ ಜೋಡಣೆ ಮಾಡಿದ ಶ್ರೀ ಆರ್.ಕೆ.ಹೆಗಡೆ ಅವರನ್ನು, ಈ ಕೃತಿಯ ಪ್ರಕಾಶನದ ಬೆಳಕು ನೀಡಿದ ಪ್ರಸಾರಾಂಗದ ನಿರ್ದೇಶಕರಾದ ಡಾ. ಹರಿಲಾಲ ಪವಾರ ಹಾಗೂ ಅವರೆಲ್ಲ ಸಿಬ್ಬಂದಿಯವರಿಗೂ, ಹಾಗೆಯೇ ಸುಂದರವಾಗಿ ಮುದ್ರಣ ಕಾರ್ಯ ಕೈಕೊಂಡ ಕ.ವಿ.ವಿ. ಮುದ್ರಣಾಲಯದ ನಿರ್ದೇಶಕರು ಹಾಗೂ ಅವರ ಸಿಬ್ಬಂದಿಯವರಿಗೂ ಮತ್ತು ಪರೋಕ್ಷ ಮತ್ತು ಅಪರೋಕ್ಷವಾಗಿ ನನ್ನ ಈ ಬರಹಕ್ಕೆ ಸಹಾಯ ಸಹಕಾರ ಒದಗಿಸಿದ ಸರ್ವ ಮಹನೀಯರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು ಮತ್ತು ವಂದನೆಗಳು.

ಈ ಗ್ರಂಥ ರಚನೆಯಲ್ಲಿ ಮೂಲ ಗ್ರಂಥ ಕರ್ತೃ ದಿ. ದಿವಂಗತ ಎಸ್.ಆರ್.ಪಾಟೀಲರ "ಮಹಾಯೋಗಿ ವೇಮನ ವಿಶ್ವಗೀತೆ" ತುಂಬಾ ನೆರವು

ನೀಡಿದೆ. ಆದುದರಿಂದ ಅವರ ಆತ್ಮ ಚೇತನಕ್ಕೆ ಹಣೆಮಣಿಯುವೆ. ಹಾಗೆಯೇ ಡಾ. ಅನ್ಬನ್ ಅವರು ತಿರುವಳ್ಳುವರರು ರಚಿಸಿದ ಕನ್ನಡ ಅನುವಾದದ ತಿರುಕ್ಕುರಳ್ ಕಾವ್ಯಕೃತಿಯನ್ನು ನನಗಿತ್ತು ಸಹಕಾರ ಸಲ್ಲಿಸಿ ಉಪಕರಿಸಿದ್ದಾರೆ. ಅವರಿಗೂ ನನ್ನ ವಂದನೆಗಳು. ಹಾಗೆಯೇ ಈ ಗ್ರಂಥ ರಚನೆಯಲ್ಲಿ ಅನೇಕ ವಿದ್ವಾಂಸರು, ಸಂಶೋಧಕರುಗಳ ಗ್ರಂಥಗಳಲ್ಲಿರುವ ಸಂಗತಿಗಳನ್ನು, ಅಭಿಪ್ರಾಯಗಳನ್ನು ಎರವಲು ಪಡೆಯಲಾಗಿದೆ. ಅವರಲ್ಲಿ ಪ್ರಮುಖವಾಗಿ ಸಿದ್ಧಗಂಗಾ ಶ್ರೀಮಠದ "ಅನುಭಾವ ಪಥ" ೨೦೧೦ ರಲ್ಲಿ ಪ್ರಕಟವಾದ ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳ ೧೧೧ನೆಯ ಮಹೋತ್ಸವ ಸಂಪುಟದಲ್ಲಿರುವ "ತಿರುವಳ್ಳುವರ್" ಲೇಖನದ ಕರ್ತೃ, ಡಾ. ಪಾ.ಶ.ಶ್ರೀನಿವಾಸ ಅವರ ಸಮಗ್ರ ಲೇಖನವನ್ನು ಬಳಸಿಕೊಳ್ಳಲಾಗಿದೆ. ಆದುದರಿಂದ ಅವರನ್ನು ತುಂಬು ಮನದಿಂದ ನೆನೆದು ಅಭಿನಂದಿಸುವೆನು (ಪುಟ– ೪೪೬ ರಿಂದ ೪೫೩ ರ ವರೆಗೆ).

ಇವರಿಬ್ಬರೂ ಅಪರೂಪದ ಸಂತರು, ಮಹಾಂತರು, ದಾರ್ಶನಿಕರು, ಚಿಂತಕರು, ಮಹರ್ಷಿಗಳು, ಮಹಾಯೋಗಿಗಳು, ತ್ಯಾಗ ವೀರರು; ಇಂತಹ ವರ ಮಹಾತ್ಮರ ಸಮಗ್ರ ಅಧ್ಯಯನ ಮಾಡಿ ಎನ್ನ ಮತಿಗೆ ಹೊಳೆದಷ್ಟು ಈ ಗ್ರಂಥದಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದೇನೆ. ಆದರೂ ಇದೊಂದು ಸಿಂಧುದಲ್ಲಿನ ಬಿಂದು ಮಾತ್ರ. ಇವರೀರ್ವರೂ ದಾರ್ಶನಿಕರ ಸಿದ್ಧಿ–ಸಾಧನೆ–ವ್ಯಕ್ತಿತ್ವವನ್ನು ಮತ್ತು ಅವರವರ ತತ್ತ್ವ ಸಿದ್ಧಾಂತಗಳ ಸಾಹಿತ್ಯದ ಬೆಳಕು ಚೆಲ್ಲಲು ಮಾಡಿದ ಒಂದು ಸ್ವಪ್ರಯತ್ನವೇ ಆಗಿದೆ ಎಂದು ವಿನಮ್ರವಾಗಿ ಹೇಳಬಲ್ಲೆ! ಈ ಗ್ರಂಥದಲ್ಲಿರುವ ತಪ್ಪು ಒಪ್ಪುಗಳಿಗೆ ನಾನೇ ಹೊಣೆಗಾರನು ಮತ್ತು ಅಕ್ಷರ ದೋಷಗಳಾಗಿದ್ದಲ್ಲಿ ಕ್ಷಮೆಯಿರಲೆಂದು ಬಯಸುವೆ. ಸಹೃದಯ ಓದುಗರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳು.

**– ಡಾ. ಆರ್. ಬಿ. ಚಿಲಮಿ**



## ಪರಿವಿಡಿ


ಕುಲಪತಿಗಳ ನುಡಿ

ಸಂಯೋಜಕರ ನುಡಿ

ಲೇಖಕರ ನುಡಿ

ಅಧ್ಯಾಯಗಳು

**೧ ವಿಷಯ ಪ್ರವೇಶ** ೧

**೨ ತಮಿಳು ನಾಡಿನ ಮಹರ್ಷಿ ತಿರುವಳ್ಳುವರರು** ೬

**೩ ತಿರುವಳ್ಳುವರ್‌ರ ಚರಿತಾಮೃತ** ೧೨

**೪ ತಿರುಕ್ಕುರುಳ್ ಕಾವ್ಯದ ವಿವೇಚನೆ** ೧೫

**೫ ವೇಮನ ಯೋಗಿಯ ಚರಿತಾಮೃತ** ೩೯

**೬ ತಿರುವಳ್ಳುವರ್ ವೇಮನರ ಪದ–ಪದ್ಯಗಳ ತಾತ್ತ್ವಿಕಾಂಶಗಳ ತೌಲನಿಕ ಅಧ್ಯಯನ** ೭೬

**ಅ. ಧರ್ಮ ಭಾಗ**

**ಆ. ದೇವರ ಸ್ತುತಿ**

ದೇವರ ಬಗೆಗೆ ವೇಮನರ ಪದ್ಯಗಳು

ತಾತ್ಪರ್ಯ

**ಇ. ಧರ್ಮ ವಿಭಾಗ**

ವರಯೋಗಿ ವೇಮನರ ಧರ್ಮದರ್ಶನ

ದಾನ ಧರ್ಮ ಮಾಡುವುದು

ಗೃಹಸ್ಥ ಧರ್ಮ

ಮಕ್ಕಳ ಭಾಗ್ಯ

ವೇಮನರ ಪದಗಳಲ್ಲಿ ಮಕ್ಕಳ ಭಾಗ್ಯ

ಉಪಕಾರ ಸ್ಮರಣೆ

ಸಮದರ್ಶಿತ್ವದ ಗುಣ : ಧರ್ಮ ಭಾಗದಲ್ಲಿರುವ ಮುಖ್ಯ ಅಂಶವಿದಾಗಿದೆ
ಸಂಯಮ–ಆತ್ಮ ಸಂಯಮ
ಕಪಟಾಚಾರ ಮೋಸ–ವಂಚನೆ ತೊರೆಯುವುದು
ವಿಧಿಯ (ವಿಶ್ವನಿಯಮ) ಆಟ

**ಈ. ಅರ್ಥ ವಿಭಾಗ**
ತಿರುವಳ್ಳುವರರು ಹೇಳಿದ್ದು ಹೀಗೆ
ಮಹಾಯೋಗಿ ವೇಮನರು ಹೇಳಿದ್ದು

**ಉ. ಕಾಮ ವಿಭಾಗ**
ತಿರುವಳ್ಳುವರರು ಹೇಳಿದ ವಿಚಾರಧಾರೆ
ತಿರುವಳ್ಳುವರರ ಕಾಲ
ನಾಯಕನ ಪ್ರೇಮಾಂಜಲಿಯ ಭಾವನೆ
ಮಹಾಯೋಗಿ ವೇಮನರು ಹೇಳಿದ್ದು
ಕಾಮಾನುಭವದ ದಿವ್ಯಾನುಭವದ ನೋಟ
ಜಾರೆಯರು–ಜಾರೆ ಪುರುಷರು
ಸಾಧನೆ ಮತ್ತು ಕಾಮ

**ಊ. ಮೋಕ್ಷ ವಿಭಾಗ**
ಮೋಕ್ಷದ ಕುರಿತಾದ ಚರ್ಚೆ ವೇಮನ ಯೋಗಿ
ಜೀವ–ಶಿವೈಕ್ಯ
ನಿಜಬೋಧೆ

**೭ ಸಮಾರೋಪ** ೨೨೨

**ಆಧಾರ ಗ್ರಂಥಗಳು** ೨೨೪

# ಅಧ್ಯಾಯ–೧

# ವಿಷಯ ಪ್ರವೇಶ

ತಮಿಳುನಾಡಿನ ತಿರುವಳ್ಳುವರ್, ತೆಲುಗು ನಾಡಿನ ವೇಮನ ಮತ್ತು ಕನ್ನಡ ನಾಡಿನ ಸರ್ವಜ್ಞ– ಈ ಮೂವರೂ ಪ್ರಸಿದ್ಧ ಮಹರ್ಷಿ–ಯೋಗಿ–ತ್ಯಾಗಿ–ಭೂಕೈಲಾಸವನ್ನಾಗಿಸಿದ ಮಹಾಪುರುಷರು, ದಿವ್ಯಪುರುಷರು. ಮಹಾಮೇಧಾವಿಗಳಾಗಿ, ಪ್ರಕಾಂಡ ಪಂಡಿತರಾಗಿಯೂ ಜನ ಸಾಮಾನ್ಯರಿಗೂ ತಿಳಿಯುವಂದದಲ್ಲಿ ದ್ವಿಪದಿ, ಅಟಲವೇದಿ, ತ್ರಿಪದಿಗಳ ಛಂದಸ್ಸಿನಲ್ಲಿ ಯೋಗಾನಂದದ ಸ್ವಾರಸ್ಯವನ್ನು ಬಣ್ಣಿಸಿರುವರು. ಅವರ ಒಂದೊಂದು ಪದ್ಯಗಳೂ ವೇದಾಗಮ–ಉಪನಿಷತ್–ಭಗವದ್ಗೀತೆಯ ಶ್ಲೋಕಗಳನ್ನು ಮೀರಿಸುವಂತಿವೆ. ಅವರ ರಚನೆಗಳೇ ಶ್ರೀಸಾಮಾನ್ಯನ ಗಮನ ಸೆಳೆಯುವಂತಾಗಲಿಕ್ಕೆ ಕಾರಣವೇನೆಂದರೆ ಜನರಾಡುವ ನುಡಿಗಡಣಗಳಲ್ಲಿಯೇ ತಮ್ಮ ರಚನೆಗಳನ್ನು ರಚಿಸಿದ್ದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ತಿರುವಳ್ಳುವರ್ ಕವಿಯು ಮಹರ್ಷಿಯೋಗಿ ಅತ್ಯುನ್ನತ ಸ್ಥಾನ ಹೊಂದಿದವನು. ಆತನು ಕ್ರಿ.ಶ. ೨ನೆಯ ಶತಮಾನದಲ್ಲಿದ್ದ ತಮಿಳಿನ ವೇದವೆಂದೇ ಪ್ರಖ್ಯಾತ ಹೊಂದಿದ ಕಾವ್ಯವೇ "ತಿರುಕ್ಕುರುಳ್" ಎಂಬುದಾಗಿದ್ದು ಇದರಲ್ಲಿ ೧೩೩೦ ದ್ವಿಪಾದಗಳಿವೆ. ವೇಮನಯೋಗಿ ಮತ್ತು ಸರ್ವಜ್ಞಕವಿಗಳಿವರು ಸಮಕಾಲೀನರು (೧೫೦೦–೧೬೨೦) ಕಾಲಘಟ್ಟದಲ್ಲಿದ್ದವರು). ವೇಮನರ 'ವಿಶ್ವದಾಭಿರಾಮ (ವಿನುರ) ಕೇಳು ವೇಮ? ಎಂಬ ಅಂಕಿತವನ್ನು ಬಿಟ್ಟರೆ ಇಬ್ಬರ ರಚನೆಗಳು ತ್ರಿಪದಿಯಲ್ಲಿಯೇ ಇವೆ. ಕರ್ನಾಟಕದಲ್ಲಿ ಸರ್ವಜ್ಞಕವಿಯ ತ್ರಿಪದಿಗಳು ಪ್ರಸಿದ್ಧಿ ಪಡೆದಿರುವಂತೆ ತೆಲುಗು ನಾಡಿನಲ್ಲಿ ವೇಮನ ಯೋಗಿಯ ಅಟಲವೇದಿ ಪದ್ಯಗಳು ಸಿದ್ಧಿ–ಪ್ರಸಿದ್ಧಿಯನ್ನು ಪಡೆದಿವೆ. ತುಂಡು ಕಚ್ಚುಟವನ್ನುಟ್ಟು ಹೆಗಲ ಮೇಲೊಂದು ಕಂಬಳಿ ಹೊತ್ತು, ಕೈಯಲ್ಲಿ ಕೋಲು ಹಿಡಿದುಕೊಂಡು ನಡೆದ ಸರ್ವಜ್ಞ ಕವಿಯು ಕನ್ನಡ ನಾಡಿನಲ್ಲಾದರೆ; ತೆಲುಗುನಾಡಿನ ವೇಮನನೂ ಲಂಗೋಟಿಯೊಂದನ್ನು ಧರಿಸಿದ ದಿಗಂಬರ ಸನ್ಯಾಸಿಯಾಗಿಯೇ ಸಂಚರಿಸಿದವನು. ಇಬ್ಬರೂ ದಿಗಂಬರರೇ ತಾವಾಗಿ ಲೋಕ ಕಲ್ಯಾಣಗೈಯ್ದವರು. ಈ ಮೂವರೂ ಮಹರ್ಷಿಗಳು ಭಾರತ ದೇಶವನ್ನು ಅಧ್ಯಾತ್ಮದ ಉತ್ತುಂಗ ಶಿಖರಕ್ಕೇರಿಸುವಂತೆ ಸಿದ್ಧಿ–ಸಾಧನೆಗೈದ ಮಹಾತ್ಮರು. ಅಧ್ಯಾತ್ಮ ಪರಂಪರೆಯನ್ನು ಜನ ಸಾಮಾನ್ಯನಿಗೂ ತಿಳಿಯುವಂತೆ ಬೋಧಿಸಿದ ಪುಣ್ಯಾತ್ಮರು; ಈ ತ್ರಿಮೂರ್ತಿ ಪುಣ್ಯ ಪುರುಷರಲ್ಲಿ

ಒಬ್ಬರಾದ ವೇಮನಯೋಗಿಯ ಜೀವನ–ಸಾಧನೆಯ ಕಿರುನೋಟವನ್ನು ಪ್ರಚುರಪಡಿಸಲು ಪ್ರಯತ್ನಿಸಲಾಗಿದೆ.

ಭಾರತ ದೇಶ ಅಧ್ಯಾತ್ಮದ ತವರು ಭೂಮಿ. ಇಲ್ಲಿ ಸಾವಿರಾರು ಋಷಿ–ಮುನಿಗಳು ಬಾಳಿ–ಬೆಳಗಿ ತಮ್ಮ ತತ್ತ್ವ ಸಿದ್ಧಾಂತಗಳನ್ನು ತಮ್ಮ ತಮ್ಮ ಕೃತಿಗಳಲ್ಲಿ ರಚಿಸಿ ಅಮರರಾಗಿದ್ದಾರೆ. ಅವರ ರಚನೆಗಳ ಕಡೆಗೆ ನಾವಿಂದು ಗಮನಹರಿಸಬೇಕಾದ ಕಾಲದ ಅಗತ್ಯತೆಯಾಗಿದೆ. ಮಾನವನಿಂದಿನ ವಿಜ್ಞಾನ ಯುಗದಲ್ಲಿ ಅನೇಕ ಒತ್ತಡ–ತಲ್ಲಣಗಳಲ್ಲಿ ಸಿಲುಕಿ ಪೇಚಾಡುತ್ತಿದ್ದಾನೆ. ಅವನಿಗಿಂದು ಸಮಾಧಾನ–ನೆಮ್ಮದಿ–ಸಂತೋಷಗಳು ಗಗನ ಕುಸುಮವಾಗುತ್ತಲಿವೆ. ಪ್ರಾಪಂಚಿಕ ವ್ಯವಹಾರ, ಜಂಜಾಟ, ಗೊಂದಲಗಳಲ್ಲಿ ಸಿಲುಕಿಕೊಂಡ ಮಾನವ ಧರ್ಮ, ದೇವರು, ಅಧ್ಯಾತ್ಮ, ಸತ್ಯ, ಪ್ರಾಮಾಣಿಕತೆ ನಿಷ್ಠೆ, ಕ್ರಮಬದ್ಧತೆ, ಕರ್ತವ್ಯ ಪ್ರಜ್ಞೆ, ಕಾಯಕ ಪ್ರಜ್ಞೆ, ಈ ಮುಂತಾದ ಶಿಸ್ತು ಬದ್ಧತೆಗಳು ಮರೆಮಾಚುತ್ತ ಬಂದಿವೆ. ಇದರಿಂದ ಆತನ ಜೀವನ ದುಸ್ತರವಾಗುವುದರಲ್ಲಿ ಸಂದೇಹವೇ ಇಲ್ಲ. "ಸಂಕಟ ಬಂದಾಗ ವೆಂಕಟರಮಣ" ಎನ್ನುವಂತಹ ಕಾಲ ಘಟ್ಟದಲ್ಲಿದ್ದಾನೆಂದರೂ ಸರಿಯಾದ ಮಾತೆನಿಸುತ್ತದೆ. ಹುಟ್ಟಿಸಿದ ದೇವರೇನು ಹುಲ್ಲು ಮೇಯಿಸುತ್ತಾನೇನು? ಎಂಬುದಾಗಿ ಜಂಬದ ಮಾತುಗಳನ್ನಾಡುತ್ತ ದುಡಿಯದೇ – ದುಃಖಪಡದೇ ಕಾಲಹರಣ ಮಾಡುತ್ತಿರುವುದು ಸತ್ಯ! ಹಿಂದಿನ ತಲೆಮಾರಿನವರು, ಹಿರಿಯರು ಗಳಿಸಿಟ್ಟ ಆಸ್ತಿಯಲ್ಲಿಯೇ ಪಾಲುದಾರನಾಗಿ ತನ್ನ ಜೀವನವನ್ನು ನಡೆಸುತ್ತಿರುವುದು ಕಣ್ಣಿಗೆ ಕಾಣುವ ಸತ್ಯ!

ಆದರೆ ಈ ಮಾರ್ಗ ಉಚಿತವಾದುದಲ್ಲ. ಗುರು ಹಿರಿಯರ ಮಾತು ಕೇಳಿ, ಅವರ ಸಲಹೆ, ಉಪದೇಶದಂತೆ ನಡೆದರೆ ಉಳಿಗಾಲವಿದೆ, ಮುಂದಿನ ಭವಿಷ್ಯವಿದೆ. ಅದು ಕಾರಣ ಇಂದಿನ ಪ್ರಜ್ಞಾವಂತ ಯುವಕ–ಯುವತಿಯರು ಸಂತ ಮಹಂತರಾದ ವೇಮನ, ಸರ್ವಜ್ಞ– ಇನ್ನುಳಿದ ಧರ್ಮವಂತರ ಮಾತುಗಳನ್ನು ಮನದಲ್ಲಿಟ್ಟುಕೊಂಡು ಪಾಲನೆಯನ್ನು ಮಾಡುತ್ತ ಮುನ್ನಡೆಯುವುದೇ ನಿಮ್ಮ ಧ್ಯೇಯವಾಗಬೇಕು'. ವಿಶ್ವವಿಭೂತಿ ಪುರುಷರಲ್ಲಿ ಒಬ್ಬರಾದ ವೇಮನಯೋಗಿಯ ಪದ್ಯಗಳು ನಮ್ಮೆಲ್ಲರ ಬದುಕಿಗೆ ಮಾರ್ಗದರ್ಶಿಕೆ, ದಾರಿದೀಪಗಳಾಗಿವೆಯೆಂಬುದರ ಕಡೆಗೆ ತಮ್ಮ ಗಮನವಿರಲೆಂಬುದಾಗಿ ನನ್ನ ನಮನ!

ಸಂಸಾರಿಯಾಗಿದ್ದುಕೊಂಡು ಸದ್ಗತಿಯನ್ನು ಹೊಂದಲು ಸಾಧ್ಯವಿದೆ ಎಂದು ಹನ್ನೆರಡನೆಯ ಶತಮಾನದ ಬಸವಾದಿ ಶಿವಶರಣರು ನುಡಿದು ನಡೆದು ತೋರಿಸಿದರು. ಆದರೆ ಬಗೆದು ನೋಡಿದಾಗ ಸಂಸಾರಕ್ಕಿಂತಲೂ ತ್ಯಾಗಿಗಳ–ಯೋಗಿಗಳ – ಮಹರ್ಷಿಗಳ – ತಪಸ್ವಿಗಳ ಜಿವನ ಬಹು ಕಠಿಣ. ಇಹ–ಲೋಕ–ಪರ–ಲೋಕಗಳೆರಡಲ್ಲಿಯೂ ಅವರು ಸೈ ಎನಿಸಿಕೊಳ್ಳಬೇಕಲ್ಲ? ಮೋಕ್ಷ ಪ್ರಾಪ್ತಿಗಾಗಿ



ಅವರು ಮಾಡುವ ಪ್ರಯಾಣ ಗುರುತರವಾದುದು. ಭಾರತ ದೇಶದ ಆ ಸೇತು ಹಿಮಾಚಲ ಪರ್ಯಂತ ಪ್ರಚಲಿತವಿರುವ ಯಾವುದೇ ಸಂಘಟಿತ – ಧರ್ಮಕ್ಕೆ ಸೇರದೆ, ನುಲಿ ಹರಿದ ಸ್ವಚ್ಛಂದವಾಗಿ ಹಾರಾಡುವ ಹಕ್ಕಿಗಳಂತೆ, ಅಧ್ಯಾತ್ಮದ ದಿಗಂತದಲ್ಲಿ ಹಾರಾಡುವ ಈ ಸಂತ ಕವಿಗಳು ಉಲಿದ ಭಾಷೆ, ನಡೆದಾಡಿದ ಪ್ರದೇಶ ಹಾಗೂ ಅವರು ಬಾಳಿದ ಕಾಲಘಟ್ಟಗಳನ್ನು ಕುರಿತು ಇದುವರೆಗೆ ಸಂಶೋಧಿಸಲ್ಪಟ್ಟ ಸಂಗತಿಗಳನ್ನು ಹೀಗೆ ಹೇಳಬಹುದು.

| ಕ್ರ.ಸಂ. | ಸಂತರ ಹೆಸರು | ಭಾಷೆ | ಪ್ರದೇಶ | ಕಾಲ ಕ್ರಿ.ಶ. |
|---|---|---|---|---|
| ೧ | ತಿರುವಳ್ಳುವರ್ | ತಮಿಳು | ತಮಿಳುನಾಡು | ೧೦೦–೨೦೦ |
| ೨ | ವೇಮನ | ತೆಲುಗು | ಆಂಧ್ರಪ್ರದೇಶ | ೧೪೧೨–೧೪೮೦ |
| ೩ | ಸರ್ವಜ್ಞ | ಕನ್ನಡ | ಕರ್ನಾಟಕ | ೧೫೦೦ ರ ಕಾಲ |
| ೪ | ತುಕಾರಾಮ | ಮರಾಠಿ | ಮಹಾರಾಷ್ಟ್ರ | ೧೬೦೮–೧೬೫೦ |
| ೫ | ಕಬೀರದಾಸ | ಹಿಂದಿ | ಉತ್ತರಪ್ರದೇಶ | ೧೪೪೦–೧೫೨೦ |

ಈ ಸಂತ ಕವಿಗಳು ಬದುಕಿನಲ್ಲಿ ಏನೆಲ್ಲ ಸಂಗತಿ, ಕಷ್ಟ–ನಷ್ಟ, ದುಃಖ–ನೋವು–ನಂಜುಗಳನ್ನುಂಡು ನಂಜುಂಡರಾದವರು. ಅವರು ತಮಗಾಗಿ ಬದುಕಲಿಲ್ಲ. ಲೋಕೋದ್ಧಾರದ ಸಲುವಾಗಿ ಬದುಕು ಬೀರಿದವರು. ಈ ಮೇಲ್ಕಾಣಿಸಿದ ಸಂತ ಕವಿಗಳಲ್ಲಿ ತಿರುವಳ್ಳುವರ್‌ರನ್ನು ಹೊರತುಪಡಿಸಿದರೆ ಉಳಿದು ಸ್ವತಃ ಕುಳಿತುಕೊಂಡು ಗ್ರಂಥ ರಚಿಸಲಿಲ್ಲ. ಆದರೆ ಅವರಿಂದ ಅಂತಃ ಸ್ಫುರಣೆಯಾದಾಗ, ಒಳದನಿಯು ವೈಖರಿಯ ರೂಪ ತಾಳಿದಾಗ, ಅವರ ಶಿಷ್ಯ ಬಳಗದವರು ಅವುಗಳನ್ನು ಕೇಳಿ ಬರೆದುಕೊಂಡರೆಂದೂ ತಿಳಿದು ಬರುತ್ತದೆ. ಕಾರಣ ಈ ಮಹಾತ್ಮರಲ್ಲಿ ಒಬ್ಬರಾದ ವೇಮನಯೋಗಿಯ ಪದ್ಯಗಳನ್ನು ಅವರ ಶಿಷ್ಯರಾದ ರಾಮರೆಡ್ಡಿ ಮತ್ತು ನೀಲಕಂಠರು ಬರೆದುಕೊಂಡರೆಂದು ಪ್ರತೀತಿಯಿದೆ.

ವೇಮನ ಭಾರತೀಯ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ ಒಬ್ಬ ಶ್ರೇಷ್ಠ ಸಂತಕವಿ. ನಿಷ್ಕಾಯ ಕರ್ಮ ಮತ್ತು ಜ್ಞಾನಗಳ ಜಿಗಿತದ ಹಲಗೆಯನ್ನು ಮೀಟಿ, ಧ್ಯಾನ ಮತ್ತು ಯೋಗ ಶಕ್ತಿಯಿಂದ ಪರಾಭಕ್ತಿಯ ಈಜುಗೊಳದಲ್ಲಿ ಪುಟಿದು ಈಜಾಡಿದ ವಿರಳ ಸಿದ್ಧ ಪುರುಷ, ಮಹಾಪುರುಷರು. ಸರ್ವವನು ಬಲ್ಲ ಸರ್ವಜ್ಞನನ್ನು ಕನ್ನಡಿಗರು ಕನ್ನಡದ ವೇಮನ ಎಂದು ಕರೆದಂತೆ – ವೇಮನಯೋಗಿಯನ್ನು ತೆಲುಗಿನ ತಿರುವಳ್ಳುವರ್, ಎಂದು ಕರೆದು ಗೌರವಿಸಿದ್ದಾರೆ, ಸಂತಸಪಟ್ಟಿದ್ದಾರೆ. ಇನ್ನು ಕೆಲವರು ದಕ್ಷಿಣದ 'ಕಬೀರ' ರೆಂದೂ ಕರೆದದ್ದುಂಟು.

ಈ ಮಹಾಪುರುಷ ರತ್ನತ್ರಯರು ಆಯಾಯಾ ಕಾಲಮಾನಕ್ಕೆ ತಕ್ಕಂತೆ ಜನಮನವನ್ನು ತಿಳಿಗೊಳಿಸಿ ಆಧ್ಯಾತ್ಮದತ್ತ ಸಾಗುವಂತೆ ಪ್ರೇರೇಪಿಸಿದ್ದಾರೆ. ಇವರು ಚಾರಿತ್ರಿಕ ವ್ಯಕ್ತಿಗಳಾದರೂ ಅವರ ಜೀವನ ಚರಿತ್ರೆಯ ಕುರಿತ ದಾಖಲೆಗಳು ಸಿಗುವುದು ಅತೀ ವಿರಳ. ಕ್ರಾಂತಿ ಕಹಳೆಯನ್ನೂದಿದ ಈ ಸಮಾಜ ಸುಧಾರಕರು ಶೋಷಿತ ವರ್ಗದಿಂದ ಬಂದವರಾದುದರಿಂದ ಆಯಾ ಕಾಲದ ಮೇಲು ವರ್ಗದ ತಿರಸ್ಕಾರ ಮತ್ತು ಅಸಡ್ಡೆಗೊಳಗಾಗಿದ್ದಾರೆ. ಪಾಶ್ಚಾತ್ಯರ ಆಗಮನವಾಗುವ ವರೆಗೆ ಇವರ ಬಗೆಗೆ ಗಂಭೀರ ಅಧ್ಯಯನವು ನಡೆಯಲೇ ಇಲ್ಲ: ಇವರ ರಚನೆಗಳು ದೊರೆಯುವಂತಾದರೂ, ಚರಿತ್ರೆ ಮಾತ್ರ ಲಭ್ಯವಾಗದಿರುವುದು ಖೇದದ ಸಂಗತಿಯಾಗಿದೆ.

ಜ್ಞಾನವೊಂದು ಪ್ರಬಲವಾದ ಮತ್ತು ಪ್ರಚಲವಾದ ಅಸ್ತ್ರ. ಈ ಅಸ್ತ್ರ ಕೇವಲ ಮೇಲ್ವರ್ಗಕ್ಕೆ ಮಾತ್ರ ಲಭ್ಯವಾಗುವಂತಹ – ವ್ಯವಸ್ಥೆಯಲ್ಲಿಯೂ ಅರಳಿದ ಮಹಾನ್ ವ್ಯಕ್ತಿಗಳಾದ ಇವರು ಸಮಾಜದ ಅಂಕುಡೊಂಕುಗಳನ್ನು ತಿದ್ದುತ್ತ, ಜನಸಾಮಾನ್ಯರು ಆಡುವ ಭಾಷೆಯಲ್ಲಿಯೇ ಬೋಧಿಸಿ, ಅವರಿಗೆ ತಿಳಿಯುವಂತಹ ಅಲಂಕಾರಗಳನ್ನು ತಮ್ಮ ಜೀವನಾನುಭವದಿಂದ ನೇಯ್ದದ್ದಲ್ಲದೇ ಇವರು ಹೊಸ ಮತ ಅಥವಾ ಪಂಥ ಸ್ಥಾಪಿಸಲಿಲ್ಲ. ಅದು ಅವರ ಗುರಿಯೂ ಆಗಿರಲಿಲ್ಲ. ವ್ಯಕ್ತಿ ಡಾಂಭಿಕತೆಯಿಂದ ದೂರಾಗಿ ಗೊಡ್ಡು ಆಚರಣೆಗಳನ್ನು ತಿರಸ್ಕರಿಸಿ ಸರಳವಾದ ಜೀವನ ನಡೆಸಿ ಸಾತ್ವಿಕತೆಯನ್ನು ಮೈಗೂಡಿಸಿಕೊಂಡು ಪಾರಮಾರ್ಥ ಸಾಧಿಸುವ ಪರಮ ಮಾರ್ಗವನ್ನು ಸಹಜವಾಗಿ ಕಂಡುಕೊಂಡವರು. ಇಂಥ ಪುಣ್ಯಪುರುಷರು ಪಟ್ಟಭದ್ರ ಹಿತಾಸಕ್ತಿಯ ಅವಹೇಳನಕ್ಕೆ ಗುರಿಯಾಗಿದ್ದರೂ ಅಚ್ಚರಿಯೇನಲ್ಲ. ಜನರನ್ನು ಅಜ್ಞಾನವೆಂಬ ಅಂಧಕಾರದಲ್ಲಿರಿಸಿ ಅವರನ್ನು ಶೋಕಿಸುತ್ತಿದ್ದ ವರ್ಗ ಶ್ರೀಸಾಮಾನ್ಯರಲ್ಲಿ – ಧಾರ್ಮಿಕ ಜಾಗೃತಿ ಮೂಡಿಸಿ ಬ್ರಹ್ಮ ವಿದ್ಯೆ ಬೋಧಿಸಿದ ಅನುಭಾವಿಗಳ ಜೀವನ ಹಾಗೂ ಸಂದೇಶ ಹೆಚ್ಚು ಪ್ರಚಾರಗೊಳ್ಳಲು ಅಡ್ಡಿಯಾದರೆ ಆಶ್ಚರ್ಯಪಡುವಂತಿಲ್ಲ.

ಈ ಮಹಾಪುರುಷರೆಲ್ಲರೂ ಜಾತಿಯ ಇಲ್ಲವೆ ಮತೀಯ ಸಂಘ ಸಂಸ್ಥೆಗಳನ್ನು ಕಟ್ಟಲಿಲ್ಲ. ಆದರೆ, ಜಾತಿ–ಮತಗಳಿಂದ ದೂರವಾಗಿ, ಸಮಾಜದ ಹಿತವನ್ನೇ ಬಯಸಿ, ಸತ್ಸಂಗದಲ್ಲಿ ಸಮಾನ ಮನಸ್ಕರನ್ನು ಆಕರ್ಷಿಸಿ, ಸಾಧನ ಪಥಿಕರಾಗಿ ನಿರ್ದೇಶಿಸುತ್ತಿದ್ದರು. ನೀತಿಪಾಲನೆ, ನೀತಿ ಬೋಧನೆ ಮಾಡುತ್ತ ಲೋಕೋದ್ಧಾರದ ಕೈಂಕರ್ಯವನ್ನು ಮಾಡುತ್ತಲಿದ್ದರು. ವೇಮನ ಮತ್ತು ತಿರುವಳ್ಳುವರ್ ಇವರಿಬ್ಬರ ಪದ ಪದ್ಯಗಳೆಲ್ಲವೂ ಮನುಕುಲದ ನೀತಿ ಬೋಧಕಗಳಾಗಿವೆ. ತಿರುವಳ್ಳುವರ್‌ರ ತಿರುಕ್ಕುರುಳ್ ಕಾವ್ಯದಲ್ಲಿ ಧರ್ಮಾರ್ಥ ಕಾಮಗಳ ಬಗೆಗೆ ನೀತಿಯ ಮಾತುಗಳ ಸದ್ ಬೋಧನೆಗಳಿವೆ. ಈ ಮೂರನ್ನೂ ಯಾವಾತನು ಸದ್ ಬಳಕೆ ಮಾಡಿಕೊಂಡು



ಬದುಕು ಸಾಗಿಸುತ್ತಾನೆಯೋ ಆತನಿಗೆ ಮೋಕ್ಷ ಖಂಡಿತವಾಗಿಯೂ ಪ್ರಾಪ್ತವಾಗುತ್ತದೆಯೆಂದು ಹೇಳಿದ ಬಗೆಯಿದೆ. ಹಾಗೆಯೇ ವೇಮನ ಯೋಗಿಯ ಪದ್ಯಗಳಲ್ಲಿ ಚತುರ್ವಿಧ ಪುರುಷಾರ್ಥಗಳ ಬಗೆಗೆ ವಿವರಣೆಯು ಹರಳುಗಟ್ಟಿದೆ. ಅವರು ತಮ್ಮ ಪದ್ಯಗಳ ಮೂಲಕ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಕೈವಶಮಾಡಿಕೊಳ್ಳುವ ಶಕ್ತಿ ಸಾಮರ್ಥ್ಯ ಮನುಷ್ಯನಿಗಿದೆ ಎಂಬುದನ್ನು ತಿಳಿಯಪಡಿಸಿದ ಬಗೆಯಿದೆ.

ಇವರಿಬ್ಬರೂ ಮಹಾಯೋಗಿಗಳೇ, ಮಹರ್ಷಿಗಳಾಗಿದ್ದಾರೆ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಇವರಿಬ್ಬರ ವ್ಯಕ್ತಿತ್ವ ಅಗಾಧವಾದುದು ಎಂಬುದಾಗಿ ಅವರ ಚರಿತ್ರೆಗಳಿಂದ ತಿಳಿದು ಬರುತ್ತದೆ. ಇವರಿಬ್ಬರೂ ಪುಣ್ಯಪುರುಷರ ಸಾಲಿನಲ್ಲಿ ಕಂಗೊಳಿಸುವಂತಹ ಅಧ್ಯಾತ್ಮ ರತ್ನಗಳೇ ಸರಿ! ಇಂತಹ ವರ–ಪುಣ್ಯಪುರುಷರ ಬಗೆಗೆ ತಿಳಿದುಕೊಳ್ಳುವುದು ಮತ್ತು ಅವರ ಸಾಹಿತ್ಯದ ಕೊಡುಗೆಗಳನ್ನು ಚರ್ಚಿಸುವುದು ಹಾಗೂ ಅವರ ಸಾಹಿತ್ಯದಿಂದ ಆಯ್ದ ತತ್ವಜ್ಞಾನದ ತಿರುಳನ್ನು ತೌಲನಿಕವಾಗಿ ಪರಾಮರ್ಶಿಸುವುದು ನನ್ನ ಉದ್ದೇಶವಾಗಿದೆ. ಅಲ್ಲದೇ ಅವರ ಪದ – ಪದ್ಯಗಳಿಂದ ಆಯ್ದುಕೊಂಡ ನೀತಿಯ ಬೋಧನೆ, ಸಾಮಾಜಿಕ – ಧಾರ್ಮಿಕ – ಬೋಧನೆಗಳನ್ನು ತೌಲನಿಕವಾಗಿ ಹೇಳಲು ಒಂದು ಅಧ್ಯಾಯದಲ್ಲಿ ಸಂಪೂರ್ಣವಾಗಿ ಹೇಳಲು ಪ್ರಯತ್ನ ಮಾಡಿರುವೆನು. ಅವರಿಬ್ಬರೂ ಭಾರತ ದೇಶಕ್ಕೆ ಕೊಟ್ಟ ಅಧ್ಯಾತ್ಮದ ಕೊಡುಗೆ ಅಪರೂಪ ಮತ್ತು ಅಜರಾಮರವಾದುದೆಂದು ಹೇಳಲು ನಮಗೆ ಹೆಮ್ಮೆಯೆನಿಸುತ್ತದೆ.

■■

# ಅಧ್ಯಾಯ – ೨
# ತಮಿಳುನಾಡಿನ ಮಹರ್ಷಿ ತಿರುವಳ್ಳುವರ್‌ರು

ಭಾರತೀಯ ಭಾಷೆಗಳಲ್ಲಿ ತಮಿಳು ಶ್ರೀಮಂತ ಭಾಷೆ. ದಕ್ಷಿಣ ಭಾರತದ ಪಂಚ ದ್ರಾವಿಡ ಭಾಷೆಗಳಲ್ಲಿಯೂ ಶ್ರೀಮಂತವಾಗಿರುವ ಭಾಷೆ. ಕನ್ನಡ, ತಮಿಳು, ತೆಲುಗು, ಮಲಯಾಳಮ್ ಮತ್ತು ತುಳು ಆ ಪಂಚ ದ್ರಾವಿಡ ಭಾಷೆಗಳು. ಈ ಐದೂ ಭಾಷೆಗಳು ಸೋದರ ಭಾಷೆಗಳೆಂದು ಕರೆಯಿಸಿಕೊಂಡು, ಅನ್ಯೋನ್ಯತೆಯಿಂದ ಬೆಳೆಯುತ್ತ ಬಂದಿವೆ. ಭಾಷಾವಾರು ಪ್ರಾಂತಗಳ ವಿಂಗಡಣೆಯಿಂದಾಗಿ ಇವೈದೂ ಪ್ರತ್ಯೇಕಗೊಂಡು ಸ್ವತಂತ್ರ ಭಾಷೆಗಳಾಗಿ ಬೆಳೆಯುತ್ತಲಿವೆ. ಆದರೂ ಒಂದನ್ನು ಬಿಟ್ಟು ಒಂದಿಲ್ಲವೆನ್ನುವ ರೀತಿಯಲ್ಲಿ ಭಾಷಾ ಬಾಂಧವ್ಯವನ್ನು ಹೊಂದಿವೆ. ಅದೆಷ್ಟೋ ಪದಗಳು ತಮಿಳಿನಿಂದ ಕನ್ನಡಕ್ಕೆ ಬಂದು ಈಗಲೂ ಬಳಕೆಯಲ್ಲಿವೆ. ಆರನೆಯ ಶತಮಾನದಲ್ಲಿದ್ದ ತಮಿಳಿನ ಶೈವ, ವೈಷ್ಣವ ಪರಂಪರೆ ಭಕ್ತಿ ಸಾಹಿತ್ಯದ ರೂಪದಲ್ಲಿ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿತು. ತಮಿಳು ಪ್ರಾಚೀನವಾದ ಭಾಷೆಯೆಂಬುದಕ್ಕೆ ಅನೇಕ ದಾಖಲೆಗಳಿವೆ, ದೃಷ್ಟಾಂತಗಳಿವೆ. ಒಂದರಡನೆಯ ಶತಮಾನದಲ್ಲಿ ಬಾಳಿ ಬದುಕಿದ ತಮಿಳಿನ ಮಹರ್ಷಿಯೆಂದೇ ಕರೆಯಿಸಿಕೊಂಡ ತಿರುವಳ್ಳುವರ್ ಕವಿಯೇ ತಮಿಳು ಸಾಹಿತ್ಯದ ಮೂಲ ಮಹಾಕವಿ ಎಂಬುದಾಗಿ ತಿಳಿದು ಬರುತ್ತದೆ. ಆತನ ಕೊಡುಗೆ **"ತಿರುಕ್ಕುರುಳ್"** ಕಾವ್ಯ. ಇದೇ ಪ್ರಪಂಚದ ಜನರನ್ನೇ ಗಮನ ಸೆಳೆದಿರುವ ಆಧ್ಯಾತ್ಮದ ಉತ್ಕೃಷ್ಟ ಗ್ರಂಥ. ಅದನ್ನು ತಮಿಳಿನ ವೇದ, ತ್ರಿಗರ್ತವೆಂದೂ ಕರೆಯಲಾಗಿದೆ. ತಿರುವಳ್ಳುವರ್ ಕವಿಯ ಜೀವನ–ಸಾಧನೆಯನ್ನು ಅರಿಯುವುದಕ್ಕಿಂತ ಪೂರ್ವದಲ್ಲಿ ತಮಿಳು ಸಾಹಿತ್ಯದ ಕುರಿತು ಚರ್ಚಿಸುವುದು, ಗಮನಿಸುವುದು ಸೂಕ್ತವೆಂದು ತೋರುತ್ತದೆ.

ತಮಿಳು ನಾಡನ್ನು ಭಕ್ತಿ ಚಳುವಳಿಯ ಮೂಲ ಸ್ಥಾನವೆಂದು ಗುರುತಿಸಲಾಗಿರುತ್ತದೆ. ಮೇಲೆ ಹೇಳಿರುವಂತೆ ಆರನೆಯ ಶತಮಾನದಲ್ಲಿ ಅಲ್ಲಿಯ ನಾಯನಾರ್ ಮತ್ತು ಆಳ್ವಾರರಿಂದ ಶಿವಭಕ್ತಿ, ವೈಷ್ಣವ ಭಕ್ತಿಯ ಪ್ರಸಾರ ಪ್ರಾರಂಭವಾಯಿತು. ಇದಕ್ಕೆಲ್ಲ ಕಾಶ್ಮೀರದ ಶೈವ, ಉತ್ತರದ ಭಾಗವತ ಪಂಥಗಳ ಪ್ರಭಾವ ಹಿನ್ನೆಲೆಯಾಗಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಮುಂದೆ ಬರುಬರುತ್ತಾ ಈ ಭಕ್ತಿ ಚಳುವಳಿಗಳು, ಕರ್ನಾಟಕ, ಮಹಾರಾಷ್ಟ್ರ, ಉತ್ತರ ಭಾರತ ಮತ್ತು ಸಮಗ್ರ ಭಾರತವನ್ನೇ ವ್ಯಾಪಿಸಿತೆಂದು ಹೇಳಬಹುದು.



ತಿರುಮೂಲರ್ ಮತ್ತು ಕರೈಕಲ್ ಅಮ್ಮಾಯಿ ಅವರಿಂದ ರಚನೆಯಾದ ಸಾಹಿತ್ಯದಲ್ಲಿ ಶಿವಪಾರಮ್ಯ ಅದ್ಭುತವಾಗಿ ಪ್ರಕಟವಾಗಿದೆ. ಇವರ ನಂತರದ ಏಳನೆಯ ಶತಮಾನದಲ್ಲಿ ಬಂದ ಅಪ್ಪರ್, ಜ್ಞಾನ ಸಂಬಂಧರ್, ಸುಂದರರ್, ಮಾಣಿಕ್ಯವಾಚಕರ್ ಎಂಬ ನಾಲ್ಕು ಜನ ಸಂತರಿಂದ ಶೈವ ಭಕ್ತಿಯು ವ್ಯಾಪಕ ಪ್ರಸಾರವನ್ನು ಪಡೆಯಿತು. ಪ್ರೀತಿಯೇ ದೇವರು, ಸೇವೆಯೇ ದೇವರು, ಸ್ನೇಹವೇ ದೇವರು, ಶಿವನೇ ದೇವಾದಿದೇವನೆಂದು ಇವರು ಪ್ರಚಾರ ಮಾಡಿದರು. ಇವರು ಬರೆದು ಪ್ರಸಾರ ಮಾಡಿದ ಸಾಹಿತ್ಯ 'ತಿರುಮುರೈ' ಎಂದೂ ಪ್ರಸಿದ್ಧವಾಗಿದೆ. ಮೂಲತಃ ಜೈನನಾಗಿದ್ದ ಅಪ್ಪರ್ ಅನಂತರ ಶಿವಭಕ್ತನಾದನು. ಈತನು ೪೯೦೦೦ ಕವನಗಳನ್ನು ರಚಿಸಿರುವನೆಂಬುದು ತಿಳಿದು ಬರುತ್ತದೆ. ಇವನ ಶಿವಭಕ್ತಿಯ ಪ್ರಭಾವದಿಂದ ಕಂಚಿಯ ಪಲ್ಲವರ ಅರಸ ಮಹೇಂದ್ರ ವರ್ಮನು ಶಿವಭಕ್ತನಾದನಂತೆ. ಅಪ್ಪರ್‌ರ ಶಿಷ್ಯ ಸಂಬಂಧರ್, ಆ ಮೇಲೆ ಬಂದವರೇ ಸುಂದರರ್ ಮತ್ತು ಮಾಣಿಕ್ಯವಾಚಕರ್ – ಈ ನಾಲ್ವರನ್ನು ಶೈವ ಆಚಾರರ್ಯರೆಂದೂ ಗೌರವಿಸಲಾಗುತ್ತದೆ. ಅಪ್ಪರ್ ಮತ್ತು ಸಂಬಂಧರ್ ಅವರ ಸಮಕಾಲೀನರಾದ ಅನೇಕ ಜನ ನಾಯನ್ಮಾರರಲ್ಲಿ ನೆಡುಮಾರರೊಬ್ಬರು.

ಶೈವ ಧರ್ಮವು ಜಗತ್ತಿನ ಅತ್ಯಂತ ಪ್ರಾಚೀನ ಧರ್ಮಗಳಲ್ಲೊಂದು ಪ್ರಾಚೀನತೆಯ ದೃಷ್ಟಿಯಿಂದ ವೇದೋಪನಿಷತ್ತು ಕಾಲದಷ್ಟು ಪುರಾತನತೆಯನ್ನು ಪಡೆದ ಶೈವ ಧರ್ಮವು ವ್ಯಾಪ್ತಿಯ ದೃಷ್ಟಿಯಿಂದ ಅಷ್ಟೇ ವೈಶಾಲ್ಯತೆಯನ್ನು ಪಡೆದಿದೆ. ೮–೯ನೆಯ ಶತಮಾನದಲ್ಲಿ ಆಳ್ವಾರರಿಂದ ವಿಷ್ಣು ಭಕ್ತಿಯು ಪ್ರಸಾರವಾಯಿತು. ಇವರು ವೇದೋಪನಿಷತ್ತುಗಳ ಸಾರವನ್ನು ಸುಲಭವಾಗಿ ಜನ ಸಾಮಾನ್ಯರಿಗೆ ತಿಳಿಯುವಂತೆ ಜನರಾಡುವ ಭಾಷೆಯಲ್ಲಿ ಪ್ರಸಾರ ಮಾಡಿದರು. ಆಳ್ವಾರರಲ್ಲಿ ನಮ್ಮಾಳ್ವಾರ್ ಮತ್ತು ಅಂಡಾಳ್ ಬಹು ಪ್ರಸಿದ್ಧರು. ಅವರುಗಳು ಬರೆದಿರುವ ತಿರುವಾಯ್‌ಮೋಳಿ ಮತ್ತು ತಿರುಪ್ಪಾವೈ ಗ್ರಂಥಗಳಿಗೆ ತಮಿಳುನಾಡಿನ ವೈಷ್ಣವ ಭಕ್ತರಾದ ಅಪಾರ ಗೌರವ ಸಲ್ಲುತ್ತದೆ. ದೇವರ ಸಾಹಿತ್ಯಕ್ಕೆ ಹಂಬಲಿಸುವ ಭಕ್ತಿಯ ಪರಾಕಾಷ್ಠೇ ಈ ಕೃತಿಗಳಲ್ಲಿರುವ ವಸ್ತು ವಿಶೇಷತೆ – ನಾಯನಾರ್ ಮತ್ತು ಆಳ್ವಾರ್‌ರಿಂದ ನಡೆದ ಭಕ್ತಿಯ ಚಳುವಳಿಯೆಂದರೆ 'ತಮಿಳು ಪ್ರಾಂತ್ಯವು ಆರ್ಯೀಕರಣಗೊಳ್ಳುವುದರ ವಿರುದ್ಧ ಎದ್ದ ಪ್ರತಿಭಟನೆ' ಎಂಬುದಾಗಿ ರೋಮಿಲಾ ಥಾಮಸ್ ಅವರು ಹೇಳುತ್ತಾರೆ. ಭಾರತದ ಸರಿ ಸುಮಾರು ಎಲ್ಲಾ ಭಕ್ತಿ ಪಂಥಗಳ ನಾಯಕರೂ ತಮಿಳುನಾಡಿನ ಶಿವ, ವಿಷ್ಣು ಭಕ್ತರನ್ನು ಪುರಾತನರು ಎಂದು ಪರಿಗಣಿಸಿ ಕರ್ನಾಟಕದಿಂದ ಕಾಶ್ಮೀರದವರೆಗೆ ತಲೆಯೆತ್ತಿದ ಎಲ್ಲಾ ಭಕ್ತಿ ಪಂಥಗಳು, ಚಳುವಳಿಗಳು ಮೊದಲಿಗೆ

ಮೂಡಿ ಬಂದ ತಮಿಳು ಭಕ್ತಿ ಪಂಥದ ಪ್ರಭಾವಕ್ಕೆ ಭಿನ್ನ ಪ್ರಮಾಣಗಳಲ್ಲಿ ಒಳಗಾಗಿದ್ದವು ಎಂಬುದು ಚಾರಿತ್ರಿಕ ಸತ್ಯದ ಸಂಗತಿ.

೧೦-೧೧ನೆಯ ಶತಮಾನದಲ್ಲಿದ್ದ ಶೆಕ್ಕಿಳಾರ್ ಮಹಾಕವಿಯು ಬರೆದ ಮಹಾಕಾವ್ಯವು ಪೆರಿಯಪುರಾಣ. ತ್ರಿಷಷ್ಟಿ ಪುರಾತನರನ್ನು ಕುರಿತು ಬರೆದ ಮಹಾಕಾವ್ಯ, ಪೆರಿಯಪುರಾಣ. ತಿರುನೀಲಕಂಠ, ನಂಬಿಯಣ್ಣ, ಇಹಪ್ಪಗೆಯಾಂಡ, ಸುಂದರನಂಬಿ, ಮಲುಹಣ-ಮಲುಹಣೆ-ಈ ಮುಂತಾದ ತಮಿಳು ಪೂರ್ವ ಪುರಾತನರ ಚರಿತ್ರೆಯನ್ನು ಶೈವ ಭಕ್ತರಾಗಿ ಕಂಡರಸಿದ ಬಗೆಯಿದೆ. ತಮಿಳು ನಾಡಿನ ಪೆರಿಯ ಪುರಾಣವೇ ಕರ್ನಾಟಕದ ವಚನಕಾರರಿಗೆ ಹಾಗೂ ಹರಿಹರಾದಿ ಕವಿಗಳಿಗೆ ಮಾದರಿ ಯಾಗಿದೆಯೆಂದು ಹೇಳಬಹುದು.

ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದ ಹೊತ್ತಿಗೆ ಶೋಷಣೆಯ ವಿರುದ್ಧದ ಪ್ರತಿಭಟನೆಯಾಗಿ ಕಾಣಿಸಿಕೊಂಡಿತು. ಭಕ್ತಿ ಚಳುವಳಿ, ಲಿಂಗ, ವರ್ಣ, ವರ್ಗಗಳ ಅಸಮಾನತೆಯನ್ನು ಪ್ರಶ್ನಿಸಿದ ಶಿವಶರಣರು ಕಲ್ಯಾಣದಲ್ಲಿ 'ಅನುಭವ ಮಂಟಪ' ಕಟ್ಟಿದರು. ಶೋಷಣೆಗೆ ಆಧಾರವೆಂದು ಬಳಕೆಯಾಗುತ್ತಿದ್ದ ವೇದಗಳನ್ನು ಖಂಡಿಸಿದರು. ಪುರೋಹಿತರ ಕರ್ಮ ಕಾಂಡಗಳಿಗೆ ಕೇಂದ್ರವಾಗಿದ್ದ ಗುಡಿ-ಗುಂಡಾರಗಳನ್ನು ನಿರಾಕರಿಸಿದರು. ಪ್ರತಿಯೊಬ್ಬರೂ ತಮ್ಮ ಅನುಕೂಲಕ್ಕೆ ತಕ್ಕಂತೆ ಪೂಜಿಸಬಹುದೆಂದು "ಇಷ್ಟಲಿಂಗ ಪೂಜೆ"ಯನ್ನು ಪುರಸ್ಕರಿಸಿದರು. ಲಿಂಗಾಯತ ಧರ್ಮ ಸ್ಥಾಪಕರೇ ಬಸವಣ್ಣನವರು. ಇದರ ನೇತೃತ್ವವಹಿಸಿ ಇಷ್ಟಲಿಂಗ ಪೂಜೆಯನ್ನೇ ಪ್ರಸಾರಕ್ಕೆ ತಂದರು, ಅಲ್ಲದೇ ಎಲ್ಲರೂ ದುಡಿದುಣ್ಣುವ ಕಾಯಕ ಸಿದ್ಧಾಂತವನ್ನು ಜಾರಿಗೊಳಿಸಿದ್ದು; ಶ್ರಮದ ಫಲ ಸಮಾಜಕ್ಕೆ ಸಲ್ಲಬೇಕೆಂದು 'ದಾಸೋಹ' ಸಿದ್ಧಾಂತವನ್ನು ಪ್ರತಿಪಾದಿಸಿದರು.

ಹೀಗೆ ಬಸವಾದಿ ಶಿವಶರಣರ ಭಕ್ತಿ ಚಳುವಳಿಯು ತಮಿಳುನಾಡಿನ ಶೈವರ ಪ್ರಭಾವದಿಂದಾಗಿ ಪ್ರವೇಶಿಸಿ; ಭಕ್ತಿ ಚಳುವಳಿಯು ಅನೇಕ ಮುಖವಾಗಿ ಸಕಲ ಜೀವಿಗಳಿಗೆ ಲೇಸಿನ ಬದುಕನ್ನು ಕರುಣಿಸುವ ಅಂತಃಕರಣದ ತೊರೆಯಾಗಿ ಹರಿಯಿತು. ಶಿವಶರಣರ ಅನುಭಾವದ ಮಾತುಗಳು "ವಚನ"ಗಳೆಂದು ವಿಶ್ವವಿಖ್ಯಾತವಾಗಿದೆ. ಅಧ್ಯಾತ್ಮ, ಅನುಭಾವ, ಸಾಹಿತ್ಯ, ಸಂಸ್ಕೃತಿ, ಕಲೆಗಳ ದೃಷ್ಟಿಯಿಂದಲೂ ಅವು ಗಮನಾರ್ಹವಾಗಿರುವುದನ್ನು ಕಾಣುತ್ತೇವೆ. ಇದೆಲ್ಲ ಭಕ್ತಿ ಚಳುವಳಿಯ ಬೆಳೆಯಾಗಿದೆ. ಇವರ ಭಕ್ತಿ ಚಳುವಳಿಯು ಕರ್ನಾಟಕದಲ್ಲಿ ಜರುಗಿದ ":ಕಲ್ಯಾಣ ಕ್ರಾಂತಿ"ಯ ಬೆಳವಣಿಗೆಯಿಂದ ಪಾಠ ಕಲಿಯಿತೇನೋ ಎಂಬಂತೆ ಹದಿಮೂರನೆಯ ಶತಮಾನದ ವಾರಕರಿ ಪಂಥದವರು ವಚನಕಾರರ, ತಮಿಳುನಾಡಿನ ಭಕ್ತರ ಅನುಸಂಧಾನದ ಮಾರ್ಗವನ್ನು ಹಿಡಿದುಕೊಂಡು ಬಂದರೆಂದು ಹೇಳಬಹುದು.



ಹೀಗೆ ಆರು ಮತ್ತು ಏಳನೆಯ ಶತಮಾನದಲ್ಲಿ ತಮಿಳು ನಾಡಿನಲ್ಲಿ ಕಾಣಿಸಿಕೊಂಡ ಚಳುವಳಿಯು, ೧೨-೧೩ನೆಯ ಶತಮಾನದಲ್ಲಿ ಕರ್ನಾಟಕ ಮಹಾರಾಷ್ಟ್ರದಲ್ಲಿ ಬೆಳೆದು ಬಂದು, ೧೫ನೆಯ ಶತಮಾನದಷ್ಟರ ಹೊತ್ತಿಗೆ ಸಮಗ್ರ ಭಾರತವನ್ನು ವ್ಯಾಪಿಸಿತೆಂದು ಹೇಳಬಹುದು. ದಕ್ಷಿಣದಿಂದ ಉತ್ತರಕ್ಕೆ ಚಲಿಸಿದ ಚಳುವಳಿಗಳ ಫಲವಾಗಿ ಅನೇಕ ಪಂಥಗಳು, ಸಂಪ್ರದಾಯಗಳು ಹುಟ್ಟಿಕೊಂಡವು ಮತ್ತು ವೈವಿಧ್ಯಮಯ ಸಾಹಿತ್ಯವೂ ಸೃಷ್ಟಿಯಾಯಿತು. ಭಕ್ತಿ ಚಳುವಳಿಯ ದೊಡ್ಡ ಗುಣವೆಂದರೆ ಸಂಕೀರ್ಣಗೊಂಡಿದ್ದ ಧರ್ಮವನ್ನು ಸರಳವಾಗಿ, ಜನಪರವಾಗಿ ವಿವರಿಸಿದ್ದು, ಹಾಡಿದ್ದು; ಅಧ್ಯಾತ್ಮದ ಅನುಭವಗಳನ್ನು ಹೇಳಿದ್ದು; ಜಡಗೊಂಡಿದ್ದ ದೈಹಿಕ ಪರಿಕಲ್ಪನೆಯನ್ನು ಚಲನಶೀಲಗೊಳಿಸಿದ್ದು; ಜನರಾಡುವ ನುಡಿಗಡಣಗಳಲ್ಲಿಯೇ ದೇವರು, ಧರ್ಮ, ಅಧ್ಯಾತ್ಮದ ಅನುಭವಗಳನ್ನು ಹೇಳಿದ್ದು, ಕೊನೆಗೆ ನಿಮ್ಮ 'ಅನುಭವವೇ ನಿಮಗೆ ಪ್ರಮಾಣ'ವೆಂದು ಸಾರಿದ್ದು ಭಕ್ತಿ ಚಳುವಳಿಯ ಈ ಸಾಧನೆಗಳನ್ನು ಅರಿತಾಗ ಗೊತ್ತಾಗುತ್ತದೆ. ಇಲ್ಲಿಯವರೆಗಿನ ಅಧ್ಯಾತ್ಮದ ಚರಿತ್ರೆಯನ್ನು ಗಮನಿಸಿದಾಗ ಸಿದ್ಧರು, ಸಂತರು, ನಾಥರು, ಅವಧೂತರು, ಶರಣರು, ಆರೂಢರು, ಸೂಫಿ ಸಂತರು ಈ ಮುಂತಾದ ಕೆಲವು ಪಂಥಗಳು ಇದುವರೆಗಿನ ಅಧ್ಯಯನದಲ್ಲಿ ದಾಖಲಾಗಿವೆ.

**ಸಂತ ಕವಿ ತಿರುವಳ್ಳುವರ್ :**

ಈತ ತಮಿಳು ನಾಡಿನ ಮಹರ್ಷಿ, ಮಹಾನ್ ಸಂತ, ತಮಿಳು ಮಹಾಕವಿಯೆಂದೇ ಕರೆಯಿಸಿಕೊಂಡವನು. ದ್ರಾವಿಡ ಚಿಂತನೆಯ ಪ್ರತಿಭಾವಂತ ಚಿಂತಕನೆಂದೂ ಕರೆಯಿಸಿಕೊಂಡವನು ಸಂತ ತಿರುವಳ್ಳುವರ್. ಒಂದು-ಎರಡನೆಯ ಶತಮಾನದಲ್ಲಿದ್ದ ಗ್ರಹಸ್ಥ ಜೀವನವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಬಗೆಯನ್ನು ತನ್ನ ಕಾವ್ಯ ಕೃತಿಯಲ್ಲಿ ಪ್ರಚುರಪಡಿಸಿದ್ದಾನೆ. ಈತ ನೇಕಾರ ವೃತ್ತಿಯವನೆಂಬುದು ತಿಳಿದು ಬರುತ್ತದೆ. ಜನಸಾಮಾನ್ಯರಿಗೆ ಹತ್ತಿರದ ಕವಿ. ಜನ ಸಾಮಾನ್ಯರಿಗೆ ಬದುಕಿನ ಅರ್ಥ ಹೇಳ ಹೊರಟ, ಅವರ ಭಾವನೆಗಳಿಗೆ ಮೂರ್ತರೂಪಕೊಟ್ಟ, ಕೇಳುಗರ ಮನ ಸೂರೆಗೊಂಡ ಸರಳ ಶೈಲಿಯ ಏಕೈಕ್ಯ ಕೃತಿಯೊಂದನ್ನು ರಚಿಸಿದ ಕವಿ. ಕನ್ನಡದ ಸರ್ವಜ್ಞ ಕವಿಯ ಜೀವನ ಮತ್ತು ಸಾಹಿತ್ಯಕ್ಕೆ ಹೆಚ್ಚು ಸಮೀಪವೆನಿಸಿದ ಕವಿ. ಈತನು ರಚಿಸಿದ ಕೃತಿಯ ಹೆಸರೇ 'ತಿರುಕ್ಕುರುಳ್'. ಇದು ಸರ್ವ ಸಮಾನತೆಯನ್ನು ಬೋಧಿಸುವ, ವಿಶ್ವಮಾನ್ಯತೆಯನ್ನು ಪ್ರತಿಪಾದಿಸುವ ಹಾಗೂ ಯಾವುದೇ ಜಾತಿ, ಮತ ಪಂಥಗಳನ್ನು ಮೀರಿ ನಿಲ್ಲುವ ಶ್ರೇಷ್ಠ ತಮಿಳು ವೇದವೆಂದೇ ಕರೆಯಿಸಿಕೊಂಡ, ದ್ವಿಪಾದದಲ್ಲಿಯುಳ್ಳ ಕೃತಿ. ತಿರುಕ್ಕುರುಳ್ ಇದು ಜನಪ್ರಿಯ

ಗ್ರಂಥವಾಗಿದ್ದು; ಪ್ರಪಂಚದ ಎಲ್ಲಾ ಭಾಷೆಗಳಲ್ಲಿ ಅನುವಾದಗೊಂಡ ಏಕೈಕ ಕೃತಿ ಎಂಬ ಕೀರ್ತಿಗೂ ಪಾತ್ರವಾಗಿದೆ. ಇದು ದೇಶ, ಭಾಷೆ, ಮತ, ಪಂಥಗಳ ಚೌಕಟ್ಟನ್ನು ಮೀರಿ ಮನುಕುಲದ ಮಾರ್ಗದರ್ಶಿಕೆ, ವೇದವಾಗಿ ಪ್ರಸಿದ್ಧಿ ಪಡೆದಿದೆ, ಕೃತಿ ಮತ್ತು ಕೃತಿಕಾರನ ಕುರಿತು ಮಾಹಿತಿ ಕುತೂಹಲವನ್ನುಂಟು ಮಾಡುವಂತಿದೆ.

ಇರುವುದೊಂದೆ ಸತ್ಯವೆಂದರೆ, ಬೇರೆ
ಹಲವಿವೆಯೆನ್ನುವರು; ಬೇರೆ ಇದೆ
ಎಂದರೆ, ಇಲ್ಲವೆನ್ನುವರು, ಆರು ಮತ
ಗಳವರು; ವಳ್ಳುವರು ಒಳ್ಳೆಯದನ್ನೆ
ಆರಿಸಿ ಮುಪ್ಪಾಲಿನಲಿ ಹೇಳಿದ ಸತ್ಯವನು
ಆರು ಮತಗಳವರೂ ಒಪ್ಪುವರು.

"ತಿರುಕ್ಕುರುಳ್" ಕಾವ್ಯವನ್ನು ಎಲ್ಲ ಮತದವರೂ ಓದುವಂತಹ ಕೃತಿ, ಕಲ್ಲಡನಾರ್ ಎಂಬ ಪ್ರಾಚೀನ ಕವಿ, ತಿರುವಳ್ಳುವರನ್ನು ಕುರಿತು ಹೇಳಿರುವ ಮಾತಿದು. 'ಮುಪ್ಪಾಲ್' ಎಂದರೆ ತಿರುವಳ್ಳುವರ್ ರಚಿಸಿದ ತಿರುಕ್ಕುರಳಿಗೆ ಇದ್ದ ಮೂಲ ಹೆಸರು. ಅರಂ (ಧರ್ಮ), ಪೊರುಳ್ (ಅರ್ಥ), ಇನ್ಬಂ (ಕಾಮ) ಎಂಬ ಮೂರು (ಧರ್ಮ, ಅರ್ಥ, ಕಾಮ) ಪುರುಷಾರ್ಥಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಹೇಳಿರುವುದರಿಂದ ಅದಕ್ಕೆ "ಮುಪ್ಪಾಲ್" ಎಂಬ ಹೆಸರು ಬಂದಿದೆ. ನಾಲ್ಕನೆಯ ಪುರುಷಾರ್ಥದ ಬಗೆಗೆ ತಿರುವಳ್ಳುವರ್ ಕವಿಯು ಏನೂ ಹೇಳಿಲ್ಲವೆಂಬ ಭಾವವಲ್ಲ. ಈ ಮೂರೂ ಪುರುಷಾರ್ಥಗಳನ್ನು ಸತ್ಯ ವ್ರತದ ನಡೆ–ನುಡಿಯಲ್ಲಿ ಪಾಲನೆ ಮಾಡಿದ್ದೇಯಾದರೆ ಮೋಕ್ಷವು ತನ್ನಿಂದ ತಾನೇ ಪ್ರಾಪ್ತಿಯಾಗುವುದೆಂಬುದು ಇದರೊಳಿರುವ ಗೂಢಾರ್ಥವಾಗಿದೆ. ಶರಣರು–ದಾಸರು–ಸಂತರು–ಮಹಂತರು ಹೇಳಿದಂತೆಯೇ ಈ ಕವಿಯ ನಿಲುಮೆಯಾಗಿದೆ. ಸಂಸಾರಸ್ಥರಾದವರೂ ಪಾಲನೆ ಮಾಡಬಹುದಾದ ಸನ್ಮಾರ್ಗವನ್ನು ತೋರಿದ ಪಥಿಕ ಮಹಾಕವಿ.

ಈ ದೇಶದ ಮಣ್ಣಿನ ಮೂಲ ಸಂಸ್ಕೃತಿಯು ಒಂದೇಯಾಗಿದ್ದರೂ ಹಲವು ಮತಗಳು ಜನ್ಮ ತಾಳಿ, ಪರಸ್ಪರ ಭೇದಗಳ ಎತ್ತಿ ತೋರಿಸುತ್ತ, ಒಂದೇ ಸತ್ಯವನ್ನೂ ಹೇಳುತ್ತವೆಂದರೂ ಬೇರೆ ಬೇರೆ ಎಂದು ಅವು ಪ್ರತಿಪಾದಿಸುತ್ತವೆ. ಆದರೆ ತಿರುವಳ್ಳುವರರು ಭೇದವೆಣಿಸದೆ ಅವುಗಳ ಸಾರವನ್ನು ಗ್ರಹಿಸಿ, ತ್ರಿಕಾಲಾಭಾದಿತ ಸತ್ಯವನ್ನು, ತಿರುಕ್ಕುರುಳ್ ಕೃತಿಯಲ್ಲಿ ಕಿರಿದಾದ ಮಾತುಗಳಲ್ಲಿ ಅಂದರೆ ದ್ವಿಪಾದ–ಎರಡೇ ಎರಡು ಸಾಲುಗಳಲ್ಲಿ ಹೇಳಿ ಎಲ್ಲ ಮತ, ಪಂಥಗಳ ಮನ್ನಣೆಗೂ ಪಾತ್ರರಾಗಿದ್ದಾರೆ. ಆದುದರಿಂದಲೇ ತಿರುವಳ್ಳುವರ್‌ರ ತಿರುಕ್ಕುರುಳ್‌ನ್ನು ತಮಿಳು



ನಾಡಿನ ಜನತೆಯು ಭಗವದ್ಗೀತೆಯ ಸರಿಸಮಾನವಾದುದೆಂದು ಕರೆದು ಗೌರವಿಸಿದ್ದಾರೆ. ಶೈವ, ವೈಷ್ಣವ, ಜೈನ, ಬೌದ್ಧ, ಶಾಕ್ತ, ಸಾಂಖ್ಯ ಮುಂತಾದ ಎಲ್ಲ ಮತಗಳವರೂ ವಳ್ಳುವರರನ್ನು ತಮ್ಮವರೆಂದು ಭಾವಿಸುತ್ತಾರೆ. ಅವರೊಬ್ಬ ಮತ, ಪಂಥ, ಬಂಧನವಿಲ್ಲದ ದಾರ್ಶನಿಕ ಕವಿಯೆಂದು ಅವರನ್ನು ಆರಾಧಿಸುತ್ತ ಬಂದಿದ್ದಾರೆ.

ದ್ರಾವಿಡ ಜಾತಿಯ ಛಂದಸ್ಸಿನಲ್ಲಿ 'ಕುರಳ್‌ವೆಣ್ಬಾ' ಎಂಬುದು ಅತ್ಯಂತ ಕಿರಿದಾದ ಛಂದಸ್ಸು. ಅದನ್ನು ಕನ್ನಡದಲ್ಲಿ ದ್ವಿಪಾದವಿರುವ "ಏಳೆ" ಛಂದಸ್ಸು ಎಂದು ಪರಿಗಣಿಸಬಹುದಾಗಿದೆ. ಈ ದ್ವಿಪಾದವೇ ಮುಗುಚಿ ಬಿದ್ದು ತ್ರಿಪದಿ ಆಗಿದೆ ಎಂದು ಕನ್ನಡ ಛಂದಶಾಸ್ತ್ರಜ್ಞರು ಹೇಳಿದ್ದಾರೆ. ಹಾಗೆಯೇ 'ಕುರುಳ್'ಎಂದರೆ 'ಕಿರಿದು' ಅಥವಾ 'ಚಿಕ್ಕದ್ದು' ಎಂದರ್ಥ. ಎರಡು ಸಾಲಿನ ಈ ಪದ್ಯದಲ್ಲಿ ಮೊದಲನೆಯ ಸಾಲಿನಲ್ಲಿ ನಾಲ್ಕು ಚರಣಗಳು, ಎರಡನೆಯ ಸಾಲಿನಲ್ಲಿ ಮೂರು ಚರಣಗಳು ಇವೆ. ಚರಣವೆಂದರೆ ಗಣವೆಂದಿರಬಹುದೆಂಬುದು ನನ್ನ ತರ್ಕವಾಗಿದೆ. ಸಂಗಮ್ ಕಾಲದಲ್ಲಿ ಪ್ರಚುರವಾಗಿದ್ದ ಆಶಿರಿಯರ್ ವೃತ್ತವನ್ನು ಕೈಬಿಟ್ಟು "ಕುರುಳ್‌ವೆಣ್ಬಾ" ಛಂದಸ್ಸನ್ನು ಆರಿಸಿಕೊಂಡಿರುವುದು ವಳ್ಳುವರರ ವೈಯಕ್ತಿಕತೆಗೆ ಮಾದರಿಯಾಗಿದೆ. ಹೀಗೆ ಅಡಕವಾದ ಪದ್ಯ ರಚನೆಗೆ ಮಾದರಿಯಾಗಿದೆ. ಈ ಕಾರಣದಿಂದ ತಿರುವಳ್ಳುವರ್ ಕವಿಯನ್ನು ಹಲವು ಸಂಗಮ್ ಕಾಲದ ಕವಿಗಳೂ ಮೆಚ್ಚಿ ಹಾಡಿ ಹೊಗಳಿದ್ದಾರೆ. 'ಸಾಸುವೆಯನ್ನು ಕೊರೆದು ಏಳು ಕಡಲನ್ನು ಹೊಗಿಸುವ ಸಾಹಸವಳ್ಳುವರದು' ಎಂದೂ ಅಭಿವರ್ಣಿಸಿದ್ದಾರೆ. ತಿರುಕ್ಕುರುಳಿನಲ್ಲಿ ಒಟ್ಟು ೧೩೩೦ ಕುರುಳುಗಳಿವೆ. ಹತ್ತು ಪದ್ಯಗಳ ಒಟ್ಟು ೧೩೩ ಪ್ರಕರಣಗಳಲ್ಲಿ ಅದನ್ನು ಕವಿಗಳೇ ವಿಭಜಿಸಿದ್ದಾರೆ.

■■

## ಅಧ್ಯಾಯ – ೩
## ತಿರುವಳ್ಳುವರ್‌ರ ಚರಿತಾಮೃತ

ತಿರುವಳ್ಳುವರರು ಎಂಬುದು ಅವರ ನಿಜವಾದ ಹೆಸರಲ್ಲ. ಅದು ಜಾತಿ ಅಥವಾ ವೃತ್ತಿ ಸೂಚಿತ ಪದ. "ತಿರು" ಎಂದರೆ "ಶ್ರೀ"ಗೆ ಸಮಾನವಾದ ಗೌರವ ಸೂಚಕ ಪದ. ಪವಿತ್ರವೆಂದು ಅರ್ಥವೂ ಇದಕ್ಕಿದೆ. "ವಳ್ಳುವ" ಎಂದರೆ ಅಂತ್ಯಜರೆನಿಸಿದ ವಿಶೇಷಣವೆಂಬ ಅಭಿಪ್ರಾಯವಿದೆ. ಈತ ನೇಕಾರಿಕೆ ವೃತ್ತಿಯವನಾಗಿದ್ದನೆಂಬುದೂ ತಿಳಿದುಬರುತ್ತದೆ. 'ವಳ್ಳುವ' ಎಂಬುದು 'ವಲ್ಲಭ'ದ ತದ್ಭವವೆಂದೂ ಕೆಲವು ವಿದ್ವಾಂಸರು ಊಹಿಸಿದ್ದಾರೆ. ಪ್ರಾಚೀನ ಕಾಲದಲ್ಲಿ ಇವರೇ ರಾಜ ಘೋಷಣೆಗಳನ್ನು ಸಾರುತ್ತಿದ್ದರೆಂಬು ಪ್ರತೀತಿಯೂ ಇದೆ. ಪ್ರಾಚೀನ ತಮಿಳು ಕೋಶದಲ್ಲಿ ಈ ಶಬ್ದಕ್ಕೆ ಅಮಾತ್ಯ, ದಂಡನಾಯಕ, ಎಂಬರ್ಥಗಳಿವೆ. ಇಂದಿಗೂ ಆದಿ ದ್ರಾವಿಡ ಜನಾಂಗದಲ್ಲಿ ಪುರೋಹಿತ್ಯ ನಡೆಸುವ ಜಾತಿಗೆ ಈ ಹೆಸರಿದೆ. ಆದರೆ ಮಹರ್ಷಿ ತಿರುವಳ್ಳುವರ್‌ರ ಮೇಲೆ ಇವು ಯಾವುದೂ ಬೆಳಕು ಬೀರುವುದಿಲ್ಲ.

**ಕಾಲ–ದೇಶ ವಿಚಾರ :**

ಡಾ. ಪಾ.ಶ.ಶ್ರೀನಿವಾಸ ಅವರು ಹೇಳಿರುವುದನ್ನು ಯಥಾವತ್ತಾಗಿ ಎತ್ತಿಕೊಳ್ಳಲಾಗಿದೆ. ಸುಮಾರು ೨೦೦೦ ವರ್ಷಗಳಷ್ಟು ಪ್ರಾಚೀನ ಕಾಲದವನೆಂಬುದು ವಿದ್ವಾಂಸರ ವಾದವಾಗಿದೆ. ಅಂದರೆ ಒಂದು ಅಥವಾ ಎರಡನೆಯ ಶತಮಾನದಲ್ಲಿದ್ದವನು. ಈಗಿನ ಚೆನ್ನೈಗೆ ಸಮೀಪದಲ್ಲಿರುವ ಈಗ ಮಹಾನಗರದ ಭಾಗವಾಗಿರುವ 'ಮಯಿಲಾಪುರ'ದಲ್ಲಿ ನೇಕಾರಿಕೆಯ ವೃತ್ತಿಯನ್ನು ಅನುಸರಿಸುತ್ತಿದ್ದರೆಂಬುದಾಗಿ ಹೇಳುತ್ತಾರೆ. ಕವಿಯ ಜೀವನದ ಸುತ್ತ ಹಲವಾರು ದಂತ ಕಥೆಗಳು ಹುತ್ತದಂತೆ ಹಬ್ಬಿಕೊಂಡಿದೆ. ಇದು ಪ್ರಾಚೀನ ಜನಪ್ರಿಯ ಕವಿಯೊಬ್ಬನ ಜೀವನ, ಈ ವಿಷಯದಲ್ಲಿ ಇಂಥ ಕಥೆ ಎಲ್ಲ ದೇಶ–ಭಾಷೆಗಳಲ್ಲಿ ಹುಟ್ಟಿಕೊಳ್ಳುವುದು ಸಾಮಾನ್ಯ ಮತ್ತು ಸಹಜ; ನಮ್ಮ ಕನ್ನಡದ ಕವಿ ಸರ್ವಜ್ಞ ಕವಿಯ ಜೀವನದ ಬಗೆಗೆ ಇರುವ ಕಥೆಯಂತೆಯೇ ವಳ್ಳುವರ್‌ರ ಜೀವನದಲ್ಲಿಯೂ ಒಂದು ದಂಥ ಕಥೆಯಿದೆ. ಈ ಕಥೆಯ ಪ್ರಕಾರ 'ಆದಿ' ಎಂಬ ಹೊಲತಿಗೂ 'ಭಗವಾನ್' ಎಂಬ ಬ್ರಾಹ್ಮಣನಿಗೂ ನಡುವೆ ಇದ್ದ ಸಂಪರ್ಕದಿಂದ ಹುಟ್ಟಿದ ಮಗುವೇ 'ವಳ್ಳುವರ್'. ತಂದೆ ತಾಯಿಯರಿಂದ ವರ್ಜಿತನಾದ ಈ ಶಿಶುವನ್ನು ವೆಲ್ಲಾಳ (ಕೃಷಿಕ) ಮನೆತನದವರು, ಮಕ್ಕಳಿಲ್ಲದ



ದಂಪತಿಗಳು ಸಾಕಿ ಬೆಳೆಸಿದರು. ಬಾಲ್ಯದಲ್ಲೇ ವಳ್ಳುವರ್‌ರು ತನ್ನ ಹುಟ್ಟಿನ ಬಗೆಗೆ ತಿಳಿಯಲು ವೈರಾಗ್ಯ ತಳೆದು, ಸಾಧು–ಸಂತರ ಸಂಪರ್ಕದಲ್ಲಿ ಸೇರುತ್ತಾನೆ. ಆ ಸಾಧು–ಸಂತರ ಮುಖೇನ ಹಲವು ಮತಗಳ, ಶಾಸ್ತ್ರ ಸಿದ್ಧಾಂತಗಳ ಪರಿಚಯವಾಯಿತು. ಆ ಮತಗಳ ಒಳಿತು–ಕೆಡಕುಗಳನ್ನು ವಿಮರ್ಶಿಸಬಲ್ಲವರಾಗಿದ್ದರು ತಿರುವಳ್ಳುವರ್ ಎಂಬುದಾಗಿ ತಿಳಿದು ಬಂದಿದೆ.

ಅನಂತರದಲ್ಲಿ ವಳ್ಳುವರ್‌ರು ಯೌವ್ವನಕ್ಕೆ ಬಂದಾಗ "ವಾಸುಕಿ" ಎಂಬ ಹೆಣ್ಣು ಅವರ ಜೀವನದಲ್ಲಿ ಪ್ರವೇಶ ಪಡೆದಳು. ಅವಳನ್ನು ಹಲವು ಪರೀಕ್ಷೆಗೊಳಪಡಿಸಿ, ಅವಳು ತನ್ನ ಬಾಳ ಸಂಗಾತಿಯಾಗಲು ಅರ್ಹಳೆಂದು ನಂಬಿದ ಮೇಲೆ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸಿ ದಾಂಪತ್ಯ ಜೀವನ ನಡೆಸಿದರೆಂದು ಹೇಳಿಕೆಯಿದೆ. ಅವಳ ಧರ್ಮದ ಸಾರವನ್ನು ಅವರ ಅನುಭವಕ್ಕೆ ತಂದಳು. ಗೃಹಸ್ಥ ಜೀವನವನ್ನು ಸಮರ್ಥ ದೃಷ್ಟಿಯಿಂದ ಗ್ರಹಿಸಲು, ಅವಳು ಅವರಿಗೆ ನೆರವಾದಳು. ಮುಂದೆ ಅವರು ಬರೆದ ತಿರುಕ್ಕುರುಳಿನ ಧರ್ಮ ಭಾಗದಲ್ಲಿ ಗೃಹಸ್ಥ ಧರ್ಮವನ್ನು ಕುರಿತು ಅವರು ಕೊಟ್ಟ ಸಲಹೆಗಳಿಗೆ ಅವರು ಪಡೆದ ಈ ಅನುಭವವೇ ಆಧಾರವಾಯಿತೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಸಂಸಾರ ಜೀವನವು ಸರಾಗವಾಗಿ ಸಾಗಿತ್ತು ಎನ್ನುವಷ್ಟರಲ್ಲಿಯೇ ತನ್ನ ಪ್ರೀತಿಯ ಪತ್ನಿಯನ್ನು ಮಧ್ಯ ವಯಸ್ಸಿನಲ್ಲಿಯೇ ಕಳೆದುಕೊಂಡ ವಳ್ಳುವರರು ವೈರಾಗ್ಯ ತಳೆದು ಸನ್ಯಾಸ ಧರ್ಮವನ್ನು ಸ್ವೀಕರಿಸಿದರು. ಧಾರ್ಮಿಕ ಚಿಂತನೆಗಳು ಅವರನ್ನು ಪಕ್ವವಾಗಿಸಿ, ತಿರುಕ್ಕುರುಳ್‌ನ್ನು ಅವರು ರಚಿಸಿದ ಮೇಲೆ ದಾರ್ಶನಿಕ ಕವಿಯೆಂದು ಪ್ರಖ್ಯಾತರಾಗುತ್ತಾರೆ. ಮುಂದೆ ಅವರು ತಮ್ಮ ಶಿಷ್ಯ ಬಳಗದೊಂದಿಗೆ ತಮಿಳುನಾಡಿನ ಹಲವು ಕ್ಷೇತ್ರಗಳನ್ನು ಸಂದರ್ಶಿಸಿ, ಮಧುರೆಗೆ ಬಂದರು. ಮಧುರೆಯ ಪಾಂಡ್ಯರಾಜನ ಘೋಷಣೆಯಲ್ಲಿ ಕವಿಗಳ ಪ್ರಸಿದ್ಧರಾದ ಗೋಷ್ಠಿ ಒಂದು ಜರುಗುತ್ತದೆ. ಕವಿ, ಕಾವ್ಯ ಚಿಂತನೆಯಲ್ಲಿ ಕಾವ್ಯಗಳಿಗೆ ಬೆಲೆ ಕಟ್ಟುತ್ತಿರುವುದನ್ನು ಕೇಳಿದ ಅವರು ತಮ್ಮ ತಿರುಕ್ಕುರುಳ್‌ನ್ನು ಈ ಗೋಷ್ಠಿಯ ಮುಂದಿಟ್ಟರು; ಆ ಗೋಷ್ಠಿಯಲ್ಲಿದು ಶ್ರೇಷ್ಠ ಕೃತಿಯೆಂದು ಸಾಬೀತುಪಡಿಸಲಾಯಿತು. ಪಂಡಿತ ಮಂಡಳಿಯವರೆಲ್ಲರೂ ಈ ಕೃತಿಗೆ ಗೌರವ ಸಲ್ಲಿಸಿದರು. "ತಿರುವಳ್ಳುವ ಮಾಲೈ" ಎಂಬ ಹೆಸರಿನಲ್ಲಿ ವಳ್ಳುವರರುಗಳಿಗೆ ಗೌರವಿಸಿ ಹಾಡಿದರು. ಈ ಹಾಡುಗಳು ಮುಂದೆ ಸಂಕಲನ ರೂಪದಲ್ಲಿ ಪ್ರಸಿದ್ಧವಾಗಿವೆ. ತಿರುವಳ್ಳುವರ್‌ರು ಸುಳ್ಳು ಹೇಳದ ಸತ್ಯಶೀಲನಾದ ಕವಿ ಎಂದು ಕರೆಯಿಸಿಕೊಂಡಿದ್ದು ಕಂಡುಬರುತ್ತದೆ. ತಿರುವಳ್ಳುವರ ಜೀವನದ ಈ ಸಂಗತಿಗಳು ದಂತ ಕಥೆಗಳಾಗಿ ಕಂಡರೂ, ಮಹಾಪುರುಷರ ಜೀವನದಲ್ಲಿ ಇಂತಹ

ಕಥೆಗಳು ಜನಜನಿತವಾಗಿ, ಪ್ರಚಲಿತ ಜನಪ್ರಿಯತೆಯ ಕುರುಹು ಎಂದು ಭಾವಿಸಬಹುದು. ಮಣಿಮೇಖಲೈ (ಶಾಕ್ತನಾರ್), ಶಿಲಪ್ಪದಿಕಾರಂ (ಇಳಂಗೋ ಲಿಪಿಗಳ್) ಗಳಿಗಿಂತಲೂ ಶ್ರೇಷ್ಠ ಕಾವ್ಯ ಕೃತಿ ತಿರುಕ್ಕುರುಳ್ ಎಂಬುದಾಗಿ ಗಣಿಸಲ್ಪಟ್ಟಿದೆ. ತಿರುಕ್ಕುರುಳ್‌ನ್ನು ತಮಿಳುವೇದ, ಪಂಚಮವೇದ, ಉತ್ತರವೇದ ಎಂದು ಕರೆದಿರುವುದು ಅದರ ಹಿರಿಮೆಗೆ ಸಾಕ್ಷಿಯಾಗಿದೆ. ಮಾನವರೆಲ್ಲರಿಗೂ ಸರ್ವ ಸಮನ್ವಯ ತತ್ತ್ವವನ್ನು ಬೋಧಿಸುವ ವೈಚಾರಿಕ ಕೃತಿಯೆಂದು ಮನ್ನಣೆ ಗಳಿಸಿದೆ. ಈ ಎಲ್ಲ ಆಧಾರಗಳಿಂದ ಈತ ಒಂದು ಇಲ್ಲವೆ ಎರಡನೆಯ ಶತಮಾನದಲ್ಲಿದ್ದನೆಂಬುದು ವಿಧಿತವಾಗುತ್ತದೆ.

ಜಾಗತಿಕ ನೆಲೆಯಲ್ಲಿ ತಿರುಕ್ಕುರುಳ್ ಕಾವ್ಯ ಅನುವಾದಗೊಂಡು ವಿಶ್ವವಿಖ್ಯಾತವಾಗಿದೆ. ಜಗತ್ತಿನ ಎಂಭತ್ತೆರಡು ಭಾಷೆಗಳಲ್ಲಿ ಅನುವಾದಗೊಂಡಿದೆ. ರಷ್ಯನ್, ಫ್ರೆಂಚ್, ಅಮೇರಿಕನ್, ಜಪಾನ್, ಚೀನೀ ಮೊದಲಾದ ವಿದೇಶಿ ಭಾಷೆಗಳಿಗೂ ಅನುವಾದಗೊಂಡಿದೆ. ಕನ್ನಡ, ತೆಲುಗು, ಮಲಯಾಳಂ, ಉರ್ದು ಮರಾಠಿ, ಹಿಂದೀ ಮುಂತಾದ ಭಾರತೀಯ ಭಾಷೆಗಳಿಗೂ ಅನುವಾದಗೊಂಡು ವಿಶ್ವದ ಅನುವಾದ ಸಾಹಿತ್ಯದಲ್ಲಿ ಮೂರನೆಯ ಸ್ಥಾನದಲ್ಲಿದೆ. (ಮೊದಲನೆಯ ಸ್ಥಾನ ಬೈಬಲ್, ಎರಡನೆಯ ಸ್ಥಾನ ಕುರಾನ್. ಕನ್ನಡಕ್ಕೆ ಅನುವಾದಿಸಿದವರು ಕೆ.ಜಯರಾಮ ಅವರು ಈ ಕೃತಿಯನ್ನು 'ಜೀವನ ಧರ್ಮ ದೀಪಿಕೆ' ಎಂಬುದಾಗಿ ಅನುವಾದ ಮಾಡಿದ್ದಾರೆ. ಇನ್ನೊಬ್ಬರು ನ. ಮುನಿಸ್ವಾಮಿಯವರು ಸುಂದರ, ಸ್ಪಷ್ಟವಾಗಿ ಅನುವಾದಿಸಿದ್ದರೆ.

■■

# ಅಧ್ಯಾಯ-೪
# ತಿರುಕ್ಕುರುಳ್ ಕಾವ್ಯದ ವಿವೇಚನೆ

ಮಾನವನ ಬದುಕಿನ ಉನ್ನತಿಗೆ ಬೇಕಾಗುವ ಮೌಲ್ಯಗಳಾದ ಮೂರು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮಗಳ ಕುರಿತು ಚಿಂತಿಸುವ ಕಾವ್ಯವಿದಾಗಿದೆ. ಇವು ಮೂರೂ ಮಾನವನ ಪ್ರಾಪಂಚಿಕ ಬದುಕಿಗೆ ತೀರ ಹತ್ತಿರವಾದವುಗಳಿವು. ಮನುಷ್ಯನ ಜೀವನಾವಧಿಯಲ್ಲಿ ಸಾಧಿಸಬಹುದಾದ ಆದರ್ಶಗಳು; ಲೋಕದಲ್ಲಿ ವ್ಯಷ್ಟಿ ಮತ್ತು ಸಮಷ್ಟಿ ಕಲ್ಯಾಣವನ್ನು ರೂಪಿಸಲು ಧರ್ಮಾರ್ಥಕಾಮಗಳು ಮನುಷ್ಯನಿಗೆ ನೆರವಾಗುವುದರಿಂದ ಲೋಕದ ಬದುಕಿನಲ್ಲಿ ಅವು ಮಹತ್ವವನ್ನು ಪಡೆಯುತ್ತವೆ. ಶುಚಿಯಾದ ಬದುಕನ್ನು ಬಿಟ್ಟು ಬದುಕುವಂತಿಲ್ಲ ಮತ್ತು ಇವುಗಳನ್ನು ಗಳಿಸುವಂತಿಲ್ಲ. ಮೋಕ್ಷವೆನ್ನುವುದು ಪಾರಲೌಕಿಕ ಬದುಕಿಗೆ ಬೇಕಾಗುವ ಅಂತಿಮ ಗುರಿ, ಧರ್ಮ ಮಾರ್ಗದಲ್ಲಿ ನಡೆದು, ಅರ್ಥ, ಕಾಮಗಳನ್ನು ಲೋಕ ಕಲ್ಯಾಣಕ್ಕಾಗಿ ಗಳಿಸಿಕೊಂಡರೆ, ಅದೇ ಮೋಕ್ಷಕ್ಕೆ ಏಣಿಯಾಗುತ್ತವೆ ಎಂಬುದು ತಿರುವಳ್ಳುವರ್‌ರ ಮತ, 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟ; ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ' ಎಂದು ಬಸವಣ್ಣನವರು ಹೇಳಿರುವಂತೆ 'ಲೋಕದಲ್ಲಿ ಬಾಳ್ವ ರೀತಿಯಲಿ, ನಡೆದವರು; ನಾಕದಲಿ ದೇವತೆಗಗಳ ನಡುವೆ ಸೇರುವರು (ತಿರು-೫೦) ಎಂದು ವಳ್ಳುವರರು ಹೇಳಿ, ಲೋಕದ ಬಾಳಿಗೆ ಅರ್ಥ ತುಂಬಿದ್ದಾರೆ. ಈ ಕೃತಿಯಲ್ಲಿ ೧೩೩೦ ದ್ವಿಪದಗಳನ್ನು ಕವಿಯೇ ಮೂರು ವಿಭಾಗಗಳಲ್ಲಿ ವಿಂಗಡಿಸಿದ್ದಾನೆ.

**೧. ಧರ್ಮಭಾಗ:** ಇದರಲ್ಲಿ ೩೮ ಅಧ್ಯಾಯಗಳಿವೆ. ೩೮೦ಕುರುಳಗಳಿವೆ. ಇವುಗಳಲ್ಲಿ ದೇವರ ಸ್ತುತಿ, ಮಳೆ, ದೃಷ್ಟಾರರ ಹಿರಿಮೆ, ಧರ್ಮಬಲ ಪ್ರತಿಪಾದನೆ, ಗೃಹ ಧರ್ಮ, ಜೀವನ ಸಂಗಾತಿಯ ಲಕ್ಷಣ, ಮಕ್ಕಳ ಭಾಗ್ಯ, ಒಲವು, ಅತಿಥಿ ಸತ್ಕಾರ, ಸವಿನುಡಿಯುವುದು, ಉಪಕಾರ ಸ್ಮರಣೆ, ಸಮದರ್ಶಿತ್ವ, ಆತ್ಮ ಸಂಯಮ, ಆಚಾರ, ಪರಸತಿಯಿಂದ ದೂರವಿರುವುದು, ಸಹನ ಗುಣ, ಅಸೂಯೆಪಡದಿರುವುದು, ನಿಂದಿಸದಿರುವುದು, ಅನ್ಯರೊಡನೆ ಆಸೆಯಿಲ್ಲದಿರುವುದು, ವ್ಯರ್ಥ ಮಾತಾಡದಿರುವುದು, ದುಷ್ಕರ್ಮ ಭಯ, ಕರ್ತವ್ಯ ಪ್ರಜ್ಞೆ, ದಾನ, ಕೀರ್ತಿ ಕರುಣೆ, ತಪಸ್ಸು, ಮಾಂಸ ಸೇವಿಸದಿರುವುದು, ಕಪಟಾಚಾರ, ಕಳ್ಳತನ ಮಾಡದಿರುವುದು, ಸತ್ಯದ ನುಡಿ-ನಡೆ, ಮುನಿಯದಿರುವುದು, ಕೇಡು ಬಯಸದಿರುವುದು, ಅಸ್ಥಿರತೆ, ಸ್ವಾರ್ಥತ್ಯಾಗ, ಸತ್ಯ ಸಾಕ್ಷಾತ್ಕಾರ, ಆಸೆ ಅಳಿಯುವುದು, ವಿಧಿ ಈ ಮುಂತಾದ ಶೀರ್ಷಿಕೆಗಳಡಿಯಲ್ಲಿ

ತಲಾ ಹತ್ತತ್ತು ದ್ವಿಪದಗಳಲ್ಲಿ ಹೇಳಿದ್ದಾನೆ. ಇವೆಲ್ಲವೂ ಒಳ್ಳೆಯ ನಡತೆಗೆ ಸಂಬಂಧಿಸಿದ ವಿವರಗಳಿದ್ದು; ಇದನ್ನು ಪೀಠಿಕಾ ಭಾಗವೆಂದು ಕರೆಯಲಾಗಿದೆ. ಇದರಲ್ಲಿ ಮಾನವನ ನಡವಳಿಕೆ, ನೀತಿ, ಸತ್ಯ, ಅಹಿಂಸೆ, ಪ್ರಾಮಾಣಿಕತೆ, ಋಷಿ ಧರ್ಮ ಮುಂತಾದ ಸಂಗತಿಗಳನ್ನು ಚರ್ಚಿಸಿದ ವಿಷಯಗಳಿವೆ.

**೨. ಅರ್ಥಭಾಗ:** ಇದರಲ್ಲಿ ಎಪ್ಪತ್ತು ಅಧ್ಯಾಯಗಳಿವೆ. ಇವೆಲ್ಲವೂ ಅರ್ಥನೀತಿ ಮತ್ತು ರಾಜನೀತಿಗೆ ಸಂಬಂಧಿಸಿದ ವಿಚಾರಗಳಿಂದೊಡಗೂಡಿವೆ. ಅವು ರಾಜಲಕ್ಷಣ, ವಿದ್ಯೆ, ಅವಿದ್ಯೆ, ಶ್ರವಣ ವಿದ್ಯೆ, ಅರಿವು ಪ್ರಾಜ್ಞರ ನೆರವು, ದೋಷದಿಂದ ದೂರವಿರುವುದು, ದುರ್ಜನರ ಸಂಗದಿಂದ ದೂರ, ಆಲೋಚಿಸಿ ಕಾರ್ಯವೆಸಗುವುದು, ಬಲದ ಅರಿಕೆ, ಸೂಕ್ತ ಕಾಲ ಪ್ರಜ್ಞೆ, ಪರೀಕ್ಷೆ, ಸ್ಥಳದರಿವು, ಬಂಧು ಬಳಗವನ್ನಾದರಿಸುವುದು, ಮರೆವಿಲ್ಲದಿರುವುದು, ಋಜುಪ್ರಭುತ್ವ, ನಿರಂಕುಶ ಪ್ರಭುತ್ವ, ಕೃಪಾದೃಷ್ಟಿ, ಬೇಹುಗಾರಿಕೆ, ಉತ್ಸಾಹದಿಂದಿರುವುದು, ಚುರುಕುತನ, ಪ್ರಯತ್ನ, ಧೈರ್ಯದಿಂದಿರುವುದು, ಸಚಿವ ಲಕ್ಷಣ, ವಾಕ್ಸಾಮರ್ಥ್ಯ, ಕಾರ್ಯಶುದ್ಧಿ, ಕಾರ್ಯದೃಢತೆ, ಕಾರ್ಯವಿಧಾನ, ರಾಯಭಾರ, ಅರಸನಿಗೆ ಗೌರವವೀಯುವುದು, ಮಾತಿನ ಹದ, ನಾಡಾಭಿಮಾನ, ಕೋಟೆ, ಸಿರಿ ಸಂಪಾದನೆಯ ಮಾರ್ಗ, ಸೇನೆಯ ಜವಾಬ್ದಾರಿ ಮತ್ತು ಪರಾಕ್ರಮ ಸ್ನೇಹ, ನಿಕಟ ಸ್ನೇಹ, ದುರ್ಜನರ ಸ್ನೇಹ, ಕಪಟ ಸ್ನೇಹ, ಮೂರ್ಖತನ, ಅವಿವೇಕ, ಹಗೆತನ, ಹಿತಶತ್ರು, ಪತ್ನೀದಾಸ, ವೇಶ್ಯೆಯರು, ಮದ್ಯಪಾನದಿಂದ ದೂರ, ಜೂಜು, ಔಷಧ, ಸತ್ಕಾರ್ಯದ ಲಕ್ಷಣ, ಸ್ವಾಭಿಮಾನ, ಹಿರಿಯತನ, ಸಂಪನ್ನತೆ, ಸಜ್ಜನಿಕೆ, ನಿರರ್ಥಕ ಸಂಪತ್ತು, ಲಜ್ಜಾಗುಣ, ಸಮಾಜದ ಕಾಳಜಿ, ವ್ಯಯಸಾಯ, ಬಡತನ, ಭಿಕ್ಷೆ ಬೇಡುವುದು, ಅಧಮತೆ ಈ ಮುಂತಾದ ಎಪ್ಪತ್ತು ತಲಾ ಹತ್ತತ್ತು ಕುರುಳ್‌ಗಳುಳ್ಳ ೧೦೮೦ (ದ್ವಿಪಾದಗಳ) ಅಧ್ಯಾಯಗಳಲ್ಲಿ ಕವಿ ಹಿಡಿದಿಟ್ಟಿದ್ದುದು ಕಂಡುಬರುತ್ತದೆ. ಇದರಲ್ಲಿ ಅರ್ಥನೀತಿ ಮತ್ತು ರಾಜನೀತಿಯೂ ಬಣ್ಣಿಸಲ್ಪಟ್ಟಿದೆ.

**೩. ಕಾಮ ಭಾಗ:** ಇದರಲ್ಲಿ ಇಪ್ಪತ್ತೈದು ಅಧ್ಯಾಯಗಳಿವೆ. ಸೌಂದರ್ಯದಿಂದಾಗುವ ನೋವು ರತಿ ಸುಖದ ವರ್ಣನೆ, ಸೌಂದರ್ಯದ ವರ್ಣನೆ, ಪ್ರಣಯದ ವೈಶಿಷ್ಟ್ಯ, ಲಜ್ಜಾತ್ಯಾಗ, ಪ್ರಣಯ ವದಂತಿಯ ಪ್ರಕಟನೆ, ವಿರಹ ಯಾತನೆ, ವಿರಹಿಣಿಯ ರೋದನ, ನೇತ್ರಗಳ ಪ್ರಲಾಪ, ವ್ಯಸನ, ಏಕಾಂತ ಶೋಕ, ಶೋಚನೀಯ ಸ್ಮರಣೆ, ಸ್ವಪ್ನ ದರ್ಶನ, ಸಂಧ್ಯಾಕಾಲ ವ್ಯಸನ, ಅಂಗ ಸೌಂದರ್ಯ ನಾಶ, ಸ್ವಗತ ಸಂಭಾಷಣೆ, ಸಂಯಮ ನಾಶ, ಪರಸ್ಪರ ದರ್ಶಿಸುವ ಹಂಬಲ, ಪ್ರೇಮಿಗಳ ಮನೋಭಾವ, ಪುನರ್ಮಿಲನದ ತವಕ, ಹುಸಿಮುನಿಸು, ಪ್ರಣಯ ಕಲಹ, ಪ್ರಣಯ ಕಲಹದ ಸೂಕ್ಷ್ಮತೆ ಮತ್ತು ಆನಂದ ಹೀಗೆ ೩೩೦ ದ್ವಿಪಾದಗಳಲ್ಲಿದ್ದು; ಇವುಗಳಲ್ಲೆಲ್ಲ ಮಾನವ ಪ್ರೇಮದ ಉದಾತ್ತ ಧ್ಯೇಯಗಳನ್ನು ಪ್ರತಿಪಾದಿತವಾಗಿವೆ.



ಸಂಕ್ಷಿಪ್ತದಲ್ಲಿ ಈ ಮೂರು ಭಾಗಗಳ ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ. ನ.ಮುನಿಸ್ವಾಮಿಯವರು ಅನುವಾದಿಸಿದ ಗ್ರಂಥದ ಆಧಾರದಿಂದ ಹೇಳುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಒಟ್ಟು ೧೩೩ ಅಧ್ಯಾಯಗಳಲ್ಲಿ ೧೩೩೦ ಪದ್ಯ (ಕುರುಳ್) ಗಳಿವೆ. ತಿರುವಳ್ಳುವರ್ ತಮ್ಮ ಚಿಂತನೆಗಳಿಗೆ ನಿಖರ ರೂಪಕೊಟ್ಟು ಅಚ್ಚುಕಟ್ಟಾಗಿಯೇ ವಿಭಾಗಿಸಿ ಹೇಳಿರುವುದು ಅವರ ವಿಷಯ ಸ್ಪಷ್ಟತೆಗೆ, ನೇರ ನಿಲುವುಗಳಿಗೆ ಈ ಕೃತಿಯು ಸಾಕ್ಷಿಯೂ ಆಗಿದೆ. ಧರ್ಮ, ಅರ್ಥ, ಕಾಮ ಈ ಮೂರೂ ಪುರುಷಾರ್ಥಗಳನ್ನು ಸರಿಯಾಗಿ ಅಳವಡಿಸಿಕೊಂಡು ಬಾಳಿದರೆ ಸ್ವರ್ಗ ಅಥವಾ ಮೋಕ್ಷ ತನ್ನಿಂದ ತಾನೇ ಪ್ರಾಪ್ತವಾಗುತ್ತದೆಯೆಂಬುದನ್ನು ಸೂಚ್ಯವಾಗಿಯೇ ತಿಳಿಸಿದಂತೆ ಕಾಣುತ್ತದೆ. ತಿರುವಳ್ಳುವರ್ ತಿಳಿಸಿದ ಈ ತ್ರಿವಿಧ ಪುರುಷಾರ್ಥಗಳಿಗೂ, ಸಂಸ್ಕೃತದ ಪುರುಷಾರ್ಥಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಮಾನವನ ಬದುಕಿನ ವಾಸ್ತವ ಸಂಗತಿಗಳ ಕಡೆಗೆ ಈ ಕವಿ ಹೆಚ್ಚು ಗಮನ ಹರಿಸಿರುವುದು ಎದ್ದು ಕಾಣುತ್ತದೆ. ಅವುಗಳ ಚಿಂತನೆಯಿಲ್ಲಿದೆ.

**೧. ಧರ್ಮಭಾಗ:** ಇದರಲ್ಲಿ ೩೮೦ ಕುರುಳ್(ಪದ್ಯ)ಗಳಿವೆ. ಪ್ರತಿಯೊಬ್ಬರ ಬದುಕಿಗೆ ಧರ್ಮವೇ ಪ್ರಮುಖ ಭಾಗ ಮತ್ತು ತಳಹದಿ. ಮೋಕ್ಷ ಪ್ರಾಪ್ತಿಗೆ ಧರ್ಮವೇ. ಸೋಪಾನ, ದಯವೇ ಧರ್ಮದ ಮೂಲವೆಂದ ಬಸವಣ್ಣನವರ ಮಾತಿದೆ. ಈ ಮೂರೂ ವಿಭಾಗಗಳಲ್ಲಿ ಪ್ರಧಾನವಾದುದು. ಮಾನವನ ಸಮಷ್ಟಿ ಜೀವನದ ಲಿಂಗತ್ರಯಗಳಿಗೆ ಮೊದಲಿನದೇ (ಧರ್ಮ) ಮೂಲಾಧಾರ. ಧರ್ಮದಿಂದ ನಡೆ–ಧರ್ಮಪಡೆ ಇದೇ ಜನ್ಮ ಕಡೆ ಎನ್ನಲಾಗಿದೆ. ವಿಶ್ವಸ್ಥ ವಿಕಾಸ ತತ್ತ್ವದ ಪ್ರಕ್ರಿಯೆಗೆ ಅನುಗುಣವಾಗಿ ಮೃಗತ್ವದಿಂದ ಬಿಡುಗಡೆ ಹೊಂದಿ ಪಡೆದುಕೊಂಡು ವಿಶ್ವಮಾನವ ಕುಲದ ಪ್ರತಿಯೊಬ್ಬ ಮನುಷ್ಯನು ಈ ಪ್ರಪಂಚದದಲ್ಲಿಯೇ ಸಾಧಿಸಬೇಕಾದ ಪರಮಾರ್ಥ ಇವುಗಳೆಂದು ವೈಚಾರಿಕ ದೃಷ್ಟಿಯ ಸತ್ಯ ನಿಷ್ಠೆಯುಳ್ಳ ತಜ್ಞರ ಸ್ಪಷ್ಟವಾದ ಅಭಿಪ್ರಾಯ. ಮಾನವನ ಜೀವನಾನುಭವದಲ್ಲಿ ಮೊದಲನೆಯ ಪರಮ ಪುರುಷಾರ್ಥವೇ ಧರ್ಮ ಭಾಗವಾಗಿದೆ. ಧರ್ಮ ಎಂಬ ಪದದ ಪ್ರತಿಮೆ ಪ್ರಕೃತಿ ನಿಯಮ. ಇದು ವಿಶ್ವವಿಶಾಲವಾದುದು. ಸಾಮಾಜಿಕ ವ್ಯವಸ್ಥೆ ಮತ್ತು ರಾಜ್ಯ ವ್ಯವಸ್ಥೆ ಮೊದಲಾದ ಅರ್ಥಗಳನ್ನು ಈ ಶಬ್ದ ಕುರಿತದ್ದಾಗಿದೆ. ಸ್ವಾರ್ಥಪರ ಬದುಕಿಗೆ ವಿದಾಯ ಹೇಳುವುದು. ಮಾನವ ತನ್ನ ಮೃಗೀಯ ಗುಣಗಳಿಂದ ಬಿಡುಗಡೆ ಹೊಂದಿ ತಾನು ಬೇರೆಯಲ್ಲ, ಸಮಾಜ ಬೇರೆಯಲ್ಲ ಎಂಬ ಸತ್ಯವನ್ನರಿತುಕೊಂಡು ಮನುಕುಲದ ಕಲ್ಯಾಣಕ್ಕಾಗಿ ತನ್ನ ಜೀವನವನ್ನೇ ಸಮರ್ಪಿಸಿಕೊಂಡು ಕರ್ತವ್ಯ ಬದ್ಧನಾಗುವುದೇ ನಿಜವಾದ ಸುಖ. ಸುಖಗಳಲ್ಲಿ ಪರಮ ಸುಖವಿದೆ. ಇದುವೇ ತಿರುಕ್ಕುರುಳ್ ಕಾವ್ಯದ ಸಮಗ್ರ ಉದ್ದೇಶ.

ಧರ್ಮದ ಹಾದಿಯಲ್ಲಿ ನಡೆಯುವವನಿಗೆ ಯಾವುದರ ಭಯವೇ ಇರಲಾರದು. ತ್ರಿಕರಣ ಪೂರ್ವಕವಾಗಿ (ಕಾಯಾ–ವಾಚಾ–ಮನಸಾ) ಒಂದು ಕೆಲಸವನ್ನು ಶ್ರದ್ಧೆ ಭಕ್ತಿಯಿಂದ ಮಾಡುವುದೇ ಧರ್ಮವೆಂದು ತಿರುವಳ್ಳವರ್ ಮಾಡಿದ ಧರ್ಮದ ಬಗೆಗಿನ ವ್ಯಾಖ್ಯಾನ ವಾಸ್ತವ ಬದುಕಿಗೆ ಹತ್ತಿರವಾಗಿದೆ. ಕವಿ ಧರ್ಮದ ಮಹಿಮೆಯನ್ನು ಎತ್ತಿ ಹಿಡಿದು ಹೇಳಿದ್ದು ಗಮನಿಸುವಂತಹದ್ದು ಆಗಿದೆ.

ಧರ್ಮಕ್ಕಿಂತ ಮಿಗಿಲಾದ ಭಾಗ್ಯವಿಲ್ಲ; ಅದನು
ಮರೆವುದಕ್ಕಿಂತ ಮಿಗಿಲಾದ ಕೇಡು ಬೇರಿಲ್ಲ

ಧರ್ಮದಿಂದ ಬರುವುದೇ ಸುಖ; ಬೇರೆಲ್ಲವೂ
ದುಃಖದಿಂದ ತರುವವು! ಕೀರ್ತಿಯನು ತೊಲಗಿಸುವವು

ಧರ್ಮದ ನಡೆ ಮನುಷ್ಯನಿಗೆ ಅತ್ಯಗತ್ಯ! ಧರ್ಮ ಮತ್ತು ಗೃಹಸ್ಥ ಧರ್ಮಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಗೃಹಸ್ಥ ಧರ್ಮವು ಋಷಿ ಧರ್ಮವಿದ್ದಂತೆ. ಋಷಿ ಎಂದರೆ ತ್ಯಾಗ ಎಂದರ್ಥ. ಒಬ್ಬ ವ್ಯಕ್ತಿಯು ತನ್ನ ಪ್ರೀತಿಯನ್ನು ಮಡದಿ ಮಕ್ಕಳಿಂದ ತೊಡಗಿ–ಸಮಾಜದ ಮೂಲಕ ಇಡೀ ಮಾನವ ಸಮಷ್ಟಿಯೆಡೆಗೆ ಹರಿಸುತ್ತಾನೆ. ಆದರೆ ಋಷಿ ಧರ್ಮದ ಮುಖ್ಯ ಗುರಿ ಸಮಾಜ ಕ್ಷೇಮ; ವಿಶ್ವಕ್ಷೇಮ. ಅಂದರೆ ಇಡೀ ಮಾನವ ಸಮಷ್ಟಿಯ ಕಲ್ಯಾಣವಾಗಿದೆ. ಲೋಕವೇ ನನ್ನ ಮನೆ ಈ ಲೋಕದೊಳಗಿರುವ ಮನುಜರೆಲ್ಲರೂ ನನ್ನವರು ಎಂಬ ಭಾವನೆ ಬರುವುದು. ಆ ಬಳಿಕ ಸಮಾಜದ ಮೂಲಕ ಕಟುಂಬದೆಡೆಗೆ ಅಂತರ್ಮುಖಿಯಾಗಿ ಋಷಿಯು ತನ್ನ ಪ್ರೀತಿ–ಕರುಣೆಯನ್ನು ಹರಿಸುತ್ತಾನೆ. ತಿರುವಳ್ಳುವರು ಹೇಳುವ ಋಷಿ ಧರ್ಮ ಮಡದಿ ಮಕ್ಕಳನ್ನು ತ್ಯಜಿಸುವ ಮತ್ತು ಐಹಿಕ ಜೀವನವನ್ನು ತಿರಸ್ಕರಿಸುವ ವಿರಕ್ತ ಮಾರ್ಗವಲ್ಲ, ವೈಯಕ್ತಿಕ ಮೋಕ್ಷ ಸುಖದ ಹಂಬಲವುಳ್ಳ ಸನ್ಯಾಸಿ ಮಾರ್ಗವು ತಿರುವಳ್ಳುವರ್‌ರ ಪ್ರಕಾರ ಅಸಂಗತವಾದುದು ಮಾತ್ರವಲ್ಲ ಧರ್ಮ ಬಾಹಿರವಾದುದು.

**ದೃಷ್ಟಾರರ ಹಿರಿಮೆ:**

ಸದಾಚಾರದಿ ನಿಂತು ಸ್ವಾರ್ಥವ ತೊರೆದವರ ಹಿರಿಮೆಯನು
ಶ್ಲಾಘಿಪುದು, ಶಾಸ್ತ್ರಗಳ ನಿಯಮವಹುದು.

ಅರ್ಥ ಮತ್ತು ಕಾಮಗಳ ವಿಚಾರವರಿತು ಧರ್ಮವ ಪಾಲಿಸುವ
ಮುನಿಗಳ ಮಹಿಮೆಯಿಂದ ಬೆಳಗುವುದು ಈ ಜಗವು

ಧರ್ಮಗುಣದಿಂದಿರುವವರೇ ಸಂತರೆನಿಸಿಕೊಳುವವರು
ಅವರೇ ಸಕಲ ಜೀವಿಗಳಲಿ ದಯೆ ತೋರುವವರು.



ಋಷಿ ಜೀವನವೆಂದರೇನೇ ಧರ್ಮದಿಂದ ನಡೆಯುವವರು. ಅವರು ಎರಡನ್ನೂ ಸಮರಸ ಭಾವದಿಂದ ಕಾಣುವರು. ಸಂಸಾರ ಬೇರೆಯಲ್ಲ ಲೋಕ ಕಲ್ಯಾಣ ಬೇರೆಯಲ್ಲವೆಂದು ಏಕೋಭಾವದಿಂದ ನಡೆಯುವವರು. ಸುಖವೇ ಬರಲಿ–ದುಃಖವೇ ಬರಲಿ ಎರಡನ್ನು ಸಮರಸವೇ ಜೀವನವೆಂದು ಬಗೆದು ನಡೆಯುವವರು ಎಂಬುದು ಋಷಿ ಕವಿ ತಿರುವಳ್ಳುವರ್‌ರ ವಾದ ಭೂಮಿಕೆಯಾಗಿದೆ. ಅವರೇ ಮುಂದುವರೆದು ಗೃಹಸ್ಥ ಧರ್ಮದ ಮಾರ್ಗದಲ್ಲಿ ನಡೆಯುವುದೇ ಉತ್ತಮ ಜೀವನ ಎಂಬುದಕ್ಕೆ –

ಧರ್ಮ ಮಾರ್ಗದಿ ಗೃಹ ಜೀವನವ ನಡೆಸಿದರೆ,
ವಿರಕ್ತ ಮಾರ್ಗದಲಿ ಹೋಗಿ ಪಡೆಯುವುದೇನು?

ಧರ್ಮಗುಣದಿಂದ ಗೃಹ ಜೀವನವ ನಡೆಸುವವನು
ಶ್ರೇಯಸ್ಸಿಗಾಗಿ ಯತ್ನಿಸುವ ಮುನಿಗಳಿಗಿಂತ ಶ್ರೇಷ್ಠರು

ಈ ಲೋಕದಲ್ಲಿ ಆದರ್ಶ ಜೀವನವ ನಡೆಸುವವನು
ಸ್ವರ್ಗ ಲೋಕದ ಅಮರರಂತೆ ಎಣಿಸಲ್ಪಡುವನು

ಈ ಮೇಲಿನ ದ್ವಿಪಾದಗಳನ್ನು ಗಮನಿಸಿದರೆ ಸಂಸಾರದಲ್ಲಿದ್ದುಕೊಂಡೂ ಸದ್ಗತಿಯನ್ನು ಕಾಣಬಹುದು ಎನ್ನಲಾಗಿದೆ. ಸದ್ಗತಿಯೆಂದರೆ ಸ್ವರ್ಗ, ಮೋಕ್ಷ ಅಥವಾ ಸಾಫಲ್ಯದ ಬದುಕು ಎಂದೆನ್ನಬಹುದು. ಆದರ್ಶ ಜೀವನಕ್ಕೆ ಕೈದೀವಿಗೆಗಳಂತಿವೆ ಎಂದೆನ್ನಬಹುದು. ಆದರೆ ಕಪಟಾಚಾರವು ಯಾರಿಗಾದರೂ ಅಪಾಯವೇ ಎಂದೂ ಕವಿ ಉದಾಹರಿಸಿರುವರು.

ವಂಚಕ ಹೃದಯಿಯ ಕಪಟಾಚರಣೆಗೆ ಅವನಲೇ
ಇರುವ ಪಂಚಭೂತಗಳು ತಮ್ಮಲೇ ನಗುವವು

ಮನದಿ ಕೊಳೆಯಿರಿಸಿ ಮಹಿಮರಂತೆ ನೀರ ಮುಳುಗಿ
ಕಪಟತನದಿ ನಡೆವ ಮನುಜರು ಹಲರಿಹರು

ತಪವ ಮರೆತು ಯುಕ್ತವದನು ಮಾಡುವುದು
ಪೊದರೊಳವಿತು ಬೇಡನು ಹಕ್ಕಿ ಹಿಡಿವಂತೆ.

ವಂಚನೆ, ಮೋಸ ವ್ಯವಹಾರ ಯಾವ ಮಾರ್ಗಕ್ಕೂ ತಕ್ಕುದಲ್ಲ, ಉಚಿತವಲ್ಲ ಯುಕ್ತವೆನಿಸುವಂತೆ ಬಾಳುವುದೇ ಯೋಗಿಗಳಿಗಾಗಲಿ, ಋಷಿ–ಮುನಿಗಳಿಗಾಗಲಿ, ಸಂಸಾರಸ್ಥರಿಗಾಗಲಿ ಉಚಿತವಾದುದು. ದಾದು ತಪ್ಪಿ, ಹದತಪ್ಪಿ, ದುರ್ಮಾರ್ಗದಲಿ

ನಡೆದು ನೀತಿ ಬೋಧನೆ ಮಾಡುವವನಿಗೆ ಬೆಲೆಯಿದೆಯೇ ಎಂದು ಪ್ರಶ್ನಿಸಿದಂತೆ ಮೇಲಿನ ಪದಗಳಲ್ಲಿ ಹೇಳಿದಂತಿದೆ.

ಗೃಹಸ್ಥ ಜೀವನ ಸುಮಧುರವಾಗಿ ಸಾಗಬೇಕಾದರೆ ಮಡದಿ–ಮಕ್ಕಳೊಂದಿಗೆ ತಾನೂ, ಅವರೂ ಅನ್ಯೋನ್ಯತೆಯಿಂದ ಬಾಳುತ್ತಿರಬೇಕು. 'ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದ ಜೇಡರ ದಾಸಿಮಯ್ಯನ ಹೇಳಿಕೆಯಂತೆ! ತಿರುವಳ್ಳುವರ್‌ರ ಹೇಳಿಕೆ ಹೀಗಿವೆ–

ಗೃಹ ಜೀವನಕೆ ತಕ್ಕ ಗುಣ ಮಡದಿಯಲಿಲ್ಲದಿರೆ
ಅದು ಸಿರಿತನದ ಬಾಳಾದರೂ ವ್ಯರ್ಥ

ಬಡತನವೇನುಂಟು ಮಡದಿ ಸುಗುಣೆಯಾಗಿರಲು?
ಸಿರಿತನವೇನುಂಟು ಮಡದಿ ಸುಗುಣೆಯಾಗದಿರಲು?

ಹೆಣ್ಣಿಗಿಂತ ಹಿರಿಯ ಸಿರಿ ಯಾವುದಿಹುದು
ಅವಳು ಶೀಲವೆಂಬ ಸ್ಥಿರತೆ ಪಡೆದಿರಲು

ಮನೆಗೆ ಮಂಗಳ ಮಡದಿಯ ಸದ್ಗುಣವು
ನಲ್ಮಕ್ಕಳ ಭಾಗ್ಯ ಮತ್ತದಕೆ ಭೂಷಣವು

ಏಳು ಜನ್ಮಗಳಲೂ ದುಃಖವಿರದು, ನಿಂದೆಯಿಲ್ಲದ
ಸದ್ಗುಣದ ಮಕ್ಕಳನು ಪಡೆದರೆ,

ಪಡೆಯತಕ್ಕ ಭಾಗ್ಯವದು ಅರಿವುಳ್ಳ ಮಕ್ಕಳನು ಪಡೆವುದು
ಇದಲ್ಲದ ಅನ್ಯ ಭಾಗ್ಯವನು ನಾವು ಗಣಿಸೆವು.

ಗೃಹಸ್ಥ ಜೀವನಕ್ಕೆ ಸದ್ಗುಣಿಯಾದ ಮಡದಿ, ಅರಿವು ಉಳ್ಳ ಮಕ್ಕಳು ಲಭಿಸಿದರೆ ಸ್ವರ್ಗಕ್ಕೇ ಕಿಚ್ಚು ಹಚ್ಚೆಂದು ಹೇಳಿದ ಕನ್ನಡದ ಸರ್ವಜ್ಞಕವಿಯ ಮಾತುಗಳನ್ನು ಈ ಮೇಲಿನ ಪದಗಳು ನೆನಪಿಸುತ್ತಲಿವೆ. ಉತ್ತಮ ಮಡದಿ ಮತ್ತು ಉತ್ತಮ ಮಕ್ಕಳ ಭಾಗ್ಯ ಲಭಿಸಬೇಕಾದರೆ ಪೂರ್ವಜರ ಪುಣ್ಯ ಪ್ರಾಪ್ತವಾಗಿರಬೇಕೆನ್ನುವಂತಿದೆ ಈ ಕವಿಯ ಹೇಳಿಕೆಗಳು:

ಒಲವೇ ಜೀವನದ ನೆಲೆವೀಡು. ಒಲವಿಂದ ಬಾಳುವವರೇ ಸ್ನೇಹ ಜೀವಿಗಳು, ಧರ್ಮಕ್ಕೆ ಒಲವು–ಪ್ರೀತಿ–ಸ್ನೇಹ–ಮಧುರ ಭಾವ ಗುಣಗಳೇ ಮಿಗಿಲು. ಧರ್ಮಕ್ಕೇ ಒಲವು ನೆರವೆಂಬರು ಅಜ್ಞರು: ಅಧರ್ಮವನು ತೊಲಗಿಸಲು ಅದೇ ನೆರವಹುದು ಎಂದಿದ್ದಾರೆ ತಿರುವಳ್ಳುವರ್. ಯಾವತ್ತೂ ಮನೆಗೆ ಬರುವ ಹೋಗುವ ಅತಿಥಿಗಳ ಸತ್ಕಾರ ಮಾಡುತ್ತಿರುಬೇಕು.



ಬರುವ ಅತಿಥಿಗಳ ನಿತ್ಯವೂ ಸತ್ಕರಿಪನ ಬಾಳು
ಬಡತನಕೆ ಸಿಲುಕಿದರೂ ಕೆಡಲಾಗದು.

ಸಿರಿತನವಿದ್ದರೂ ಅದು ಬಡತನಕೆ ಸಮ
ಅತಿಥಿಯನಾದರಿಸದ ಮೂರ್ಖತನ

ಬಂದ ಅತಿಥಯನಾದರಿಸಿ ಬರುವ ಅತಿಥಿಯ ನೋಡುವವನು
ಅಮರರಿಗೆ ಅತ್ಯುತ್ತಮ ಅತಿಥಿಯಾಗುವನು.

ಅತಿಥಿ ಸತ್ಕಾರಕ್ಕೆ ನಮ್ಮ ದೇಶ ಪ್ರಸಿದ್ಧವಾದುದು. ಅದರಲ್ಲೂ ಈ ಮೇಲೆ ಹೇಳಿದ ತಿರುವಳ್ಳುವರ್‌ರ ಪದಗಳು ನಮಗೆ ಮಾರ್ಗದರ್ಶಿಕೆಯಾಗಿವೆ. 'ಅತಿಥಿ ದೇವೋ ಭವಃ' ಎಂಬುದಕ್ಕೆ ಸಾಕ್ಷಿಯಾಗಿವೆ.

ಪುರುಷಾರ್ಥಗಳಲ್ಲಿ ಮೊಟ್ಟ ಮೊದಲನೆಯ ಮೆಟ್ಟಿಲು ಧರ್ಮಭಾಗ; ಈ ಧರ್ಮದ ಗಟ್ಟಿ ತಳಹದಿಯ ಮೇಲೆ ಉಳಿದೆರಡು ಪುರುಷಾರ್ಥಗಳಾದ ಅರ್ಥ. ಕಾಮಗಳನ್ನು ಗಳಿಸಿಕೊಳ್ಳಬೇಕು. ಲೋಕದೊಳಗಿದ್ದ ಬಳಿಕ ಸ್ತುತಿ–ನಿಂದೆಗಳು ಬಂದರೂ ಸಮಾಧಾನಿಯಾಗಿರಬೇಕು ಎಂದ ಅಕ್ಕಮಹಾದೇವಿಯ ಅಭಿಪ್ರಾಯದಂತೆ ತಿರುವಳ್ಳುವರ್‌ರು ಲೋಕ ಧರ್ಮವನ್ನು ಪ್ರಸ್ತುತ ಧರ್ಮ ಭಾಗದಲ್ಲಿ ಗೃಹಸ್ಥ ಧರ್ಮ ಮತ್ತು ಸನ್ಯಾಸ ಧರ್ಮವೆಂದೆರಡು ಬಗೆಯಲ್ಲಿ ವಿಶ್ಲೇಷಿಸಿದ್ದಾರೆ. ಇವೆರಡೂ ಒಂದಕ್ಕೊಂದು ಪೂರಕವೂ, ಆಧಾರವೂ ಆಗಿರಬೇಕು ಎಂಬುದು ಅವರ ಮತ. ಗೃಹಸ್ಥದ ಹಿರಿಮೆಯನ್ನು ಹೇಳುತ್ತ ಅದು ಬ್ರಹ್ಮಚರ್ಯೆ, ವಾನಪ್ರಸ್ಥ, ಸನ್ಯಾಸಗಳೆಂಬ ಇತರ ಮೂರು ಧರ್ಮಗಳಿಗೆ ಬೆಂಬಲವಾಗಿ ಘೋಷಿಸುತ್ತದೆ. ಸಹಜವಾದ ಗೃಹಧರ್ಮವನ್ನು ಪರಿಪಾಲಿಸುವವನು ಪ್ರಯತ್ನಶೀಲರಲ್ಲೆಲ್ಲ ಮೇಲಾದವನು. ಇತರರನ್ನು ಸನ್ಮಾರ್ಗದಲ್ಲಿ ಹಚ್ಚಿ, ತಾನೂ ಧರ್ಮ ಮಾರ್ಗದಲ್ಲಿ ನಡೆದರೆ ಗೃಹಸ್ಥನ ಕೌಟುಂಬಿಕ ಜೀವನವು ಮುನಿಗಳ ಸಾಧಕ ಜೀವನಕ್ಕಿಂತ ಶ್ರೇಷ್ಠವೆನಿಸಿಕೊಳ್ಳುತ್ತವೆ. ಆಶ್ರಯವಿಲ್ಲದವರು, ದರಿದ್ರರು, ಸತ್ತವರು ಎಲ್ಲರಿಗೂ ಗೃಹಸ್ಥನೇ ಆಧಾರವಾಗಿರುತ್ತಾನೆ (ನೋಡಿ ೪೧– ರಿಂದ ೫೦). ತಿರುವಳ್ಳುವರು ಇದುವೇ ಗೃಹಸ್ಥ ಜೀವನಕ್ಕೆ ನೀಡಿರುವ ಮಹತ್ವವಿದು.

ತಿರುವಳ್ಳುವರರು ಹೇಳಿರುವ ಗೃಹಸ್ಥ ಜೀವನಕ್ಕೆ ಸಂಬಂಧಿಸಿದ ಮಾತುಗಳು ಗಮನಾರ್ಹವಾದವು. ಅನುಗುಣಗಳಾದ ಬಾಳ ಸಂಗತಿಯಿಂದ ಉತ್ತಮ ಸಂತತಿ ಪಡೆಯುವುದು. ಪ್ರೀತಿಪರರಾಗಿ ಬಾಳುವೆ ನಡೆಸಿ, ಸವಿ ಸವಿ ಮಾತುಗಳನ್ನಾಡುವುದು, ಪಡೆದ ಉಪಕಾರವನ್ನು ಸ್ಮರಿಸಿಕೊಳ್ಳುವುದು, ಅತಿಥಿಗಳನ್ನು ಆದರಿಸುವುದು,

ಸದುವಿನಯ, ಸಮದರ್ಶಿತ್ವ, ಸಂಯಮ, ಸಜ್ಜನ ನಡತೆ, ಸಹನಶೀಲತೆಗಳಿಂದ ಇತರರ ಮನಸ್ಸಿನಲ್ಲಿ ನೆಲೆಸುವಂತೆ ಮಾಡುವುದು ತಾನೂ ಅದರಂತೆ ನಡೆದುಕೊಳ್ಳುವುದು, ಪರಸ್ತ್ರೀಯನ್ನು ಬಯಸದಿರುವುದು, ಚಾಡಿ, ನಿಂದೆ, ಅಸೂಯೆ, ಮೊದಲಾದ ದುರ್ಗುಣಗಳಿಂದ ದೂರವಾಗಿರುವುದು ಮತ್ತು ಲೋಭವಿಲ್ಲದ ಉದಾರ ಗುಣಗಳನ್ನು ಬೆಳೆಸಿಕೊಳ್ಳುವುದೇ ಗೃಹಸ್ಥ ಜೀವನದ ಮೂಲ ಸೂತ್ರಗಳು ಎಂಬುದನ್ನು ಕವಿ ತಿರುವಳ್ಳುವರ್‌ರು ತಮ್ಮ ಪದ್ಯಗಳ ಮೂಲಕ ಅರ್ಥವತ್ತಾಗಿ ನಿರೂಪಿಸಿದ್ದಾರೆ. ಕೌಟುಂಬಿಕ ಸಮಧುರ ಬಾಳಿನ ಸೂತ್ರಕ್ಕಾಗಿ ಈ ಧರ್ಮಭಾಗವನ್ನು ಎಲ್ಲರೂ ಓದಬೇಕಾದುದು ಮತ್ತು ಅದರಂತೆ ಪಾಲಿಸುವದೂ ಆಗಿದೆ.

**ಸನ್ಯಾಸ ಧರ್ಮ ಪಾಲನೆಗೆ :**

ವಳ್ಳುವರರು ಸನ್ಯಾಸ ಧರ್ಮಕ್ಕೆ ಬೇಕಾಗುವ ಸೂತ್ರಗಳನ್ನು ತಮ್ಮ ದ್ವಿಪಾದಗಳಲ್ಲಿ ಹೇಳಿರುವರು. ತಪೋ ಜೀವನಕ್ಕೆಂದು ನುಣ್ಣಗೆ ತಲೆಯನ್ನು ಬೋಳಿಸಿಕೊಳ್ಳುವುದಲ್ಲ, ನೀಳವಾದ ಜಡೆ ಬಿಡುವುದೂ ಅಲ್ಲ, ಕಾಡು–ಮೇಡು ತಿರುಗುವುದಲ್ಲ. ಕನ್ನಡ ಸರ್ವಜ್ಞ ಕವಿ ಹೇಳಿರುವಂತೆ –

ಕಾಸೆ ಕಚ್ಚುಟವೇಕೆ! ಆಸುರದ ಜಡೆಯೇಕೆ
ಕೇಶವ ಕಿತ್ತುಕೊಳಲೇಕೆ –ಅರುವಿಲ್ಲ
ದಾಸೆ ಬಿಡದತನಕ ಸರ್ವಜ್ಞ

ಆಸೆ–ಆಮಿಷಗಳನ್ನು ತೊರೆಯುವುದು ಎಂದರೆ ಸಂಸಾರಿಕ ಜೀವನವನ್ನು ತೊರೆಯುವುದೆಂದರ್ಥವಲ್ಲ. ಮಾನವ ಸಮಾಜದ ಕಲ್ಯಾಣಕ್ಕೆ ಧಕ್ಕೆ ತರುವಂಥ ಸ್ವಾರ್ಥಾಸಕ್ತಿಯನ್ನು ತಡೆದು ಒಬ್ಬನು ತನ್ನ ಪಂಚೇಂದ್ರಿಯಗಳನ್ನು ತನ್ನ ಅಂಕಿತದಲ್ಲಿಟ್ಟುಕೊಳ್ಳಬೇಕೆಂಬುದೇ ಇದರ ಮೂಲಾರ್ಥ. ಇದನ್ನೇ ಸಂಯಮ ಎನ್ನುತ್ತಾರೆ. ಸಂಯಮದಿಂದ ಇರುವುದೇ ಸದಾಚಾರ.

ಆತ್ಮ ಸಂಯಮ ಅಮರರೆಡೆಗೊಯ್ಯುವುದು
ಅಸಂಯಮವದು ಅಧೋ ಲೋಕಕ್ಕೊಯ್ಯುವುದು

ತನ್ನ ಧ್ಯೇಯದಲಿ ನಿಶ್ಚಲದಿಂದಹೆ ಸಂಯಮಿಯ
ಔನ್ನತ್ಯ ಶಿಖರಕ್ಕಿಂತ ಹಿರಿದು

ಸಕಲರಿಗೂ ಲೇಸಹುದು ಸಂಯಮದಿಂದಿರುವುದು
ಸಿರಿವಂತರಿಗೆ ಮತ್ತೊಂದು ಸಿರಿಯದು

ಸನ್ಯಾಸ ಧರ್ಮದವರೂ ಶೀಲ, ನಿಷ್ಠೆ, ಚಾರಿತ್ರ್ಯಗಳನ್ನು ವ್ರತವಾಗಿ ಸ್ವೀಕರಿಸಬೇಕು ಎಂದು ಹೆಳುತ್ತಾರೆ. ಆಸೆಯನ್ನು ಹರಿದುಕೊಳ್ಳುವುದು, ನಿಸ್ಸಂಗ, ವ್ರತ, ತಪಸ್ಸು,



ತ್ಯಾಗಗಳಂಥ ಕಠಿಣ ಮಾರ್ಗವನ್ನೇ ಅನುರಿಸಬೇಕಾಗುತ್ತದೆ. ಇದರಿಂದ ತಪೋಬಲವು ವೃದ್ಧಿಸುತ್ತದೆ. ಕೋಪ ನಿಗ್ರಹ ಶಕ್ತಿ, ಕರುಣೆ, ಅನುಗ್ರಹ ಗುಣಗಳು ಋಷಿಯಾದವನಲ್ಲಿ ಸದಾ ನೆಲೆಸಿರಬೇಕು ಎಂದಿದ್ದಾನೆ. ಸಮಾಜದ ಕಲ್ಯಾಣಕ್ಕೆ ಕೋಪ–ತಾಪ–ಅಸೂಯೆ–ದ್ವೇಷ ಗುಣಗಳಿರಕೂಡದೆಂದೂ ಪ್ರತಿಪಾದಿತವಾಗಿದೆ.

ಸನ್ಯಾಸ ಧರ್ಮವ ಪಾಲಿಪನು ಜೀವಪರ ಚಿಂತನೆಗೆ ಮಹತ್ವವನ್ನೂ ಕೊಡಬೇಕಾಗುತ್ತದೆ. ಸನ್ಯಾಸಿಗಿರಬೇಕಾದುದು ಜೀವಕಾರುಣ್ಯವೇ ಜೀವನದ ಪರಮಾರ್ಥಸಾರ; ಅದರಿಂದ ಅಹಿಂಸೆಯನ್ನು ತಾವು ರೂಪಿಸುವ ನೀತಿ–ನಿಯಮಗಳಿಗೆ ಮೂಲಧನವಾಗಿ ಬಳಸಿಕೊಳ್ಳುತ್ತಾನೆ. ಹಿಂಸೆಯು ಜೀವಿಗಳ ಐಕ್ಯವನ್ನು ಒಡೆಯುತ್ತವೆ, ಸದ್ಭಾವನೆಗಳನ್ನು ನಾಶಪಡಿಸುತ್ತದೆ. ಎಲ್ಲ ಪಾಪ ಕಾರ್ಯಗಳಿಗೂ ಅಹಿಂಸೆಯೇ ಮೂಲ ಕಾರಣವಾಗಿರುತ್ತದೆ.

ಅರೆಗೆಲಸ ಯಾವುದೆನೆ ಕೊಲದಿರುವುದು
ಕೊಲವುದರಿಂ ಫಲ ಪಾಪ ಕಾರ್ಯಗಳು ಹುಟ್ಟಿ ಬೆಳೆವುದು

ತನ್ನ ಮೈ ಮಾಂಸವನು ಕೊಬ್ಬಿಸಲು ಪರಮಾಂಸ
ಭಕ್ಷಿಪನು ಕರುಣೆಯನಾಳುವುದೆಂತು

ಘೃತ ಸುರಿದುಗೈದ ಸಾವಿರ ಯಾಗಗಳಿಗಿಂತ
ಪ್ರಾಣಿಯೊಂದರ ಒಡಲ ಬಗೆದು ತಿನದಿರುವುದು ಲೇಸು

ಕೊಲದ ನೇಮದವನನ್ನು, ಮಾಂಸವನು ವರ್ಜಿಪನ
ಸಕಲ ಪ್ರಾಣಿಗಳೂ ಕೈಮುಗಿದು ಪೂಜಿಪವು.

ಈ ಮೇಲಿನ ಕುರುಳುಗಳಲ್ಲಿ ವಳ್ಳುವರ್‌ರು ಅಹಿಂಸಾ ಪರವಾದವನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ತಿರುವಳ್ಳುವರ್‌ರು, ಬದುಕಿನಲ್ಲಿ ತರ್ಕ, ಶಾಸ್ತ್ರ ಜ್ಞಾನಗಳಿಗಿಂತ ಸಮಸ್ತ ಜೀವ ಕಲ್ಯಾಣವನ್ನು ಕೋರುವ ಶುದ್ಧವಾದ ಅರಿವಿಗೆ ಪ್ರಾಧಾನ್ಯ ನೀಡುತ್ತಾರೆಂಬುದು ಮೇಲಿನ ಮಾತುಗಳಿಂದ ತಿಳಿದುಬರುತ್ತದೆ. ಪ್ರೀತಿಪರವಾದ ಧರ್ಮವು, ಸಕಲಶಾಸ್ತ್ರ ಜ್ಞಾನಗಳಿಗೆ ಮೂಲಾಧಾರವೆಂದು ಅವರು ನಂಬಿದ್ದಾರೆ. "ಪ್ರೀತಿಯಂಥ ವಸ್ತು ಜಗದಲ್ಲಿ ನಾ ಕಾಣೆ ಮನಗಂಡ ಮಾತು" ಎಂದ 'ನನ್ನನಲ್ಲ'ದ ಕರ್ತೃ ಮಧುರಚೆನ್ನರ ಮಾತು ಬಲು ಮಧುರವಾಗಿದೆ.

ಪ್ರೀತಿ ಇಲ್ಲದವರು ಎಲ್ಲವೂ ತಮ್ಮದೆಂದೇ ತಿಳಿಯುವರು
ಪ್ರೀತಿಯುಳ್ಳವರು ತಮ್ಮ ಎಲುಬೂ ಪರರದೆಂದೆಣಿಸುವರು.

ಎಂಬ ಮಾತು ಮಧುರಚನ್ನರಮಾತಿಗೆ ಪೂರಕವಾಗುತ್ತದೆ. ತಿರುವಳ್ಳುವರ್‌ರ ಈ ಮಾತು ಪುರಾಣದ ದಧೀಚಿ ಮಹರ್ಷಿಯ ತ್ಯಾಗ ಗುಣವನ್ನು ಎತ್ತಿ ಹೇಳುತ್ತದೆ. ತ್ಯಾಗಿಯಾದವನು ತನಗೆ ಒದಗಿ ಬಂದ ಸಂಕಷ್ಟಗಳನ್ನು ಸಹಿಸಿಕೊಂಡು ಇರುವುದು ಮಾತ್ರವಲ್ಲದೆ ಇತರ ಜೀವಿಗಳಿಗೆ ನೋವನ್ನುಂಟು ಮಾಡದಿರುವುದೇ ನಿಜವಾದ ತಪಸ್ಸು. ವಳ್ಳುವರರ ಪ್ರಕಾರ ಇಂತಹ ಅಭ್ಯಾಸವುಳ್ಳವನೇ ನಿಜವಾದ ತಪಸ್ವಿ. ಮಡದಿ ಮಕ್ಕಳನ್ನು ಬಂಧು ಬಾಂಧವರನ್ನು ಕಾಡಿಗೆ ಹೋಗುವವರನ್ನಾಗಲಿ, ಕಾಷಾಯ ಉಟ್ಟುಕೊಳ್ಳುವವರನ್ನಾಗಲಿ, ನಿಯತಿ ಕೃತಿ ನಿಯಮಗಳನ್ನು ಮೀರುವಂತಹ ಜಾದೂಗಾರಿಕೆ, ಪವಾಡ ಚಮತ್ಕಾರ ಮಾಡುವವರನ್ನಾಗಲಿ ಋಷಿಗಳೆಂದು ತಿರುವಳ್ಳುವರರು ತಮ್ಮ ಕೃತಿಯಲ್ಲಿ ಎಲ್ಲಿಯೂ ಹೇಳಿಲ್ಲ. ಈ ಕವಿಯು ಹೇಳಿರುವ ಋಷಿ ಲಕ್ಷಣಕ್ಕೆ ಸಮಾಜ ಸುಧಾರಕರಾದ ಬಸವೇಶ್ವರರು, ರಷ್ಯಾದ ದಾರ್ಶನಿಕ ಲಿಯೋ ಟಾಲ್‌ಸ್ಟಾಯ್, ಮಹಾತ್ಮಾ ಗಾಂಧೀಜಿ ಇವರುಗಳೇ ನಿದರ್ಶನರಾಗಿದ್ದಾರೆ.

ಪರಿಶುದ್ಧ ಜ್ಞಾನ, ನಿಷ್ಪಕ್ಷಪಾತ, ಕಾರುಣ್ಯ, ಪಂಚೇಂದ್ರಿಯಗಳ ನಿಗ್ರಹ ಮೊದಲಾದ ಮಾನವೀಯ ಉದಾತ್ತ ಗುಣಗಳನ್ನೇ ದೇವರಿಗೆ ಆರೋಪಿಸಿದ್ದಾರೆ. ವಿಶ್ವವ್ಯಾಪಕ ಮತ್ತು ವಿಶ್ವ ನಿಯಾಮಕ ಶಕ್ತಿಯನ್ನು ತಿರುವಳ್ಳುವರರು 'ಇರೈವನ್' ಎನ್ನುತ್ತಾರೆ. ಇರೈವನ್ ಎಂದರೆ ಒಡೆಯ, ಪ್ರಭು, ಅರಸ ಎಂದರ್ಥ. ಎಲ್ಲೆಲ್ಲೂ ವಾಸಿಸುವವನು ಮತ್ತು ಎಲ್ಲಾ ಕಡೆಯಲ್ಲಿಯೂ ಆಜ್ಞಾಪಿಸುವವನು ಎಂಬ ಅರ್ಥದಲ್ಲಿ ವಿದ್ವಾಂಸರು ಅಭಿಪ್ರಾಯಪಟ್ಟಿದಾರೆ. ಈ ವಿಶ್ವನಿಯಾಮಕ ಶಕ್ತಿಯ ಅವ್ಯಕ್ತ ಶಕ್ತಿಯನ್ನೇ ಕೃತಿಕಾರರು' 'ದೈವ' ಎನ್ನುತ್ತಾರೆ. ದೈವವೇ ಧರ್ಮದ ಪವಿತ್ರ ಭಾವನೆಯ ಊರುಗೋಲು. ನಾವು ಅದೆಷ್ಟೇ ಕಾರ್ಯ ತತ್ಪರರಾದರೂ ಯಶಸ್ಸಿಗಾಗಿ ದೈವದ ಮೇಲೆ ಅವಲಂಬಿತರಾಗುತ್ತೇವೆ. ದೈವೀ ಗುಣಗಳಾದ ಪ್ರೀತಿ, ದಯೆ, ಕರುಣೆ, ಸಹನೆ, ಸಂಯಮ, ಕೃತಜ್ಞತೆ ಸಮದರ್ಶಿತ್ವ, ಸತ್ಯಾನುಸಂಧಾನ ಇವುಗಳನ್ನು ನಡೆ–ನುಡಿಗಳಲ್ಲಿ ರೂಢಿಸಿಕೊಳ್ಳಬೇಕೆಂದೂ; ಲೋಭ, ಮೋಹ, ಅಸೂಯೆ ಸಮಾಜಘಾತುಕ ಕೃತ್ಯ, ಹಿಂಸಾಚಾರ, ಭ್ರಷ್ಟಾಚಾರ, ಠಕ್ಕಾಚಾರ ಮೊದಲಾದ ಅಸುರೀ ಗುಣಗಳನ್ನು ಕೈಬಿಡಬೇಕೆಂದೂ ಧರ್ಮ ಭಾಗದಲ್ಲಿ ತಿರುವಳ್ಳುವರರು ಸಕ್ರಮವಾಗಿ ನಿರೂಪಿಸಿದ್ದಾರೆ.

ದೇವರ ಸ್ತುತಿಯಲ್ಲಿ ವಳ್ಳುವರರು ಹೇಳಿದ್ದು ಹೀಗೆ –

> ಪಂಚೇಂದ್ರಿಯಗಳ ಗೆದ್ದವನ ನಿಜವಾದ ನೀತಿ
> ಮಾರ್ಗದಲಿ ನಿಂದವರು ನಿಡುಗಾಲ ಬಾಳುವರು
>
> ಧರ್ಮಸಾಗರ ದಯಾಳುವಿನ ಅಡಿಗೆ ಎರಗದವರು
> ಅರ್ಥ ಮತ್ತು ಕಾಮ ಸಾಗರಗಳ ದಾಟಲಾರರು



ಮಾನವನೇ ಮಹಾಮಾನವ, ದೇವಮಾನವ ಶಕ್ತಿ ಆತನಲ್ಲಿರುವಾಗ ಬೇರೆ ದೇವರ ನೆನಹು ಏತಕೆ? ಎಂದಿದ್ದಾರೆ ಕವಿ ವಳ್ಳುವರರು.

ಧರ್ಮ ಮಾರ್ಗದಿಂದ ಬಂದ ಸುಖವೇ ನಿಜವಾದ ಸುಖ, ಶಾಶ್ವತವಾದ ಸುಖ ಎನ್ನುವುದಕ್ಕೆ ತಿರುವಳ್ಳುವರ್‌ರು ಈ ಭಾಗದಲ್ಲಿ ಸಾಮಾನ್ಯನಿಗೂ ತಿಳಿಯುವಂತೆ ತಿಳಿಯಪಡಿಸಿದ್ದಾನೆ. ಅವನದೊಂದು ಪದ್ಯದಲ್ಲಿ

> ಅನ್ಯರನು ಧರ್ಮದಿಂದ ನಡೆಯುವಂತೆ ಮಾಡಿ ತಾನು
> ಧರ್ಮದಿಂದಲಿ ಗೃಹ ಜೀವನ ನಡೆಸುವವನು, ತಪಸಿಗಳಿಗಿಂತ ಬಲಾಢ್ಯನು!

ಎಂದು ಹೇಳಿರುವುದನ್ನು ಗಮನಿಸಬಹುದು. ಸನ್ಯಾಸಿ, ಅಥವಾ ತಪಸ್ವಿಗಳ ಜೀವನಕ್ಕಿಂತಲೂ ಸಂಸಾರ ಜೀವನವೇ ಶ್ರೇಷ್ಠವಾದುದು ಎಂದು ಇದರಲ್ಲಿ ಉಕ್ತವಾಗಿದೆ.

**೨. ಅರ್ಥಭಾಗ :**

ಮಾನವನ ಬದುಕಿಗೆ ಅರ್ಥ ಅಂದರೆ ಸಂಪತ್ತು ಅಥವಾ ದುಡ್ಡು ಅತೀ ಮಹತ್ವದ್ದು! ಹಣವೆಂದ ಕೂಡಲೇ ಹೆಣವೂ ಬಾಯಿ ತೆರೆಯುತ್ತದೆಯಂತೆ. ಸಂಸಾರಸ್ಥರು, ವಿರಕ್ತರು, ಯೋಗಿಗಳು, ಸನ್ಯಾಸಿಗಳು ದುಡ್ಡಿಗೆ ಮಾರು ಹೋದ ಸಂಗತಿಗಳು ಈ ವಿಶ್ವ ವಿಶಾಲದಲ್ಲಿ ಸಾಕಷ್ಟು ಆಗಿ ಹೋಗಿವೆ, ಆಗುತ್ತಲಿವೆ. ಅದರಲ್ಲೂ ಈಗಿನದು ದುಡ್ಡೇ ದೊಡ್ಡಪ್ಪನ ಕಾಲ. ಅಂದೂ ಇತ್ತು, ಇಂದೂ ಇದೆ. ಮುಂದೆಯೂ ಇರುವುದೆ. ಅರ್ಥವಿಲ್ಲದ ಬದುಕು ವ್ಯರ್ಥವೇ ಸರಿ. ಜೀವನ ನಿರ್ವಹಣೆಗೆ ಅರ್ಥವು ಬೇಕೇ ಬೇಕೇನೋ ನಿಜ, ಆದರೆ ಅದನ್ನು ಗಳಿಸುವ ಮಾರ್ಗ ಮಾತ್ರ ಸರಿಯಾದುದಾಗಿರಬೇಕೆಷ್ಟೇ! ವಾಮ ಮಾರ್ಗದಿಂದ ಗಳಿಸಿದ್ದು ಪರರಿಗೇ ಸೇರುತ್ತದೆ. ದುಡಿದುಂಡು ಗಳಿಸಿದರೆ ಮಾತ್ರ ತನ್ನದಾಗುತ್ತದೆ. ಅರ್ಥ ಕಂಡರೆ ಬಿಡರು ಆದರೆ ಶ್ರಮ ಪಡಲಾರದೆಯೇ ಬರಲೆನ್ನುವವರೇ ತುಂಬಿಹರು ಈ ಜಗದಲಿ! ಕನ್ನಡದ ಕವಿ ಸರ್ವಜ್ಞ ಹೇಳಿರುವಂತೆ–

> ಕಂಡವರ ದಂಡಿಸುತ್ತ ಕೊಂಡವರ ಒಡವೆಗಳ
> ನುಂಡುಂಡು ಮಲಗಿ ಮಡಿದೆ ಮೇಲವಗೆ ಯಮ
> ದಂಡ ತಪ್ಪುವುದೇ ಸರ್ವಜ್ಞ

ಧನಕನಕಗಳನ್ನು ಗಳಿಸಲು ಎರಡು ದಾರಿಗಳುಂಟು. ಮೇಲೆ ಹೇಳಿರುವಂತೆ ಒಂದು ನ್ಯಾಯದ ಮಾರ್ಗ ಅಂದರೆ ಶ್ರಮ ಸಂಸ್ಕೃತಿಯ ಮಾರ್ಗ ಶರಣರ ನುಡಿಯಂತೆ; ಇನ್ನೊಂದು ವಾಮ ಅಥವಾ ಅನ್ಯಾಯದ ಮಾರ್ಗ. ಇತ್ತೀಚೆಗೆ ಹಣ, ಆಸ್ತಿ ಸಂಪಾದನೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಜನರು ಭೋಗ ಜೀವನದ ದುರಾಸೆಗೆ ಬಲಿಯಾಗಿ ಅನ್ಯಾಯದ ದಾರಿಯಲ್ಲಿ ನಡೆದು ಹಣ,

ಐಶ್ವರ್ಯಗಳನ್ನೇನೋ ಸಂಪಾದಿಸುತ್ತಾರೆ. ಆದರೆ ಅದಕ್ಕಾಗಿ ಮಾನವೀಯ ಸಂಬಂಧಗಳಿಂದ ದೂರ ಸರಿದು ಶಾಂತಿ ನೆಮ್ಮದಿ ಕಳೆದುಕೊಳ್ಳುತ್ತಾರೆ. ದುಡಿಮೆಯಿಂದ, ಬೇರೆಯವರಿಗೆ ತೊಂದರೆಯಾಗದಂತೆ ಆದಾಯವನ್ನು ಗಳಿಸುವುದು ಸಮಾಜ ಮತ್ತು ವ್ಯಕ್ತಿಗಳ ಬದುಕಿನ ಹಿತ ಕಾಪಾಡುತ್ತದೆ. ಬೇರೆಯವರ ಮೈ ಮನಸ್ಸುಗಳನ್ನು ನೋಯಿಸಿ, ಬೇಯಿಸಿ, ಗಳಿಸಿದ ಸಂಪತ್ತು ಬಹುಕಾಲ ಉಳಿಯದು; ಅದರಿಂದ ಒಳಿತೂ ಆಗಲಾರದು. ಅನ್ಯಾಯಕ್ಕೆ ಒಳಗಾದವರ ಕಣ್ಣೀರು ಸುಡದಿರದು. ಅದನ್ನೇ ಸರ್ವಜ್ಞ ಕವಿಯು ಅಂಥ ಲೋಭಿಗೆ ದುರ್ಗತಿ ತಪ್ಪದು, ಸತ್ತ ಮೇಲೆಯೂ ನರಕವೇ ಗತಿಯೆಂದು ಎಚ್ಚರಿಸಿದ್ದಾನೆ. ಪಾಪಿಯ 'ಧನ ಪ್ರಾಯಶ್ಚಿತ್ತಕ್ಕಲ್ಲದೇ ಪಂಚಾಮೃತಕ್ಕೆ ಸಲ್ಲದು' ಎಂದು ಹೇಳಿದ್ದಾನೆ.

ಸಿರಿ–ಸಂಪತ್ತು, ಹಣಕ್ಕಾಗಿ ಎಲ್ಲರಲ್ಲಿಯೂ ಜಟಾಪಟಿ ನಡೆದಿದೆ. ಹಣದ ಹುಚ್ಚು ಯಾರನ್ನೂ ಬಿಟ್ಟಿಲ್ಲ. ಹಣ್ಣನ್ನು, ಹೆಣ್ಣನ್ನು, ಹಣ್ಣಾದ ಮರಗಳನು ಕಣ್ಣಿನಲಿ ಕಂಡು ಮನದಲ್ಲಿ ಬಯಸದಿಹರಾರಿಹರು ಈ ಜಗದಲಿ? ಯತಿಯ ತಪಸ್ವಿ ಕೆಡುಗು, ಮತಿಗೆಡುಗು, ಸತಿಯ ಸಜ್ಜನೆ ಕೆಡಗು, ಸ್ಥಿತಿವಂತರಿದ್ದು ಭ್ರಮೆಗೊಳಗು ಹೊನ್ನೆಂಬ ಶ್ರುತಿಯ ಕೇಳಿದರೆ ಸರ್ವಜ್ಞ ಎಂದಿದ್ದಾನೆ. ಹಣವು ಮರೆಸುವುದು ಅನ್ಯರನು, ಮರೆಸುವುದು ತನ್ನವರನು, ಇರಿಸುವುದು ತನ್ನ ಇದಿರನು. ಹೊನ್ನಿನ ತರವ ನೋಡೆಂದ ಕವಿ ಸರ್ವಜ್ಞ, ಇಂಥ ದಿಟದ ಮಾತುಗಳು ಬೇಕಾದಷ್ಟಿವೆ. ಅರ್ಥ ಪ್ರಾಪ್ತಿಗಾಗಿ ಅಲ್ಲದ ಕಾರ್ಯ ಮಾಡಬೇಡಿರೆಂದು ಎಚ್ಚರಿಸಿದ್ದಾನೆ.

ತಿರುವಳ್ಳುವರ್‌ರು ಅರ್ಥ ಭಾಗಕ್ಕೆ ಒಟ್ಟು ೭೮ ಅಧ್ಯಾಯಗಳಲ್ಲಿ ೭೫೦ ಕುರುಳುಗಳನ್ನು ಕೊಟ್ಟಿದ್ದು; ಇದರಲ್ಲಿ ಅರಸನ ರಾಜನೀತಿಯೂ ಸೇರ್ಪಡೆಗೊಂಡಿದೆ. ಈ ಭಾಗವೇ ಬಹಳ ದೊಡ್ಡದು. ರಾಜಪ್ರಭುತ್ವದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೂ ಅಗತ್ಯವಾದ ಅನೇಕ ಜನಪರ ಚಿಂತನೆಗಳು ಅದರಲ್ಲಿವೆ. ಅರಸನ ಗುಣಾವಗುಣಗಳನ್ನು ಹೇಳುವಾಗ, ಅವನು ದೇವಾಂಶ ಸಂಭೂತನಾಗಲಿ, ಪ್ರತ್ಯಕ್ಷ ದೇವತೆಯೆಂದಾಗಲೀ ಎಲ್ಲಿಯೂ ಹೇಳಿಲ್ಲ. ಪ್ರಭುತ್ವದ ಪ್ರತಿಯೊಂದು ನಡವಳಿಕೆಯೂ ನೈತಿಕ ಬಲದಿಂದ ಕೂಡಿರಬೇಕು. ಅರಸನು ಪಾಲನೆಯಲ್ಲಿ ಕಠಿಣವಾಗಿ ವರ್ತಿಸುವಂತೆ ತೋರಿದರೂ ವಿವೇಕಿಯಾಗಿ ನೈತಿಕ ಬಲದಿಂದ ನ್ಯಾಯವನ್ನು ಕಾಪಾಡಿಕೊಳ್ಳಬೇಕು. ಹಿರಿಯರ ಅನುಭಾವಿಗಳ ಮಂತ್ರಾಲೋಚನೆಯನ್ನು ಸ್ವೀಕರಿಸಬೇಕು. ಅರಸನು ತಂತ್ರಗಳಿಂದ ವೈರಿಗಳನ್ನು ಹಿಮ್ಮೆಟ್ಟಿಸಬೇಕು. ರಾಜ್ಯಗಳ ರಾಯಭಾರದಲ್ಲಿ ಮಾನವೀಯ ಮೌಲ್ಯಗಳ ಸ್ನೇಹ ಗುಣದಿಂದ ವರ್ತಿಸಬೇಕು. ಮಂತ್ರಿ, ರಾಯಭಾರಿ, ಗೂಢಚಾರ ಮೊದಲಾದ ಅರಸಾಂಗದ ಪ್ರಮುಖ ವ್ಯವಸ್ಥೆಯನ್ನು ಕುರಿತು ಹಲವು ಅಧ್ಯಾಯಗಳನ್ನು ಹೇಳುವಾಗ



ಅರಸನು ಅವರನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ನಂತರ ಅಂತರಂಗಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎನ್ನುತ್ತಾರೆ ತಿರುವಳ್ಳುವರ್‌ರು.

ಅರಸನು ಹೇಗಿರಬೇಕೆಂಬುದನ್ನು ಹೇಳುವಾಗ ವಳ್ಳುವರ್ ಸತ್ ಪ್ರಜೆಯ ಲಕ್ಷಣ–ಗುಣವಿಶೇಷಗಳನ್ನು ಹೇಳಲು ಮರೆಯುವುದಿಲ್ಲ. ಅರಸ ಮತ್ತು ಪ್ರಜೆಗಳಲ್ಲಿ ಸಾಮರಸ್ಯವಿರದಿದ್ದರೆ, ನಿಸರ್ಗದತ್ತ, ಸಂಪದ್ಭರಿತ ರಾಜ್ಯವಿದ್ದರೂ ನಾಡು ಅವನತಿಯ ಹಾದಿ ಹಿಡಿಯುತ್ತದೆಯೆಂಬುದು ಅವರ ಮತ. ಸತ್‌ಪ್ರಜೆಯ ಲಕ್ಷಣಗಳನ್ನು ವಿವರಿಸಿ ಹೇಳಲು ವಳ್ಳುವರ್‌ರು ಕುರುಳಿನ ೯೬ನೆಯ ಅಧ್ಯಾಯವನ್ನು ಮೀಸಲಿರಿಸಿದ್ದಾರೆ. ನೇರ ನಡವಳಿಕೆ, ಪರರ ಕೇಡನ್ನು ಕುರಿತು ನಾಚಿಕೆ, ಇವೆರಡೂ ಸತ್ಕುಲ ಸಂಭೂತನಲ್ಲಿರುತ್ತವೆ. ಸಾಕಷ್ಟು ಐಶ್ವರ್ಯವಿದ್ದರೂ ಪರರಿಗೆ ಕೇಡು ಬಗೆಯುವುದಿಲ್ಲ. ಸಿರಿಯಳಿದರೂ ಕಾಲ, ಮರ್ಯಾದೆ, ಉದಾರ ಗುಣಗಳನ್ನು ಬಿಟ್ಟು ಕೊಡುವುದಿಲ್ಲ. ಒಂದು ವೇಳೆ ನಿರ್ದಯನಾಗಿ ಅವನು ಸಂಶಯ ಬರುವಂತೆ ನಡೆದುಕೊಂಡರೆ, ಅವನ ಕುಲವನ್ನೇ ಸಂಶಯದಿಂದ ನೋಡಬೇಕಾಗುತ್ತದೆ. ಉತ್ತಮವಾದ ಪ್ರಜೆಯು ಅರಸನ ರಾಜದಂಡ ನೀತಿಯನ್ನು ನಿಯಂತ್ರಿಸುತ್ತಾರೆಂಬುದು ವಳ್ಳುವರ್‌ರ ಬಲವಾದ ನಂಬಿಕೆ.

ಅರ್ಥ ಭಾಗಕ್ಕೆ ಕೃತಿಕಾರನು ಬಳಸಿರುವ ಪರಿಭಾಷೆ 'ಪೊರುಳ್' ಎಂಬುದು. 'ಅರ್ಥ' ವೆಂದರೆ ಬರಿಯ ಸಂಫತ್ತು, ಹಣ ಗಳಿಕೆಯೊಂದೇ ಎಂದು ತಿಳಿಯಬಾರದು. ವಿದ್ಯೆ, ಜ್ಞಾನ, ಉದ್ಯೋಗ, ಸಜ್ಜನರ ಸ್ನೇಹ, ರಾಜನೀತಿ, ಮಂತ್ರಿಯಮಂಡಲ, ಪುರುಷ ಪ್ರಯತ್ನ, ರಾಯಭಾರ, ರಾಷ್ಟ್ರಭಕ್ತಿ, ಸೈನ್ಯ, ಕೃಷಿ, ಉದ್ಯಮ ಇತ್ಯಾದಿ ಅರ್ಥ ವಿಭಾಗಕ್ಕೆ ಸಂಬಂಧಪಟ್ಟ ವಿಷಯಗಳಾಗಿವೆ. ಕೃಷಿ ಉದ್ಯಮವೇ ವಿಶ್ವದ ಜೀವನಾಡಿ! ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲ. ಅನ್ನದಾತ (ರೈತ) ನಿಂದಲೇ ಜಗದ ಜೀವ ಜಂತುಗಳ ಜೀವನಾಡಿ ಜೀವಂತವಾಗಿರುತ್ತವೆ. ಅಂತೆಯೇ ಸರ್ವಜ್ಞನು–

ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲು
ಮೇಟಿಯಿಂ ರಾಟಿ ನಡೆದುದಲ್ಲದೇ ದೇಶ
ದಾಟವೇ ಕೆಡುಗುಂ ಸರ್ವಜ್ಞ!

ಎಂದಂತೆ ತಿರುವಳ್ಳುವರ್ ಮಹರ್ಷಿಯೂ ವಿಶ್ವದಲ್ಲಿ ಎಷ್ಟೇ ಉದ್ಯಮಗಳಿದ್ದರೂ ಕೃಷಿ ಉದ್ಯಮವೇ ಸರ್ವ ಶ್ರೇಷ್ಠವೆಂದು ಹೇಳಿದ್ದಾನೆ. ಕೃಷಿಕನೇ ನಿಜವಾದ ಒಡೆಯ ಮತ್ತು ಅನ್ನದಾತ ಹಾಗೂ ದಾನಿ. ಅವನಿಂದಾಗಿಯೇ ನಮ್ಮ ಬದುಕು ಜೀವಕಳೆ ತುಂಬಿದೆ.

ಕಲಿವುದು ಕುಂದಿರದೆ ಕಲಿಯತಕ್ಕ ಕೃತಿಗಳನು
ಕಲಿತ ಬಳಿಕ ನಡೆಸುವುದು ಅದಕೆ ತಕ್ಕವೊಲು

ಕಲಿತವರೇ ಕಣ್ಣುಳ್ಳವರು, ಮೊಗದಿ ಎರಡು
ಹುಣ್ಣುಳ್ಳವರು ಕಲಿಯದವರು
ಒಂದು ಜನ್ಮದಲಿ ತಾನು ಕಲಿತ ವಿದ್ಯೆಯು
ತನಗೆ, ಏಳು ಜನ್ಮಗಳಲಿ ರಕ್ಷೆಯಹುದು

ಸಿರಿವಂತರ ಮುಂದೆ ಬಡವರು ನಿಲುವಂತೆ, ವಿನಯದಿಂದಲಿ
ವಿದ್ಯೆ ಕಲಿತವರೇ ಶ್ರೇಷ್ಠರು, ಕನಿಷ್ಠರಂತೂ ಕಲಿಯದವರು.

ಪ್ರತಿಯೊಬ್ಬರಿಗೂ ವಿದ್ಯೆ ಶಿಕ್ಷಣ, ಕಲಿಕೆ, ಅಕ್ಷರಭ್ಯಾಸ ಅಗತ್ಯವಾದುದು ಎಂಬುದನ್ನು ವಳ್ಳುವರ್‌ರು ಮೇಲಿನ ಪದಗಳಲ್ಲಿ ಹಸನಾಗಿ ಹೇಳಿದ್ದಾರೆ. ವಿದ್ಯಾವಂತರಾದರೆ ಏನ್ನೆಲ್ಲಾ ಕಷ್ಟಗಳು ದೂರವಾಗುತ್ತವೆ. ಸಮಾಜದಲ್ಲಿ ಹೇಗೆ ಬಾಳಬೇಕೆಂಬುದರ ಸಂಸ್ಕೃತಿಯನ್ನು ಕಲಿಸಿಕೊಡುತ್ತದೆ ಎಂದಿದ್ದಾರೆ. ವಿದ್ಯೆಯಿಲ್ಲದವನ ಮುಖವು ಹಾಳೂರು ಹದ್ದಿನಂತಿಕ್ಕೂದೆಂಬಂತೆ ಎಂಬ ಸರ್ವಜ್ಞ ಕವಿಯ ಸಾಲು ಇದರಿಂದ ನೆನಪಾಗದಿರದು. ಸಮಾಜದಲ್ಲಿ ಯಾವ ರೀತಿಯಿಂದ ಇರಬೇಕೆಂಬುದರ ತಿಳುವಳಿಕೆಯೂ ಪ್ರಾಪ್ತವಾಗುತ್ತದೆ.

ಗಂಡು–ಹೆಣ್ಣುಗಳು ಮನವೊಂದಾಗಿ ಕೂಡಿ ಬಾಳುವ ಸಾಮರಸ್ಯ ಜೀವನ ಕುಟುಂಬ ಎನಿಸಿಕೊಂಡಂತೆ; ಮಾನವ ಕುಟುಂಬಗಳು ಒಗ್ಗೂಡಿ ನಡೆಸುವ ಸಾಮರಸ್ಯ ಜೀವನವೇ ಸಮಾಜ ಎನಿಸಿಕೊಳ್ಳುತ್ತದೆ. ಇದರಿಂದ ಜಾತಿ, ಮತ, ಪಂಥಗಳ ಗುಂಪುಗಳು 'ಸಮಾಜ' ಎನಿಸಿಕೊಳ್ಳಲು ಅನರ್ಹವಾಗುತ್ತವೆಯೆಂಬುದು ನಮಗೆ ತಿಳಿದು ಬರುವ ಸತ್ಯಾಂಶ. ಮಾನವರು ಒಗ್ಗೂಡಿ ಬಾಳದಂತೆ ಜಾತಿ, ಮತ, ಪಂಥ, ವರ್ಗ, ಇತ್ಯಾದಿ ಕಾರಣಗಳಿಂದ ಪ್ರತ್ಯೇಕಿಸುವ ಹೀನ ಗುಣವನ್ನು (ಇಗಲ್) ಹಗೆತನ ಎಂದುದಾಗಿ ವಳ್ಳುವರ್‌ರ ಹೇಳಿಕೆಯಾಗಿದೆ. ಇದು ಮಾನವ ಕುಲಕ್ಕೆ ಅಂಟಿಕೊಂಡ ಮಹಾರೋಗವೆಂದೇ ಅವರು ಖಂಡತುಂಡವಾಗಿ ಹೇಳಿದ್ದಾರೆ. ಮಾನವ ಕುಲದ ಹಿತಕ್ಕೆ ಮಾರಕವಾದ ಸ್ವಾರ್ಥಮೂಲದ ವ್ಯಕ್ತಿ ಅಥವಾ ವಿಶಿಷ್ಟವಾದ ಗುಂಪುಗಳು ಹಾಕಿರುವ ಅಡ್ಡ ಗೋಡೆಗಳೇ ಈ ಜಾತಿ, ಮತ, ಧರ್ಮ ಇತ್ಯಾದಿ ವಿಭಜನೆಗಳಾಗಿವೆ ಎಂದಿದ್ದಾರೆ ಕವಿ. ಪರೀಕ್ಷಿಸಿ, ಪ್ರಮಾಣಿಸಿ ನೋಡಿ ನಿರ್ಣಯ ಕೈಕೊಳ್ಳುವುದು, ನಂಬಿಗೆಯಿಟ್ಟು ಒಬ್ಬರನ್ನೊಬ್ಬರು ಪ್ರೀತಿಯಿಂದ ಸಹಬಾಳ್ವೆ ಮಾಡುವುದು, ಮತ್ತೊಬ್ಬರ ಮನಸ್ಸನ್ನು ನೋಯಿಸದಿರುವುದು, ನಂಬಿಕೆಗೆ ಇಂಬು ಕೊಡುವುದೇ ಹೊರತು



ನಂಬಿಕೆ ದ್ರೋಹಿ ಬಗೆಯದಿರುವುದು. ಅದೂ ಪರೀಕ್ಷಿಸಿ ನಂಬುವುದು. ವರುಳ್ಳವರ್‌ರು ನಂಬುಗೆಯ ಕುರಿತಾಗಿ ಹೇಳಿದ್ದು ಹೀಗೆ–

ಧರ್ಮ, ಅರ್ಥ, ಕಾಮ ಜೀವ ಭಯಗಳೆಂಬ ನಾಲ್ಕರ ವಿಷಯದಲಿ
ಒಬ್ಬನ ಗುಣವ ಪರೀಕ್ಷಿಸಿ ನಂಬುವುದು

ಗುಣ–ದೋಷಗಳ ಪರೀಕ್ಷಿಸಿ ಅವುಗಳಲಿ ಅಧಿಕವಿರುವ
ಗುಣದಿಂದ ಒಬ್ಬನ ಯೋಗ್ಯತೆಯನಳೆವುದು
ಹಿರಿತನಕೂ ಕಿರಿತನಕೂ ಅವರವರು ಮಾಡುವ
ಕಾರ್ಯವೇ ಒರೆಗಲ್ಲಾಗಿಹುದು

ಪರೀಕ್ಷಿಸದೇ ಒಬ್ಬನ ನಂಬುವುದೂ ನಂಬದವನಲಿ
ಶಂಕೆಪಡುವುದೂ ತೀರದ ದುಃಖವ ತರುವುದು

ಯಾರಲ್ಲಾದರೂ, ಬಂಧು–ಬಳಗದಲ್ಲಾದರೂ ನಂಬಿಗೆಯಿಟ್ಟು ನಡೆಯುವುದು. ನಂಬಿಕೆಯೇ ಎಲ್ಲದಕ್ಕೂ ಕಾರಣವು ಎಂಬುದನ್ನು ವಳ್ಳುವರ್‌ರು ಮೇಲಿನ ಪದಗಳಲ್ಲಿ ಹೇಳಿರುವರು. 'ಮನುಷ್ಯ ಮನುಷ್ಯರಲ್ಲಿ ನಂಬಿಗೆಯಿರಬೇಕು; ಪ್ರವಾಸದಲ್ಲಿ ತಂಬಿಗೆಯಿರಬೇಕೆಂಬದಾಗಿ ಕನ್ನಡದಲ್ಲಿ ಗಾದೆಯಿದೆ. ನಂಬಿಕೆ ದ್ರೋಹ ಬಗೆದವನ ಸ್ಥಿತಿ ಅಧೋಗತಿ ಕಟ್ಟಿಟ್ಟ ಬುತ್ತಿ ಎಂಬುದಾಗಿ ಹಿರಿಯರನೇಕರಲ್ಲಿ ಈಗಲೂ ಮನೆಮಾತಾಗಿದೆ. ಆದುದರಿಂದ ಈ ಮೇಲಿನ ಮಾತುಗಳು ಬದುಕಿನ ಸೂತ್ರಗಳಾಗಿವೆ. ಲೇಸದು ಕೇಡುಗಳ ಪರೀಕ್ಷಿಸಿ ಲೇಸನ್ನೇ ತರುವುದು, ಪ್ರೇಮ, ಜ್ಞಾನ, ದೃಢಮನ, ನಿಷ್ಕಾಮ – ಈ ನಾಲ್ಕು ಸದ್ಗುಣವುಳ್ಳವನ ಕಾರ್ಯಕ್ಕೆ ನೇಮಿಸುವುದು. ಮಾಡುವ ಕಾರ್ಯಕ್ಕೆ ಯೋಗ್ಯನಿರುವನೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ಬಳಿಕ ಅವನನ್ನು ಹೊಣೆಗಾರರನನ್ನಾಗಿ ಮಡುವುದು ಈ ಮುಂತಾದ ಮಾರ್ಗೋಪಾಯಗಳನ್ನು ವಳ್ಳುವರರು ನಮಗೆ ತಿಳಿಯಪಡಿಸಿರುವರು. ಹಾಗೆಯೇ ಬಂಧು ಬಳಗದವರನ್ನು ಆದರಿಸುವುದಕ್ಕೆ ಕವಿ ಕೊಡುವ ದೃಷ್ಟಾಂತಗಳಿಂತಿವೆ–

ಬಳಗದೊಲವನು ಗಳಿಸದನ ಸಿರಿಬಾಳು
ಕರೆಯಿರದ ಕೊಳದಲಿ ನೀರನ್ನೆರೆದಂತೆ

ಕಾಗೆ ಬಚ್ಚಿಡದೆ ತನ್ನ ಬಳಗವನು ಕರೆದುಂಬುದು
ಅಂಥ ಗುಣವುಳ್ಳವನಲ್ಲೇ ಸಿರಿ ಬಂದು ಸೇರುವುದು

ಕೋಳಿಯೊಂದು ಕುಟುಕ ಕಂಡರೆ ತನ್ನ ಬಳಗವನ್ನೆಲ್ಲ ಕರೆದುತಿನ್ನುವುದು, ಹಾಗೆಯೇ ಕಾಗೆಯೊಂದು ಅಗುಳ ಕಂಡರೆ ಕರೆಯುವುದು ತನ್ನ ಕುಲವೆಲ್ಲವನು ಎಂದ

ಬಸವಣ್ಣನವರ ಮಾತಿನಂತೆ ನಡೆದುಕೊಳ್ಳುವುದೂ ಮಾನವರಾದವರ ಆದ್ಯ ಕರ್ತವ್ಯವಾಗಿದೆ ಎಂಬಂತೆ ಮೇಲಿನವೆರಡೂ ಪದಗಳೂ ಇದೇ ಆಶಯವನ್ನು ಹೇಳಿವೆ. ಮನುಷ್ಯನು ಯಾವಾಗಲೂ ಉತ್ಸಾಹಿಯಾಗಿ, ಚೈತನ್ಯಶೀಲವಾಗಿರಬೇಕು. ಅದಕ್ಕೇ ಮನೋವಾನ್ ಬಲಃ ಎನ್ನಲಾಗಿದೆ.

ಮನೋಬಲವೇ ಚಿರಂತನ ಸಿರಿಯು; ಮತ್ತುಳಿದ
ಸಿರಿಯು ಸ್ಥಿರವಿರದೆ ನೀಗುವುದು

ಧನಹೀನರಾದೆವು ಎಂದು ದುಗುಡಗೊಳ್ಳರು
ದೃಢಮನವೆಂಬ ಧನಮನವುಳ್ಳವರು

ಚಿಂತಿಸುವುದೆಲ್ಲವೂ ಉನ್ನತವಾಗಿರಲಿ; ಮತ್ತದು
ವಿಫಲವಾದರೂ ಶ್ಲಾಘ್ಯವಾದುದೇ

ಮನೋಬಲವೇ ಮನುಜಂಗೆ ಪೌರುಷವು
ಅದಿಲ್ಲದವನು ಮನುಜ ರೂಪದಲಿಹ ಮರನು.

ಮನಸ್ಸು ಗಟ್ಟಿಮುಟ್ಟಾಗಿರಬೇಕು. ಅಂದರೆ ದೃಢವಾಗಿರಬೇಕು; ಹೊಯ್ದಾಟ ಸಲ್ಲದು. ಚಂಚಲವಾದ ಮನಸ್ಸು ಬದುಕನ್ನು ಪೂರ್ಣಗೊಳಿಸಲಾರದು. ಮನೋಬಲವೇ ಸತ್ಕಾರ್ಯಗಳನ್ನು ಯಶಸ್ವಿಗೊಳಿಸಲು ಸಾಧ್ಯವಹುದು. ಚಿಂತೆಯೇ ಮುಪ್ಪು ಎಂಬಂತೆ ಬಲಹೀನನನ್ನಾಗಿಸುವುದು, ಆದುದರಿಂದ ಮನೋಬಲವೇ ಚಿರಂತನ ಸಿರಿಯು ಎಂಬುದಾಗಿ ಮೇಲಿನ ಪದಗಳಲ್ಲಿ ಮಹರ್ಷಿ ವಳ್ಳುವರ್‌ರು ಉಲ್ಲೆಖಿಸಿದ್ದಾರೆ. ಆಪತ್ತು ವಿಪತ್ತುಗಳು ಬಂದೊದಗಿದರೂ ಅಧೈರ್ಯ, ಎದೆಗುಂದದಿರುವುದು ಎಂಬುದಕ್ಕೆ ಕವಿಯು –

ಕಷ್ಟ ಬಂದಾಗ ಎದೆಗೆಡದೆ ನಗುವುದು; ಅದನು ಗೆಲುವ ಮಾರ್ಗ
ಅದರಂತೆ ಬೇರೊಂದಿಲ್ಲವೆಂಬುದನರಿವುದು

ಮಿತಿಮೀರಿದ ಕಷ್ಟಗಳು ಬಂದರೂ ಧೃತಿಗೆಡದವನನು
ಅವು ಸೋಂಕದೆ ದೂರವಾಗುವವು

ಮಾನವ ದೇಹವಿದು ದುಃಖದ ಮೂಲವೆಂಬುದನರಿತು
ದುಃಖಿಸರು ಶ್ರೀಮಂತರು

ಕಷ್ಟಗಳು–ಮನುಷ್ಯನಿಗೆ ಬರುವುದು ಸಹಜವೇ; ಆದರೆ ಅವುಗಳಿಗೆ ಹೆದರಿದರೆ ಬದುಕು ಅಯೋಮಯವಾಗುತ್ತದೆ. ಅಂಜದೇ, ಅಳುಕದೇ, ಧೈರ್ಯದಿಂದ



ಮುಂದುವರಿಯುವುದೇ ಯಶಸ್ವೀ ಬಾಳಿನ ಗುಟ್ಟಾಗಿದೆಯೆಂದು ಮೇಲಿನಂತೆ ಕವಿ ಉಲ್ಲೇಖಿಸಿದ್ದಾನೆ. ಏನೆಯಾದರೂ ಪುರುಷ ಪ್ರಯತ್ನ ಬಿಡಬಾರದು ಎಂಬುದಕ್ಕೆ ಕವಿ ಕೊಟ್ಟ ಕರೆ ಹೀಗಿದೆ–

ಕಷ್ಟ ಸಾಧ್ಯವದೆಂದು ಎದೆಗುಂದದಿರುವುದು
ಸತತ ಪ್ರಯತ್ನವದು ಹಿರಿಮೆ ತರುವುದು

ಕೈಕೊಂಡ ಕಾರ್ಯವನು ಮುಗಿಸದೆ ಕೈ ಬಿಡದಿರುವುದು
ಕಾರ್ಯವನು ಕೈ ಬಿಟ್ಟವರ ಕೈ ಬಿಡುವುದೇ ಈ ಲೋಕ

ಪ್ರಯತ್ನವೆನುವ ಹಿರಿಯ ಗುಣ ಇರುವವರ ಬಳಿ ನೆಲೆಸಿಹುದು
ಉಪಕಾರವೆನುವ ಉನ್ನತ ಬುದ್ಧಿ

ಪ್ರಯತ್ನಶೀಲತೆಯು ಸಂಪದವ ವರ್ಧಿಸುವುದು
ಪ್ರಯತ್ನ ಹೀನತೆಯು ದಾರಿದ್ರ್ಯವ ತರುವುದು

ದೈವದಿಂದ ಫಲಿಸದ ಕಾರ್ಯವಾದರೂ ಪ್ರಯತ್ನವದು
ತನ್ನ ಮೈ ದಣಿದ ಕೂಲಿಯನು ತರುವುದು

ಇವೆಲ್ಲವೂ ಮನುಷ್ಯನ ಪ್ರಯತ್ನಕ್ಕೆ ಕೊಟ್ಟ ಉತ್ಸಾಹ ಪ್ರೋತ್ಸಾಹದ ಮಾತುಗಳು. ಕೇವಲ 'ದೈವದ ಮೇಲೆ, ವಿಧಿ ಲಿಖಿತದ ಮೇಲೆ ಅವಲಂಬಿತರಾಗಿ ಕುಳಿತುಕೊಳ್ಳಲಾರದೇ ಸತತ ಪ್ರಯತ್ನಶೀಲ ಗುಣ ಮನುಷ್ಯನದಾಗಿರಬೇಕಾಗುತ್ತದೆ ಎಂಬ ಭರವಸೆಯ ಮಾತುಗಳನ್ನು ಕವಿಯು ಸೂಚಿಸಿದ್ದಾನೆ.

ಸಜ್ಜನರ ಸ್ನೇಹ ಮಾಡಿದರೆ ಮಾಡುವ ಕಾರ್ಯವು ಶುದ್ಧಿಯೂ ಯಶಸ್ಸು ತರುತ್ತದೆ. ಆದರೆ ತಮ್ಮ ಶ್ರೇಯಸ್ಸು ಬಯಸುವವರು, ಕೀರ್ತಿಯನು ನಂದಿಸುವ ಕಾರ್ಯಗಳನು ಮಾಡಬಾರದೆಂದೂ ಎಚ್ಚರಿಸಿರುವನು. ಆದರೆ ಕಾರ್ಯಕ್ಕೆ ತೊಡಗುವ ಮುನ್ನ ಹಣ, ಸಾಧನ, ಕಾಲ, ಕಾರ್ಯ, ಸ್ಥಳ ಈ ಐದರ ಬಗೆಗೆ ನಿಖರವಾಗಿ ಚಿಂತಿಸುವುದು, ಅನಂತರ ಆಯೋಜಿಸುವುದು ಮುಖ್ಯ ಎಂದಿದ್ದಾರೆ. ಏಕೆಂದರೆ ಒಂದು ಕಾರ್ಯದಿಂದ ಮತ್ತೊಂದು ಕಾರ್ಯವ ಸಾಧಿಸುವುದೆಂದರೆ ಒಂದು ಮದದಾನೆಯಿಂದ ಮತ್ತೊಂದಾನೆಯನು ಹಿಡಿಯುವಂತಹುದೆಂದು ಎಚ್ಚರಿಕೆಯನ್ನು ಕೊಟ್ಟಿರುವನು ಕವಿ. ಮಾತಿನ ಹದಗಾರಿಕೆ, ಸಿರಿ ಸಂಪಾದಿಸುವ ಮಾರ್ಗ, ಸ್ನೇಹ ವರ್ಧನೆ, ದುರ್ಜನರಿಂದ ದೂರವಿರುವುದು, ಹಗೆಯ ಸಾಮರ್ಥ್ಯವನ್ನರಿತು ನಡೆಯುವುದು, ಸ್ವಾಭಿಮಾನದಿಂದಿರುವುದು – ಈ ಮುಂತಾದ ಅಧ್ಯಾಯಗಳ ಮೂಲಕ ಮನುಷ್ಯ ಬಾಳಿನ ಸೂತ್ರಗಳನ್ನು ತಿರುವಳ್ಳುವರ್‌ರು ಪ್ರತಿಪಾದಿಸಿದ್ದಾರೆ. ಇದು ೭೫೦ ಪದಗಳುಳ್ಳ ಮಹಾ ಅಧ್ಯಾಯವಾಗಿದೆ.

ಕನ್ನಡ ನಾಡಿನಲ್ಲಿ ಉದಯಿಸಿ ಕೀರ್ತಿ ಶೇಷರಾದ ಬಸವಾದಿ ಶಿವಶರಣರು, ಹರಿದಾಸರು, ವಿಶಿಷ್ಟವಾದ ವ್ಯಕ್ತಿಗಳ ವಿಕೃತ ಬುದ್ಧಿಯ ವಿಭಜನೆಗಳನ್ನು ಧಿಕ್ಕರಿಸಿ ಮಾನವ ಸಮಾಜ ಸೇವೆಯೇ ಆತ್ಮೋದ್ಧಾರದ ಮಾರ್ಗವೆಂದು ತಮ್ಮ ವಚನಗಳ ಮೂಲಕ ಮತ್ತು ಪದ್ಯಗಳ ಮೂಲಕ ಬೋಧಿಸಿರುವುದು ಇಲ್ಲಿ ಗಮನಾರ್ಹವಾದುದು. ಆದ್ದರಿಂದ ಮೃಗಶೇಷವುಳ್ಳ ಮಾನವನು ಸ್ವ–ಅರ್ಥಗಳನ್ನು ಮತ್ತು ಸ್ವಂತ ಕಾಮನೆಗಳೆಂಬ ಅಸುರೀ ಗುಣಗಳನ್ನು ಬದಿಗೊತ್ತಿ ವಿಶ್ವ ಸಮಷ್ಟಿ ಜೀವದ ಅಂಶ ತಾನೆಂಬ ವಾಸ್ತವತೆಯನ್ನರಿತು ಸದ್ಬುದ್ಧಿಯನ್ನು ಬೆಳೆಸಿಕೊಂಡು ವರ್ಗಭೇದದ ಅನಿಷ್ಟ ಗುಣಗಳಿಂದ ಬಿಡುಗಡೆ ಹೊಂದಿ ಧರ್ಮದೆಡೆಗೆ, ಮಾನವೀಯತೆಯ ದಾರಿಯಲ್ಲಿ ಸಾಗಬೇಕು. ಈ ಬಗೆಯ ಸಹೃದಯ, ಸಮನ್ವಯ, ಸುಮಧುರ, ಸುಂದರ ತತ್ತ್ವವೇ ತಿರುವಳ್ಳುವರ್‌ರು ಕಂಡ ಪುರುಷಾರ್ಥತ್ರಯಗಳ ಜೀವನ ಸಿದ್ಧಾಂತ. ಇದರಿಂದ ಇಂದಿನ ವಿಶ್ವದ ಮಾನವ ಸಮಾಜವು ಪ್ರಜ್ಞಾಶಕ್ತಿಗೆ (ಶಿವನಿಗೆ) ಶರಣಾಗದೆ ಕಾಮನಿಗೆ ಅಂದರೆ ಸ್ವಾರ್ಥಪರ ದುರ್ಬುದ್ಧಿಗೆ ಶರಣಾಗುತ್ತಿದೆಯೆಂಬ ಸತ್ಯಾಂಶವು ಬೆಳಕಿಗೆ ಬರುತ್ತಿದೆ. ಇಂದು ಪುರುಷಾರ್ಥ ತ್ರಯಗಳಲ್ಲಿ ಧರ್ಮವು (ಶಿವಸು) ಕಾಣೆಯಾಗಿ ಪುರುಷಾರ್ಥ ದ್ವಯಗಳಾದ ಅರ್ಥ ಮತ್ತು ಕಾಮಗಳೇ ಜನಮನವನ್ನು ಅಟ್ಟ ಹಾಸದಿಂದ ಆಳುತ್ತಿವೆ. ಇಂದು ಸೈತಾನನೇ ಅಂದರೆ ದುರ್ಬುದ್ಧಿಯೇ ಧರ್ಮ ಗುರುಗಳ ವೇಷ ಧರಿಸಿ, ಸಮಾಜದ ನೇತಾರರ ಪಾತ್ರವಹಿಸಿ, ರಾಜಕೀಯ ನಾಯಕತ್ವದ ಪದವಿ ಪಡೆದು ಇಡೀ ಪ್ರಪಂಚವನ್ನೇ ಆಳುತ್ತಿದ್ದಾನೆ.

ಪುರಾತನ ಋಷಿ ಮುನಿಗಳು ಕನಸು ಕಂಡ ದೇವರ ಸಾಮ್ರಾಜ್ಯವು ಅಂದರೆ ವಿಶ್ವಮಾನವ ಧರ್ಮಾಧಾರಿತ ಸಮಾಜ ಮೂಲೆಗುಂಪಾಗಿ ವಿಶ್ವವೇ ಇಂದು ದೈತ್ಯ ಸಾಮ್ರಾಜ್ಯವಾಗಿದೆ. ಅಂದ ಮೇಲೆ ವಿಶ್ವದಲ್ಲಿ ಸುಖವೆಲ್ಲಿ? ಶಾಂತಿಯೆಲ್ಲಿ? ಸಮಾಧಾನವೆಲ್ಲಿ? ಆದ್ದರಿಂದ ಪ್ರಾಣಿ ವರ್ಗದಿಂದ ಬೇರೆಯಾಗಿ ಉತ್ತಮ ಜನ್ಮವನ್ನು ತಾಳಿರುವ ಈ ಮಾನವನು ತಲೆ ತಲಾಂತರಗಳಿಂದ ತನ್ನಲ್ಲಿ ಮೈಗೂಡಿಸಿಕೊಂಡು ಬಂದಿರುವ ಮೃಗಶೇಷವನ್ನು ಸಾಧ್ಯವಾಗುವಲ್ಲಿ ಸಾಧ್ಯವಾದಷ್ಟು ಕಡಿಮೆ ಮಾಡಿಕೊಂಡು ಸತ್ಯ ಶಿವ ಸುಂದರದೆಡೆಗೆ ಸಾಗಬೇಕೆಂಬುವುದೇ ಸಮಷ್ಟಿ ಕಲ್ಯಾಣವನ್ನು ಆಶಿಸುವ ಮಹಾನುಭಾವರಾದ ತಿರುವಳ್ಳುವರ್‌ರ ಆದೇಶ ಮತ್ತು ನಿರ್ದೇಶನವಾಗಿದೆ ಎಂಬುದನ್ನು ವಿಚಾರವಂತರು ಅರಿಯಬೇಕು ಎಂದಿದ್ದಾರೆ.

**೩. ಕಾಮಭಾಗ :**

ಮನುಷ್ಯ ತನ್ನ ಜೀವನದಲ್ಲಿ ಕಾಮನೆಗಳನ್ನು ಈಡೇರಿಸಿಕೊಳ್ಳುವಲ್ಲಿ ಸತತವೂ ಶತಪಥ ಹಾಕುತ್ತಿರುತ್ತಾನೆ. ಕಾಮನೆ ಅಂದರೆ ಆಸೆ–ಆಮಿಷ–ಆಕಾಂಕ್ಷೆ ಬೇಡಿಕೆ ಎಂದರ್ಥ. ಇವುಗಳ ಈಡೇರಿಕೆಗಾಗಿ ಏನೆಲ್ಲ ಹೀನ ಕಾರ್ಯಗಳನ್ನು ಮಾಡುತ್ತಿರುತ್ತಾನೆ.



ಬಯಕೆ ಅಥವಾ ಬೇಡಿಕೆಯೊಂದು ಈಡೇರಿತೆಂದರೆ ಮತ್ತೊಂದಕ್ಕೊ ಕೈ ಹಾಕುತ್ತಾನೆ. ಆಸೆಗೆ ಮಿತಿಯೆಂಬುದೇ ಇಲ್ಲ. ಆಸೆಗಳು ಮೇಲಿಂದ ಮೇಲೆ ದಾಳಿ ಮಾಡಿದಾಗ ಪರಮಾತ್ಮನ ಕಡೆಗೆ ಮುಖ ಮಾಡಲಾದೀತೆ? ಸಾಧ್ಯವಿಲ್ಲ. ಅರ್ಥಶಾಸ್ತ್ರಜ್ಞ ಅರಿಸ್ಟಾಟಲ್‌ನು "Human Wants are unlimited" ಎಂದಿದ್ದಾನೆ. ಇದು ನಿಜವೂ ಹೌದು. ಆಸೆಯೆಂಬುದು ಅರಸಿಂಗಲ್ಲದೇ ಶಿವಭಕ್ತರಿಗುಂಟೆ? ಎಂದು ಆಯ್ದಕ್ಕಿ ಮಾರಯ್ಯನ ಕಾಯಕ ಧರ್ಮವನ್ನು ಲಕ್ಕಮ್ಮನವರು ಹೇಳಿದ ಮಾತು ನಿತ್ಯ ಸತ್ಯ. 'ಹೊನ್ನಿಗಾಗಿ, ಮಣ್ಣಿಗಾಗಿ, ಹೆಣ್ಣಿಗಾಗಿ, ವಿವಿಧ ಆಸೆಗಾಗಿ ಸತ್ತವರು ಕೋಟಿ ಕೋಟಿ ಜನರುಂಟು! ಆದರೆ ಪರಮಾತ್ಮನೇ ನಿನಗಾಗಿ, ನಿನ್ನ ಹುಡುಕಾಟಕ್ಕಾಗಿ ಸತ್ತವರನಾರನೂ ಕಾಣೆನು" ಎಂದಿದ್ದಾರೆ ವೈರಾಗ್ಯ ಚಕ್ರವರ್ತಿ ಅಲ್ಲಮಪ್ರಭುದೇವರು.

ತಮಿಳಿನಲ್ಲಿ 'ಇನ್ಬಂ' ಎಂದರೆ ಕಾಮ. ತ್ರಿವಿಧ ಪುರುಷಾರ್ಥಗಳು ಧರ್ಮ, ಅರ್ಥ, ಕಾಮ ಎಂಬ ತ್ರಿವರ್ಗ ಜೀವನಕ್ಕೆ ಮಾರ್ಗದರ್ಶಿಗಳಾಗಿರುವ ರಾಷ್ಟ್ರ ಪ್ರಜ್ಞೆ ಮತ್ತು ವಿಶ್ವ ಪ್ರಜ್ಞೆಯುಳ್ಳ ಮೂರು ಬಗೆಯ ಋಷಿ ವರ್ಗವನ್ನು ಸೂಚಿಸುತ್ತದೆ ಎನ್ನುತ್ತಾರೆ ವಳ್ಳುವರ್‌ರು. ಕವಿ ಹೇಳುವ ಈ ಮೂರನೆಯ ಭಾಗದಲ್ಲಿ ಅಂದರೆ ಕಾಮ ಭಾಗದಲ್ಲಿ ೨೫೦ ಕುರುಳ್‌ಗಳಿವೆ. ಧರ್ಮ ಮತ್ತು ಅರ್ಥ ಭಾಗದಲ್ಲಿರುವಂತೆ, ಯಾವ ರೀತಿಯ ವಸ್ತು ನಿಷ್ಠವಾದ ವಿಧಿ–ನಿಯಮಗಳನ್ನು ಪ್ರಸ್ತಾಪಿಸದೆ ಗಂಡು–ಹೆಣ್ಣಿನ ಕಾಮದೊಲವಿನ ಅಂತರಂಗದ ಸೂಕ್ಷ್ಮ ಭಾವನೆಗಳನ್ನು, ನಾಯಕ–ನಾಯಕಿಯರ ಅಂತರ್ಗತವಾದ ಭಾವನೆಗಳ ಹೋರಾಟವನ್ನು ಸಂಗಮ್ ಸಾಹಿತ್ಯ ಸಂಪ್ರದಾಯದ ರೀತಿಯಲ್ಲಿ ಚಿತ್ರಿಸುತ್ತಾರೆ. ಆದರೆ, ಎಲ್ಲಿಯೂ ಅವರು ಸಂಶಯ ಮೀರಿ ಶೀಲ–ಅಶ್ಲೀಲಗಳ ರೇಖೆಯನ್ನು ದಾಟುವುದಿಲ್ಲ; ಎಲ್ಲಿಯೂ ವಾಸ್ತವ ಪ್ರಣಯದ ನೈಸರ್ಗಿಕ ಹಾಗೂ ದೈವಿಕ ಭಾವನೆಗಳ ಮರ್ಯಾದೆಯನ್ನು ಮಾರುವುದಿಲ್ಲ. ಧರ್ಮ ಮತ್ತು ಅರ್ಥಗಳಂತರ ಗಂಭೀರವಾದ ವಿಚಾರಗಳನ್ನು ಸಮರ್ಥವಾಗಿ ಹೇಳಬಲ್ಲ ತಿರುವಳ್ಳುವರ್‌ರು ಪ್ರಣಯದ ಸೂಕ್ಷ್ಮ ನವಿರು ಭಾವನೆಗಳನ್ನು ಬಿಡಿಸಿ ಹೇಳಬಲ್ಲರು ಎಂಬುದಕ್ಕೆ ಕಾಮ ಭಾಗವು ಸಾಕ್ಷಿಯಾಗಿದೆ. ಇದರಲ್ಲಿ ಕಾವ್ಯವಿದೆ. ನಾಟಕೀಯತೆಯಿದೆ. ನಾಯಕ–ನಾಯಕಿ–ಸಖಿ ಈ ಮೂರು ಪ್ರಧಾನ ಪಾತ್ರಗಳ ಅಂತರ್ಗತ ಅಭಿವ್ಯಕ್ತಿಯನ್ನು, ಸ್ವಗತ, ಸಂಭಾಷಣೆಯ ರೂಪದಲ್ಲಿ ಅಭಿವ್ಯಕ್ತಿಸುತ್ತಾರೆ.

ಕವಿಯು ಬಳಸಿದ ಪರಿಭಾಷೆ ';ಇನ್ಬಮ್' ಎಂಬುದು ಇದೊಂದು ಅರ್ಥ ಗರ್ಭಿತ ಸಾಂಸ್ಕೃತಿಕ ಶಬ್ದ ಪ್ರತಿಮೆ. ಮಾನವ ಇತಿಹಾಸವೇ ಇದರಲ್ಲಿ ಅಡಗಿದೆ. ಗಂಡ–ಹೆಂಡಿರರು ಕೂಡಿ ಅನುಭವಿಸುವ ಕುಟುಂಬ ಪರಿಮಿತಿಯನ್ನುಳ್ಳ ಅಲ್ಪಾವಧಿಯ ಸುಖವನ್ನು ಈ ಕುಟುಂಬ ಜೀವಿಗಳು ಸ್ವಾರ್ಥ ತ್ಯಾಗ ಮಾಡಿ ಕುಟುಂಬದ ಪರಿಮಿತಿಯಿಂದ ಹೊರಬಂದು ಇಡೀ ಮಾನವ ಜನಾಂಗಕ್ಕೆ ಸೇವೆ ಮಾಡಿ

ಅನುಭವಿಸುವ ಪರಮ ಸೌಖ್ಯವನ್ನು (ಪುರುಷಾರ್ಥತ್ರಯಗಳ ಸುಖವನ್ನೂ) ಸೂಚಿಸುತ್ತದೆ. ಆದ್ದರಿಂದ ಈ ಶಬ್ದಾರ್ಥವನ್ನು ಕೇವಲ ಗಂಡ–ಹೆಂಡಿರ ಅಲ್ಪಕಾಲಿಕ ಕಾಮಸುಖಕೆ, ಸೀಮಿತಗೊಳಿಸಿ ಸಂಕುಚಿತಗೊಳಿಸಬಾರದು. ಏಕೆಂದರೆ ಕವಿಯು ಹೇಳುವಂತೆ ಇನ್ಬಮ್ ಎಂಬ ಶಬ್ದ ಇನಿಮೈ (ಇನಿದುಸಿಹಿ) ಇನ್ಬಮ್ (ಸಮಾಜ ಅಥವಾ ಸಮಷ್ಟಿ) ಇಂದಿರನ್ (ಇಂದ್ರ=ಶಕ್ತಿ, ಧೀಶಕ್ತಿ, ಪ್ರಜ್ಞಾಶಕ್ತಿ, ಸಮಷ್ಟಿ ಸಂರಕ್ಷಕ ಶಕ್ತಿ, ಪುರುಷಾರ್ಥತ್ರಯ ದೈವತ ಎನ್ನಲಾಗಿದೆ). ಪ್ರಾಚೀನ ಭಾರತದ ರಾಷ್ಟ್ರೀಯ ದೈವ ಎಂಬ ಸಾಂಸ್ಕೃತಿಕ ಶಬ್ದ ಪ್ರತಿಮೆಗಳೊಡನೆ ಸಂಬಂಧವುಳ್ಳದ್ದಾಗಿದೆಯೆಂದು ಭಾಷಾ ಸಂಶೋಧಕರ ಅಭಿಪ್ರಾಯವಾಗಿದೆ. ಇದಕ್ಕೆ ಉದಾಹರಣೆಯಾಗಿ ಕೃತಿಕಾರರೇ ತಮ್ಮ ಕೃತಿಯಲ್ಲಿ ಬಳಸಿರುವ ಪದ ಸಮುಚ್ಚಯ ಇನ್ಬತ್ತುಳ್ ಇನ್ಬಮ್ (ಪರಮ ಸುಖ–ಶಾಶ್ವತ ಸುಖ) ಎಂಬುದು. ಕುಟುಂಬ ಸಮಾಜಕ್ಕೂ, ಸಮಾಜ ಸಮಷ್ಟಿಗುಣ, ಸಮಷ್ಟಿ ಸಮಾಜಕ್ಕೂ ಮತ್ತು ಸಮಾಜ ಕುಟುಂಬಕ್ಕೆ ಪರಸ್ಪರ ಶುಭ ಕಾಮನೆಗಳನೊದಗಿಸಿ ಒಳಿತನ್ನುಂಟು ಮಾಡಿ ಮಾನವ ಜನ್ಮದ ಕೃತಾರ್ಥತೆ ಹೊಂದುವುದೇ ಇನ್ಬತ್ತುಳ್ ಇನ್ಬಮ್ (ಮಹಾಸುಖ=ಮೋಕ್ಷ) ಎಂಬುದು ಈ ಸಾಂಸ್ಕೃತಿಕ ಪದ ಸಮುಚ್ಚಯದಲ್ಲಿ ಅಡಗಿರುವ ಅಂತರಾರ್ಥ. ಇದುವೇ ಸತ್ಯಂ, ಶಿವಂ, ಸೌಂದರ್ಯ. ಇದೇ ಸತ್, ಚಿತ್, ಆನಂದವೆಂಬ ವಿಶ್ವಕುಟುಂಬತ್ವದ ಈ ತತ್ತ್ವವನ್ನು ಪ್ರತಿನಿಧಿಸುತ್ತದೆ ಎನ್ನಲಾಗಿದೆ.

ಪ್ರಣಯ ಕಾವ್ಯದ ನೋವು, ನಲಿವು, ಸೊಗಸುಗಳ ಭಾವನೆಗಳನ್ನು ಕೆರಳಿಸುವಂತಿವೆ, ಅರಳಿಸುವಂತಿವೆ. ಧರ್ಮ–ಅರ್ಥಗಳಂತೆ ಕಾಮವೂ ಮಾನವನ, ಸಮಾಜದ ಉನ್ನತಿಗೆ ಸಾಧನವಾಗಬಲ್ಲುದೆಂಬುದನ್ನು ವಳ್ಳುವರರು ಸೂಕ್ಷ್ಮವಾಗಿ ತಮ್ಮ ಪದ್ಯ ಪಾದಗಳಲ್ಲಿ ಹೇಳಿದ್ದು ಹೀಗೆ–

ಹೂವಿಗಿಂತ ಹಗುರವೆನಿಸುವುದು ಒಲವು
ಅದರ ಸವಿಯುಣ್ಣುವವರು ಕೆಲರು ಮಾತ್ರ

ಬೆಂಕಿ ತನ್ನ ಸೋಂಕೆ ಸುಡುವುದಲ್ಲದೆ ಕಾಮದಂತೆ
ಅಗಲಿ ದೂರವಿರ್ಪವಿರನು ಸುಡದು

ಮದ್ಯವು ತನ್ನ ರುಚಿ ನೋಡಿದರಿಗಲ್ಲದೆ
ಕಾಮದಂತೆ ಕಂಡವರಿಗೆ ಮಾದಕತೆ ತರದು

ಕಣ್ಮುಚ್ಚಿದ ಕನಸಿನಲಿ ನನ್ನ ತೋಳ ಮೇಲೊರಗಿರುವವನು
ಕಣ್ಣ ಬಿಟ್ಟೊಡನೆಯೆ ನನ್ನ ಎದೆಯೊಳಗಡಗುವವನು



ಇವು ನಾಯಕ–ನಾಯಕಿಯರ, ಪ್ರಣಯ–ಪ್ರೇಮದ ವಿವಿಧ ಸ್ತರಗಳನ್ನು ನಿರ್ವಹಿಸುತ್ತದೆಯೆಂಬುದು ತಿಳಿದು ಬರುತ್ತದೆ. ಚೆಲುವೆಯ ಪ್ರೇಮವನ್ನು ಪರೀಕ್ಷಿಸುವುದು–

ಅಪರಿಚಿತರಂತೆ ಸಾಮಾನ್ಯ ನೋಟವನು ಬೀರುವುದು
ಅನುರಾಗವುಳ್ಳವರ ಬಳಿಯಿರುವ ಕಲೆ

ನಲ್ಲನಲ್ಲೆಯರ ಕಂಗೊಳೊಂದಾಗಿ ಒಲವರದ ನುಡಿಯನಾಡಲು
ಅವರ ಬಾಯ್ನುಡಿಗಳು ವ್ಯರ್ಥವಾಗುವವು

ರಹಸ್ಯದಿಂದ ನನ್ನ ನೋಡುವ ಇವಳ ಕಂಗಳ ಕಿರುನೋಟದ ಸುಖವು
ಕಾಮಸುಖದ ಅರ್ಧ ಭಾಗಕ್ಕಿಂತ ಅಧಿಕವಹುದು

ಎರಡು ನೋಟಗಳಿರುವವು ಕಾಡಿಗೆಯಿಟ್ಟ ಈ ಕಾಮಿನಿಯ ಕಂಗಳಲ್ಲ
ಒಂದು ನೋಟವು ನೋವತಹುದು, ಮತ್ತೊಂದದಕೆ ಮದ್ದಾಗಿಹುದು

ಪ್ರೇಮಾಂಕುರದ ಛಾಯೆಯನ್ನು ಈ ಪದಗಳಲ್ಲಿ ಒಡಮೂಡಿಸಿದ ಬಗೆಯಿದೆ. ರತಿಸುಖದ ವರ್ಣನೆಯನ್ನು ನಾಯಕನ ಬಾಯಿಂದ ಹೇಳಿಸಿದ್ದುದು ಹೀಗಿದೆ.

ಅಗಲಿದರೆ ಸುಡುವ, ಸನಿಹವಿರೆ ತಂಪೀವ
ಬೆಂಕಿಯನು ಎಲ್ಲಿಂದ ಪಡೆದಳಿವಳು

ನೋವನ್ನು ನಿವಾರಿಸುವ ಮದ್ದು ಬೇರೊಂದಾಗಿಹುದು
ಈ ಚೆಲುವೆ ತನ್ನಿಂದಾದ ನೋವಿಗೆ ತಾನೇ ಮದ್ದಾಗಿಹಳು

ಅಮೃತದಿಂದಾದ ತನ್ನ ತೋಳ್ಗಳಿಂದ ನನ್ನನ್ನೀ ಮುಗ್ಧೆ ಮುಟ್ಟಿ
ಅಪ್ಪುವಾಗಲೆಲ್ಲಾ ಚೇತರಿವುದೆನ್ನ ಜೀವ

ಪ್ರೇಮ ಕಲಹ, ಕಲಹ ದಮನ, ರತಿಮಿಲನ ಇವು ಮೂರು
ಮದುವೆಯಾದವರು ಪಡೆದ ಫಲಗಳು

ಓದಿದಂತೆಲ್ಲಾ ಪೂರ್ವ ಅಜ್ಞಾನವು ಅಗಲುವಂತಿಹುದು
ಕೂಡಿದಂತೆಲ್ಲಾ ಈ ಕಾಮಿನಿಯ ಕಾಮ ಸುಖವು

ಈ ಪದಗಳಲ್ಲಿ ರತಿ–ಸುಖ, ಕಾಮ–ಪ್ರೇಮದ –ಸಿಹಿ–ಸುಖ ತೃಪ್ತಿಯನ್ನು ಬಹು ರಮ್ಯವಾಗಿ, ಯಥಾವತ್ತಾಗಿ, ಅನುಭವಜನ್ಯವಾಗಿ ಚಿತ್ರಿಸಿರುತ್ತಾರೆ. ಗಂಡು ಹೆಣ್ಣಿನ ವರ್ಣನೆ, ಪ್ರಣಯ, ವೈಶಿಷ್ಟ್ಯ, ಅಗಲುವಿಕೆ, ವಿರಹ ವೇದನೆ, ನೇತ್ರಗಳ

ಪ್ರಲಾಪ, ಏಕಾಂತ ಶೋಕ ಈ ಮುಂತಾದ ಅಧ್ಯಾಯಗಳಲ್ಲಿ ನಾಯಕ–ನಾಯಕಿಯರ ಭಾವನೆಗಳನ್ನು ವಳ್ಳುವರರು ಅರ್ಥವತ್ತಾಗಿ ನಿರೂಪಿಸಿದ್ದಾರೆ. ಸನ್ಯಾಸಿ ಜೀವನಕ್ಕಿಂತಲೂ ಸಂಸಾರ ಜೀವನವೇ ಮಿಗಿಲು ಎನ್ನುವಂತೆ ಚಿತ್ರಿಸಿದ್ದಾರೆ.

**ಲೋಕದ ಸಹಬಾಳ್ವೆಗೆ ವಳ್ಳುವರರ ಸಂದೇಶ:**

ಜೀವನದಲ್ಲಿ ಹಸನಾದ ಬದುಕಿಗೆ ಪ್ರಾಮುಖ್ಯತೆಯಿದೆ. ದಿಟದ ಪ್ರೇಮ, ಅನುರಾಗ ಮದುವೆಯಾದ ದಂಪತಿಗಳಲ್ಲಿ ಮೇಳವಿಕೆಯಾಗಿರಬೇಕು. ಚೆಲುವು ಒಲವುಗಳ ಸಂಯೋಗ ಸುಖದಿಂದಾದ ಸೌಂದರ್ಯಯೋಗವಾಗಿದೆ. ಪ್ರೇಮವನ್ನು ಸೂಚಿಸದ ನೋಟ, ನೋವು ಪ್ರೇಮವನ್ನು ಸೂಚಿಸುವ ಇನ್ನೊಂದು ನೋಟ ಅದಕ್ಕೆ ದಿವ್ಯ ಔಷಧವಿದ್ದಂತೆ. ವಿವಾಹಿತರ ಬದುಕು ಕಾಮನ ಕಡಲು. ಪ್ರಿಯತಮನ ಪ್ರೇಮದಾಲಿಂಗನ, ಸಂಸಾರ ಸಾಗರವನ್ನು ದಾಟಲು ದೈವೀಕಾರುಣ್ಯವೆಂಬುದೊಂದು ದೋಣಿ ಇದ್ದಂತೆ. ಅದರಂತೆ ಕಾಮ ಸಾಗರವನ್ನು ದಾಟಲು ಸತಿಗೆ ಪತಿಯ ಪ್ರೇಮವೇ ದೋಣಿ. ದಾಂಪತ್ಯ ಜೀವನವು ದೇಹ–ದೇಹಗಳ ಮಿಲನ ಮಾತ್ರವಲ್ಲ; ಹೃದಯ ಹೃದಯಗಳ ಮಿಲನ ಎನ್ನುವುದೇ ಇದರ ಅಂತರಾರ್ಥ.

ಇದು ಪ್ರೇಮಿಗಳ ಆಂತರಿಕ ಜೀವನ ರಹಸ್ಯ. ಕಲ್ಪನಾ ಲೋಕದಲ್ಲಿ ಕವಿಗಳು ವಿಹರಿಸುವಂತೆ ಪ್ರೇಮಿಗಳೂ ವಿಹರಿಸುತ್ತಾರೆ. ಕಲ್ಪನೆಯು ಕವಿಗಳಿಗೆ ಕಾವ್ಯರಸ ಧಾಮ, ಪ್ರೇಮಿಗಳಿಗೆ ಕಾಮರಸ ಧಾಮ. ಕಾಳಿದಾಸನ 'ಮೇಘದೂತ' ಕಾವ್ಯದ ನಾಯಕನು ಮೇಘವನ್ನು ದೂತನನ್ನಾಗಿ ಕಳುಹಿಸಿದನಂತೆ. ತಿರುವಳ್ಳುವರರು ರಚಿಸಿರುವ ಈ ಶೃಂಗಾರ ಕಾವ್ಯ ಭಾಗ ಕಾಮದ ನಾಯಕನು ಕಳುಹಿಸಿದ ದೂತನು 'ಸ್ವಪ್ನ'. ಅಗಲಿದ ಪ್ರೀಯ–ಪ್ರೇಯಸಿಯರನ್ನು ಒಂದೂಗೂಡಿಸುವುದು ಸ್ವಪ್ನ ಸಾಮ್ರಾಜ್ಯ ಎಂಬುದಾಗಿ ಚಿತ್ರಿಸಿರುತ್ತಾರೆ.

ತಿರುವಳ್ಳುವರರು ಈ ಲೋಕದ ಸಹಬಾಳ್ವೆಗೆ ಹಲವು ಕುರುಳುಗಳಲ್ಲಿ ನಾಂದಿ ಹಾಡಿದ್ದಾರೆ. –

ಕರಬುವಗೆ ಬೇರೆ ಹಗೆ ಇಲ್ಲವಾದೊಡೇನು
ಅದೇ ಸಾಕು ಕೇಡು ತಪ್ಪದೇ ಬರಲು

ತನಗಿಲ್ಲವೆಂದು ಪರರಿಗೆ ಕೇಡೆಣಿಸದಿರು
ಎಣಿಸೆ ಬಡತನವು ಬಿಡದೆ ಬಾಧಿಸುವುದು

ಕೊಟ್ಟು ನಲಿವ ಸುಖವನು ಕಂಡರಿಯರಲ್ಲ!
ಹಣವ ಬಯ್ತಿಟ್ಟು ಕಳೆದ ಕಲ್ಲು ಮನಸಿನ ಕೃಪಣರು!



ತೊಟ್ಟ ಉಡುಗೆಯು ನಡುವಿನಿಂ ಜಾರೆ
ತಟ್ಟನೆ ಕೈಯದನು ಪಿಡಿದುಕೊಳ್ವಂತೆ ಕಳೆಯು.

ತನಗಿಲ್ಲದಿದ್ದರೂ ಮತ್ತೊಬ್ಬರಿಗೆ ಕೇಡನ್ನುಂಟು ಮಾಡದಿರು, ಕೊಟ್ಟು ನಲಿಯುವ ಸುಖವು ಶಾಶ್ವಾತವಾದುದು. ಹೀಗೆ ಹಲವು ಕುರುಳುಗಳಲ್ಲಿ ಅದನ್ನು ವಿಶದಪಡಿಸಿದ್ದಾರೆ. ಜೀವನದಲ್ಲಿ ನಡೆ–ನುಡಿಗಳೆರಡೂ ಶುದ್ಧವಾಗಿರಬೇಕು. ಕೃತಿಗಿಂತ ಮಾತೇ ಮೇಲಾದವರು ಈ ಲೋಕದಲ್ಲಿ ಬಹುಮಂದಿ ಜನರು ಉಪದೇಶಗಳನ್ನು ಕೊಡುವಷ್ಟು ಧಾರಾಳವಾಗಿ ಬೇರೇನನ್ನು ಕೊಡುವುದಿಲ್ಲ. ಅಂಥವರನ್ನು ತಿರುವಳ್ಳುವರರು–

'ನಗೆಯಲಿ ಸವಿ ಸವಿ ಮಾತನಾಡಿ ಕೆಳೆಯನು ಬೆಳೆಸಲರಿಯದವರು– ಮತ್ತು ಹಗೆ ಮಾತುಗಳಾಗಿ ಒಡೆಯಲೆತ್ನಿಸುವರು' ಎಂದು ವ್ಯಂಗ್ಯ ಮಾಡಿದ್ದಾರೆ. ಒಡೆದು ಬಾಳುವ ನೀತಿಗಿಂತ ಕೂಡಿ ಬಾಳುವ ನೀತಿ ಲೋಕದ ರೀತಿಯಾಗಿರಬೇಕೆಂಬುದು ವಳ್ಳುವರರ ಆಶಯವಾಗಿದೆ.

ಎಪ್ಪೊರುಳ್ ಎತ್ತನ್ನೆತ್ತಾಯಿನುಂ ಅಪ್ಪೊರುಳ್
ಮೇಯ್ ಪೊರುಳೆ ಕಾಣ್ಬಪರಿವು

ಯಾವ ವಸ್ತು ಎಷ್ಟು ಬಗೆಯಲಿ ತೋರಿಕೊಂಡರೂ ಆ ತೋರಿಕೆಯನ್ನೇ ನಿಜವೆಂದು ಭಾವಿಸದೆ ಅದರ ಪಾರಮಾರ್ಥಿಕ ಹುರುಳನ್ನು ಕಾಣುವುದೇ ಅರಿವು ಎನ್ನುತ್ತಾರೆ ವಳ್ಳುವರರು. ಇದನ್ನೇ "ಅರಿವೇ ಗುರು" ಎಂದರು ಶಿವಶರಣರು. ಸಾಮಾನ್ಯರು "ಕುರಿವಿಂಡು ಕಬ್ಬಿನ ಉಲಿವ ತೋಟವ ಹೊಕ್ಕು ತೆರವನರಿಯದೆ, ತನಿರಸದ ಹೊರಗಣ ಎಲೆಯನು ಮೇದಂತೆ' ಉತ್ಪ್ರೇಕ್ಷಿತ ಭಾವನೆಗಳನ್ನೇ ನಿಜವೆಂದು ಭಾವಿಸಿ ನಂಬಿಕೊಂಡು ಬಂದಿದ್ದಾರೆ. ತಿರುವಳ್ಳವರರು ಅದನ್ನು ತಿರಸ್ಕರಿಸಿ, 'ನಿಜದ ಹುರುಳನು ಕಂಡರಿತವರು ತಿಳಿವರು ಮರುಹುಟ್ಟಿದ ನೆಲೆಯನು' ಎಂದು ಈ ಲೋಕದ ಬದುಕನ್ನೇ ಪ್ರಯೋಗಶಾಲೆ ಎಂದು ಭಾವಿಸಿ ಲೌಕಿಕ ಜೀವನಕ್ಕೆ ಅರ್ಥ ತುಂಬುವ ಕೆಲಸ ಮಾಡಿದ್ದಾರೆ. ಬಸವಣ್ಣ, ಸರ್ವಜ್ಞ, ವೇಮನ ಮೊದಲಾದ ಸಂತರಂತೆ ತಿರುವಳ್ಳುವರರು ವಾಸ್ತವಿಕತೆಯ ನೆಲೆಗಟ್ಟಿನ ಮೇಲೆ ಆದರ್ಶದ ಭವ್ಯ ಕಟ್ಟಡವನ್ನು ಕಟ್ಟಿದ್ದಾರೆ. "ಮನುಜ ಕುಲಂ ತಾನೊಂದೇ ವಲಂ' ಎಂಬ ಮಾತಿನಂತೆ ವಿಶ್ವ ಭ್ರಾತೃತ್ವದ ಸಂದೇಶವನ್ನು ಸಾರಿದ್ದಾರೆ. ಮನುಷ್ಯ ಮನುಷ್ಯ ಸಂಬಂಧಗಳು, ಮನುಷ್ಯ–ಪ್ರಾಣಿ ಸಂಬಂಧಗಳು, ನಿಸರ್ಗ ಸಹಜವಾದ ಅಂಶಗಳೆಂಬುದನ್ನು ಹಲವು ಧರ್ಮಗಳ ಸಾರದಿಂದ ಶೋಧಿಸಿ ತೆಗೆದು ಹೊಸ ನೀತಿ ಸಂಹಿತೆಯನ್ನು ರೂಪಿಸಿ, ವಿಶ್ವಮಾನ್ಯರಾಗಿ ಬಾಳಿದ್ದಾರೆ, ಬಾಳುತ್ತಿದ್ದಾರೆ.

ಒಟ್ಟಿನಲ್ಲಿ ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮ, ಅರ್ಥ, ಕಾಮ ಈ ಮೂರನ್ನು ಮನುಕುಲದ ಒಳಿತಿಗೆ ಹಿಡಿದಿಟ್ಟ ದೀವಿಗೆಗಳಾಗಿವೆ. ಆ ಬೆಳಕಿನಲ್ಲಿ ಸಾಗುವುದೊಂದೇ ನಮಗುಳಿದ ಮುಮ್ಮಾರ್ಗ!!

ಮುಂದಿನ ಅಧ್ಯಾಯದಲ್ಲಿ ಈ ಮೂರೂ ವಿಭಾಗಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ.

■■

## ಅಧ್ಯಾಯ–೫

## ವೇಮನ ಯೋಗಿಯ ಚರಿತಾಮೃತ

ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿದರೆ ಮಹಾಯೋಗಿ ವೇಮನನ ವ್ಯಕ್ತಿತ್ವ ಅಗಾಧವಾದುದು ಎಂಬುದಾಗಿ ಗೋಚರವಾಗುತ್ತದೆ. ಪುಣ್ಯ ಪುರುಷರ ಸ್ಥಾನದಲ್ಲಿ ಕಂಗೊಳಿಸುವಂಥ ಆಧ್ಯಾತ್ಮ ರತ್ನ! ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

ವೇಮನರ ಬಗೆಗೆ ಚಾರಿತ್ರಿಕ ಅಂಶಗಳು ಸಿಗುವುದು ಕಡಮೆ. ಸ್ವತಃ ಅವರೇ ತಮ್ಮ ಪದಗಳಲ್ಲಿ ಕೆಲವು ಸಂಗತಿಗಳನ್ನು ಹೇಳಿದ್ದುಂಟು, ವರಯೋಗಿಯ ಮೈಮೇಲೆ ತೊಟ್ಟ ಬಟ್ಟೆಯಿರಲಿಲ್ಲ. ಅವರು ನಿರಹಂಕಾರಿ, ಅವಧೂತರಾಗಿಯೇ ಬಾಳಿದವರು. –"ತಾಯಿಯ ಉದರದಿಂದ ತಾನು ಜನಿಸಿದಾಗ ಆದಿಗಿಲ್ಲ ಬಟ್ಟೆ, ಅಂತ್ಯಕಿಲ್ಲ ಬಟ್ಟೆ, ನಡುವೆ ಬಟ್ಟೆಯುಡಲು ನಗೆಪಾಟಲಲ್ಲವೇ" ಎಂಬುದಾಗ ಪ್ರಶ್ನಿಸಿದರಲ್ಲದೇ * 'ಲಜ್ಜೆ ತೊರೆಯುವ ತನಕ ಲಭಿಸದು ಶಿವಸೌಖ್ಯ' ಎಂದೂ ಸಾರಿದ್ದಾರೆ. ಸಕಲ ಯಜ್ಞ–ಯಾಗಗಳಲಿ, ಸಕಲ ತೀರ್ಥಯಾತ್ರೆಗಳಲಿ, ಮಂಡೆಯನು ಬೋಳಿಸಿದೊಡೆ ಫಲವಿರದು ಎಂದು ಡಂಭಾಚಾರಿಗಳನ್ನು ವೇಮನ ಯೋಗಿಯವರು ತಿರಸ್ಕರಿಸಿದರು. "ಉರ್ವಿವಾಸಿಗಳಿಗೆಲ್ಲ ಒಂದೇ ತಾಟನಿಟ್ಟು ಅಳಸಿ, ಕುಲದ ಭಾವ ಬಳಸಿ, ಸ್ನೇಹ ಸಿರದ ಮೇಲೆ ಕರವ ಇರಿಸಿ ಉಣಲು ಹೇಳಿ" ಎಂದು ಸಾರಿದ ವೇಮನ ಅಪ್ಪಟ ಸಮಾಜವಾದಿ, ಸಮತಾವಾದಿ, ಮಾನವರೆಲ್ಲ ಒಂದೇ ಅವರೆಲ್ಲರೂ ಸೋದರಭಾವವನ್ನೇ ಬಿತ್ತಿ ಬೆಳೆಯಬೇಕೆಂದುದಾಗಿ ಪ್ರತಿಪಾದಿಸಿದ್ದಾರೆ. ಅಂದರೆ ಮಾನವ ಕುಲವೊಂದೇ ಎಂದ ಮಹಾಕವಿ ಪಂಪನ ಮಾತನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಅಂದರೆ ವೇಮನರ ಪ್ರಕಾರ ಹುಟ್ಟಿನಿಂದ ಯಾರೂ ದೊಡ್ಡವರಲ್ಲ, ಸಣ್ಣವರಲ್ಲ, ಮಾನವ ಮಾನವರಲ್ಲಿ ಮೈತ್ರಿ ಬೆಸೆದು ಬೆಳೆಯಬೇಕೆಂದು ಬಯಸಿದರು.

ವೇಮನರು ರಾಜವಂಶದಲ್ಲಿ ಜನಿಸಿದವರು. ಬಾಲ್ಯದಿಂದಲೇ ವಿವಿಧ ಯೋಗ ಪ್ರಕಾರಗಳಲ್ಲಿ ತಲ್ಲೀನರಾದವರು. ಪ್ರಾರಂಭದಲ್ಲಿ ಇವ್ವಟೂರ ಸೋಮಸೇಖರ ಗುರುಗಳಲ್ಲಿ ಅಧ್ಯಯನಗೈದು ತಾರುಣ್ಯ ಕಾಲದಲ್ಲಿ ರಸಸಿದ್ಧರ ಸಹವಾಸದಲ್ಲಿ ಹಠಯೋಗಿಯಾಗಿ ಬಾಬಾ–ಭೈರಾಗಿಗಳ ಜೊತೆಗೂಡಿ ಲಯಯೋಗ ಮತ್ತು ತಾರಕ ಲಂಬಿಕಾಯೋಗಿಗಳ ಆಶೀರ್ವಾದದ ಬಲದಿಂದ ಭಕ್ತಿಯೋಗ ಮತ್ತು

ರಾಜಯೋಗಗಳಲ್ಲಿ ಪಾರಂಗತರಾದವರು. 'ಹಾಯಾಗಿರೆ ಇಹದಿ ಹೇಮಕಾರಕ ವಿದ್ಯೆ-ಪರದಲ್ಲಿ ಸುಖಿಸಲು ಬಹ ವಿದ್ಯೆ" ಎಂದು ಸಾರಿ ಹೇಳಿದ ವೇಮನರು 'ವಿಶ್ವದ ಒಳ-ಹೊರಗೆ ತಾನೇ ವಿಶ್ವಾತೀತನು ಮೇಣಾ ವಿಶ್ವಂಭರಣ್ಯೆ, ವಿಶ್ವಗಳಿಗೆ ಬೇಕಾಗುತ, ವಿಶ್ವದೊಳಗೆ ಬೆಳಗುತಿರುವ ಶಾಶ್ವತ" ದೇವನು ವಿಶ್ವದೊಳಗೂ ಹೊರಗೂ ತಾನಾಗಿದ್ದಾನೆಂದು ಅರುಹಿದ್ದಾರೆ. ಅವನು ವಿಶ್ವದ ಅತೀತನೂ ಆಗಿದ್ದಾನೆ. ಆತ ವಿಶ್ವವನ್ನೆಲ್ಲಾ ಆವರಿಸಿದ್ದಾನೆ. ಆತನಿಂದಲೇ ವಿಶ್ವ ಬೆಳಗುತ್ತಲಿದೆ. ಅವನು ಶಾಶ್ವತ. ಆತನನ್ನು ಪಡೆಯಲು ಕರ್ಮ ಮಾಡಬೇಕು. ಕರ್ಮವೆಂದರೆ ಕಾಯಕ, ಕಾಯಕ ಮಾಡುವುದರಲ್ಲಿ ಮಾನವನಿಗೆ ಹಕ್ಕಿದೆ. "ಕಾಯಕದಲ್ಲಿಯೇ ಕೈಲಾಸ" ಕಂಡವರು ಶರಣರು. ಕಾಯಕವೇ ದೇವರು ಎಂದಂತೆ! ಕಾಯಕ ಮಾಡುವ ಅಧಿಕಾರ ಮಾನವನಿಗಿದೆ. ಆದರೆ ಅವನಿಗೆ ಫಲಭೋಗದಲ್ಲಿ ಅಧಿಕಾರವಿಲ್ಲ. ಕರ್ಮಫಲ ಹೀಗೆಯೇ ಆಗಬೇಕೆಂದು ನಿರ್ಧರಿಸುವುದಿಲ್ಲ. ಆದುದರಿಂದ ಫಲಪ್ರಾಪ್ತಿಗಾಗಿ, ಫಲಭೋಗಗಳ ಆಸೆಪಡದೇ ಕರ್ಮ ಮಾಡಬೇಕೆಂಬುದಾಗಿ ಯೋಗಿ ವೇಮನರೂ ಹೇಳಿದ್ದಾರೆ.

ವೇಮನರು ತಾರತಮ್ಯ ವಿರೋಧಿ, ಜಾತೀಯತೆ ವಿರೋಧಿ, ಅದಕ್ಕಾಗಿ ರಾಮನಾಮ ಪಠನಗೈದು ವಾಲ್ಮೀಕಿ ಜಗದಿ ಬೇಡ ತಾನು ಬ್ರಾಹ್ಮಣನಾದ, ಕುಲವು ಘನವು ಅಲ್ಲ, ಗುಣವೇ ಘನವೆನ್ನಿರೋ ಎಂದು ಸಾರಿದವರು ವೇಮನ. ಜೀವನದಲ್ಲಿ ಎಲ್ಲರೂ ಸುಖವನ್ನೇ ಎಲ್ಲರೂ ಬಯಸುವವರು. ಆದರೆ ಜೀವನದಲ್ಲಿ ಸುಖವಾಗಿರಲು ಆಸೆಯನ್ನು ಗೆಲ್ಲಬೇಕೆಂದು ಸಾರುವ ವೇಮನರು ಆಸೆಯೆಂಬ ಲತೆಯು ನಾಶಗೊಳಿಸದ ತನಕ ಮೋಕ್ಷವನ್ನೇ ಕಾಣಲಾರ ಎನ್ನುತ್ತಾರೆ. ಹಾಗೆಯೇ ಕೋಪವನ್ನು ಗೆಲ್ಲಬೇಕಾದರೆ ಕೋಪ ನಿಗ್ರಹಿಸಬೇಕು. ಕೋಪ ನಿಗ್ರಹಿಸದಿದ್ದರೆ ಮಾನವನ ಯಾವುದೇ ಕೋರಿಕೆಯೂ ಫಲಿಸದೆಂದು ಹೇಳಿದ್ದಾರೆ. ಬಾಳು ಬಾಳುಗೊಡು ಎಂಬ ಸಿದ್ಧಾಂತ ವೇಮನರದು. ಸತ್ಯ ಕಾಣದಂತೆ ಬುದ್ಧಿಗೆ ಹೊದಿಸಿದ ಮುಚ್ಚಳವೇ ಮೋಹ, ಮದ, ಮತ್ಸರ ಮುಂತಾದವುಗಳನ್ನು ಗೆಲ್ಲಬೇಕೆಂಬುದನ್ನು ಜೀವನದ ಗುರಿಯಾಗಿರಿಸಿಕೊಂಡು ಬದುಕಲು ಕರೆ ಕೊಟ್ಟಿದ್ದಾರೆ.

ಯೋಗಿಪ್ರವರ ವೇಮನರು ಯೋಗಿಯಾದರೂ ಸಂಸಾರಸ್ಥರು ಹೇಗಿರಬೇಕೆಂಬುದನ್ನು ಪ್ರತಿಪಾದಿಸಿದ ಬಗೆ ಅಚ್ಚರಿಯಾಗಿದೆ. ಅವರು ಸಂಸಾರ ಸಾಗರವನ್ನು ಸುಖದ ಸಾಗರ ಮಾಡಬೇಕೆಂದು ಬೋಧಿಸಿದರು. ಅದಕ್ಕಾಗಿ "ತಾಯಿಯೇ ಪಾರ್ವತಿಯು-ತಂದೆಯೇ ಶಂಭುವು", ತಾನು ಹುಟ್ಟಿದ ಮನೆಯೇ ತನಗೆ ಕೈಲಾಸ" ಎಂದು ಸಾರಿದರು. "ಒಂದಾದ ದಂಪತಿ ಚಂದದ ಸಂಸಾರ, ನಂದನನ ನಡೆ ನುಡಿ ನಂದಿನಿಯಳ ಎಂದರಲ್ಲದೇ 'ಹೆಂಡತಿಯನೇ ಆತ್ಮ ಕಣಾ-



ಹೆಂಡತಿಯನೇ ತಾಯಕಣಾ" ಎಂದು ಹೆಂಡತಿಯ ಮಹತ್ವ ಸಾರಿದರಲ್ಲದೆ "ತಂದೆ ತಾಯಿ ನೋಯೆ ತಪವು ಸಿದ್ಧಿಸುವುದೇ" ಎಂದು ಹೇಳಿ ಗೃಹಸ್ಥ ಪಾಲಿಸಬೇಕಾದ ಧರ್ಮವನು ಹೇಳಿ 'ಗುಣವತಿಯರೇ ಯುವತಿ ಗೃಹವು ಚೊಕ್ಕಟಯ್ಯ ಬೀಳು ಮನೆಯ ದೀಪ ಬೆಳಗಿದಂತೆ, ದೇವಿಯಪ್ಪ ಗೃಹವು ದೇವಾಲಯವಯ್ಯಾ ಎಂದೂ ಸಾರಿದರು. ಹೀಗೆ ಇವರ ಪ್ರತಿಯೊಂದು ಸಾಲೂ ಮಾನವನ ಜೀವನದ ಸಾರ್ಥಕತೆ ಮತ್ತು ಸಾಫ್ಯಲತೆಯನ್ನು ಬಯಸಿ ಘೋಷಿಸುತ್ತೇವೆ.

ಈತ ರೆಡ್ಡಿ ಸಮಾಜದ ಕುಲತಿಲಕನಾಗಿ ಮಹಾಯೋಗಿಯಾದವನು. ಅವನು ಸರ್ವಜ್ಞನಂತೆಯೇ ಲೋಕಪ್ರಿಯನಾಗಿದ್ದಾನೆ. ವೇಮಣ್ಣನ ಚರಿತ್ರೆ ರೋಚಕವಾಗಿದೆ. ಈತ ರಾಜಮನೆತನಕ್ಕೆ ಸೇರಿದವನು. ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯಲ್ಲಿರುವ ಕೊಂಡವೀಡುವಿನಲ್ಲಿ ರೆಡ್ಡಿ ಜನಾಂಗದ ಒಂದು ರಾಜವಂಶದವರು ಆಳುತ್ತಿದ್ದರು. ಇವರು ಬಹು ಬಲಾಢ್ಯರಾಗಿ ಕೃಷ್ಣಾ ಮತ್ತು ಗೋದಾವರಿ ಜಿಲ್ಲೆಗಳ ಬಹು ಭಾಗವನ್ನು ಆಕ್ರಮಿಸಿದ್ದರು. ರಾಜಕೀಯವಾಗಿ ಕಾಕತೀಯ ಸಾಮ್ರಾಜ್ಯ ಪತನವಾದ ನಂತರ ಧೈರ್ಯಶಾಲಿಯಾಗಿದ್ದ ಪ್ರೋಲಯ ವೇಮಾರೆಡ್ಡಿಯು ಅದ್ದಂತಿಯನ್ನು ರಾಜಧಾನಿಯಾಗಿ ಮಾಡಿಕೊಂಡು ೧೩೨೪ ರಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪನೆ ಮಾಡಿದ. ಪ್ರೋಲಯ ವೇಮಾರೆಡ್ಡಿಯು ರಾಜ್ಯ ಸ್ಥಾಪನೆ ಮಾಡಿದ ಹನ್ನೆರಡು ವರುಷಗಳ ನಂತರ ದಿಲ್ಲಿ ಆಡಳಿತದಲ್ಲಿ ಸೇನಾಧಿಕಾರಿಯಾಗಿ ಅನುಭವ ಗಳಿಸಿದ್ದನು. ಹುಕ್ಕ-ಬುಕ್ಕ ಎಂಬ ಸಹೋದರರು ಮಹಾತಪಸ್ವಿ ವಿದ್ಯಾರಣ್ಯರ ಅನುಗ್ರಹದಿಂದ ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರು. ರೆಡ್ಡಿಯವರು ವಿಜಯನಗರದ ಅರಸು ಹಿಂದೂ ಧರ್ಮದ ಪಾಲಕರಾಗಿ ಅದರ ರಕ್ಷಣೆಗೆ ಅರ್ಪಿತರಾದರು. ರೆಡ್ಡಿಯವರು ಮೊದಲು ವೇದಸಮ್ಮತ ಶೈವ ಧರ್ಮಪಾಲನೆ ಮಾಡಿದರೆ ಮುಂದೆ ಭಾಗವತ ಪಂಥದ ಅನುಯಾಯಿಗಳಾದರು ಎಂದು ತಿಳಿದು ಬರುತ್ತದೆ. (ವೇಮನ ವಿಶ್ವಗೀತ -ಎಸ್.ಆರ್.ಪಾಟೀಲ-ಪುಟ-೭).

ಪೋಲಯ ವೇಮಾರೆಡ್ಡಿಯಿಂದ ಕ್ರಿ.ಶ. ೧೩೨೪ ರಲ್ಲಿ ಪ್ರಾರಂಭವಾದ ರೆಡ್ಡಿ ರಾಜವಂಶವು ರಾಚವೇಮಾ ರೆಡ್ಡಿಯವರೆಗೆ ಕ್ರಿ.ಶ. ೧೪೨೪ ರಲ್ಲಿ ಒಂದು ಶತಮಾನದವರೆಗೆ ಆಳ್ವಿಕೆ ಮಾಡಿ ಮುಕ್ತಾಯವಾಯಿತೆಂಬುದು ಕಂಡು ಬರುತ್ತದೆ. 'ಆಂಧುಲ ಚರಿತ್ರಮು' (ಭಾಗ-ಪುಟ-೧೫೦) ಗ್ರಂಥದಲ್ಲಿಯ ತೆಲುಗು ಚಾಟು ಪದ್ಯದಿಂದಲೂ ರೆಡ್ಡಿ ರಾಜರ ವಂಶಾವಳಿಯು ಗೊತ್ತಾಗುತ್ತದೆ.

೧॥ ಪೋಲಯವೇಮನ್ನ ಪೋಲುವಾರ ಬದುವೇಡು
ವತ್ಸರಂಬಲು ಗಾಜೆ ವಸುಧಯೇಲೆ
ಅಟವೆನ್ನ ಮುಪ್ಪದಿ ಯನಮೋತ ವೇಮನ್ನಿ

ವೆನ್ನವಾಸಿಕಿ ನೆಕ್ಕಿ ವಸುಧಯೇಲೆ
ಧರ್ಮಾತ್ಮುಡಗವೇಮ ಧರಣೀಕಳತ್ರುಂಡು ಪದಿಯು
ನೇನಿಚಿ ಭೂಮಿ ಪದಿಲಪರಿಚೆ।
ಪ್ರಜಲ ಕುಬ್ಬಸ ಮುಗ ಬದುಸಾಲುಗೇಡುಲು
ಕೊಮರಗಿರೆಲೇನು ಸಮಯುದಾಕ॥
ಸೇಲೆ ಕೋಮುಟಿಯಮನ ನಿರುವದೇಂಡ್ಲು
ರಾಚವೇಮನ್ನ ನಾಲ್ಕು ವರ್ಷಮುಲ ನೇಲೆ।
ಮಿಂಚಿಕಟ್ಟಿರಿ ಗೃಹರಾಜು ಮೇಡಕೊಂಡ
ವೀಟಿ ಸೂರೇಂಡ್ಲು ರೆಡ್ಲು ಭೂಮಿತಯಶುಲು॥

ಈ ಪದ್ಯದ ಪ್ರಕಾರ ರೆಡ್ಡಿ ರಾಜವಂಶಾವಳಿಯು ಹೀಗಿದೆ–

| | |
|---|---|
| ೧. ಪೋಲಯ ವೇಮಾರಡ್ಡಿ | – ೧೩೨೪–೧೩೩೯ |
| ೨. ಅನಪೋತ ವೇಮಾರೆಡ್ಡಿ | – ೧೩೩೯–೧೩೬೦ |
| ೩. ದೇಸತಿ ವೇಮಾರಡ್ಡಿ | – ೧೩೬೦–೧೩೭೬ |
| ೪. ಅನವೇಮನ ವೇಮಾರಡ್ಡಿ | – ೧೩೭೬–೧೩೮೦ |
| ೫. ಕೋಮರಗಿರಿ ವೇಮನ (ಕುಮಾರಗಿರಿರೆಡ್ಡಿ) | – ೧೩೮೦–೧೪೦೦ |
| ೬. ಪೆದುಕೋಮ ವೇಮಾರಡ್ಡಿ | – ೧೪೦೦–೧೪೨೦ |
| ೭. ರಾಚಿವೇಮಾರಡ್ಡಿ | – ೧೪೨೦–೧೪೨೪ |

ಇವರೆಲ್ಲರೂ ಅನುಕ್ರಮವಾಗಿ ೧೭, ೩೦, ೧೬, ೧೪, ೨೦, ೪ ವರ್ಷಗಳವರೆಗೆ ರಾಜ್ಯಾಡಳಿತವನ್ನು ಮಾಡಿ, ಒಟ್ಟು ಒಂದು ನೂರು ವರ್ಷಗಳ ಕಾಲ ಆಳ್ವಿಕೆ ಮಾಡಿದ್ದುದು ತಿಳಿದು ಬರುತ್ತದೆ. (ಹೇಮರಡ್ಡಿ ಮಲ್ಲಮ್ಮ–ಡಾ. ಶಾಂತಾದೇವಿ ಸಣ್ಣೆಲ್ಲಪ್ಪನವರ ಪುಟ–೧೩).

ಪೋಲಯ ವೇಮಾರೆಡ್ಡಿಯೇ ಈ ವಂಶದವರ ಮೂಲ ಪುರುಷನು. ಈ ವಂಶದಲ್ಲಿ ಕುಮಾರಗಿರಿ ವೇಮಾರಡ್ಡಿ ಎಂಬುವವನ ಉದಯವಾಗಿ ೧೪ ವರ್ಷ ರಾಜ್ಯಭಾರ ಮಾಡಿದನು. ಈತನು ೧೬ನೆಯ ಶತಮಾನದಲ್ಲಿದ್ದನು.

ದೊರೆಯಾಗಿದ್ದ ಕೋಮರಗಿರಿರೆಡ್ಡಿ (ಕುಮಾರಗಿರಿ ರೆಡ್ಡಿ) ತನ್ನ ವೈಯಕ್ತಿಕ ದೌರ್ಬಲ್ಯಗಳಿಂದ ರಾಜ್ಯವನ್ನು ಕಳೆದುಕೊಂಡು; ಆ ಬಳಿಕ ಮೂಗಚಿಂತಪಲ್ಲೆ ಗ್ರಾಮದ ಹೊರವಲಯದಲ್ಲಿಯ ತೋಟದಲ್ಲಿಯೇ ಮನೆ ಕಟ್ಟಿಕೊಂಡು ವಾಸ ಮಾಡಲಾರಂಭಿಸಿದನು. ಪದಚ್ಯುತ ದೊರೆಯ ಏಕೈಕ ಪುತ್ರ ಅನಪೋತ ವೇಮನ



ಅಕಾಲಿಕ ಮರಣವನ್ನಪ್ಪಿದ ದೊರೆ ಕುಮಾರಗಿರಿರೆಡ್ಡಿಗೆ ರಾಜ್ಯವೂ ಇಲ್ಲ– ರಾಜ್ಯಭಾರವೂ ಇಲ್ಲ. ದೈವ ಭಕ್ತಿ ಹೆಚ್ಚಲು ಇನ್ನೇನು ಬೇಕು. ದೊರೆ ಪುಣ್ಯ ಕ್ಷೇತ್ರಗಳೆಲ್ಲವನ್ನು ಸಂಚರಿಸಲಾರಂಭಿಸಿದ, ತೀರ್ಥ ಯಾತ್ರೆಗಳನ್ನು ಕೈಕೊಂಡನು. ರೆಡ್ಡಿಯ ಜೀವನದಲ್ಲಿ ಮತ್ತೇ ಸಂತಸದ ಹೊನಲು ಬರುವಂತಾಯಿತು. ರೆಡ್ಡಿಯ ರಾಣಿ ಮಲ್ಲಮ್ಮ ಗರ್ಭಧರಿಸಿದ್ದು ಕುರುಡನಿಗೆ ಕಣ್ಣು ಬಂದಷ್ಟು ಸಂತಸವಾಯಿತು. ಗರ್ಭಹೊತ್ತು ಹತ್ತನೆಯ ತಿಂಗಳಿನಲ್ಲಿ ಗಂಡು ಮಗುವಿನ ಜನನವಾಯಿತು. ಆತನೇ ವೇಮರಡ್ಡಿ: ಮುಂದೆ ಈತ ಮಹಾಯೋಗಿಯಾಗಿ ಲೋಕವನ್ನು ಬೆಳಗಿದ ಮಹಾಪುರುಷನಾಗುತ್ತಾನೆ.

ವೇಮನರ ಸೋದರತ್ತೆ ರಾಜಮಹೇಂದ್ರನ ರಾಣಿ ಮಲ್ಲಾಂಬೆ ಅಣ್ಣನ ಮಗನನ್ನು ನೋಡಿ ಆನಂದಿಸಲು, ಮಗುವಿಗೆ ಚಿತ್ಕಳೆಯನ್ನು ನೋಡಿ ಸಂಭ್ರಮಿಸಲು ಮೂಗ ಚಿಂತಪಲ್ಲೆಗೆ ಬರುತ್ತಾಳೆ. ಮುಂಜಾನೆಯ ಆರು ಗಂಟೆಯ ಸಮಯದಲ್ಲಿ ಹುಟ್ಟಿದ ಮಗುವಿನ ನಕ್ಷತ್ರವು ಕಾರ್ತಿಕ ಶುದ್ಧ ಪೂರ್ಣಿಮೆಯಾಗಿತ್ತು. ಅದೇ ಆಗ ಮನೆಗೆ ಜ್ಯೋತಿಷಿಗಾರರೂ ಬಂದಿದ್ದರು. ಮಗುವಿನ ಕುಂಡಲಿ ತೆಗೆದು ಅವರು ಹೇಳಿದ್ದೇನೆಂದರೆ – ಈತ ಮುಂದೆ ಮಹಾಯೋಗಿಯೂ, ಮಹಾಕವಿಯೂ ಆಗುವ ಯೋಗವಿದೆಯೆಂದಾಗ ಎಲ್ಲರಿಗೂ ಹರ್ಷಪುಳಕಿತವಾಯಿತು. ಈತನಿಗೆ **"ವೇಮಾರೆಡ್ಡಿ"** ಎಂದು ಹೆಸರಿಟ್ಟರು, ಈತನ ಪೂರ್ವದಲ್ಲಿ ಒಬ್ಬ ಹಿರಿಯ ಪುತ್ರ ವೆಂಕಾರೆಡ್ಡಿಯೆಂಬುವವನಿದ್ದ. ಅಂದರೆ ಕುಮಾರಗಿರಿರೆಡ್ಡಿ–ಮಲ್ಲಮ್ಮ (ಮಲ್ಲಮ್ಮಾಂಗೆ)ರ ಮಕ್ಕಳಿಬ್ಬರು. ವೆಂಕಾರೆಡ್ಡಿ ಮತ್ತು ರಾಚವೇಮಾ (ವೇಮಾರಡ್ಡಿ) ಎಂಬುವವರಿದ್ದರು. ವೇಮಾರೆಡ್ಡಿಯೇ ಮಹಾಯೋಗಿಯಾಗಿ–ಮಹಾಕವಿಯಾಗಿ ಪ್ರಸಿದ್ಧ ಪಡೆದವರೆಂಬುದು ಇದರಿಂದ ತಿಳಿದುಬರುತ್ತದೆ.

ಮೂಲತಃ ಸಂಗೀತ, ನೃತ್ಯಲೋಲನಾಗಿದ್ದ ಕುಮಾರಗಿರಿರೆಡ್ಡಿಯ ಕುಟುಂಬವು ಕೊಂಡವೀಡಿನಲ್ಲಿ ಪುನರ್ ನೆಲೆಸಲು ಮುಂದಾಯಿತು. ಬಾಲವೇಮನನು ಹಳ್ಳಿಯ ಪರಿಸರದಿಂದ ಪುರದ ಪರಿಸರಕ್ಕೆ ಹೊಂದಿಕೊಳ್ಳ ತೊಡಗಿದನು. ಆಗೀಗ ಸೋದರತ್ತೆ ಮಲ್ಲಾಂಬೆಯಲ್ಲಿಗೆ ಹೋಗಿ ಬರುತ್ತಿದ್ದ. ಅದೇ ಕಾಲಕ್ಕೆ ನರಸಾಂಬೆಯೊಂದಿಗೆ ಆತ್ಮೀಯ ಪರಿಚಯವೂ ಆಯಿತು. ಕೊಂಡುವೀಡಿನಲ್ಲಿರುವಾಗಲೇ ಇವ್ವಟೂರಿನ ಸೋಮಸೇಖರ ಗುರುಗಳಿಂದ ಮನೆಯಲ್ಲಿಯೇ ವಿದ್ಯಾಭ್ಯಾಸ ಮಾಡುತ್ತಿದ್ದ. ಅನೇಕ ವಿದ್ಯಾರ್ಥಿಗಳು ಇವರ ಗುರುಪೀಠದಲ್ಲಿ ಅರಳಿದವರು. ಆದರೆ ವೇಮನ ಶಾಲೆಯ ಓದಿನಲ್ಲಿ ನಿರಾಸಕ್ತ; ಪ್ರಕೃತಿಯ ಸೌಂದರ್ಯ ಸವಿಯುತ್ತ, ಪಶು–ಪಕ್ಷಿ, ಹೊಳೆ–ಹಳ್ಳಗಳು ಹರಿಯುತ್ತಿರುವುದನ್ನು ಕಂಡು ಹರುಷಿತನಾಗಿದ್ದ.

ತನ್ನ ಕುಟುಂಬದ ಏಳು–ಬೀಳುಗಳನ್ನು, ಯಾದವೀ ಕಲಹಗಳನ್ನೂ, ಮತ್ತು ಅಧಿಕಾರದಾಹದಿಂದ ಪರಸ್ಪರರು ಕಚ್ಚಾಡುತ್ತಿರುವುದನ್ನುಕಣ್ಣಾರೆ ಕಂಡು, ಕಿವಿಯಾರೆ ಕೇಳಿ, ಅವನ ಮನಸ್ಸು ವಿಹ್ವಲಗೊಂಡಿತ್ತು. ಸೋಮಶೇಖರ ಗುರುಗಳು ತುಂಬಾ ಪ್ರಭಾವಿಗಳು. ಆಯಾ ಶಿಷ್ಯರಲ್ಲಿ ಹುದುಗಿದ ಸುಪ್ತ ಚೇತನವನ್ನು ಬಡಿದೆಬ್ಬಿಸುವವರಾಗಿದ್ದರು. ವೇಮನನಲ್ಲಿ ಕವಿಯಾಗುವ ಸುಪ್ತ ಚೇತನವಿದೆ ಎಂಬುದನ್ನು ಅವರು ಕಂಡರಿತಿದ್ದರು. ಅವನಿಗೆ ಅದೇ ದಾರಿಯಲ್ಲಿ ಶ್ರಮಿಸುವಂತೆ ವಿದ್ಯಾದಾನ ಮಾಡಿ ಅನುಗ್ರಹಿಸಿದರು.

ಇತ್ತ ವೇಮನನ ಸೋದರತ್ತೆ ನರಸಾಂಬೆಯು (ಅನವೇಮಾರೆಡ್ಡಿಯ ಪತ್ನಿ) ಅವಳು ಪಟ್ಟದ ರಾಣಿಯಾದ ಕಾಲದಲ್ಲಿ ವೇಮನ ನಾಲ್ಕೈದು ವರ್ಷದ ಬಾಲಕನಾಗಿದ್ದನು. ನರಸಾಂಬೆಯು ಅವನಲ್ಲಿ ಅನುರಾಗ–ಪ್ರೀತಿ–ವಾತ್ಸಲ್ಯ ಹೊಂದಿ ಅವನನ್ನು ತನ್ನ ಸ್ವಂತ ಮಗನಂತೆ ಕಂಡು ಪಾಲನೆ–ಪೋಷಣೆ ಮಾಡಿದ್ದಳು. ಅಂದರೆ ಅವಳ ಅಕ್ಕರೆಯಲ್ಲಿಯೇ ವೇಮನ ಬೆಳೆದು ದೊಡ್ಡವನಾದ.

ಕರ್ನಾಟಕದಲ್ಲಿ ಇತ್ತೀಚೆಗೆ ಪ್ರತಿ ವರುಷ ೧೯ ಜನೇವರಿ ತಿಂಗಳಿನಲ್ಲಿ ವೇಮನಯೋಗಿಯ ಜಯಂತಿಯನ್ನು ಆಚರಿಸುತ್ತ ಬಂದಿರುವರು.

**ಮಲ್ಲಮ್ಮನ ಮಹಾ ಕೊಡುಗೆಯೇ ವೇಮನಯೋಗಿ :**

ಕರ್ನಾಟಕ ಆಂಧ್ರಪ್ರದೇಶ ಈ ಎರಡೂ ರಾಜ್ಯಗಳಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಮಹಾಯೋಗಿ ವೇಮನ ಹಾಗೂ ಇವನ ಜ್ಞಾನೋದಯಕ್ಕೆ ಕಾರಣಕರ್ತಳಾದ ಇವನ ಅತ್ತಿಗೆ ಸಾಧ್ವಿಮಣಿ ರೆಡ್ಡಿ ಕುಲಮಾತೆ ಹೇಮರಡ್ಡಿ ಮಲ್ಲಮ್ಮನ ಪೂರ್ವಜರು ರಾಜ ಮನೆತನದವರೇ ಆಗಿದ್ದರು. ಪ್ರೋಲಯ ವೇಮಾರಡ್ಡಿಯ ಮಗನಾದ ಕಾಟಿಯ ವೇಮರಡ್ಡಿ ಹಾಗೂ ಕೊಂಡವೀಡುವಿನ ರಾಜನಾದ ಅನಪೋತರಡ್ಡಿಯ ಮಗಳಾದ ನರಸಾಂಬೆಯ (ಕುಮಾರ ಗಿರಿರೆಡ್ಡಿಯ ಸೋದರಿ) ಮಗಳಾಗಿ ಜನಿಸಿದವಳೇ ಮಲ್ಲಾಂಬೆ ಅಥವ ಮಲ್ಲಮ್ಮ ಹೇಮರಡ್ಡಿ ಮಲ್ಲಮ್ಮ" ಎಂದೇ ಕನಾಟಕದಲ್ಲಿ ಪ್ರಸಿದ್ಧಿ ಪಡೆದ ಪತಿವ್ರತಾ ಶಿರೋಮಣಿ. ನಲವಡಿ ಶ್ರೀಕೃಷ್ಣ ಶಾಸ್ತ್ರಿಗಳವರು :"ಹೇಮರಡ್ಡಿ ಮಲ್ಲಮ್ಮನ" ಚರಿತ್ರೆಯನ್ನೊಳಗೊಂಡಿರುವ ನಾಟಕವನ್ನು ಬರೆದು ೧೫೦ ಪ್ರಯೋಗಗಳಲ್ಲಿ ಪ್ರದರ್ಶಿಸಿದ್ದುದು ಕನ್ನಡಿಗರ ಹಾಗೂ ಕರ್ನಾಟಕದ ಹೆಮ್ಮೆ!!

ಶ್ರೀಶೈಲದ ದಕ್ಷಿಣಕ್ಕಿರುವ ವೆಲ್ಲಟೂರು ಜಿಲ್ಲೆಗೆ ಸೇರಿದ ರಾಮಾಪುರ ಹೇಮರಡ್ಡಿ ಮಲ್ಲಮ್ಮನ ತವರೂರು. ಈ ಊರಿನ ಶ್ರೀಶೈಲ ಮಲ್ಲಿಕಾರ್ಜುನನ ಪರಮ ಭಕ್ತರೂ ಆದ ವೇಮನನಾಗರೆಡ್ಡಿ–ಗೌರಮ್ಮ ದಂಪತಿಗಳ ಪವಿತ್ರ ಉದರದಿಂದ ಜನಿಸಿದವಳು ಮಹಾಮಾತೆ ಮಲ್ಲಮ್ಮ. ಇವರಿಗೆ ಮಲ್ಲಮ್ಮನೊಬ್ಬಳೇ ಏಕೈಕ ಸಂತಾನದ ಭಾಗ್ಯಲಕ್ಷ್ಮೀ! ಅನವರತವೂ ಶ್ರೀಶೈಲ ಮಲ್ಲಿಕಾರ್ಜುನನ ಪೂಜೆ, ಧ್ಯಾನ, ಜಪ, ತಪದಲ್ಲಿಯೇ



ಮಗ್ನಳಾಗುತ್ತಿದ್ದಳು. ಮಲ್ಲಮ್ಮ ಬಾಲ್ಯಾವಸ್ಥೆಯನ್ನು ಕಳೆದು ಯೌವ್ವನಕ್ಕೆ ಅಡಿಯಿಟ್ಟಾಗ ತಂದೆ–ತಾಯಿಗಳಿಗೆ ಮದುವೆ ಮಾಡಬೇಕೆಂದು ವರಾನ್ವೇಷಣೆಗೆ ತೊಡಗಿದಾಗ, ಅವರಿಗೆ ಗೋಚರವಾದುದು ಕುಮಾರ ಗಿರಿರೆಡ್ಡಿಯವರ ಮನೆತನ. ಈತನ ಹಿರಿಯ ಮಗ ಭರಮರಡ್ಡಿಗೆ (ವೆಂಕರಡ್ಡಿ) ಮದುವೆ ಮಾಡಿಕೊಟ್ಟರು.

ಶ್ರೀಶೈಲ ಮಲ್ಲಿಕಾರ್ಜುನನಿಗೆ ಹರಕೆ ಹೊತ್ತು ಹೆತ್ತು ಹೂವಿನಂತೆ ಜೋಪಾನ ಮಾಡಿ ಬೆಳೆಸಿದ ಏಕೈಕ ಪುತ್ರಿ. ಆಕೆಯನ್ನು ಪತಿಯ ಮನೆಗೆ ಕಳಿಸುವಾಗ ತಾಯಿಯಂತೂ ಸಂಕಟಪಟ್ಟಳು. ಆಗ ತಂದೆ ನಾಗರೆಡ್ಡಿಯೇ ಮುಂದೆ ಬಂದು ಮಗಳನ್ನು ಸಂತೈಸಿ, ಮಗಳೇ..... ನಿತ್ಯವೂ ನೀನು ಅತ್ತೆ ಮಾವಂದಿರರ ಸೇವೆ ಮಾಡು ಮತ್ತು ಸತಿಗೆ ಪತಿಯೇ ಪರಮ ಭಾಗ್ಯ. ಪತಿಗಿಂತಲೂ ಮತ್ತೊಂದು ಶ್ರೇಷ್ಠ ದೈವವೇ ಇಲ್ಲ. ಅವನ ಎದುರು ಮರುಮಾತನಾಡದೇ ತಲೆಬಾಗಿ ನಡೆ. ಅತ್ತೆಯ ಮನೆಯ ಸರ್ವ ಬಂಧು–ಬಳಗದವರನ್ನು ಪ್ರೀತಿ–ಮಮತೆಯಿಂದ ಕಾಣು ಎಂದು ಉಪದೇಶಿಸಿ ಭಾರವಾದ ಹೃದಯದಿಂದ ಕಳುಹಿದರು. ಅಷ್ಟೇ ಭಾರವಾದ ಹೃದಯದಿಂದ ತಂದೆ–ತಾಯಿಗಳಿಂದ ಬೀಳ್ಕೊಂಡು ಭರಮರಡ್ಡಿಯಿರುವ ಮನೆಗೆ ಬರುತ್ತಾಳೆ. ರಾಮಾಪುರದಿಂದ ಪತಿಯ ಮನೆಯಿರುವ ಸಿದ್ದಾಪುರಕ್ಕೆ ಬರುತ್ತಾಳೆ. ಮಲ್ಲಮ್ಮ ಮದುವೆಯಾಗಿ ಅತ್ತೆಯ ಮನೆಗೆ ಬಂದಾಗ ವೇಮನ ಚಿಕ್ಕ ಬಾಲಕನಾಗಿದ್ದನು. ಆಕೆ ಅವನನ್ನು ಬಹು ಮಮತೆ–ಪ್ರೀತಿಯಿಂದ ಕಾಣುತ್ತಿದ್ದಳು. ವೇಮನನು ಅತ್ತಿಗೆಯನ್ನು ತಾಯಿಗಿಂತ ಹೆಚ್ಚಾಗಿ ಮಮತೆಯಿಂದ ಕಾಣುತ್ತಿದ್ದ. ಅತ್ತಿಗೆಯ ಅತಿ ಅಕ್ಕರತೆಯಲ್ಲಿ ವೇಮನನು ಅತ್ಯಾನಂದದಿಂದ ಸ್ವಚ್ಛಂದವಾಗಿ ಬೆಳೆದು ದೊಡ್ಡವನಾದನು. ಮುಂದೆ ವೇಮನನು ಪ್ರಾಯಕ್ಕೆ ಅಡಿಯಿಟ್ಟರೂ, ದುಡಿಯುವ ಪ್ರವೃತ್ತಿಯಿಲ್ಲದವನಾಗಿ ಹೊರಗೇ ಹೆಚ್ಚು ತಿರುಗುವ ಅಭ್ಯಾಸ ಮಾಡಿಕೊಂಡನು. ತಬ್ಬಲಿಯಾದ ಮಗನೆಂದು ಬಹು ಪ್ರೀತಿಯಿಂದ ಬೆಳೆಸಿದಳು. ಆದರೆ ಆತ ಹಾದಿ ತಪ್ಪುವವರ ಸಂಗ ಬೆಳೆಸಿದನು. ಮಲ್ಲಮ್ಮನ ಆರೈಕೆಯಲ್ಲಿಯೇ ಬೆಳೆದನು. ಯೌವ್ವನಕ್ಕೆ ಬಂದ ವೇಮನ ರಾಜಕುಮಾರನು ವಿಲಾಸಿ ಜೀವನಕ್ಕೆ ಮನಸೋತನು. ನೋಡಲು ಸ್ಫುರದ್ರೂಪಿ ಬೇರೆ. ಯಾವುದೂ ಕೊರತೆಯಾಗದಂತೆ ಮಲ್ಲಮ್ಮನು ನೋಡಿಕೊಳ್ಳುತ್ತಿದ್ದಳು.

ಮಹಾತ್ಮರ ಜೀವನದಲ್ಲಿ ಆಕಸ್ಮಿಕಗಳು ಘಟಿಸಿ ಅವರ ಜೀವನದ ಗತಿಯನ್ನೇ ಬದಲಿಸುತ್ತವೆ ಎಂಬುದು ಸಾಮಾನ್ಯ ಸಂಗತಿ. ಅದರಂತೆ ವೇಮನನ ಜೀವನದಲ್ಲಿಯೂ ನಡೆಯಿತು. ಆತನ ದೇವದಾಸಿ ಚಿತ್ತರಂಜನೀ (ಚಿತ್ರಾಂಗಿ) ಎಂಬ ಮೋಹದ ಪುತ್ಥಳಿಯಂತಿದ್ದ ಗಣಿಕೆಯ ಸಹವಾಸ ಮಾಡಿದನು. ಅಲ್ಲದೇ ಕೆಡುಕರ ಸಹವಾಸವನ್ನು ಹೊಂದಿ ವ್ಯಸನಾಧೀನನಾದನು. ದಿನನಿತ್ಯವೂ ಅವಳಲ್ಲಿಗೆ ಹೋಗುವುದನ್ನು ರೂಢಿಸಿಕೊಂಡನು. ಅತ್ತಿಗೆಯ ಮಾತನ್ನು ಕೇಳಲೂ ಇಲ್ಲ. ಅವನು ಈ ವ್ಯಸನವನ್ನು

ಬಿಡಲೂ ಇಲ್ಲ. ಅವರವರ ಕರ್ಮ ಎನ್ನುವ ಹಾಗೆ ಅವನು ವೇಶ್ಯಾವಾಟಿಕೆಗೆ ಹೋಗುವುದು ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ. ಚಿತ್ತರಂಜನಿ ಯಾವ ವಸ್ತು ಕೇಳಿದರೂ ಒಯ್ದು ಕೊಡುತ್ತಿದ್ದ, ಧನ, ಕನಕ, ವಜ್ರದ ಆಭರಣಗಳನ್ನು ಕೊಟ್ಟನು. ಮನೆಯಲ್ಲಿರುವ ಬೆಲೆ ಬಾಳುವ ವಸ್ತುಗಳನ್ನು ಕೊಟ್ಟು ಬಿಟ್ಟ. ಇದರಿಂದಾಗಿ ಅವನ ಈ ನಡವಳಿಕೆ ಮನೆಯ ಸದಸ್ಯರಿಗೆಲ್ಲ ಚಿಂತೆಯನ್ನುಂಟು ಮಾಡಿತು. ಆ ವೇಶ್ಯಾಸ್ತ್ರೀಯು ವೇಮನನಿಂದ ಸೆಳೆಯುವ ಸಾಮಾನುಗಳ ಸಂಖ್ಯೆಯೂ ಹೆಚ್ಚಿತು.

ದೇವದಾಸಿಯ ತಾಯಿಯ ದುರಾಶೆ ಮಿತಿ ಮೀರುವಂತಾಯಿತು. ಮನೆಯಲ್ಲಿರುವ ವಸ್ತು–ಒಡವೆಗಳೆಲ್ಲವೂ ಖಾಲಿಯಾದವು. ಅತ್ತಿಗೆಯಾದ ಮಲ್ಲಮ್ಮನ ಮೂಗಿನಲ್ಲಿರುವ ವಜ್ರದ ಹೊಳೆ ಹೊಳೆಯುತ್ತಿರುವ ಮೂಗುತಿಯು ಬೇಕೆಂದು ಆ ಗಣಿಕಾ ಸ್ತ್ರೀಯು ಹಟ ಹಿಡಿಯುತ್ತಾಳೆ. ನನಗೆ ಆ ಮೂಗುತಿ ಬೇಕೇಬೇಕು. ನೀವು ಅದನ್ನು ತರದಿದ್ದರೆ ಇನ್ನು ಮೇಲೆ ನನ್ನ ಮನೆಗೆ ಬರಬಾರದು ಎಂದು ಕಠೋರವಾಗಿಯೇ ಹೇಳಿದಳು. ಇದನ್ನು ಕೇಳಿದ ವೇಮನ ತತ್ತರಿಸಿ ಹೋದ. ಮದುವೆಯಾದ ಹೆಣ್ಣಿನ ಮೂಗುತಿ ಮಾಂಗಲ್ಯದಷ್ಟೇ ಪವಿತ್ರವಾದುದು. ಅದು ಪಾತಿವ್ರತೆಯ ಸಂಕೇತವೂ ಹೌದು. ಒಂದು ವೇಳೆ ಕೇಳಿದರೆ ನನ್ನ ಅತ್ತಿಗೆ ಕೊಡುತ್ತಾರೆಯೇ ಎಂದು ತನ್ನ ಅಂತರಂಗದಲ್ಲಿಯೇ ವೇಮನ ಯೋಚಿಸಿದನು. ಅದರಲ್ಲೂ ಅತ್ತಿಗೆಯ ತವರು ಮನೆಯವರು ಆ ಮೂಗುತಿಯನ್ನು ಕೊಟ್ಟಿರುವರು. ಅದನ್ನು ಹೇಗೆ ಕೇಳುವುದು? ಅಲ್ಲದೆ ಆ ಗಣಿಕಾ ಸ್ತ್ರೀಯನ್ನು ಬಿಟ್ಟಿರಲೂ ತನಗೆ ಸಾಧ್ಯವೂ ಇಲ್ಲವೆಂದು ತಡಬಡಿಸಿದನು. ಏನು ಮಾಡಬೇಕೆಂಬ ಗೊಂದಲದಲ್ಲಿ ಸಿಲುಕಿದನು. ಆಲೋಚಿಸುತ್ತ, ತನ್ನ ಮನೆಗೆ ಹೋಗಿ ಮೌನವಾಗಿದ್ದುಕೊಂಡು ಬಿಟ್ಟನು. ಯಾರು ಮಾತನಾಡಿಸಿದರೂ ಸುಮ್ಮನೆ ಮಲಗಿಬಿಟ್ಟನು. ಊಟ ಮಾಡೆಂದು ಹೇಳಿದರೂ ಮೇಲೇಳಲಿಲ್ಲ. ಯಾರು ಕರೆದರೂ ಊಟಕ್ಕೇಳಲೇಯಿಲ್ಲ. ಕೊನೆಗೆ ಮಲ್ಲಮ್ಮ ಇವನ ಮನಸ್ಸಿನಲ್ಲಿ ಏನೋ ನಿಗೂಢವಾದ ಸಂಗತಿಯಿದೆಯೆಂದು ಅರಿತುಕೊಂಡು, ವೇಮನ ಏಳು, ನಿನಗೆ ಏನು ಬೇಕು ಹೇಳು ಕೊಡುವೆನು ಎನ್ನಲು ಅವನ ಆನಂದಕ್ಕೆ ಮಿತಿಯೇ ಇಲ್ಲದಂತಾಯಿತು.

ತನಗೆ ಬೇಕಾದ ವಸ್ತುವನ್ನು ಕೇಳಲು ಬಾಯಿ ಬರದಂತಾಗಿ ಕಸಿವಿಸಿ ಮತ್ತು ಲಜ್ಜಿತ–ಬಾವನೆಯಿಂದ ಚಡಪಡಿಸುತ್ತ, ತಲೆತಗ್ಗಿಸುತ್ತ ಅತ್ತಿಗೆಯ ಮುಖವನ್ನು ನೋಡುತ್ತಾರೆ. ಧೈರ್ಯ ತಂದುಕೊಂಡು ಕೇಳುತ್ತಾನೆ. ಅವನ ಈ ಮೂಕವೇದನೆಯನ್ನು ಅರ್ಥ ಮಾಡಿಕೊಂಡ ಮಲ್ಲಮ್ಮನು ಒತ್ತಾಯದಿಂದ ಕೇಳಲುದ್ಯುಕ್ತಳಾಗುತ್ತಾಳೆ. ನಿರ್ವಾಹವಿಲ್ಲದೇ ವೇಮನ ಅತ್ತಿಗೆಯ ಮುಂದೆ ಹೇಳಿದನು. ನಿನ್ನ ಹೊಳೆಯುತ್ತಲಿರುವ ವಜ್ರದ ಮೂಗುತಿಯನ್ನು ನನ್ನ ಗಣಿಕಾಸ್ತ್ರೀ ಕೇಳಿದಳಲ್ಲದೇ ಅದು ಬೇಕೇಬೇಕೆಂದೂ



ಪಣ ತೊಟ್ಟಿದ್ದಾಳೆ. ನನ್ನ ಹತ್ತಿರ ನೀನು ಬರುವುದಾದಲ್ಲಿ ತೆಗೆದುಕೊಂಡು ಬಾ; ಇಲ್ಲದಿದ್ದರೆ ಬೇಡವೆಂದು ಕಡ್ಡಿ ಮುರಿದಂತೆ ಹೇಳಿದ್ದಾಳೆಂದನು. ಆದುದರಿಂದ ಹಸಿವು–ನೀರಡಿಕೆಯನ್ನು ಬಿಟ್ಟು ಸುಮ್ಮನೇ ಮಲಗಿದೆಯೆಂದು ಈ ಮಾತು ಕೇಳಿದ ಮಲ್ಲಮ್ಮನಿಗೆ ಕರುಣೆಯುಂಟಾಯಿತು. ಏಕೆಂದರೆ ಅವನಲ್ಲಿ ತಾನು ಕೇಳುವುದು ಸರಿಯಲ್ಲವೆಂಬ ವಿವೇಕವಾದರೂ ಇದೆಯಲ್ಲವೆಂದು ಜ್ಞಾಪಿಸಿಕೊಂಡಳು. ಇನ್ನು ಇವನಿಗೆ ಜ್ಞಾನೋದಯವಾಗುವ ಸಮಯ ಸಮೀಪಿಸಿದೆ ಎಂದು ಮನದಲ್ಲಿ ಚಿಂತಿಸಿ, ವಿಚಾರಿಸಿ, ತನಗೆ ತನ್ನ ತಾಯಿ ಕೊಟ್ಟಿರುವ ಮೂಗುತಿಯನ್ನು ವೇಮನನ ಕೈಯಲ್ಲಿಡುತ್ತಾಳೆ. ಆದರೆ ಅದನ್ನು ಕೊಡುವಾಗ ಅವನಿಗೆ ಒಂದು ಕಟ್ಟುಪಾಡು (ಕರಾರು) ಹಾಕುತ್ತಾಳೆ, ಏನೆಂದರೆ ಆ ಗಣಿಕಾಸ್ತ್ರೀಯು ಕಟ್ಟಿದ ತಲೆಗೂದಲನ್ನು ಬಿಚ್ಚಿ, ಬಟ್ಟೆಗಳನ್ನೆಲ್ಲ ಕಳಚಿ, ಬರಿಮೈಯಿಂದ ಅವನ ಮಂಚವನ್ನು ಮೂರು ಸಲ ಸುತ್ತಿ ನಂತರ ಮೂಗುತಿಯನ್ನು ತೆಗೆದುಕೊಳ್ಳಬೇಕೆನ್ನುವ ವೇಮನನು ಅ ನಿಯಮಕ್ಕೆ ಒಪ್ಪಿ, ಅದನ್ನು ತೆಗೆದುಕೊಂಡು ಗಣಿಕಾಸ್ತ್ರೀಯ ಕಡೆಗೆ ಧಾವಿಸಿ ಬಂದು ಆಕೆಗೆ ತೋರಿಸಿ ಅತ್ತಿಗೆಯ ಕರಾರನ್ನು ಮೊದಲು ಪೂರೈಸಲು ಹೇಳಿದನು. ಆದರೆ ಅವನ ಮಾತು ಕೇಳಿದ ಆಕೆಗೆ ಅದೇನು ದೊಡ್ಡ ವಿಷಯವೆನಿಸಲಿಲ್ಲ. ಮೂಗುತಿಯ ಮೇಲಿನ ಮೋಹದಿಂದ ತಕ್ಷಣವೆ ಮಲ್ಲಮ್ಮನು ಹೇಳಿ ಕಳಿಸಿದಂತೆ ನಗ್ನಳಾಗಿ ವೇಮನ ಮಲಗುವ ಮಂಚಕ್ಕೆ ಮೂರು ಬಾರಿ ಪ್ರದಕ್ಷಿಣೆ ಹಾಕಲಾರಂಭಿಸಿದಳು. ಆಗ ಅವು ಅವಳ ವಸ್ತ್ರಹೀನ ದೇಹವನ್ನು ತದೇಕ ಚಿತ್ತದಿಂದ ದಿಟ್ಟಿಸುತ್ತಿದ್ದನು. ಸರ್ವ ವಸ್ತ್ರ, ಆಭರಣಗಳ ಅಲಂಕಾರದಿಂದ ಮೊದಮೊದಲು ಸುಂದರಳಾಗಿ ಕಾಣುತ್ತಿದ್ದ ಅವಳ ದೇಹದ ನಗ್ನತೆಯನ್ನು ಕಂಡು ಅತೀವ ಅಸಹ್ಯಪಟ್ಟುಕೊಂಡು ಲಜ್ಜಿತನಾಗಿ, ಜುಗುಪ್ಸೆಗೊಂಡನು. ಆಕೆಯು ಮೂರನೆಯ ಸುತ್ತನ್ನು ಮುಗಿಸುವ ಹೊತ್ತಿಗೆ ವೇಮನನು ಮೂಗುತಿಯನ್ನಿಟ್ಟವನೇ ತನ್ನ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡು, ಚೀರುತ್ತ ಹೊರಗೆ ಓಡಿ ಹೋದನು. ಗಣಿಕಾಸ್ತ್ರೀಯ ಮನೆಯಿಂದ ಹೀಗೆ ಹೊರಗೆ ಹೋದವನು ಪುನಃ ಎಂದೂ ಮರಳಿ ಆಕೆಯ ಮನೆಯ ಹೊಸ್ತಿಲವನ್ನೇ ತುಳಿಯಲಿಲ್ಲ. ಅಂದಿನಿಂದ ಅವನೊಬ್ಬ ಅನುಭಾವಿ ಯೋಗಿಯಾದನು.

ಗಣಿಕಾಸ್ತ್ರೀಯ ನಗ್ನ ರೂಪದಿಂದ ವೇಮನನ ಜೀವನದ ತಿರುವೇ ಬದಲಾಯಿತು. ಅವನಲ್ಲಿ ವೈರಾಗ್ಯ ರೂಪ ತಾಳಿತು. ಕಾಮಿಯಾಗಿದ್ದ ವೇಮನನ್ನು ಮೋಕ್ಷ ಪಥಗಾಮಿಯನ್ನಾಗಿಸಿದ ಸಾಧ್ವಿ ಶಿರೋಮಣಿ ಮಲ್ಲಮ್ಮ ವೇಮನನನ್ನು ಅಭಿರಾಮಯ್ಯನವರ ಸತ್ಸಂಗದಲ್ಲಿರುವಂತೆ ನೋಡಿಕೊಂಡಳು. ಅನಂತರದಲ್ಲಿ ಅಂಬಿಕಾಯೋಗಿಯ ಶಕ್ತಿಪಾದ ಪ್ರಯೋಗದಿಂದ ವೇಮನನು ಸಿದ್ಧಿ ಪುರುಷನಾಗಿ ದೇಶ ಸಂಚಾರಗೈದರು. ಆತ ಮನೆಗೆ ಬರಲಿಲ್ಲ. ಇತ್ತ ಕೊಂಡವೀಡುವಿನ ಅರಮನೆಯಲ್ಲಿ

ಎಲ್ಲರ ಪ್ರೀತಿಗೆ ಪಾತ್ರಳಾದ ಮಲ್ಲಾಂಬೆ ಜನಾನುರಾಗಿಯಾಗಿ, ಭಕ್ತಿ ಪ್ರತಿಪಾದಕಳಾಗಿ, ಭರಮರಡ್ಡಿಯ ಮುದ್ದಿನ ಮಡದಿಯಾಗಿ, ಶ್ರೀ ಮಲ್ಲಿಕಾರ್ಜುನ ದೇವನ ಪರಮ ಭಕ್ತೆಯಾಗಿ, ದಾನ–ಧರ್ಮಾದಿ ಪುಣ್ಯ ಕಾರ್ಯಗಳಲ್ಲಿ ಮಗ್ನಳಾಗಿ, ಸಾಧು–ಸಂತ–ಶರಣರು–ಮಹಾತ್ಮರು ಬಂದರೆ ಅವರ ಸೇವೆ ಮಾಡುತ್ತ, ಸಮಾಧಾನ–ಶಾಂತಿಯ ಸಾಗರವಾಗಿ ಹುಟ್ಟಿದ ಮನೆಗೂ, ಕೊಟ್ಟ ಮನೆಗೂ ಕೀರ್ತಿ ಬರುವಂತೆ ಬಾಳುತ್ತಿದ್ದಳು, ಇದ್ದರ ಇರಬೇಕು ಹೇಮರಡ್ಡಿ ಮಲ್ಲಮ್ಮನಂತೆ ಎಂಬುದಾಗಿ ಚಿರಕಾಲವೂ ಹೇಳುವಂತೆ ಬಾಳಿದವಳು ಸಾಧ್ವಿ ಮಲ್ಲಮ್ಮ.

ತಾಯ ಗರ್ಭದಿಂದ ತಾಂ ಬರುವ ಸಮಯದಿ
ಮೊದಲು ವಸ್ತ್ರಮಿಲ್ಲ ತುದಿಗುಮಿಲ್ಲ
ನಡುವೆ ಬಟ್ಟೆಯುಡುವುದೇಕೆಂದು ತಿಳಿಯಿರಿ
ವಿಶ್ವತೋಭಿರಾಮ ಕೇಳು ವೇಮಾ

ಎಂದು ಮುಂತಾಗಿ ಅನುಭವಜನ್ಯವಾದ ಪದಗಳನ್ನು ರಚಿಸುತ್ತಾ ಹೇಳುತ್ತಾ ಸಂಚರಿಸತೊಡಗಿದನು. ಈತ ಆಶುಕವಿ, ಹೇಳಿದುದನ್ನು ಬರೆಯುವ ಲಿಪಿಕಾರರು ಶಿಷ್ಯ ಬಳಗದಲ್ಲಿದ್ದರು. ವೇಮನನ ಪದಗಳು ತೆಲುಗು ಭಾಷೆಯಲ್ಲಿ ಸಾಕಷ್ಟು ಗ್ರಂಥಗಳ ರೂಪದಲ್ಲಿ ಬಂದಿವೆ; ಕನ್ನಡದಲ್ಲಿಯೂ ಅನುವಾದಗೊಂಡಿವೆ.

ಆತ್ಮಜ್ಞಾನಿಯಾದ ವೇಮನನ ಪದಗಳಲ್ಲಿ ಲೌಕಿಕದ ಎಲ್ಲ ವಿಷಯಗಳ ವಿವೇಚನೆಯನ್ನಲ್ಲದೇ ಧರ್ಮ, ಅಧ್ಯಾತ್ಮಯೋಗ ಮುಂತಾದ ಅಲೌಕಿಕ ಸಂಗತಿಯ ವಿಶ್ಲೇಷಣೆಯೂ ತುಂಬಿದೆ. ಮಹಾಯೋಗಿ ವೇಮನನಿಗೆ ಆತ್ಮೋನ್ನತಿಯ ಸಾಧನೆಯ ಫಲವಾಗಿ ಕೆಲವು ಸಿದ್ಧಿಗಳು ವಶವಾಗಿ ಅವನು ಕೆಲವು ಪವಾಡಗಳನ್ನು ಮೆರೆದಿದ್ದಾನೆ. ವೇಮನನು ಮುಟ್ಟಿದುದೆಲ್ಲವೂ ಚಿನ್ನವಾಗುತ್ತಿತ್ತು. ಬಂಗಾರ ತಯಾರಿಸುವ ಕಲೆಯೂ ಆತನಿಗೆ ಸಿದ್ಧಿಸಿತ್ತೆಂಬುದು ಆತನ ಪದ್ಯಗಳಿಂದ ತಿಳಿದು ಬರುತ್ತದೆ. ಇಂತಹ ಮಹಾನುಭಾವನನ್ನು ನೀಡಿದ ಮಹಾ ಮಾತೆ ಮಲ್ಲಮ್ಮನನ್ನು ಎಷ್ಟು ಸ್ಮರಿಸಿದರೂ ಕಡಿಮೆಯೇ ಸರಿ. ತಾಯಿಗಿಂತ ಮಗ ದೊಡ್ಡವನೆಂಬ ಮಾತಿಗೆ ಸಾಕ್ಷಿಯೆಂಬಂತೆ ವೇಮನನ ಬದುಕಾಯಿತು. ಅಂದು ಮಲ್ಲಮ್ಮನು ತನ್ನ ಮೈದುನನಿಗೆ ಕರಾರಿನೊಂದಿಗೆ ತನ್ನ ಮೂಗುತಿಯನ್ನು ನೀಡದಿದ್ದರೆ ಭಾರತೀಯರು ಒಬ್ಬ ಮಹಾಯೋಗಿಯನ್ನು ಕಾಣುವ ಭಾಗ್ಯವನ್ನು ಕಳೆದುಕೊಳ್ಳುತ್ತಿದ್ದರು. ಮಹಾಮಾತೆ ಹೇಮರಡ್ಡಿ ಮಲ್ಲಮ್ಮನ ಕೊಡುಗೆಯೇ, ಪ್ರೀತಿ–ವಾತ್ಸಲ್ಯ–ಕರುಣೆಯೇ ವೇಮನನನ್ನು ಮಹಾ ಯೋಗಿಯನ್ನಾಗಿಸಿತು.



**ಮಲ್ಲಮ್ಮನಿಂದ ಪರಿವರ್ತಿತನಾದ ವೇಮನ :**

ಚಿತ್ರರಂಜನಿಯ ವ್ಯಾಮೋಹವನ್ನು ಪೂರೈಸಿದ ವೇಮನನಲ್ಲಿ ಒಂದು ಅತರ್ಕ್ಯವಾದ ಬದಲಾವಣೆಯು ಆಯಿತು. ಸ್ತ್ರೀ ವಿಷಯದಲ್ಲಿ ಜುಗುಪ್ಸೆಯುಂಟಾಯಿತು. ಅವನಲ್ಲಿ ಉಪರತಿ, ವೈರಾಗ್ಯ ಹುಟ್ಟಿತ್ತು. ಇನ್ನು ಮೇಲೆ ಈ ದುರ್ನೀತಿಯನ್ನು ಬಿಡಬೇಕೆಂಬ ಚಿತ್ತವು ಅವನಲ್ಲಿ ಬಲಿಯಿತು, ಅವನು ವೈರಾಗ್ಯಶೀಲನಾದನು. ಆಗ ಅವನಿಗೆ ಅರಮನೆಯ ಸುಖ–ಭೋಗಗಳು ತ್ಯಾಜ್ಯವಾಗ ಹತ್ತಿದವು. ಮುಂದೆ ಅವನು ತಮ್ಮ ಅಣ್ಣಂದಿರಿಂದ ಕೆಲವು ಭೂಮಿಯನ್ನು ಪಡದುಕೊಂಡು, ಅದನ್ನು ತಾನೇ ಉಳುತ್ತ ಶಿವಶರಣರಂತೆ ಕಾಯಕ ತತ್ಪರನಾಗಿ ಜೀವನ ಸಾಗಿಸುತ್ತ ಮುನ್ನಡೆದನು ಎಂದುದಾಗಿ ಡಾ. ಫ.ಗು.ಹಳಕಟ್ಟಿಯವರು ವೇಮಣ್ಣಯೋಗಿಯ ವಚನಗಳು ಎಂಬುದರ ಪ್ರಸ್ತಾವನೆಯಲ್ಲಿ (ಪುಟ–೩) ನಿರೂಪಿಸಿರುವುದನ್ನೇ ಎತ್ತಿ ಹೇಳಲಾಗಿದೆ. ಇದರಿಂದಾಗಿ ಶಿವಶರಣರ ತತ್ವ ಇವರ ಪದ್ಯಗಳ ಮೇಲಿಂದ ವೇಮನನು ವೀರಶೈವ ಧರ್ಮವನ್ನು ಸ್ವೀಕರಿಸಿದ್ದನೆಂಬುದು ವಿದಿತವಾಗುತ್ತದೆ.

ಡಾ. ಗು.ಹಳಕಟ್ಟಿಯವರು ಸಂಪಾದಿಸಿದ ಪುಸ್ತಕದಲ್ಲಿ ಉದಾಹರಿಸಿದ ಪದ್ಯಗಳನ್ನು ಗಮನಿಸಿದರೆ ಶಿವಶರಣರಂತೆಯೇ ಬಳಸಿದ ವಚನೋಕ್ತಿಗಳಿರುವುದು ಕಂಡು ಬರುತ್ತದೆ. ಅವು ಯಾವುವೆಂದರೆ–

ಶಿವನು ತನ್ನಲ್ಲಿಯೇ ಇದ್ದಾನೆ. ದೇವರು ಇರುವದು ನಿಜ, ಬ್ರಹ್ಮಜ್ಞಾನದ ರೀತಿ, ಯೋಗದ ರೀತಿ, ಮಂತ್ರ ತಂತ್ರದ ತಂತ್ರಗಳು, ಉಪಾಸನಾದಿಗಳು, ವ್ರತಗಳಿಲ್ಲ, ಜ್ಯೋತಿಷ್ಯ–ರೂಢಮೂಲ ಕಂದಚಾರ ಶಕುನಗಳಿಲ್ಲ, ಮೂರ್ತಿಗಳನ್ನು ಪೂಜಿಸದಿರುವುದು, ತೀರ್ಥಯಾತ್ರೆ ಮಾಡದಿರುವುದು, ಜಾತಿ ಭೇದವನ್ನು ನಿರಾಕರಿಸುವುದು, ಸದ್ಗುಣಿಯೇ ಸದಾಚಾರಿಯೇ ಉಚ್ಚ ಕುಲದವನು, ಹೊಲೆಯನಾರು? ಇಂತಹ ಶೀರ್ಷಿಕೆಗಳ ಕೆಳಗೆ ಬಂದಿರುವ ಪದ್ಯಗಳನ್ನು ಓದುಗರು ಗಮನಿಸಬೇಕು. ಹಾಗೆಯೇ ನಿಜವಾದ ಲಿಂಗವಂತನಾರು? ಬ್ರಹ್ಮ, ವಿಷ್ಣು, ರುದ್ರರು, ಮೋಕ್ಷ ಸಂಪಾದನೆ, ವೇಮನಯೋಗಿಯ ರೀತಿ ಈ ಶೀರ್ಷಿಕೆಗಳ ಕೆಳಗಿನಲ್ಲಿಯ ಉಕ್ತಿಗಳನ್ನು ಸಹ ಗಮನಿಸಬೇಕು. ಇವುಗಳಲ್ಲಿ ಶಿವಶರಣರ ತತ್ವಗಳನ್ನು ತನ್ನದೇ ಆದ ಸ್ವತಂತ್ರ ರೀತಿಯಿಂದ ವಿವೇಚಿಸಿರುವುದು ಕಂಡು ಬರುತ್ತದೆ. ವೇಮನನು ತಾನು ರಾಜವಂಶದವನಾದರೂ ಅವನು ತಾನು ಒಕ್ಕಲಿಗನೆಂದೂ ಹೇಳಿಕೊಂಡಿದ್ದಾನೆ. ಅವನು ತನ್ನ ಅಣ್ಣನಿಂದ ಭೂಮಿಯನ್ನು ಪಡೆದುಕೊಂಡು ಒಕ್ಕಲುತನವನ್ನು ಮಾಡುವವನಾಗಿದ್ದನು. ಆದರೆ ಅವನು ಸಾಮಾನ್ಯ ಯೋಗಿಗಳಂತೆ ಸಂಸಾರವನ್ನು ತ್ಯಜಿಸಿ ಭಿಕ್ಷೆಯ ಮೇಲೆ ಅವಲಂಬಿಸಿಲ್ಲ. ವೀರಶೈವ ಶಿವಯೋಗಿಯಂತೆ ಕಾಯಕದಿಂದ ಜೀವಿಸುವವನಾಗಿದ್ದನು ಎಂಬುದಾಗಿ ಡಾ. ಫ.ಗು.ಹಳಕಟ್ಟಿಯವರ ಮಾತನ್ನಿಲ್ಲಿ ಗಮನಿಸಲಾಗಿದೆ.

**ಅಭಿರಾಮಯ್ಯನ ಸ್ನೇಹ ಸಂಪಾದನೆಯಲ್ಲಿ ವೇಮನ :**

ಅಭಿರಾಮಯ್ಯನೆಂಬ ಅಕ್ಕಸಾಲಿಗರು ಅರಸರಲ್ಲಿಗೆ ಯಾವಾಗಲೂ ಬರುತ್ತಿದ್ದ; ಆತ ಅರಮನೆಯ ಸ್ತ್ರೀಯರಿಗೆ ಆಭರಣಗಳನ್ನು ಮಾಡಿಕೊಡುತ್ತಿದ್ದ. ಅವನು ಅತ್ಯಂತ ದೇವಭಕ್ತನೂ ಆಗಿದ್ದನು. ಆತ ವೇಮನನಲ್ಲಿ ಪರಿವರ್ತನೆಯ ಗುಣವನ್ನು ಕಂಡು ಅವರಿಬ್ಬರಲ್ಲಿಯೂ ಪರಸ್ಪರ ಸ್ನೇಹವರ್ಧಿಸಿತು. ಅಭಿರಾಮಾಯ್ಯನು ವೀರಭದ್ರ ವಿಜಯ ಮುಂತಾದ ಸ್ತೋತ್ರಗಳನ್ನು ಹೇಳುತ್ತ ಪಟ್ಟಣದ ಸಮೀಪದಲ್ಲಿರುವ ಒಂದು ಗುಹೆಯಲ್ಲಿದ್ದ ಒಬ್ಬ ಶಿವಯೋಗಿಯನ್ನು ಸಂದರ್ಶಿಸುತ್ತ ಅವನಿಂದ ಅವನು ಉಪದೇಶ ಪಡೆಯುವವನಾಗಿದ್ದನು. ವೇಮನನು ಇದನ್ನು ತಿಳಿದುಕೊಂಡನು. ತಾನೂ ಶಿವಯೋಗಿಯಾಗಬೇಕು ಮತ್ತು ಶಿವಯೋಗಿಯಾಗಿ ಮಂತ್ರೋಪದೇಶವನ್ನು ಹೊಂದಬೇಕೆಂದು ಅಪೇಕ್ಷಿಸಹತ್ತಿದನು. ಮತ್ತು ಅವನು ಆ ಮೇರೆಗೆ ಉಪದೇಶವನ್ನು ಹೊಂದಿದನು. ಆದರೆ ವೇಮನನು ಬೇರೆ ಯೋಗಿಗಳಂತೆ ಯೋಗಾಭ್ಯಾಸ ನಿರತನಾಗಿ ಏಕಾಂತವಾಸವನ್ನು ಬಯಸಲಿಲ್ಲ. ಜನರಿಗೆ ಧರ್ಮ, ನೀತಿ, ನ್ಯಾಯ, ಸತ್ಯ, ಸಂಸಾರದ ನಡೆ–ನುಡಿ ಇವುಗಳನ್ನು ಬೋಧಿಸುತ್ತ ಕಾಲಕಳೆಯುತ್ತ ಬಂದನು. ಅವನು ಈ ಹೊಸ ಹಾದಿಗೆ ಕಾರಣನಾದವನು. ಅಭಿರಾಮಯ್ಯನೆಂದು ಭಾವಿಸಿ ತಾನು ರಚಿಸಿದ ಪ್ರತಿಯೊಂದು ಪದ್ಯದ ಅಂತ್ಯದಲ್ಲಿ **'ವಿಶ್ವತೋಭಿರಾಮ ಕೇಳೊ ವೇಮ'** ಎಂಬ ಮುದ್ರಿಕೆಯನ್ನು ಇಟ್ಟುಕೊಂಡು ಅವುಗಳನ್ನು ರಚಿಸಿದ್ದಾನೆ. ತಾನು ಬೋಧಿಸುವ ತತ್ತ್ವಗಳು ಹೆರವರಿಗೋಸ್ಕರವೆಂದು ಜನರು ತಿಳಿಯಬಾರದು. ಇದು ಅಹಂಕಾರದ ಮಾತಾದೀತೆಂಬ ಸಂಶಯವು ಜನರಿಗೆ ಬರಬಾರದೆಂತಲೂ ಅವನು ತನ್ನ ದುರ್ಗುಣಗಳನ್ನು ತಾನೇ ಮೊದಲು ದೂರ ಮಾಡಿಕೊಳ್ಳಲು ತನ್ನನ್ನು ತಾನೇ ಬೋಧಿಸಿಕೊಂಡಂತೆಯೂ ಈ ಪದ್ಯಗಳ ರಚನೆಯಲ್ಲಿ ಕಾಣುತ್ತೇವೆ. ಅಭಿರಾಮಯ್ಯನ ಸಹಾಯ ಸಂಪರ್ಕದಿಂದ ವೇಮನನು ಮಹಾಯೋಗಿಯಾದನೆಂದು ಹೇಳಲೇಬೇಕಾಗುತ್ತದೆ. ಒಬ್ಬ ವ್ಯಕ್ತಿಯ ಪರಿವರ್ತನೆ, ಬದಲಾವಣೆ ಆಗುವಲ್ಲಿ ಸ್ನೇಹಿತರ ಪಾತ್ರ, ಗುರು–ಹಿರಿಯರ ಪಾತ್ರ, ತಂದೆ–ತಾಯಿ–ಸಹೋದರ–ಸಹೋದರಿಯರ ಪಾತ್ರಗಳು ಮಹತ್ವದ್ದಾಗುತ್ತದೆಯೆಂಬುದರಲ್ಲಿ ಸಂದೇಹವೇ ಇಲ್ಲ.

**ಪರಿವರ್ತನೆಯಾದ ವೇಮನ :**

ದೇವರದಾಸಿಯ ಘಟನೆಯಿಂದ ವೇಮನ ಲಜ್ಜಿತನಾಗಿದ್ದ. ಅವನ ಮನಸ್ಸು ರೋಷಿ ಹೋಗಿತ್ತು. ಭೋಗದಲ್ಲಿ ಮೈಮರೆತಿದ್ದ ವೇಮನನಿಗೆ ಸತ್ಯ ದರ್ಶನದ ಕಡೆಗೆ ಮುಖ ಮಾಡಿತು. ತನ್ನನ್ನು ಕುರಿತು ಹೀನ ಭಾವನೆಯುಂಟಾಗಿತ್ತು. ಶಾರೀರಿಕ–ಮಾನಸಿಕ ದೌರ್ಬಲ್ಯವಾಗಿತ್ತು. ಇದರಿಂದ ಮುಕ್ತಗೊಳ್ಳಲು ಮನಸ್ಸು ಪರಿತಪಿಸುತ್ತಿತ್ತು. ಅಂತಹ ಸಮಯದಲ್ಲಿ ತನಗಿಂತಲೂ ಹಿರಿಯನಾದ ಬಾಲ್ಯ ಸ್ನೇಹಿತ ಅಭಿರಾಮ



ನೆರವಾದ. ಅಭಿರಾಮನಲ್ಲಿ ಸ್ನೇಹಿತ ವೇಮನನು ಮನದಾಳದ ನೋವನ್ನು ವಿವರಿಸಿದ. ತನಗೆ ಲೌಕಿಕ ಸುಖವು ಬೇಡ, ಪಾರಮಾರ್ಥಿಕ ಆನಂದ ಅನುಭವಿಸಬೇಕು. ಲೋಕಕ್ಕೂ ದಾರಿದೀಪವಾಗಬೇಕೆಂದು ಆತನಲ್ಲಿ ತಿಳಿಯಪಡಿಸಿದ. ಈತನ ಮಾತನ್ನು ಗಮನಿಸಿದ ಅಭಿರಾಮ ಯಾವುದಕ್ಕೂ ಶ್ರದ್ಧೆಯು ಬೇಕು. ಶ್ರದ್ಧೆಯೇ ಜೀವನಕ್ಕೆ ಆಧಾರ. ಶ್ರದ್ಧೆಯಿಲ್ಲದಿದ್ದರೆ ಏನನ್ನೂ ಸಾಧಿಸಲಾಗದು. ಶ್ರದ್ಧೆಯು ಕೇವಲ ಆಶ್ರಯ ಸ್ಥಾನವಲ್ಲ, ಅದು ಮಹಾನ್ ಪ್ರೇರಕ ಶಕ್ತಿಯೂ ಹೌದೆಂದ. ತಾತ್ಕಾಲಿಕ ವೈರಾಗ್ಯದಿಂದ ಶ್ರದ್ಧೆ ಹುಟ್ಟಬಹುದು. ಜೀವನ ಗುರಿ ಸಾಧನೆಗೆ ನಿಜವಾದ ಶ್ರದ್ಧೆ ಜೊತೆಗೆ ಗುರಿ ಸಾಧನೆಗೆ ಸತತ ಪರಿಶ್ರಮಿಸುವ ಮನೋಬಲ ಬೇಕೆಂದು ಅಭಿರಾಮಯ್ಯ ಹೇಳಿದನು. ಇಷ್ಟು ಹೇಳಿದ ಅಭಿರಾಮನೇ ವೇಮನನನ್ನು ಪರೀಕ್ಷಿಸಲಾರಂಭಿಸಿದ.

ವೇಮನನಲ್ಲಿ ಬಂದಿದ್ದ ಬದಲಾವಣೆಗೆ ಅದೇನು ಅಭಾವ ವೈರಾಗ್ಯದಂತಹ ತಾತ್ಕಾಲಿಕ ವೈರಾಗ್ಯವಾಗಿರಲಿಲ್ಲ. ನಿಜವಾಗಿಯೂ ವೇಮನನ ಅಂತರಾಳ ಬೆಂದಿತ್ತು, ಪರಿಪಕ್ವವಾಗಿತ್ತು ಎಂಬುದನ್ನು ಅರಿತ ಅಭಿರಾಮಯ್ಯ! ಪಾರಮಾರ್ಥದ ಅಭಿರುಚಿ ವೇಮನನಲ್ಲಿ ಮತ್ತಷ್ಟು ಗಾಢವಾಗುತ್ತ ಬಂದಿತು. ಪಾರಮಾರ್ಥಿಕ ಉನ್ನತಿಯನ್ನು ಸಾಧಿಸಲು ನಿರ್ಭಯತೆ ಬೇಕು. ನಿರ್ಭಯತೆಯೆಂದರೆ ಮನೆಯಲ್ಲಿ, ಮನದಲ್ಲಿ, ಜನರಲ್ಲಿ, ವನದಲ್ಲಿ, ಜೀವನದಲ್ಲಿ, ಸಾವಿನಲ್ಲಿ ಎಲ್ಲಿಯೂ ಭಯವಿಲ್ಲದಿರುವ ಸ್ಥಿತಿಯು. ಅಂತಹ ಸ್ಥಿತಿ ತಲುಪಿದಾಗ ಪರಮಾರ್ಥಿಕ ಯಶಸ್ಸಿನ ಮಾರ್ಗ ಸುಲಭವಾಗುತ್ತದೆಯೆಂಬುದನ್ನು ಅಭಿರಾಮನು ವೇಮನನಿಗೆ ಮನಗಾಣಿಸುವ ಅವಶ್ಯಕತೆಯಿಲ್ಲದ ಸ್ಥಿತಿಗೆ ವೇಮನ ತಲುಪಿದನು.

ಸತ್ವ, ರಜ, ತಮ ಈ ಮೂರೂ ಗುಣಗಳು ವಿಶ್ವವನ್ನೇ ವ್ಯಾಪಿಸಿವೆ. ಮಾನವನ ಮನಸ್ಸು ಕೂಡಾ ಈ ಮೂರು ಗುಣಗಳಿಂದ ಕೂಡಿದ್ದೇಯಾಗಿದೆ. ಮನಸ್ಸಿನ ಈ ತ್ರಿಗುಣಾತ್ಮಕ ಆವರಣ ಆತ್ಮವನ್ನು ಮುಚ್ಚಿ ಬಿಟ್ಟಿದೆ. ಕ್ರಮವಾಗಿ ತಮದಿಂದ ರಜೋಗುಣಕೇರಿ, ರಜೋಗುಣದಿಂದ ಸಾತ್ವಿಕತೆಯ ವಲಯದಲ್ಲಿ ಲೀನವಾಗಿ ಕೊನೆಗೆ ಅದರಿಂದಲೂ ಬೇರ್ಪಟ್ಟು, ಆತ್ಮ ಸ್ವರೂಪದ ದರ್ಶನ ಪಡೆಯುವ ಪರಮ ಗುರಿಯತ್ತ ವೇಮನ ಸಾಗುತ್ತಿರುವುದನ್ನು ಸಾತ್ವಿಕತೆಯ ಸಾಕಾರ ಮೂರ್ತಿಯಾಗಿದ್ದ ಅಭಿರಾಮಯ್ಯ ಗುರುತಿಸಿದ ಗುರುವಿನ ದರ್ಶನಕ್ಕೆ ಇದು ಸಕಾಲವೆಂದು ಭಾವಿಸಿ ಗುರುಗಳ ಶೋಧನೆಗಾಗಿ ವೇಮನನೊಂದಿಗೆ ಅರಣ್ಯಗಳನ್ನು ಅಲೆದಾಡಲಾ–ರಂಭಿಸಿದನು.

ಅನಂತರದಲ್ಲಿ ರಾಜಮಹೇಂದ್ರಿಯ ಹೊರವಲಯದ ಬೆಟ್ಟದಲ್ಲಿ ಸಂಚರಿಸುತಿದಾಗ ಗುಹೆಯೊಂದರಿಂದ ಓಂಕಾರನಾದ ಕೇಳಲಾರಂಭಿಸಿತು. ವೇಮನನು ಓಂಕಾರನಾದದತ್ತ ಆಕರ್ಷಿತನಾದ. ಆ ಸುನಾದವನ್ನಾಲಿಸುತ್ತ ಅಲ್ಲಿಯೇ

ಮೈಮರೆತು ಕುಳಿತ ಅಭಿರಾಮನು ಮಿತ್ರನನ್ನು ಜಾಗೃತ ಸ್ಥಿತಿಗೆ ತರುವ ಪ್ರಯತ್ನ ಮಾಡಲು ಹೋಗಿ ವಿಫಲನಾದ. ಕಳವಳಗೊಂಡ ಅಭಿರಾಮನು ಹಿರಿಯರನ್ನು ಕರೆಯಲು ತೆರಳಿದ, ಕೆಲಕಾಲದ ನಂತರ ಗುಹೆಯಿಂದ ದಿವ್ಯ ಪ್ರಕಾಶವು ಹೊರಹೊಮ್ಮಿತು. ಯೋಗಿಯೊಬ್ಬ ಕಾಣಿಸಿಕೊಂಡರು. ವೇಮನನನ್ನು ನೋಡಿ "ಮಗು ಎಷ್ಟು ಕಾಲ ಕಾಯಿಸಿದೆ. ಬೇಗ ಬರಬಾರದಾಗಿತ್ತೆ? ಎಂದು ಹೇಳಿದ ಯೋಗಿಯು ತನ್ನ ಅಂತಃಕರಣದಿಂದ ಆಶೀರ್ವದಿಸಿದ. ತಲೆಯ ಮೇಲೆ ಹಸ್ತವನ್ನಿಟ್ಟು, ತಾನು ಸಂಪಾದಿಸಿದ ತಪಃಶಕ್ತಿಯನ್ನು ಧಾರೆಯೆರೆದ. ವೇಮನನಿಗೆ ಎಲ್ಲವೂ ಅರಿವಿಗೆ ಬರುವುದಕ್ಕೆ ಮೊದಲೇ ಓಂಕಾರ ನಾದದೊಂದಿಗೆ ಯೋಗಿ ಕಣ್ಮರೆಯಾಗಿದ್ದ, ಯೋಗಿಯ ಕೃಪಾಶೀರ್ವಾದದ ಬಲದಿಂದ ವೇಮನನೂ ಸಂಪೂರ್ಣ ಬದಲಾಗಿದ್ದ. ದಿವ್ಯ ತೇಜಸ್ಸು ಅವನ ಮುಖ ಮಂಡಲದಲ್ಲಿ ರಾರಾಜಿಸುತ್ತಿತ್ತು. ನಡೆದುದೆಲ್ಲವನ್ನು ಮಿತ್ರನಾದ ಅಭಿರಾಮನಿಗೆ ತಿಳಿಸಿದ ಸನ್ಮಾರ್ಗದಲ್ಲಿ ಜೊತೆಯಾಗಿ ನಡೆದ; ನಡೆಸಿದ ಅಭಿರಾಮನನ್ನು ಎಂದೆಂದಿಗೂ ಲೋಕ ಮರೆಯದಂತೆ ಮಾಡಬೇಕೆಂದ ವೇಮನನು ನಿರ್ಧರಿಸಿದನು. ಮಿತ್ರ ಅಭಿರಾಮಯ್ಯನಿಂದಲೇ ಯೋಗಿಯ ನೆಲೆಬೆಲೆಯನ್ನು ಅರಿತುಕೊಂಡು ಮುನ್ನಡೆದನು.

**ಲೋಕ ಸಂಚಾರಿ ವೇಮನಯೋಗಿ :**

ಯೋಗಿ ವೇಮನನು ಕೊಂಡವೀಡು ಸೀಮೆಯನ್ನು ತೊರೆದು ನಡೆದೇ ಬಿಟ್ಟನು. ತಂದೆ–ತಾಯಿಗಳಿಗೆ ಒಂದು ಮಾತನ್ನೂ ಹೇಳಲಿಲ್ಲ. ಏಕೆಂದರೆ ಮಗನ ದಿಗಂಬರತ್ವವನ್ನು ಕಾಣಲು ಅವರು ಒಪ್ಪಲಿಲ್ಲ. ದಿಗಂಬರ ವೇಮನ, ದೀಕ್ಷಾನಂತರ ಸ್ವಂತದ ಮನೆಗೆ ಬರುವಂತಿರಲಿಲ್ಲ. ಉಪದೇಶ ನೀಡಿ ಸರಿಯಾದ ದಾರಿಗೆ ತಂದ ಅತ್ತಿಗೆ ಮಲ್ಲಮ್ಮನೂ ಈತನ ದೀಕ್ಷೆ–ದಿಗಂಬರತ್ವಗಳ ಆಘಾತಕಾರಿ ಸುದ್ದಿಯಿಂದ ವಿಹ್ವಲಗೊಂಡಿದ್ದಳು. ತಾಯಿಯ ಅಪೇಕ್ಷೆ, ಕಾಶೀ ವಿಶ್ವನಾಥನ ದರ್ಶನವನ್ನು ವೇಮನನೊಂದಿಗೆ ಮಾಡಬೇಕೆಂಬುದಾಗಿತ್ತು. ತ್ಯಾಗದ ಹಾದಿಯನ್ನು ಹಿಡಿದ ವೇಮನ ನಿರಾಕರಿಸಿದ. ಇತ್ತ ವೇಮನ ಚಂದನೂಲ ಮಂಡಲದ ಆರೇಳು ಗ್ರಾಮಗಳಲ್ಲಿ ಅಲೆದಾಡಿ, ನೂರಾರು ಪದ್ಯಗಳನ್ನು ರಚಿಸಿ, ಕೊಂಡವೀಡು ಗುಹೆಗೆ ಮರಳಿದ್ದನು. ಕಾಶಿಯ ತೀರ್ಥಯಾತ್ರೆ ಮುಗಿಸಿಕೊಂಡು ತಾಯಿಯು ತಮ್ಮ ಪರಿವಾರದೊಂದಿಗೆ ಬಂದ ವಿಷಯ ಶಿಷ್ಯನ ಮೂಲಕ ತಿಳಿದುಕೊಂಡರು ವೇಮನ. ಮಾರನೆಯ ದಿನ ತೀರ ನಸುಕಿನಲ್ಲಿ ಯೋಗಿವೇಮನ ಗವಿಯಿಂದ ಹೊರಟು, ಇಬ್ಬರು ಶಿಷ್ಯರು ಸಮೇತ ಮಾತೃ ದರ್ಶನಕ್ಕೆ ಆಗಮಿಸಿದರು. ಅಲ್ಲಿ ಬಹಳ ಹೊತ್ತು ನಿಲ್ಲದೆ ಹೋಗಲು ಅಪ್ಪಣೆ ಕೊಡಿ ಎಂದು ಕೇಳಿದ. ಅವಳ ಗಂಭೀರ ಮೌನವೇ ಉತ್ತರ ಹೇಳಿತು. ಇತರರೆಲ್ಲ ವೇಮನ ಯೋಗಿಗೆ ದೀರ್ಘ ದಂಡವತ್ ನಮಸ್ಕಾರ ಸಲ್ಲಿಸಿದರು.



ವೇಮನನ ಮನಸ್ಸು ಪರಿವರ್ತನೆಯಾಗಿ ಅರಮನೆಯ ವೈಭವವನ್ನು ಹೊಂದಲೆಂದು ತಾಯಿಯು ಕಾಶೀ ವಿಶ್ವನಾಥನಲ್ಲಿ ಹರಕೆ ಹೊತ್ತದ್ದು ಫಲಿಸಲಿಲ್ಲವೆಂಬುದು ಇಲ್ಲಿ ಮುಖ್ಯವಾಗುತ್ತದೆ.

ಕೊಂಡವೀಡುವಿನಿಂದ ತಂಜಾವೂರು ಕಡೆಗೆ ವೇಮನನು ಪ್ರಯಾಣ ಮಾಡಲು ಇಚ್ಛಿಸುತ್ತಾರೆ. ಅವರೊಂದಿಗೆ ರಾಮರೆಡ್ಡಿ ಮತ್ತು ನೀಲಕಂಠ ಎಂಬುವವರು ಶಿಷ್ಯರಿಬ್ಬರೂ ಹೋಗುತ್ತಾರೆ. ತಂಜಾವೂರು ತಲುಪುವಷ್ಟರಲ್ಲಿ ಹಾದಿಯಲ್ಲಿರುವ ಹಲವಾರು ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಇವರದು ಕಾಲ್ನಡಿಗೆಯ ಪ್ರವಾಸ. ಯಾವುದೇ ಊರಿನಲ್ಲಿ ವಾಸಿಸುವುದು, ಧರ್ಮಶಾಲೆ ಇಲ್ಲವೆ ಹುಣಸೇ ಅಥವಾ ಬೇವಿನ ಮರದಡಿಯಲ್ಲಿ ತಂಗುತ್ತಿದ್ದರು. ಇವರಿರುವ ಸ್ಥಳಗಳಲ್ಲಿ ಜಿಜ್ಞಾಸುಗಳು, ಚಿಂತಕರು ಸೇರುತ್ತಿದ್ದರು. ನೀವು ಎಲ್ಲಿಯವರು, ಹೆಸರು ಏನು? ಎಂದು ಪ್ರಶ್ನಿಸುವಷ್ಟರಲ್ಲಿಯೇ ವೇಮನಯೋಗಿಯ ಪರವಾಗಿ ಪದ್ಯದಲ್ಲಿಯೇ ಉತ್ತರಿಸುತ್ತಿದ್ದನು.

ಊರು ಕೊಂಡವೀಡು ವಾಸ ಪಶ್ಚಿಮ ವೀಧಿ
ಮೂಗ ಚಿಂತಪಲ್ಲೆ ಮೊದಲ ಮನೆಯು
ಎಟ್ಟಿ ರೆಡ್ಡಿ ಕುಲವು ಅದನೇನು ಹೇಳ್ವುದು?
ವಿಶ್ವದಾಭಿರಾಮ ಕೇಳು ವೇಮಾ

ಎಂದುದಾಗಿ ಚಿಂತಕರು ಕೇಳಿದ ಪ್ರಶ್ನೆಗೆ ಉತ್ತರಿಸಿದನು. ತಂಜಾವೂರಿನಲ್ಲಿ ಮುಂದಿನ ಹಲವಾರು ದಿನಗಳವರೆಗೆ ವಾಸ್ತವ್ಯ ಮಾಡಿ, ಅನಂತರ ವೇಮನ ಯೋಗಿ ಮತ್ತು ಶಿಷ್ಯರು ನೆಲ್ಲೂರು ಕಡೆಗೆ ಪ್ರಯಾಣ ಬೆಳೆಸಿದರು. ಇಲ್ಲಿ ಧರ್ಮ ತತ್ತ್ವ ಬೋಧೆ ನಡೆಯಲಿಲ್ಲವಾದ ಕಾರಣ ಸಾಹಿತ್ಯ ಕೃಷಿಯು ವಿಪುಲವಾಗಿ ನಡೆಯಿತು. ಮರು ಪ್ರಯಾಣದಲ್ಲೇ ಅಲ್ಲಲ್ಲಿಯ ಬೆಟ್ಟದ ಊರುಗಳಲ್ಲಿ ಬಿಡಾರ ಹೂಡುತ್ತಿದ್ದರು. ಕಾಲುವೆಯ ಇಲ್ಲವೆ ಕೆರೆಯ ಪಕ್ಕದ ದೊಡ್ಡ ದೊಡ್ಡ ಮರ, ಧರ್ಮಶಾಲೆ ಅಥವಾ ಊರ ಹೊರವಲಯದ ಪಾಳು ಬಿದ್ದ ಗುಡಿಗಳೇ ಇವರ ವಾಸ್ತವ್ಯದ ತಾಣಗಳಾಗಿದ್ದವು. ಭಿಕ್ಷಾಟನೆಯು ಇವರ ಉಪಜೀವನದ ವೃತ್ತಿಯಾಗಿತ್ತು. ರಾಮರೆಡ್ಡಿ ಮತ್ತು ನೀಲಕಂಠ ತಂದ ಭಿಕ್ಷಾನ್ನವೇ ಇವರ ನಿತ್ಯ ಆಹಾರವಾಗಿತ್ತು. ಎಲ್ಲಿಯೂ ಬಹಳ ದಿವಸಗಳವರೆಗೆ ನಿಂತುದುದಿಲ್ಲ. ಒಂದು ಸೋಮವಾರ ಶಿಷ್ಯರಿಬ್ಬರೂ ಭಿಕ್ಷಾಟನೆಗೆಂದು ಹೋದಾಗ ವೇಮನ ಯೋಗಿಯು ಇತ್ತ ಎದ್ದು ನಡೆದರು. ತೋಟದ ಬದಿಯ ಹಾದಿ ಹಿಡಿದು ಸಾಗಿದರು. ಅವರು ನಡೆಯುವುದು ಕಡಿಮೆಯಾದರೂ ಯೋಗ ಬಲದಿಂದ ಅವರ ಶರೀರಕ್ಕೊಂದು ಬಲ, ಚೈತನ್ಯ ಬಂದಿತ್ತು. ಹೀಗಾಗಿ ನಡಿಗೆಯಲ್ಲಿ ತೀವ್ರತೆ ಸಹಜವಾಗಿತ್ತು.

ವೇಮನರು ಬೀಡು ಬಿಟ್ಟ ಸ್ಥಳಕೆ ಭಕ್ತರು ಬಂದು ಸೇರುತ್ತಿದ್ದರು. ಅವರಲ್ಲಿ ರೈತರಿದ್ದರು. ಭಕ್ತರಿರುವಲ್ಲಿ ಅವರು ವಾರವಾರಗಟ್ಟಲೇ ಇರುತ್ತಿದ್ದರು. ರೈತನೊಬ್ಬ ಯೋಗಿಗಳನ್ನು ಕೇಳಿದ್ದು; ಏನ್ರಿ ಬುದ್ಧೀಜಿ ವೈಶಾಖವು ಮುಗಿಯುತ್ತ ಬಂತು, ಮಳೆಯೇ ಬಂದಿಲ್ಲ. ತಾವು ಮಳೆ ತರಿಸಿದ್ದೀರೆಂದು ಕೇಳಿದ್ದೇನೆ. ನಮ್ಮ ಮೇಲೂ ಕೃಪೆ ತೋರಿರಿ ಎಂದಾಗ ವೇಮನಯೋಗಿಯು ಕಣ್ಣು ಮುಚ್ಚಿ ಧ್ಯಾನಮಗ್ನರಾದರು. ಕೆಲವು ನಿಮಿಷಗಳುರುಳಿದ ಮೇಲೆ ಕಣ್ತೆರೆದರು. ದೇವರು ಕಣ್ತೆರೆದರೆ ಎಲ್ಲವೂ ಸರಿ ಹೋಗುವುದು ಎಂದರು. ತಾವು ಸಂಕಲ್ಪ ಮಾಡಿದರೆ ಸಾಧ್ಯವಲ್ಲವೆ ಯೋಗಿಗಳೇ ಎಂದ ರೈತ!

ಹನಿಯು ಬೀಳುವಂದ; ಹರಣ ತೊಲಗುವಂದ
ತಿಳಿಯಲಾರ ಘನನು ತಾನಿರಲೂ
ತಿಳಿಯವಾಗ ಕಲಿಯುಗ ಉಳಿಯುವುದು ಎಂತು?
ವಿಶ್ವಧಾಭಿರಾಮ ವೇಮ ಕೇಳು

ಎಂದು ಉಸುರುವಷ್ಟರಲ್ಲಿಯೇ ಧಾರಾಕರವಾದ ಮಳೆ ಸುರಿಯಿತು. ಇದೆಲ್ಲವೂ ಆ ದಯಾಮಯನಾದ ವೇಮನರ ಕರುಣೆ, ದೈವಲೀಲೆ ಎಂದು ಮುಗುಳು ನಕ್ಕರು ವೇಮನರು.

**ಮತ್ತೊಂದು ಘಟನೆ :**

ಅಂದು ಸೋಮವಾರ, ಶಿಷ್ಯರಿಬ್ಬರೂ ಭಿಕ್ಷಾಟನೆಗೆ ಹೋಗಿದ್ದರು. ವೇಮನರು ವಾಸವಾಗಿದ್ದ ತೋಟದ ಬದಿಯ ಗುಂಟ ಹೊರಟಿದರು. ಅಲ್ಲಿ ಒಂದು ಗುಡಿಸಲವಿತ್ತು. ಅದರಲ್ಲಿ ವಯಸ್ಸಾದ ಬಡ ಹಣ್ಣಾದ ದಂಪತಿಗಳು ವಾಸವಾಗಿದ್ದರು. ಒಲುಮೆಯನ್ನೇ ಕೊಟ್ಟುಕೊಂಡು ಬಾಳುತ್ತಿದ್ದರು. ತಮ್ಮ ಮನೆಯ ಮುಂದಿನ ಹಾದಿ ಹಿಡಿದು ನಗ್ನ ಯೋಗಿಯೊಬ್ಬರು ಬರುತ್ತಿದ್ದುದನ್ನು ಆ ಗುಡಿಸಲಿನ ಹೊರಗಟ್ಟೆಯ ಮೇಲೆ ಕುಳಿತಿದ್ದ ದಂಪತಿ ಕಂಡರು. ಅವರಿಗೆ ಆ ಹಿಂದಿನ ಬಾರಿ ತಮ್ಮ ಮನೆಗೆ ಮಹಾತ್ಮನೊಬ್ಬನು ಬರುತ್ತಾನೆಂದೂ, ನಿಮ್ಮಕಷ್ಟ ದೂರವಾಗುತ್ತದೆಯೆಂದು; ಎಂಬುದಾಗಿ ಇಬ್ಬರಿಗೂ ಸ್ವಪ್ನ ದರ್ಶನವಾಗಿತ್ತು. ಇಬ್ಬರೂ ಇಂಥ ಒಂದೇ ಬಗೆಯ ಸ್ವಪ್ನ ಕಂಡದ್ದು ಅಚ್ಚರಿಯಲ್ಲದೇ ಇದು ಮೊದಲನೆಯ ಬಾರಿ. ಯೋಗಿವರ್ಯ ಮನೆಯ ಸಮೀಪ ಬಂದರು. ಸುಂದರ ಯುವಕ. ದಿಕ್ಕೇ ಆತನಿಗೆ ಅಂಬರವಾಗಿತ್ತು. ಒಂದು ಬದಿಗೆ ನಿಂತು ಇಬ್ಬರೂ ಸ್ವಾಗತಿಸಿದರು. ಸ್ವಾಮೀ ನಮಗೆ ನಿನ್ನಿನ ದಿನ ಕನಸು ಬಿದ್ದಿತ್ತು. ಅದಿಂದು ನಿಜವಾಯ್ತು ನೋಡಿ? ಎಂದರು. ಯೋಗಿಯು ಮುಗುಳ್ನಕ್ಕರು.



ಆ ದಂಪತಿಗಳು ಗುಡಿಸಲಿನೊಳಗೆ ಬರಲು ವಿನಂತಿಸಿಕೊಂಡರು. ಯೋಗಿಗೆ ಕುಳಿತುಕೊಳ್ಳಲು ಹಳೆಯ ಕಂಬಳಿಯನ್ನು ಹಾಸಿದರು. ತಾಮ್ರದ ತಾಟಿನಲ್ಲಿ ತಾಮ್ರದ ತಂಬಿಗೆಯಲ್ಲಿ ನೀರು ತಂದ ವೃದ್ಧೆ ಅವರ ಪಾದ ತೊಳೆದು ಭಕ್ತಿಯಿಂದ ನಮಿಸಿದಳು.ವೃದ್ಧನೂ ನಮಿಸಿದ, ಯೋಗಿ ಕಂಬಳಿಯ ಮೆಲೆ ಕುಳಿತರು. ಯೋಗಿ ಹಸಿದಿರಬೇಕೆಂದು ತಮ್ಮ ತೋಟದಲ್ಲಿ ಬೆಳೆದ ಪಪ್ಪಾಯಿ ತಂದು ಕೊಯ್ದು ಹೋಳಿಸಿ ಬೀಜ ತೆಗೆದು ಯೋಗಿಯ ಮುಂದಿಟ್ಟರು. ಒಂದೆರಡು ಹೋಳು ತಿಂದು ಸಂತೃಪ್ತಪಟ್ಟರು. ದಂಪತಿಗಳು ನೋಡಿ ಸಂತಸಪಟ್ಟರೆ ದಾರಿ ಹೋಕರು ಇವರ ಗುಡಿಸಲಿನ ಮುಂದೆ ಹೋಗುವಾಗ ದಿಗಂಬರ ರೂಪಿ ಯೋಗಿಯನ್ನು ಕಂಡರು. ಆ ಬಡ ದಂಪತಿಗಳ ಗುಡಿಸಲಿಗೆ ಬರುವುದು ತಮ್ಮ ಘನತೆಗೆ ಕೀಳೆಂದು ಶ್ರೀಮಂತರು, ಉಚ್ಚ ಕುಲದವರು ದೂರದಿಂದಲೇ ನೋಡಿ ವೀಕ್ಷಿಸುತ್ತಿದ್ದರು. ನೆರೆದ ಜನರ ಮುಂದೆ ನಾಲ್ಕು ಸತ್ಸಂಗದ ಮಾತುಗಳನ್ನು ಆಡಿದರು. ಅವರಿಗದು ಅರ್ಥ ಆಯಿತೋ ಇಲ್ಲವೋ ಗೊತ್ತಿಲ್ಲ. ಒಂದೆರಡು ಗಂಟೆ ಸಮಯ ಕಳೆದಿರಬೇಕು. ಕೊನೆಗೆ ಯೋಗಿ ಗುಡಿಸಲೊಳಗೆ ಹೋಗಿ ಒಂದು ಮಡಕೆಯಲ್ಲಿ ಮೂತ್ರ ವಿಸರ್ಜಿಸಿ ಬಂದರು. ಅದನ್ನು ಜನರು ಮಕ್ಕಳು ನೋಡಿ ಕಸಿವಿಸಿಗೊಂಡರು. ವಯಸ್ಸಾದ ಜನರಿಗಿದು ತಿಳಿಗೇಡಿ ವರ್ತನೆಯೆನಿಸಿತು. ಆದರೆ ಆ ಗುಡಿಸಲಿನ ವೃದ್ಧ ದಂಪತಿಗಳಿಗೆ ತಮ್ಮ ಸ್ವಪ್ನ ದರ್ಶನವು ನೆನಪಾಗಿ, ಇದೊಂದು ಮಹಾಪುರುಷನ ಲೀಲೆ ಎನಿಸಿತು.

ಈ ಘಟನೆ ಅವರವರ ಭಾವಕ್ಕೆ ಅವರವರಿಗೆ ಚಿತ್ರ–ವಿಚಿತ್ರವಾಗಿ ತೋರಿತು. ಅನಂತರದಲ್ಲಿ, ಯೋಗಿ ಹೊರ ಬಂದು ವೃದ್ಧ ದಂಪತಿಗಳನ್ನು ಕುರಿತು ಹೀಗೆಂದು ನುಡಿದರು– **"ದೇವನು ನಿಮ್ಮ ಕೂಗಿಗೆ ಓಗೊಟ್ಟಿದ್ದಾನೆ. ನೀವಿನ್ನು ನೆಮ್ಮದಿಯಿಂದಿರಿ"** ಎಂದು ಆಶೀರ್ವದಿಸಿದರು. ಉಳಿದವರೆಲ್ಲ ಇವನೊಬ್ಬ ಹುಚ್ಚ! ಎಲ್ಲ ಜನರ ಎದುರಿಗೇ ಮಣ್ಣಿನ ಮಡಕೆಯಲ್ಲಿ ಮೂತ್ರ ವಿಸರ್ಜನೆ ಮಾಡಿರುವುದು ಮರುಳು ಶಂಕರದೇವರು ಎಂದು ಚಿಕ್ಕಮಕ್ಕಳು ಹಿಂಬಾಲಿಸಿದರು. ಈತ ಮೂತ್ರ ವಿಸರ್ಜಿಸಿದ ಬಗೆಯು ಊರೆಲ್ಲ ಸುದ್ದಿ ಪ್ರಸಾರವಾಗಿ ಹಬ್ಬಿತು. ಯುವಕನೊಬ್ಬ ಕೇಳಿದ ಎಲ್ಲಿ ಮೂತ್ರ ವಿಸರ್ಜನೆ ಮಾಡಬೇಕೆಂಬುದು ತಿಳಿಯುವುದಿಲ್ಲವೆ? ಎಂದು ಪ್ರಶ್ನಿಸಿದರು. ಆಗ ಯೋಗಿ ಪ್ರವರು ಅದೆಲ್ಲ ದೇವರಿಚ್ಛೆ ಎಂದು ಮುಗುಳ್ನಕ್ಕರು. ಇನ್ನೊಬ್ಬ ಅವರ ಚಿಕ್ಕ ಲಂಗೋಟಿ (ಕಚ್ಚುಟ) ವನ್ನೆಳೆದ. ಮತ್ತೊಬ್ಬ ಕಟ್ಟಿಗೆಯ ಕೋಲಿನಿಂದ ತಿವಿದರಲ್ಲದೇ ಖೊಳ್ಳೆಂದು ನಕ್ಕರು. ಇವನೂ ನಕ್ಕ, ಇಷ್ಟು ಮಾಡಿದರೂ ನಗುವೆಯಾ? ಎಂದು ಹೊಡೆದರು, ಬಡಿದರು, ವೇಮನರು ಮಾತಾಡಲೇಯಿಲ್ಲ. ಬೇರೆಯವರಿಗೆ ಬೀಳುವ ಏಟುಗಳನ್ನು ನೋಡುವಂತೆ ತಮಗೆ ಬೀಳುವ ಏಟುಗಳನ್ನು ಕಂಡರೆ ವಿನಾ ಹಡುಗರಿಗೆ ಎದುರಾಡಲಿಲ್ಲ ಮೌನಯೋಗಿಯಾಗಿ ಬಿಟ್ರು.

ಇತ್ತ ರಾಮರೆಡ್ಡಿ ನೀಲಕಂಠರು ಭಿಕ್ಷಾಟನೆಯಿಂದ ಮರಳಿ ಬಂದರು. ಗುಡಿಸಲಿನಲ್ಲಿ ಯೋಗಿ ಕಾಣಲಿಲ್ಲವಾದುರಿಂದ ಗ್ರಾಮದ ಕಡೆಗೆ ಬಂದರು. ಜನರ ಗುಂಪು ನೋಡಿದರು, ಗುರುಗಳಿಗೆ ದಂಡಿಸುವುದನ್ನು ಕಂಡು ಮರುಗಿದರು. ರಾಮರೆಡ್ಡಿ ಯೋಗಿಗಳಿಗೆ ದೀರ್ಘದಂಡ ನಮಸ್ಕಾರ ಮಾಡಿ, ಯೋಗಿ ಪ್ರವರೇ ಹೀಗೇಕಾಯಿತು. ಏನು ಕಾರಣ ಪೂಜ್ಯರೇ! ಎಂದು ಕನಿಕರಿಸಿ ನುಡಿದದ್ದು ಹೀಗೆ ರಾಮರಡ್ಡಿ:

ಗೋಚಿ ಬಿಟ್ಟ ಯೋಗಿ ಕೋತಿಯಾಟಾಡಿಸಿ
ವಿಕೃತ ಕ್ರೀಡೆಗೆಯ್ದು, ವ್ಯಥೆಗೆ ಸಿಲುಕಿ
ಮಾಳ್ವರಯ್ಯ ಏನೋ? ಮಾಳ್ವರೇತಕೋ?
ವಿಶ್ವದಾಭಿರಾಮ ವೇಮ ಕೇಳು!

ಅವರ ಪೈಕಿ ಒಬ್ಬನು ಇಷ್ಟೆಲ್ಲ ತಿಳಿದ ಜ್ಞಾನಿಯಾಗಿದ್ದರೆ "ಆ ಗುಡಿಸಲಿನಲ್ಲಿ ಎಲ್ಲರೆದುರು ಮೂತ್ರ ವಿಸರ್ಜನೆ ಮಾಡಿದ್ದೇಕೆ? ಎಂದು ಪ್ರಶ್ನಿಸಿದನು. ಅಷ್ಟರಲ್ಲಿಯೇ ಆ ಗುಡಿಸಲವಾಸಿಯಾದ ವೃದ್ಧನೇ ಲಗುಬಗೆಯಿಂದ ಇವರತ್ತ ಬರುತ್ತಿದ್ದನು. ಅವನತ್ತ ಚಿತ್ತ ಹರಿಸಿದ ಯುವಕರು; ಏನಪ್ಪ ನಿಮ್ಮ ಗುಡಿಸಲಿನಲ್ಲೀತ ಮೂತ್ರ ವಿಸರ್ಜನೆ ಮಾಡಿದುದು ನಿಜವೆ? ಎಂದು ಕೇಳಿದರು.

ವೃದ್ಧನ ಮನಸ್ಸು ಯೋಗಿಯ ಹುಡುಕಾಟದ ಕಡೆಗಿತ್ತು; ಯುವಕರು ಕೇಳಿದ ಮಾತಿನ ಕಡೆಗೆ ಗಮನ ಹರಿಸದೇ ನೇರವಾಗಿ ಯೋಗಿವರ್ಯನನ್ನು ಸಮೀಪಿಸಿ ಅವರ ಪಾದಗಳಿಗೆರಗಿ ಗಟ್ಟಿಯಾಗಿ ಹಿಡಿದುಕೊಂಡನು. ಈ ಬಡವನ ಮೇಲೆ ಕೃಪೆ ಮಾಡಿದುದನ್ನು ಎಷ್ಟು ಜನ್ಮ ಸ್ಮರಿಸಿದರೂ ಕಡಿಮೆಯಪ್ಪಾ! ಎಂದು ವಿನಮ್ರದಿಂದ ನಿವೇದಿಸಿಕೊಂಡನು. ಬಳಿಕ ಆ ವೃದ್ಧ ಯುವಕರತ್ತ ಹೊರಳಿದ್ದು; ಅವರಿಗೆ ಆದ ಅನುಭವವನ್ನು ಹೇಳಕೊಂಡದ್ದು – ಹೀಗೆ ನೋಡಿ, ಮಹಾನುಭಾವರೇ ಇವರು ಸಾಕ್ಷಾತ್ ಶಿವನ ಸ್ವರೂಪರು. ತಾವು ನನ್ನ ಗುಡಿಸಲಿಗೆ ಬರುವ ಸೂಚನೆಯನ್ನು, ನಿನ್ನೆ ನನಗೂ, ನನ್ನ ಮಡದಿಗೂ ಕನಸಿನಲ್ಲಿ ತಿಳಿಸಿದರು. ಇಂದು ಆಗಮಿಸಿ ನಾವು ಭಕ್ತಿಯಿಂದ ನೀಡಿದ ಪಪ್ಪಾಯಿ ಹಣ್ಣು ಸೇವಿಸಿದರು. ಅಂದು ನಮ್ಮ ಗುಡಿಸಿನಲ್ಲಿ ಮೂತ್ರ ವಿಸರ್ಜಿಸಿದರು. ಆದರೆ ಆ ಮೂತ್ರವೀಗ ಬಂಗಾರದ ಗಟ್ಟಿಯಾಗಿದೆ" ಇದು ಪವಾಡವೇ ಸರಿ. ಅವರಿಂದ ಸಂತಸದಿಂದ ಬಂದ ಮಾತುಗಳು ಕಣ್ಣುಗಳು ತೇವಾಂಶದಿಂದ ಕೂಡಿತ್ತು. ಕೂಡಿದ ಜನರೆಲ್ಲರೂ ಆಶ್ಚರ್ಯಚಕಿತರಾದರು. ಆ ಊರಿನ ಜನರೆಲ್ಲರೂ ಕೂಡಿಕೊಂಡು ವೇಮನ ಯೋಗಿಯನ್ನು ಮೆರೆಸಿದರು. ಅಲ್ಲಿಂದ ಅವರು ನೆಲ್ಲೂರಿಗೆ ಪ್ರಯಾಣ ಬೆಳೆಸಿದರು. ಭಕ್ತರು ಕಳಿಸಲೂ ಬಂದರು.



ಅಲ್ಲಿಂದ ಗುಂಟುಪಲ್ಲಿಗೆ ಬಂದರು. ಅಲ್ಲಿರುವ ಮುತ್ತಯ್ಯನೆಂಬ ಸದ್ಗುಣಿ ಭಕ್ತನ ಧರ್ಮಛತ್ರದಲ್ಲಿ ವೇಮನ ಯೋಗಿಯವರು ವಾಸಿಸಿದರು. ಆ ಭಕ್ತ ಬಡವರಿಗಾಗಿ, ಅನಾಥರಿಗಾಗಿ ಅನ್ನದಾಸೋಹವನ್ನೂ ಮಾಡುತ್ತಿದ್ದನು. ಯೋಗಿಯ ಆಗಮನದಿಂದಾಗಿ ಮುತ್ತಯ್ಯ ಸಂತಸಪಟ್ಟ. ಲಂಬಿಕಾ ಯೋಗಿಯ ಪರಮ ಶಿಷ್ಯರೆಂಬುದನ್ನು ತಿಳಿದುಕೊಂಡ ಮುತ್ತಯ್ಯನು, ತಾವು ಮಹಾಯೋಗಿಗಳು, ತಮ್ಮಂಥವರ ಆಗಮನದಿಂದ ನಮ್ಮೆಲ್ಲರ ಜೀವನವೇ ಪಾವನವಾಯಿತು. ಲಂಬಿಕಾಯೋಗಿಗಳಿಂದ ಅದೆಷ್ಟು ಯೋಗಿಗಳು ತಯಾರಾಗಿರಬಹುದು? ನೀವೇ ಪುಣ್ಯವಂತರಲ್ಲವೆ ವೇಮನರೇ ಎಂದ ಮುತ್ತಯ್ಯ! ಲಂಬಿಕಾ ಯೋಗಿ ಮತ್ತು ವೇಮನ ಯೋಗಿಯವರ ಗುರು–ಶಿಷ್ಯರ ಸಂಬಂಧ ಹಾಲು–ನೀರು ಬೆರೆತಂತೆ, ಹಾಲು–ಜೇನು ಸವಿದಂತಿತ್ತು.

ಇಂಥ ಹೆಸರು ಬಯಸದ ಸಿದ್ಧ ಪುರುಷರಿಂದಲೇ ಪ್ರಪಂಚದಲ್ಲಿ ಧರ್ಮ ಉಳಿದಿದೆ. ನಮಗೂ ಈ ಮುನ್ನ ಓರ್ವ ಸಿದ್ಧ ಪುರುಷರು ದರ್ಶನ ಲಾಭ ನೀಡಿ, ಸತ್ಸಂಗ ದಯಪಾಲಿಸಿ, ಬರೀ ದಾನಧರ್ಮಾದಿ ಕರ್ಮಗಳೇ ಧರ್ಮ ಸಾಧನೆಗಳೆಂದು ಗ್ರಹಿಸಿದ್ದ ನಮಗೆ ಹೃದಯ ಮಂದಿರದಲ್ಲಿ ಹರನನ್ನು ಅರಸುವಂತೆ ಹರಸಿದರು. ನಾವು ಆ ದಿಸೆಯಲ್ಲಿ ನಮ್ಮ ಕೈಲಾದಷ್ಟು ಪ್ರಯತ್ನಿಸುತ್ತಿದ್ದೇವೆಯೆಂದರು ಮುತ್ತಯ್ಯ! ಈ ಮಾತಿಗೆ ಪ್ರತ್ಯುತ್ತರವಾಗಿ ವೇಮನ ಯೋಗಿಯು–

ಅದು ತುಂಬಾ ಆದರ್ಶಪ್ರಾಯ ವರ್ತನೆ. **'ಆತ್ಮ ಮೋಕ್ಷಾರ್ಥಂ–ಜಗತ್ ಹಿತಾಯಚ'** ಎಂಬ ಗುರಿಯೇ ಹಿತವಾದದ್ದು, ನೀವು ಮಾಡುವ ಪುಣ್ಯ ಕಾರ್ಯದಿಂದ ನಿಮ್ಮ ಪುತ್ರ–ಪೌತ್ರಾದಿಗಳಿಗೂ ಪ್ರಯೋಜನವುಂಟು. ನಿಮ್ಮ ಈ ಹೃದಯಸ್ಥ ಶಿವನ ಪೂಜೆಯಿಂದ ನಿಮ್ಮ ಮನವು ಉದ್ದೀಪ್ತವಾಗುತ್ತದೆ" ಎಂದು ಹರಿಸಿದರು–ಯೋಗಿಗಳು. ಈ ಸಂಭಾಷಣೆಯ ಮೂಲಕ ಬೀರಿದ ಕೃಪಾಧಾರೆಗಿಂತ, ಯೋಗಿಗಳ ಸನ್ನಿಧಿಯಲ್ಲಿರುವ ಅಧ್ಯಾತ್ಮಿಕ ವಿಕಿರಣಗಳಿಂದ ಅಗ್ರಸರ ಸಾಧಕರಾದ ಮುತ್ತಯ್ಯನ ಮನ ನಿಸ್ತರಂಗ ಜಲಧಿಯಂತಾಯಿತು. ಯೋಗಿಗಳು ಅಲ್ಲಿಯೇ ಕಣ್ಣುಮುಚ್ಚಿ ಧ್ಯಾನಾಸಕ್ತರಾದರು. ಅನಂತರದಲ್ಲಿ ಧ್ಯಾನ ಮುಗಿದ ಕೂಡಲೇ ಮುತ್ತಯ್ಯನವರ ಅನ್ನದಾನ, ಅರವಟ್ಟಿಗೆಗಳಿಂದ ಲೋಕಹಿತಗೈಯ್ಯುವ ಗುಣಗಾನ ಮಾಡುತ್ತ ನೀಲಕಂಠ ಮತ್ತು ರಾಮರೆಡ್ಡಿಗೆ ತಿಳಿಸಿದರು. ಮುತ್ತಯ್ಯನನ್ನು ಕುರಿತ ಪ್ರಶಂಸಾ ರೂಪಿ ಪದ್ಯ ರಚಿಸಿ ಹೇಳಿದರು–

ಪ್ರಕಟವಾಗಿಹನು ಪ್ರಪಂಚದಲಿ ಗುಂಟು–
ಪಲ್ಲಿ ಮುತ್ತನೆಂಬ ಪರಮ ಗುಣಿಯು:
ಅನ್ನದಾನಗೆಯ್ದು, ಹರಪೂಜೆಗೆಯ್ಯುತ
ಹರನನೊಳಗೆ ನೋಳ್ಪ ಅರಸಿ ವೇಮ

ಎಂಬುದಾಗಿ ಮುತ್ತಯ್ಯನನ್ನು ಕುರಿತು ಪ್ರಶಂಸೆಯ ಪದ್ಯವೊಂದಿದು ಯೋಗಿಯ ಬಾಯಿಂದ ಹೊರಟಿತ್ತು. ಇಂಥ ಮಾದರಿಯ ವ್ಯಕ್ತಿ ಪ್ರಶಂಸೆಯ ಪದ್ಯಗಳನ್ನು ಆ ಮುನ್ನ ಕೇಳಲಾರದ ರಾಮರೆಡ್ಡಿ ಅಚ್ಚರಿಪಟ್ಟರು. ಯೋಗಿ ಅವನ ಆಶ್ಚರ್ಯಕ್ಕೆ ಉತ್ತರವಾಗಿ ಮುಗುಳ್ನಕ್ಕರು. ಮುಂದೆ ನಾಲ್ಕಾರು ದಿವಸಗಳಲ್ಲಿಯೇ ಉಳಿದುಕೊಂಡು, ಯೋಗಿಯ ಪರಿವಾರವು ಮುಂದೆ ಕೊಂಡವೀಡುವಿನತ್ತ ಸಾಗಿತು. ಲಂಬಿಕಾಯೋಗಿಯ ಗವಿಯಲ್ಲಿಯೇ ನೆಲೆಸಿದರು. ನಿತ್ಯದ ಭಿಕ್ಷಾಟನೆ ಮತ್ತು ಸಾಯಂಕಾಲದ ಬೋಧನೆಗಳು ಎಂದಿನಂತೆ ಸಾಂಗವಾಗಿ ಸಾಗಿದವು. ಬಹುಜನರು ಪರಿಚಿತರು ಬಂದು ಕೂಡಲು, ಇಲ್ಲಿಯವರೆಗೆ ನಡೆಯುವ ಘಟನೆಗಳನ್ನು ಬಣ್ಣಿಸಿದರು. ಜನರೆಲ್ಲರೂ ಈ ಮಹಿಮಾಪುರುಷನ ಮಹಿಮೆಗಳನ್ನು ಕಂಡು ಅಚ್ಚರಿಪಟ್ಟರು. ಯೋಗಿ ವೇಮನರು ಕೊಂಡವೀಡಿನಲ್ಲಿರುವ ಗುಹೆಯಲ್ಲಿಯೇ ಇರತೊಡಗಿದರು.

**ಸ್ನಾನದ ವಿಧಿ :**

ಸರೋವರದ ಮಧ್ಯದ ಆಳವಾದ ಮಡುವಿನಲ್ಲಿ ನೀರಿನ ಮೇಲೆಯೇ ಪದ್ಮಾಸನ ಯೋಗಿಯ ದೇಹ. ತಾಯಿ, ಮಲ್ಲಮ್ಮ ಕಂಡು ಅಚ್ಚರಿಪಡುತ್ತಾರೆ. ಇದೊಂದು ಸಾಮಾನ್ಯ ಸಿದ್ಧಿಯ! ಉದಾನ ನಾಡಿಯ ಕ್ರಿಯೆಯಿಂದ ನೀರಿಗಿಂತ ಹಗುರವಾಗಿತ್ತು ಎಂದು ರಾಮರೆಡ್ಡಿ ಅವರಿಗೆ ಹೇಳುತ್ತಾನೆ. ಅನಂತರ ಯೋಗಿಯು ಎಲ್ಲರ ಕಣ್ಣೆದುರೇ, ತನ್ನ ಹೊಟ್ಟೆಯನ್ನು ಬಗೆದು, ಒಳಗಿನ ಸೂಕ್ಷ್ಮಾಂಗಗಳನ್ನು ನೀರಿನಿಂದ ತೊಳೆದರು. ಬಳಿಕ, ಕಣ್ಣು ಮುಚ್ಚಿ ಐದು ನಿಮಿಷಗಳಾದ ಮೇಲೆ, ಸೀಳಿದ ಹೊಟ್ಟೆಯು ಒಂದಾಗಿ ಮೊದಲಿನಂತೆಯಾಯಿತು. ತಾಯಿಯು ಕಂಡು ಬೆಪ್ಪಾದಳು. ಆಕೆಯ ಬಾಯಿಂದ ಮಾತುಗಳೇ ಹೊರಡಲಿಲ್ಲ. ಅವನ ಮಹಿಮೆ ಉಪಮಾತೀತವಪ್ಪ! ನಮ್ಮಂಥವರಿಗೆ ತಿಳಿಯವೆಂದ ರಹಸ್ಯವಿದು ಎಂದು ನುಡಿದು ಮಗನು ಸ್ನಾನ ಮುಗಿಸುವವರೆಗೆ ನಿಂತು ಅನಂತರ ಇತರರೊಂದಿಗೆ ತಾನೂ ಮನದಲ್ಲಿಯೇ ಮಗನಿಗೆ ವಂದಿಸಿ ಮನೆಗೆ ಮರಳಿದಳು. ಇದು ವೇಮನ ಯೋಗಿಯ ಸ್ನಾನದ ವಿಧಿ ನಿಯಮವಾಗಿತ್ತು.

**ಕೊಂಡವೀಡುವಿನಲ್ಲಿ ತೋಟದ ಕೃಷಿ :**

ವೇಮನರಿಗೆ ಕೃಷಿ ಕಾಯಕವೆಂದರೆ ಬಲು ಇಷ್ಟ. ನೆಲ್ಲೂರಿನಲ್ಲಿದ್ದಾಗ ತೋಟದ ಅನುಭವವು ಇವರಿಗಾಗಿತ್ತು. ಗವಿಯಿಂದ ಸ್ವಲ್ಪ ದೂರದಲ್ಲಿ ತೋಟ ಮಾಡುವ ನಿರ್ಧಾರಕ್ಕೆ ತಾಯಿಯೂ ಸಹಕರಿಸಿದಳು. ಒಂದು ಜಮೀನು ಅಲ್ಲಿತ್ತು. ಸಿಹಿ ನೀರಿನ ಬಾವಿಯೂ ಇತ್ತು. ಸುತ್ತಲಿನ ಭಕ್ತರು ಮತ್ತು ಅವರಿಬ್ಬರೂ ಶಿಷ್ಯರು ಭೂಮಿಯನ್ನು ಸಮಪಾತಳಿ ಮಾಡುವಲ್ಲಿ ನೆರವಾದರು. ಯೋಗಿವರ್ಯರೇ ಕೃಷಿ ಕೆಲಸಕ್ಕೆ ಗುದ್ದಲಿ ಸಲಿಕೆ ಹಿಡಿದು ಟೊಂಕ ಕಟ್ಟಿ ನಿಂತರು. ನೀರು ಕಾಲುವೆ ತೋಡಿದರು.



ಫಲಪುಷ್ಪ ಹಣ್ಣುಗಳ ತರು–ಮರಗಳನ್ನು ನೆಟ್ಟರು. ಕಾಯಿಪಲ್ಲ್ಯೆ, ಬೆಳೆದರು, ಎರಡು ಹಸುಗಳನ್ನು ಕಟ್ಟಿದರು. ಇದರಿಂದಾಗಿ ಹೈನುಗಾರಿಕೆ ಸೊಗಸಾಗಿ ಸಾಗುತ್ತಿತ್ತು. ಹಸಿರು ವನರಾಣಿ ಕಂಗೊಳಿಸುವಂತಾಯಿತು. ಸಂಸಾರದ ಜಂಜಡಕ್ಕೊಳಗಾಗದೆ, ತತ್ಕಾಲಕ್ಕೆ ಐಹಿಕ ಜೀವನದಿಂದ ಹೆದರಿ ಬೆದರಿ ಓಡದಂತೆ, ತಮ್ಮ ಶಿಷ್ಯರಿಗೆ ತರಬೇತಿ ಕೊಡುತ್ತಿದ್ದರು. ಇದರಿಂದಾಗಿ ಸಂಸಾರಸ್ಥರೂ ಇವರ ಅನುಗ್ರಹ ಪಡೆದು ಸುಖ ಜೀವನ ನಡೆಸುತ್ತಿದ್ದರು.

ಈ ತೋಟ ನೋಡಲೆಂದು ಆದೆಷ್ಟೋ ಜನ ಬರುತ್ತಿದ್ದರು. ಕಂಡು ಸಂತಸದೊಂದಿಗೆ ಅಚ್ಚರಿಪಡುತ್ತಿದ್ದರು. ಬಂದವರಿಗೆ ನೀರು, ಹಣ್ಣು–ಹಂಪಲ ಕೊಟ್ಟು ತಣಿಸುತ್ತಿದ್ದರು. ತೋಟದ ಒಂದು ಭಾಗದಲ್ಲಿ ಪಪ್ಪಾಯಿ ಬೀಜಗಳನ್ನೆಸೆದು ಬೆಳೆಸಿದ್ದರು. ಈ ಬೆಳೆಯು ಸಮೃದ್ಧವಾಗಿ ಬೆಳೆಯಿತು. ಬಡ–ಬಗ್ಗರು ಬಂದಾಗ, ಹೊಲದಲ್ಲಿ ಶ್ರಮದಾನ ಮಾಡಬೇಕೆಂದು ತಿಳಿಸಿ, ಅವರಿಗೆ ಪ್ರತಿಫಲವೇನೋ ಎಂಬಂತೆ ಒಂದು ಪಪ್ಪಾಯಿ ಕಾಯಿಯನ್ನು ಕೊಡುತ್ತಿದ್ದರು. ಒಮ್ಮೆ ಓರ್ವ ಅಜ್ಜಿ ಇಂಥ ಕಾಯಿಯನ್ನೇ ಪಡೆದು ಮನೆಗೆ ಹಿಂತಿರುವಾಗ, ಅವಳ ಮಗನು ಅದನ್ನು ಕಂಡು ರೇಗಿದನಂತೆ ಮತ್ತು ಆ ಕಾಯಿಯನ್ನು ಬೀಸಿ ಒಗೆದನು. ಆದರೆ ಅಲ್ಲಿ ಒಂದು ಅಚ್ಚರಿ ಕಾದಿತ್ತು! ಅದರಲ್ಲಿರುವ ಬೀಜಗಳು ಬಂಗಾರವಾಗಿದ್ದವು. ಆಗ ಆ ಬೀಸಾಡಿದ ಯುವಕರು ಅತಿ ವಿಷಾಧಿಸಿ, ತನ್ನ ತಾಯಿಯೊಂದಿಗೆ ಮಾರನೆಯ ದಿನ ವೇಮನರಲ್ಲಿಗೆ ಬಂದು ಕ್ಷಮೇ ಕೇಳಿದರಂತೆ! ಆದರೆ ಈ ಸುದ್ದಿಯು ಸುತ್ತಮುತ್ತಲಿನ ಜನಕೆಲ್ಲ ಪ್ರಸಾರವಾಯಿತು. ವೇಮನರ ತೋಟಕ್ಕೆ ಹೋಗಿ ಪಪ್ಪಾಯಿಗಳನ್ನು ಕದ್ದು ತಂದವರದೆಷ್ಟೋ ಮಂದಿ. ಮನೆಗೆ ಹೋಗಿ ಕದ್ದು ತಂದ ಕಾಯಿಗಳನ್ನೊಡೆದು ನೋಡುತ್ತಾರೆ. ಆ ಕಾಯಿಗಳ ತುಂಬ ಹುಳುಗಳಿದ್ದವು. ಆದರೆ ಸೋಜಿಗವೆಂದರೆ ಅವರ ಗೆಳೆಯರ ಗುಂಪಿನಲ್ಲಿಯೇ ಒಬ್ಬಿಬ್ಬರು ಅತೀವ ಭಕ್ತಿಯಿಂದ ವೇಮನ ಯೋಗಿಯವರಲ್ಲಿಗೆ ಹೋಗಿ ನಮಸ್ಕರಿಸಿ, ಅವರ ಅಮೃತ ಹಸ್ತದಿಂದ ಪಡೆದ ಪ್ರಸಾದ ರೂಪದ ಕಾಯಿಗಳಲ್ಲಿ ಬಂಗಾರದ ಬೀಜಗಳಿದ್ದವು ಎಂಬುದು ಖಚಿತ ಪಟ್ಟಿತು. ಇದು ಯೋಗಿಯ ಯೋಗಾನುಭವದ ಮಹಿಮೆಯೆಂದೇ ಜನರು ಕೊಂಡಾಡಿ ಸಂತುಷ್ಟರಾದರು. ಇದು ಪವಾಡವಲ್ಲವೆ? ಎಂದೊಬ್ಬ ಕೇಳುತ್ತಾನೆ. ಅದಕ್ಕೆ ಯೋಗಿವರ್ಯರು ಉತ್ತರಿಸಿದ್ದುದು ಹೀಗಿದೆ–

ಅವರವರ ಭಾವಕ್ಕೆ ಅವರವರ ತೆರನಾಗಿರುತಿಹನು ಶಿವಯೋಗಿ! ಎಂಬಂತೆ ಅವರವರಿಗೆ ತೋಚಿದಂತೆ ಭಾವಿಸುತ್ತಾರೆ. ಘಟಿಸುವ ವೈಚಿತ್ರ್ಯವೇ ಪವಾಡವೆನಿಸಬಹುದು. ಘಟಿಸುವುದೆಲ್ಲವೂ ಆ ಪರಮನ ಕೃಪೆಯಿಂದ ಮಾತ್ರ ಎಂಬುದನ್ನು ತಿಳಿದುಕೊಳ್ಳಬೇಕು! ಅವರ ಬರೆದ ಪದ್ಯದಲ್ಲಿ ಹೀಗೆಂದಿದ್ದಾರೆ.

ಬೇಕು ಎನಲು ಬರದು; ಬೇಡವೆನಲು ಬಿಡದು
ಪೂರ್ವ ಕರ್ಮಕಂಟಿ ಫಲವು ಉಂಟು;
ಹೃದಯದಲ್ಲಿ ದುಃಖಪಡದಿರುವುದೇ ಧರ್ಮ
ವಿಶ್ವದಾಭಿರಾಮ ವೇಮ ಕೇಳು.

ಇಹದಲ್ಲಿ ಹಾಯಾಗಿರಲು ದ್ರವ್ಯ ಗಳಿಸಬೇಕು; ಹೊನ್ನು ಮಾಡಬೇಕು. ಆದರೆ, ಅದರಿಂದ ಪಡೆಯುವ ಸುಖಕ್ಕೆ ಮಿತಿಯುಂಟು. ಅದರ ದುರ್ವಿನಿಯೋಗದಿಂದ ಹಾನಿಯುಂಟು. ಕೇವಲ ಬ್ರಹ್ಮವಿದ್ಯೆಯೊಂದೇ ಪರದಲ್ಲಿ ಸುಖಿಸಲು ಕಾರಣವಾಗಿದೆ. ಅದನ್ನೇ ಗಳಿಸಬೇಕು. ಅದುವೇ ನಿಜಾರ್ಥದಲ್ಲಿ ವಿದ್ಯಾರ್ಜನೆ. ಅದರ ಹೊರತು ಅನ್ಯ ಗಳಿಕೆಯೆಲ್ಲ ವ್ಯರ್ಥವಷ್ಟೇ!! ಸಂಸಾರ ವಿದ್ಯೆಗಿಂತ ಬ್ರಹ್ಮ ವಿದ್ಯೆಯೇ ಮಿಗಿಲು. ಆದುದರಿಂದ ಅಂತಹ ವಿದ್ಯೆಯತ್ತ ಪಯಣಿಸಿರೆಂದ ವೇಮನಯೋಗಿ!

ಹೊನ್ನು ಗೆಯ್ವ ವಿದ್ಯೆ ಹೊಳೆದ ಮನುಜರೆಲ್ಲ
ವ್ಯಥೆ ಪಡುವಂಥ ವಿದ್ಯೆಯಿಂದ
ತತ್ತ್ವ ತಿಳಿದ ಬಳಿಕ ತನಗೆ ಚಿಂತೆಯಿಲ್ಲ
ವಿಶ್ವದಾಭಿರಾಮ ವೇಮಾ ಕೇಳು.

ಬೇಕು ಎನ್ನುವವ ಭಿಕಾರಿಯಾಗುತ್ತಾನೆ. ಸಾಕು ಎನ್ನುವವ ಸಾಹುಕಾರ ಆಗುತ್ತಾನೆ ಎಂಬ ಗಾದೆಯಂತೆ ಬೇಕು ಬೇಡೆಂಬ ಭವ ಬೀಜಗಳ ಹುರಿದು ಶಿವನ ಕಡೆಗೆ ಸಾಗುವ ಶಿವಯೋಗ ವಿದ್ಯೆ ಹೊಂದಿ ಮುಕ್ತಿ ಪಡೆಯಬೇಕೆಂದು ಹೇಳಿ ವೇಮನಯೋಗಿ ಮಾತು ನಿಲ್ಲಿಸಿದರು. ವೇಮನರು ಹಲವಾರು ವರುಷ ಕೊಂಡುವೀಡಿನಲ್ಲಿ ತಮ್ಮ ತೋಟಪಟ್ಟಿಯ ಕೆಲಸದಲ್ಲಿಯೂ ಸಾಧನಾ ಮಾರ್ಗದಲ್ಲಿ ಮಗ್ನರಾಗಿದ್ದರು. ಶಿಷ್ಯರಿಬ್ಬರೂ ಬಹು ಸಂತಸದಿಂದಿದ್ದರು. ಅಷ್ಟರಲ್ಲಿಯೇ ಯೋಗಿವರ್ಯರು ಗಂಡಿಕೋಟೆಯೆಂಬ ಊರಿಗೆ ಹೋಗುವ ನಿರ್ಧಾರವನ್ನು ಶಿಷ್ಯರಿಗೆ ತಿಳಿಸಿದರು. ಹೋಗುವ ವಿಷಯ ತಿಳಿದ ಊರ ಭಕ್ತರು ಕಣ್ಣೀರು ಸುರಿಸಿದರು. ಆಗ ಕ್ರಿ.ಶ. ೧೪೪೭ರ ವರ್ಷ ಗಂಡಿಕೋಟೆ ದುರ್ಗವು ಗಜಪತಿಯ ವಶವಾಗಿತ್ತು. ಭಿಕ್ಷಾಟನೆಯಿಂದ ಉದರ ನಿರ್ವಹಣೆ, ಸಾಯಂಕಾಲದ ಸತ್ಸಂಗ ಅನಂತರದ ಧ್ಯಾನ ಪೂಜೆಗಳಲ್ಲಿ ಅದೆಷ್ಟೋ ದಿನಗಳನ್ನು ಕಳೆದರು. ಸಾಹಿತ್ಯ ರಚನೆಯೂ ನಿರಾತಂಕವಾಗಿ ಸಾಗಿತ್ತು. ಇಷ್ಟರಲ್ಲಿ ಮುಂಚಿನ ಸಾವಿರ ಪದ್ಯಗಳಿಗೆ ಮತ್ತೊಂದು ಸಾವಿರ ಪದ್ಯಗಳ ಕೂಡಿಕೆಯಾಗಿತ್ತು.

ಅನಂತರದಲ್ಲಿ ಗಂಡಿಕೋಟದಿಂದ ರಾಜಮಹೇಂದ್ರವರಂ ಕಡೆಗೆ ಯೋಗಿವರ್ಯರು ಶಿಷ್ಯರಿಂದೊಡಗೂಡಿ ಪ್ರಯಾಣ ಬೆಳೆಸಿದರು. ಹಾದಿಯಲ್ಲಿ ಜನ ಹತ್ತಾರು ಊರುಗಳಲ್ಲಿ ವಸತಿ ಮಾಡಿದರು. ಆದರೆ, ಎಲ್ಲಿಯೂ ಒಂದೆರಡು ದಿನಗಳಿಗಿಂತ ಹೆಚ್ಚು ಕಾಲ ತಂಗಲಿಲ್ಲ. ವಿಶೇಷವಾಗಿ ಚರ್ಚೆಗಳಾಗಲಿ, ಪದ್ಯ ರಚನೆಯಾಗಲಿ ನಡೆಯಲಿಲ್ಲ. ಅಂತೂ ಕೊನೆಗೆ ರಾಜ ಮಹೇಂದ್ರವರಂ ಪಟ್ಟಣದ ನಿಕಟವಿರುವ ಗ್ರಾಮವೊಂದನ್ನು ತಲುಪಿ; ಆ ಗ್ರಾಮದ ಬಳಿಯಿರುವ ಹುಣಸೆ ಮರದ ಅಡಿ ವಾಸ್ತವ್ಯ ಮಾಡಿದರು. ದಿನಾಲೂ ಬೆಳಗಿನ ಧ್ಯಾನಪೂಜೆ, ಅನಂತರ ಭಿಕ್ಷಾಟನೆ, ಮಧ್ಯಾನ್ಹ ಧ್ಯಾನ–ಪೂಜೆಯ ನಂತರ ಜಿಜ್ಞಾಸುಗಳೊಂದಿಗೆ ಸತ್ಸಂಗ, ಸಂಜೆಗೆ ಧ್ಯಾನ–ಪೂಜೆಗಳು ನಡೆದಿದ್ದವು. ಹೀಗೆಯೇ ಕೆಲವು ದಿನಗಳುರುಳಿದವು.



ವೇಮನಯೋಗಿಗಳಿರುವಲ್ಲಿಗೆ ನರಸಾಂಬೆ ಅವರ ದರ್ಶನಕ್ಕಾಗಿ ಬಂದಳು. ಅವಳ ಪತಿವಿಯೋಗ ಕುರಿತು ಸಂತಾಪ ಸೂಚಿಸಿದರು. ಔಪಚಾರಿಕ ಮಾತುಕತೆ ಮುಗಿದ ಬಳಿಕ ಯೋಗಿಗಳು ಅರೆಮುಚ್ಚಿ ನೇತ್ರದಿಂದ ಅಂತರ್ಮುಖಿಯಾದರು. ಐದಾರು ನಿಮಿಷಗಳ ನಂತರ, ತಮ್ಮ ಧ್ಯಾನಸ್ಥ ಅವಸ್ಥೆಯಲ್ಲಿಯೇ ತಮ್ಮ ಹೆಬ್ಬೆರಳನ್ನು ನರಸಾಂಬೆಯ ಭ್ರುಕುಟಿಗೆ ಒತ್ತಿದರು. ನರಸಾಂಬೆಯಲ್ಲಿ ಇದರಿಂದ ವಿದ್ಯುತ್ ಸಂಚಾರವಾದಂತಾಯಿತು. ಮನದ ದುಗುಡ–ಚಿಂತೆಗಳೆಲ್ಲವೂ ಶೂನ್ಯವಾಗಿ ಅವಳ ಮನಸ್ಸು ಪ್ರಶಾಂತವಾಯಿತು. ದೇಹದ ಚೈತನ್ಯ ಹೆಚ್ಚಳವಾಯಿತು. ಈ ಹಿಂದೆ ಸರ್ಪದಂಶದಿಂದ ಪಾರು ಮಾಡಿದ ಮೈದುನನು, ಇಂದು ಮಹಾಯೋಗಿಯಾಗಿ, ಕೇವಲ ಸ್ಪರ್ಶ ಮಾತ್ರದಿಂದ ತನ್ನ ಸಂಸ್ಕಾರಗಳನ್ನೆಲ್ಲ ನಿರ್ಮೂಲನ ಮಾಡುವ ಮಹಾಪುರುಷನಾಗಿರುವುದನ್ನು ಸ್ವತಃ ಅನುಭವಿಸಿದಳು. ಯೋಗಿಗಳೇ ನರಸಾಂಬೆಗೆ ನಮಸ್ಕರಿಸಿ ಬೀಳ್ಕೊಟ್ಟರು. ಇಂತಹ ಮುತ್ತಿನಂಥ ಮಾತುಗಳನ್ನು ಮತ್ತೆ ಯಾವಾಗ ಆಲಿಸುವ ಭಾಗ್ಯ ಬರುವುದೋ? ಎಂದು ನರಸಾಂಬೆ ನುಡಿದರು. ಯೋಗಿ ವರ್ಯರು ಶಿಷ್ಯ ರಾಮರೆಡ್ಡಿಯನ್ನು ಕರೆದು ಆಯ್ದ ನೂರು ಪದ್ಯಗಳನ್ನು ಪ್ರತಿ ಮಾಡಿ ಅತ್ತಿಗೆಗೆ ಕೊಡಲು ಹೇಳಿದರು. ಮಾರನೆಯ ದಿನವೇ ರಾಮರೆಡ್ಡಿ ಪದ್ಯ ಬರೆದುಕೊಟ್ಟರು. ನರಸಾಂಬೆ ಆ ಪದ್ಯಗಳನ್ನು ದಿನನಿತ್ಯ ಪಾರಾಯಣ ಮಾಡುತ್ತ, ಸತ್ಸಂಗದ ಸವಿನೆನಹನ್ನು ಸ್ಮರಿಸಿಕೊಳ್ಳುತ್ತ ಬಾಳಿದಳು.

**ಚಂದನೂಲಿಗೆ, ನೆಲ್ಲಚರು, ಪಾಮೂರುಗಳಿಗೆ ಪಯಣ :**

ನರಸಾಂಬೆ ರಾಣಿಯು ಬಂದು ಹೋದ ಬಳಿಕ, ವೇಮನರ ದರ್ಶನಕ್ಕಾಗಿ ಬಂದು ಹೋಗುವವರ ಸಂಖ್ಯೆ ವಿಪರೀತವಾಯಿತು. ಇವರನ್ನು ರಾಜಯೋಗಿ ಎಂದೂ, ಮಹಾಜ್ಞಾನಿಗಳೆಂದೂ ಭಾವಿಸಿ ಬರುವ ಮುಮುಕ್ಷುಗಳು ಒಬ್ಬಿಬ್ಬರು. ಆದರೆ, ಪವಾಡ ಪುರುಷರೆಂದೂ, ರಾಜವಂಶೀಯರೆಂದೂ ಕುತೂಹಲದಿಂದ ಬಂದು ಪ್ರಶ್ನೆ ಕೇಳುವವರೇ ಬಹಳ ಜನರಾದರು. ಈ ಜನರ ಗದ್ದಲದಲ್ಲಿ ಯೋಗ ಸಾಧಕರು ವಿಚಲಿತರಾಗುವ ಪ್ರಸಂಗ ಒದಗಿತು. ಶಿಷ್ಯರಿಬ್ಬರೂ ಗುರುಗಳಲ್ಲಿ ಈ ವಿಷಯ ತಿಳಿಸಿದರು. ಅವಕ್ಕವರು ಮುಗುಳ್ನಕ್ಕು ನಿಮಗೆ ಸರಿಯೆನಿಸಿದ ಜಾಗ ಹುಡುಕಿರಿ ಎಂದಾಗ, ಯೋಗಿ ಪರಿವಾರವು ದಕ್ಷಿಣದತ್ತ ಪ್ರಯಾಣ ಬೆಳೆಸಿದರು.

ಪ್ರಶಾಂತ ತಾಣ ಹುಡುಕಿ ಊರ ಹೊರವಲಯದ ಮರದಡಿಯಲ್ಲಿ ಬಿಡಾರ ಹೂಡಿದರು. ಅಲ್ಲಿಯೂ ಭಕ್ತ ಜನರು ಅಷ್ಟಿಷ್ಟು ಸೇರಿದರು. ಅವರೊಂದಿಗೆ ಪ್ರಪಂಚದ ರೀತಿ–ನೀತಿ,ಸಾಂಸಾರಿಕ ಬಾಂಧವ್ಯ ಮತ್ತು ಯೋಗ ಸಾಧನೆ ಈ ಮುಂತಾದ ವಿಷಯಗಳ ಕುರಿತು ಸಂಭಾಷಿಸುತ್ತಿದ್ದರು. ಇವರು ಆಶುಕವಿಗಳೆಂದೂ ಜನರು ಗುರುತಿಸಿದ್ದರು. ಪದ್ಯಗಳನ್ನು ಬರೆದುಕೊಳ್ಳಲು ಶಿಷ್ಯರಿಗೆ ಹೇಳುತ್ತಿದ್ದರು. ಮುಂದೆ ಚಂದನೂಲಿಯಿಂದ ಕದರಿ ಪಟ್ಟಣದ ಕಟಾರ್ಲುಪಲ್ಲೆಗೆ ಬಂದು ತಲುಪಿದರು. ಅಲ್ಲಿಯೂ ಭಕ್ತ ಸಮೂಹ ಸೇರುತ್ತಿತ್ತು. ಇಲ್ಲಿ ಆಸ್ತಿಕರು ಬಹಳ ಜನರಿದ್ದರು. ಅದರಲ್ಲೂ ಅವರು ಹೆಚ್ಚಾಗಿ ವಿಷ್ಣು ಭಕ್ತರೇ! ಅನೇಕ ದಿನಗಳ ತರುವಾಯ ವೇಮನಯೋಗಿ ಅರೆಗಣ್ಣಿನಿಂದ ಧ್ಯಾನಶೀಲರಾದರು.

ಅನಂತರ ನೆಲ್ಲಚೆರುವಿಗೆ ಬಂದರು. ಕಟಾರ್ಲುಪಲ್ಲೆಯು ಯೋಗಿವರ್ಯರಿಗೆ ಬೇಡವೆನಿಸಿತು. ಅದು ಕಾರಣ ಇಲ್ಲಿಗೆ ಬಂದರು. ರೆಡ್ಡಿ ವಂಶಸ್ಥರೇ ಇಲ್ಲಿ ಹೇರಳ ಪ್ರಮಾಣದ ಜನರಿರುವುದರಿಂದಲೂ, ಅವರು ಅಧ್ಯಾತ್ಮದ ಮಾರ್ಗದಿಂದ ದೂರವಿದ್ದವರೂ ಆದುದರಿಂದ ಕಟಾರ್ಯಿಪಲ್ಲೆ ಬಿಡುವ ನಿರ್ಧಾರ ತಳೆದು ಶಿಷ್ಯರಿಗೆ ಹೇಳಿ ನೆಲ್ಲುಚೆರುವಿಗೆ ಆಗಮಿಸಿದರು. ಅವರು ಗುರುವಿನಾಜ್ಞೆಯನ್ನು ಶಿರಸಾವಹಿಸಿ ಪಾಲಿಸುವವರಾಗಿದ್ದರು. ಅಲ್ಲಿ ಹಣದ ದಾಹವಿರುವ ಸಿರಿವಂತರನ್ನು ಕಂಡು ಪದ್ಯ ರಚಿಸಿದರು. ಹಣವ ಗಳಿಸಬೇಕು, ಆದರೆ ಸನ್ಮಾರ್ಗದಿಂದ ಗಳಿಸಬೇಕು. ಹಣ ವ್ಯಯಿಸಬೇಕು: ಆದರೆ ಅದನ್ನು ಸತ್ಕಾರ್ಯಗಳಿಗಾಗಿ ಮಾತ್ರ ಹಣ ನೀಡಬೇಕು! ಆದರೆ ಸತ್ಪಾತ್ರರಲ್ಲಿ ಮಾತ್ರ! ಎಂದು ಹಿತನುಡಿದರು. ಅವರದೊಂದು ಪದ್ಯದಲ್ಲಿ ಹಣದ ಕುರಿತು ಹೀಗೆ ರಚಿಸಿದ್ದಾರೆ.

ಹಸಿದು ಬಂದವರಿಗೆ ಹಾಕಲನ್ನವನ್ನು
ಹರನಿಗರ್ಪಿತೆಂದು ಹರಸಿ ತಿನುವ
ಘನವಿಹೀನನಿಗೀವ ದಾಸನಂತೆ ನೋಡು
ವಿಶ್ವದಾಭಿರಾಮ ಕೇಳು ವೇಮ.

ಅನಂತರದ ನೆಲ್ಲಚೆರುವಿನಲ್ಲಿ ಮುಂದೆ ಎರಡು ವರವಿದ್ದು; ಯೋಗಿವರ್ಯರು ತಮ್ಮ ಶಿಷ್ಯರೊಂದಿಗೆ ಬಳ್ಳಾರಿಯತ್ತ ಪಯಣಿಸಲು ನಿರ್ಧರಿಸಿದರು. ಬಳ್ಳಾರಿಯ ಹೊರವಲಯದ ಅಲಿಪುರದ ಬಳಿ ಬೆಟ್ಟದಡಿಯ ಹುಣಸೆ ಮರದ ಮುಂದಡಿ ವೇಮನಯೋಗಿಗೆ ಪ್ರಶಸ್ಥ ಸ್ಥಳವೆನಿಸಿ ಅಲ್ಲಿಯೇ ತಂಗಿದರು. ಅವರದು ತುಂಬ ಸರಳ ಜೀವನ, ಬಳ್ಳಾರಿ ವಿಜಯನಗರದ ರಾಜಧಾನಿ. ಯೋಗಿಗಳಿಗಿದು ಹಿತ–ವಿಹಿತವೆನಿಸಿತು. ಅವರು ಸಂಗಮ ವಂಶದ ರಾಜರು, ವೀರಶೈವವನ್ನು



ಅಪ್ಪಿಕೊಂಡಿದ್ದರು. ಅದರಿಂದ ಸಾಮಾನ್ಯ ಜನರು ಯಥಾ ರಾಜಾ ತಥಾ ಪ್ರಜಾ' ಎಂದು ಆ ದಿಕ್ಕಿನಲ್ಲಿ ಮುನ್ನಡೆದಿದ್ದರು.

ವೇಮನ ಯೋಗಿಗಳ ಕಡೆಗೆ ಯೋಗ ಸಾಧಕರು ಬರತೊಡಗಿದರು. ವಿಜಯನಗರದ ವೈಭವಪೂರಿತ ಕಥೆಗಳನ್ನು ಕೇಳಿ ಅಕರ್ಷಿತರಾಗಿ, ಪಂಪಾಪತಿ ವಿರೂಪಾಕ್ಷದೇವನ ದರ್ಶನ ಪಡೆಯಬೇಕೆಂದು ದೂರದೂರುಗಳಿಂದ ಬರುತಿದ್ದ ರಾಜಯೋಗ ಸಾಧಕರು, ಅದ್ಭುತ ಈ ಯೋಗಿವರ್ಯರು. ಇಲ್ಲಿದ್ದ ಸುದ್ದಿ ತಿಳಿದು ಬರುತ್ತಿದ್ದರು. ಅವರಿಗೆ ಸೂಕ್ತ ಮಾರ್ಗದರ್ಶನ ಮಾಡುವಲ್ಲಿ ಸೂಕ್ಷ್ಮ ಅನುಭವಗಳನ್ನು ಕುರಿತು ಚರ್ಚಿಸುವಲ್ಲಿ ಯೋಗಿಗಳು ದೀರ್ಘ ಕಾಲ ಕಳೆಯುತ್ತಿದ್ದರು. ನೆರೆಯ ಗ್ರಾಮದ ಜನರು ಬಂದಾಗ ಯೋಗಿಗಳಿಂದ ಪದ್ಯ ರಚನೆಯೂ ನಡೆಯುತ್ತಿತ್ತು.

ಅನಂತರದಲ್ಲಿ ಮತ್ತೆ ನೆಲ್ಲಚೆರುವಿನಿಂದ ಚಂದನೂಲಿನ ಕಡೆಗೆ ಯೋಗಿಯವರು ತಮ್ಮ ಪರಿವಾರದೊಂದಿಗೆ ಹೊರಟಿತು. ಬೆಟ್ಟದ ಶ್ರೇಣಿ, ಆದಿವಾಸಿಗಳ ಗುಡಿಸಲುಗಳಿದ್ದವು. ಅನತಿ ದೂರದಲ್ಲಿ ಕೆರೆಯ ದಂಡೆಯ ಮೇಲೊಂದು ದೊಡ್ಡ ಹುಣಸೆ ಮರವಿತ್ತು. ಮರಗಳು ಸಾಲುಸಾಲಾಗಿದ್ದವು. ತಂಪು ನೆಳಲು ಬೇರೆ! ಅಲ್ಲಿಯೇ ವಾಸಿಸಲು ನಿರ್ಧರಿಸಿದರು. ಮರುದಿನ ಬೆಳಿಗ್ಗೆ ಧ್ಯಾನ–ಪೂಜೆ ನಡೆದ ಬಳಿಕ, ಆದಿವಾಸಿ ಹುಡುಗರು ಹಾಗೂ ಹೆಂಗಳೆಯರು ಯೋಗಿಗಳ ದರ್ಶನಕ್ಕೆ ಬಂದರು, ಭಾಗ್ಯದ ದೇವರು ನಮ್ಮ ಗುಡಿಸಲುಗಳ ಬಾಗಿಲಿಗೆ ಬಂದಿದ್ದಾನೆ. ಆ ಮಹಾತ್ಮನ ದಿವ್ಯ ದರ್ಶನ ಪಡೆಯಬೇಕೆಂಬ ಕುತೂಹಲವು ಅ ಬಡ ಕಾರ್ಮಿಕರಿಗೆ ಆಯಿತು. ಅವರ ಗುಂಪಿನಲ್ಲಿದ್ದ ಓರ್ವ ಯುವತಿ ತನ್ನ ತಾಯಿಯೊಂದಿಗೆ ಬಂದಳು. “ಮಾರೆವ್ವ ಬಂದಳು ಮಾರೆವ್ವ” ಎಂದು ಎಲ್ಲರೂ ಗುಜು ಗುಜು ಮಾತಾಡಿಕೊಳ್ಳುತ್ತಿದ್ದರು. ಯುವತಿ ಮತ್ತು ತಾಯಿ ಸುಮ್ಮನೇ ಕುಳಿತಿದ್ದರು.

ಆ ಯುವತಿಯ ತಾಯಿ ಹೇಳಿದಳು ನನ್ನ ಮಗಳಿಗೆ ದೆವ್ವಿನ ಕಾಟವಿದೆ. ಏನೇನೋ ಬಡಬಡಿಸುತ್ತಾಳೆ. ಸರಿಯಾಗಿ ನಿದ್ರೆಯೂ ಇಲ್ಲ, ಮಾತೂ ಇಲ್ಲ, ಸೊರಗಿ ಸಣಕಲಾಗಿದ್ದಾಳೆ ಬುದ್ಧೀಜಿ ಎಂದು ಅಂಗಲಾಚಿದಳು.

ಆಗ ಯೋಗಿಗಳು ಸರಿ ಬಾ ಇಲ್ಲಿ ಎಂದು ತಮ್ಮ ಬಳಿಗೆ ಕರೆದರು. ಜನರೆಲ್ಲ ಕುತೂಹಲದಿಂದ ಭೂತ ಬಿಡಿಸುವರೆಂದು ಕಣ್ಣು ಬಿಟ್ಟು ಬಿಟ್ಟು ನೋಡಹತ್ತಿದರು. ಆದರೆ, ಇದು ಬೇರೆ ವಿಧಾನವಾಗಿತ್ತು. ಪೂರ್ಣ ಮನಸಾಕ್ಷಾಧ್ಯಾತ್ಮಿಕ ಧ್ಯಾನದಲ್ಲಿದ್ದರು. ಯೋಗಿಗಳು ಅರೆಗಣ್ಣು ಮುಚ್ಚಿ ಧ್ಯಾನಶೀಲರಾದರು. ನಂತರ ತಮ್ಮ ಹೆಬ್ಬೆರಳಿನಿಂದ ಅವಳ ಭೃಕುಟಿಯನ್ನು ಒತ್ತಿದರು. ಆ ಯುವತಿ ಕೂಡಲೇ ನಿದ್ರೆ ಹೋದಳು. ಮುಂದೆ ಯೋಗಿಗಳು ಐದು ನಿಮಿಷ ಬಿಟ್ಟು, ಅವಳ ಭೃಕುಟಿಯನ್ನು ಮರಳಿ ಹೆಬ್ಬೆರಳಿನಿಂದ ಒತ್ತಿದಾಗ, ಆ ಯುವತಿ ನಿದ್ರೆಯಿಂದ ತಿಳಿದೇಳುವಂತೇ ಎದ್ದು

ಕುಳಿತಳು. ಯೋಗಿವರ್ಯರಿಗೆ ಧೀರ್ಘದಂಡ ನಮಸ್ಕಾರ ಮಾಡಿ ಅವರೆದುರು ನಿಲ್ಲಲು ನಾಚಿ ಬದಿಗೆ ಸರಿದು ನಿಂತಳು.

ಅಷ್ಟರಲ್ಲಿಯೇ ಮಾರೆಮ್ಮನ ಪತಿ ಬಂದನು. ಇವನೇ ಅವಳ ಪತಿ ಎಂದು ನೆರೆದ ಜನರು ಹೇಳಿದರು. ಇದೋ ನೋಡು, ನಿನ್ನ ಹೆಂಡತಿಯ ಮನೋರೋಗವು ದೇವರ ದಯೆಯಿಂದ ಗುಣವಾಗಿದೆ ಎಂದರು. ಆಗ ಅಲ್ಲಿದ್ದ ಹಿರಿಯರೊಬ್ಬರು, ತಮ್ಮ ಕರುಣೆಯ ಮಹಿಮೆ ಯೋಗಿವರ್ಯರೇ ಎಂದರು. ಎಲ್ಲವೂ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಆಶೀರ್ವದಿಸಿದರು. ಈ ಸುದ್ದಿಯು ಅಲ್ಲಿರುವ ಆದಿವಾಸಿಗಳಿಗೆ ಹಬ್ಬಿತು. ಅದರಲ್ಲೊಬ್ಬ ಯುವಕ ಬಂದವನೇ ಈ ಭೂತ–ಪಿಶಾಚಿ ಬಡಿಯುವಿಕೆ ಎಂದರೇನು ಯೋಗಿವರ್ಯರೇ ಎಂದು ಕೇಳಿದ. ಯೋಗಿಗಳು ಹೇಳಿದ್ದು ಹೀಗೆ–

"ಯಾರು ಬಹಳ ಚಿಂತೆ ಮಾಡುವರೋ, ಅವರ ಬಾಯಿಯಿಂದ ಅಂಥವರು ಹೆಚ್ಚು ಮಾತನಾಡುವುದಿಲ್ಲವೋ?, ಯಾರು ಅಂಜುಬುರುಕ ರಾಗಿರುತ್ತಾರೆಯೋ, ಯಾರ ಮನವು ದುರ್ಬಲವಾಗಿರುವುದೋ, ಅಂಥವರಲ್ಲಿ ವಿಶೇಷವಾಗಿ ಸ್ತ್ರೀಯರಲ್ಲಿ ಈ ಮನೋರೋಗವು ಹೆಚ್ಚಾಗಿರುತ್ತದೆ" ಎಂದು ಯೋಗಿಗಳು ನುಡಿದರು. ಇದರಿಂದ ಎಲ್ಲರೂ ಜಾಗೃತಾವಸ್ಥೆಯಲ್ಲಿರುವಂತಾಯಿತು.

ಮಧ್ಯಾಹ್ನದ ಧ್ಯಾನಾನಂತರ ಭಿಕ್ಷಾನ್ನ ಸೇವಿಸಿ ವಿಶ್ರಮಿಸಿದರು. ಅ ಸಾಯಂಕಾಲ ಹಾಗೂ ಉಳಿದೆರಡು ದಿನ ಸುತ್ತುಮುತ್ತಲಿನ ಆದಿವಾಸಿಗಳು ತಂಡ ತಂಡವಾಗಿ ಬಂದು ಯೋಗಿಗಳ ದರ್ಶನ ಪಡೆದರು. ಹಲವರು ತಮ್ಮ ರೋಗಗಳಿಗೆ ಯೋಗಿಗಳಿಂದ ಆಯುರ್ವೇದಿಯ ಔಷಧಿಗಳನ್ನು ಪಡೆದರು. ಅವರನ್ನು ಆದಿವಾಸಿಗಳು ಮುಕ್ತ ಮನಸ್ಸಿನಿಂದ ಕೊಂಡಾಡಿದರು. ಇವರು ನಿಜವಾಗಿಯೂ ಬಡವರ ಕಾಮಧೇನು, ಕಲ್ಪವೃಕ್ಷ, ಬಂಧು ಎಂದು ಸ್ತುತಿಸುತ್ತ ದೀರ್ಘದಂಡ ನಮಸ್ಕಾರ ಸಲ್ಲಿಸಿದರು. ಆ ಪದ್ಯದಲ್ಲಿ ಹೀಗಿದೆ–

ವೇಮನನೆಂಬ ಯೋಗಿ ವಾಸಿಸಿದ ಲೋಕದಿ,
ಪೂಜೆ ಸಲ್ಲಿಸಿದದವರಿಗೆ ಪುಣ್ಯ ಪುರುಷರಿರ
ಸಲಿಸಿದಷ್ಟು ಪೂಜೆ, ಸುಖಸೌಖ್ಯ ಲಭ್ಯ
ವಿಶ್ವದಾಭಿರಾಮ ಕೇಳು ವೇಮ.

ಕವಿ ವೇಮನರ ಈ ಪದ್ಯ ಕೇಳಿ ತಮ್ಮ ಸ್ವಂತದ ಭಾವಗಳಿಗೆ ಭಾಷ್ಯ ನೀಡಿದಂತಿದ್ದವು ಎಂದರು–ಕೇಳಿದವರು. ಆ ದಿನ ಸಾಯಂಕಾಲದ ಧ್ಯಾನದ ಸಮಯವಾದದ್ದರಿಂದ ಎಲ್ಲರೂ ಅವರಿಗೆ ನಮಸ್ಕರಿಸಿ ಬೀಳ್ಕೊಟ್ಟರು.

ಚಂದನೂರಿನಿಂದ ಇಂದಿನ ಪ್ರಕಾಶಂ ಜಿಲ್ಲೆಯ ಪಾಮೂರ ಗ್ರಾಮದ ಕಡೆಗೆ ಯೋಗಿಗಳ ಪರಿವಾರ ಚಲಿಸಿತು. ಅ ಗ್ರಾಮದಲ್ಲಿ ಹೆಚ್ಚು ಸಮಯ ಕಳೆಯದೇ



ಗವಿಯ ದಾರಿ ಹಿಡಿದು ಸಾಗಿದರು. ಹಾದಿಯಲ್ಲಿ ಭಕ್ತರು ಹಣ್ಣು ಹಂಪಲು ನೀಡಲು; ಹಣ್ಣು ಸೇವಿಸಿ ಮೊದಲಿನ ರಾತ್ರಿಯನ್ನು ಯೋಗಿಗಳು ಪ್ರಶಾಂತಚಿತ್ತರಾಗಿ ಕಳೆದರು. ಅಲ್ಲಿಯ ಯುವಕರಿಗೆ ಯೋಗದ ತರಬೇತಿಯನ್ನು ಕೊಟ್ಟರಲ್ಲದೇ ಸಂಜೆಯ ಹೊತ್ತು ಸತ್ಸಂಗ ಗೋಷ್ಠಿ ನಡೆಸಿದರು. ಮಾರನೆಯ ದಿನವೆದ್ದು ಸನಿಹದ ಸರೋವರದಲ್ಲಿ ಸ್ನಾನ ಮಾಡಿದರು. ಧ್ಯಾನ, ಪೂಜೆ ಪೂರೈಸಿದರು. ರಾಮರಡ್ಡಿ–ನೀಲಕಂಠರು ಭಿಕ್ಷೆಗೆ ಹೋದರು. ಪುನಃ ಯೋಗಿವರ್ಯರು ಧ್ಯಾನಸ್ಥರರಾದರು. ಈ ಗವಿಯು ಧ್ಯಾನಕ್ಕೆ–ಯೋಗಕ್ಕೆ ಯೋಗ್ಯಸ್ಥಳವೆಂದು ಭಾವಿಸಿದರು. ಧ್ಯಾನ ಮುಗಿಸಿ ಹೊರ ಬಂದಾಗ ಓರ್ವ ಯುವಕನು ಇಬ್ಬರು ಕೂಲಿಯವರೊಂದಿಗೆ ಹಾದಿಯಲ್ಲಿ ಹೊರಟಿರುವುದನ್ನು ಕಂಡರು. ಅ ಯುವಕರೂ ಈ ಅವಧೂತ ಸಾಧುವನ್ನು ಕಂಡು ಕುತೂಹಲ ತಾಳಿದರು. ಅ ಯುವಕ ಪಾಮೂರು ಗ್ರಾಮದ ಪ್ರಮುಖನ ಮಗನಾಗಿದ್ದನು. ಯೋಗಿವರ್ಯರಲ್ಲಿಗೆ ಬಂದು ನಮಸ್ಕರಿಸಿ ಹೋಗಬೇಕೆಂದು ಬಂದವನು. ಆದರೆ, ಯೋಗಿಗಳ ಕಣ್ಣುಗಳು ಈತನನ್ನು ಆಯಸ್ಕಾಂತದಂತೆ ಸೆಳೆದವು. ಅವರ ಪದತಲದಲ್ಲಿ ಕುಳಿತುಕೊಂಡು, ಯೋಗಿಗಳ ಕುಶಲೋಪರಿಯನ್ನು ವಿಚಾರಿಸಿದ. ಗವಿಯ ಕಡೆಗೆ ಬನ್ನಿ ಎಂದು ಯೋಗಿವರ್ಯರು ಆ ಯುವಕನನ್ನು ಕರೆದರು. ಮತ್ತೆ ತಮ್ಮ ಊಟೋಪಚಾರದ ವ್ಯವಸ್ಥೆ ಹೇಗೆ? ಎಂದೆನ್ನಲು, ನೋಡಿರೆಪ್ಪಾ! ನಾವು ಸಾಧುಗಳು! ಭಿಕ್ಷಾಟನೆಯಿಂದ ಹೊಟ್ಟೆ ಹೊರೆಯುತ್ತೇವೆ. ನಮ್ಮ ಇಬ್ಬರು ಶಿಷ್ಯರು ಭಿಕ್ಷೆ ಎತ್ತಲು ಊರಲ್ಲಿ ಹೋಗಿದ್ದಾರೆಂದರು ಯೋಗಿಗಳು. ಅದರೂ ಅ ಯುವಕನಿಗೆ ಮನಸ್ಸು ತಡೆದುಕೊಳ್ಳಲಾರದೇ, ತನ್ನ ಜೊತೆಗೆ ಬಂದಿದ್ದವರಿಗೆ ಬೇಗನೆ ಹೋಗಿ ನಮ್ಮ ತೋಟದಲ್ಲಿರುವ ಎಳಗಾಯಿ ಹರಿದುಕೊಂಡು ಬರಲು ತಿಳಿಸಿದನು. ಯೋಗಿಗಳಿಗೆ ಈ ಯುವಕ ತೀರ ಪರಿಚತನಾದ, ಸತ್ಸಂಗದ ವಿಷಯದ ಚರ್ಚೆ–ವಾದ–ವಿವಾದ ಇವರಿಬ್ಬರ ಮಧ್ಯದಲ್ಲಿ ಪ್ರಾರಂಭವಾಯಿತು.

ಯುವಕ ಯೋಗಿಗಳನ್ನು ಕೇಳುತ್ತಾನೆ. ತಾವು ದೇವರನ್ನು ಕಂಡಿದ್ದೀರಾ? ಎಂದು ಜಿಜ್ಞಾಸೆಯಿಂದ ಕೇಳಿದ. ಅದಕ್ಕವರು ಹೀಗೆಂದರು–

"ಸತ್ಯ ಹೇಳಬೇಕೆಂದರೆ, ದೇವರನ್ನು ಕಾಣುವುದೆಂದರೆ, ದೇವರಾಗುವುದು ತಾನೆ? ಜೀವವು ಶಿವನಲ್ಲಿ ಐಕ್ಯವಾಗುವುದೇ ಸಾಕ್ಷಾತ್ಕಾರ, ನಮ್ಮನ್ನು ನಾವು ಅರಿಯುವ ಮೂಲಕ ಸರ್ವವನ್ನೂ ಅರಿಯುವುದು, ಸಾಧ್ಯವಾಗಬಹುದು ಎಂದು ಯೋಗಿವರ್ಯರು ಹೇಳಿದವರೇ ಕಣ್ಣು ಮುಚ್ಚಿದರು. ಈ ಮಾತಿನಿಂದ ಆ ಯುವಕನು ತನ್ನನ್ನು ತಾನು ಮರೆತು ಯೋಗಿಯನ್ನೇ ದಿಟ್ಟಿಸುತ್ತ ಕುಳಿತ ಯೋಗಿಗಳು ಮೇಲು ದನಿಯಲ್ಲಿ

ಕಣ್ಣು ಕಂಡಿತೆನಲು ಕರ್ಮಾದಿಕಾರವು;
ಹಿಂದೆ ಬಿದ್ದು ಕೆಡುವ ಹುಚ್ಚು ಮನುಜ
ಬಟ್ಟ ಬಯಲು ಬ್ರಹ್ಮ ಪರಿಪರಿಯಲಿ ನೋಡು
ವಿಶ್ವದಾಭಿರಾಮ ಕೇಳುವೇಮ

ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ
ರೂಪವೇನು ಇರದ ರೀತಿಯಲ್ಲಿ;
ಪರಮ ಯೋಗಿ ನೋಳ್ಪ ಪರಮಾತ್ಮನಿರವನು
ವಿಶ್ವದಾಭಿರಾಮ ಕೇಳು ವೇಮ

ಯೋಗಿಗಳುಲಿದ ಈ ಪದ್ಯಗಳನ್ನು ಆಲಿಸಿದ ಆ ಯುವಕನ ಮನಸ್ಸು ಶಾಂತಿ ಸಾಗರದಲ್ಲಿ ಓಲಾಡಿದಂತಾಗಿ ಮುದ ಹೊಂದಿದನು. ಅವನು ಯೋಗಿಗಳಿಗೆ ಶರಣಾಗತನಾಗಿ ವಿನಮ್ರದಿಂದ ಅವರ ಪಾದಗಳಿಗೆರಗಿದನಲ್ಲದೇ ತಾವು ವೇಮನಯೋಗಿಗಳ ಶಿಷ್ಯರೇನು? ಎಂದು ಕೇಳಿದ ಆ ಯುವಕ. ನನ್ನ ಕಕ್ಕ ವೇಮನ ಯೋಗಿಯ ಹೆಸರನ್ನು ಪುನರುಚ್ಚರಿಸುತ್ತಿದ್ದ!

ಹೌದು ನನ್ನನ್ನೇ ಜನರು ಯೋಗಿ ಎಂದು ಕರೆಯುತ್ತಾರೆಯೆಂದರು . ವೇಮನ ಆಗ ಆ ಯುವಕ ಮತ್ತಷ್ಟು ಹಿರಿಹಿರಿ ಹಿಗ್ಗಿದನು. ತಮ್ಮಂಥ ಮಹಾಯೋಗಿಗಳ ದಿವ್ಯ ದರ್ಶನವಾದುದು ನನ್ನ ಪೂರ್ವಜನ್ಮದ ಪುಣ್ಯ ವಿಶೇಷವೇ ಸರಿ. ನನ್ನ ಕಕ್ಕ ತುಂಬ ಧರ್ಮ–ದೇವರು–ಅಧ್ಯಾತ್ಮವೆಂದರೆ ಬಲು ಪ್ರೀತಿಯುಳ್ಳವನು. ಅವನನ್ನು ಈಗಲೇ ಕರೆಯಿಸಿ ತಮ್ಮಿಂದ ಆಶೀರ್ವಾದ ಪಡೆಯಲು ಹೇಳಲು ಕಳಿಸುವೆಯೆಂದಾಗ, ಈಗ ಬೇಡವೇ ಬೇಡ ನಾಳೆ ಬರಹೇಳುವಿರಿಂತೆಂದು ಯೋಗಿಗಳು ಅ ಯುವಕನನ್ನು ಸಮಾಧಾನ ಪಡಿಸಿದರು. ಆ ಯುವಕನ ಹೊಲಕ್ಕೆ ಹೋಗುವ ಪ್ರಸಂಗ ಬಂತು! ಯೋಗಿಗಳು ಹೋದರು. ನೀರು ಬೀಳಲಾರದ್ದಕ್ಕೆ ಬೆಳೆ ಒಣಗಿದೆಯೆಂದು ಆ ಯುವಕ ಮರುಗಿದ. ಕೆಂಪು ಮಿಶ್ರಿತ ಮಣ್ಣಿನ ಭೂಮಿಯಿದು. ಇಲ್ಲಿ ಬೋರ್ ಹಾಕಿಸಿರಿ, ಸೆಲೆಯಿದೆ ನೀರು ಸಾಕಷ್ಟಿದೆಯೆಂದು ನುಡಿದರು. ಅದರಂತೆ ಅವರು ಮಾಡಿದರು. ಸಿಹಿ ನೀರು ಸಾಕಷ್ಟು ಸೆಲೆಯೊಡೆಯಿತು. ಯೋಗಿಗಳ ಕೃಪಾಶೀರ್ವಾದದಿಂದ ಸುಖೀ ಜೀವನ ನಮ್ಮದಾಗಿದೆಯೆನ್ನುತ್ತಾರೆ ಆ ಯುವಕ!

ಮಾರನೆಯ ದಿನ ಆ ಯುವಕನ ಕಕ್ಕ ವೆಂಕಟಪ್ಪನನ್ನು ಕರೆದು ತಂದ ಯೋಗಿಗಳ ದರ್ಶನ ಪಡೆದನಲ್ಲದೇ ಕಳೆದ ನಾಲ್ಕಾರು ವರುಷಗಳಿಂದ ತಾನು ಅಧ್ಯಯನ ಮಾಡಿದ ಗ್ರಂಥಗಳನ್ನು ಕುರಿತು ಹಾಗೂ ಭೆಟ್ಟಿಯಾದ ಸಾಧುಗಳನ್ನು ಕುರಿತು ಸಂಕ್ಷಿಪ್ತವಾಗಿ ತಿಳಿಸಿದನು. ಆದರೆ ಕಳೆದ ತಿಂಗಳಿಂದಲೂ ತಮ್ಮನ್ನು ಕಾಣಬೇಕೆಂಬ ಕಾತರ ವಿಪರೀತವಾಗಿದೆ. ನಿನ್ನೆ ನಮ್ಮ ಅಣ್ಣನ ಮಗನೊಂದಿಗೆ



ನೀವು ತೋರಿದ ಆತ್ಮೀಯತೆಯಿಂದ ನಮ್ಮ ಹೃದಯವು ತುಂಬಿ ಬಂದಿದೆ. ನನಗೆ ಸಾಕ್ಷಾತ್ ಶಿವನ ದರ್ಶನವೇ ಆದಂತಾಯಿತೆಂದು ನಲಿನಲಿದಾಡಿದನು. ಈ ಮಾತುಗಳಿಗೆ ಯೋಗಿಗಳು ನಸುನಕ್ಕರು.

ಪಾಮೂರ ಗುಹೆಯಲ್ಲಿ ನಡೆಸಿದ ಸಾಧಕರ ತರಬೇತಿ ಪ್ರಯೋಗವು ಯಶಸ್ವಿಯಾಗಿ ಮುಂದುವರೆಯಿತು. ವೆಂಕಟಪ್ಪನು ತನ್ನ ಜೀವನದ ಗುರಿಯು ಈ ರೀತಿ ಅನಾಯಾಸವಾಗಿ ಈಡೇರುವುದೆಂದು ತಿಳಿದಿರಲಿಲ್ಲ. ಅವನಿಗೆ ನನ್ನ ಅಣ್ಣನ ಮಗನ ಸಹಾನುಭೂತಿಯಿಂದಾಗಿ ಮನೆಯಲ್ಲಿ ಎಲ್ಲರ ಸಹಕಾರ ದೊರೆಯಿತು. ಈ ಕುಟುಂಬದ ಅಭ್ಯುದಯದೊಂದಿಗೆ ಗುಹೆಯ ಕಾರ್ಯಕ್ರಮಗಳೂ ಯಶಸ್ವಿಯಾದವು. ಸಾಧಕರ ಶ್ರೇಯಸ್ಸು ಭರದಿಂದ ಸಾಗಿತು.

ಆಗ ವೇಮನರ ದೇಹವು ಯೋಗ ಬಲದಿಂದ ಗಟ್ಟಿ ಮುಟ್ಟಾಗಿದ್ದರೂ ಅವರ ವಯಸ್ಸು ಅರವತ್ತೊಮ್ಮರು ದಾಟಿತ್ತು. ವೇಮನರು ಇಲ್ಲಿಂದ ವಿವಿಧ ಊರುಗಳಿಗೆ ತಿಂಗಳೆರಡು ತಿಂಗಳು ಇದ್ದು ಬರುತ್ತಿದ್ದರಾದರೂ ಮಳೆಗಾಲದಲ್ಲಿ ಮಾತ್ರ ಈ ಪಾಮೂರ ಗುಹೆಗೆ ಅವರ ಚಟುವಟಿಕೆ ಕ್ರೀಯಾಶೀಲವಾಗಿತ್ತು. ಯೋಗಿಗಳು ಹೆಚ್ಚು ಹೆಚ್ಚು ಅಂತರ್ಮುಖಿಗಳಾದಂತೆ, ಅವರ ಪ್ರಭಾವ ಹೆಚ್ಚು, ಹೆಚ್ಚಾಗುತ್ತ ನಡೆಯಿತು. ಅವರ ಪದ್ಯಗಳ ಪ್ರಸಾರ ಸಾಕಷ್ಟು ಆಯಿತು. ಪಂಡಿತ ಪಾಮರರೂ ಬೆರಗಾದರು. ಅವುಗಳನ್ನು ಕಂಠಪಾಠ ಮಾಡಿದವರುಂಟು! ಮೇಳ, ತಂಡಗಳ ಮೂಲಕ ಸುಶ್ರಾವ್ಯವಾಗಿ ಏಕತಾರಿಯೊಂದಿಗೆ ಹಾಡುತ್ತ ಪ್ರಚಾರ ಮಾಡುತ್ತಿದ್ದರು. ಹೀಗೆ, ಮುಂದಿನ ನಾಲ್ಕಾರು ವರ್ಷಗಳಲ್ಲಿ ವೇಮನರ ತತ್ತ್ವಗಳು ಸಾಕಷ್ಟು ಪ್ರಚಾರ ಪಡೆಯಿತು. ವೇಮನರು ಪಾಮೂರಿನಲ್ಲಿರುತ್ತ, ಕ್ರಿಷ್ಟಿಪಾಡ್, ಮಿನಿಕೊಂಡ, ಚಿಟ್ವೇಲ್‌ಗಳ ಕಡೆಗೆ ಪ್ರಯಾಣ ಬೆಳೆಸಿದರು.

ಮಹಾಯೋಗಿ ವೇಮನರು ಯೋಗಿಯೂ ಹೌದು, ಸಾಧಕರೂ, ಸಾಧುಗಳೂ, ಪವಾಡಪುರುಷರೂ, ದಿವ್ಯ ಪುರುಷರೂ, ಶಿವನ ಸ್ವರೂಪಿಗಳೂ ಹೌದು. ಅವರು ತಮ್ಮ ಧ್ಯಾನ–ತಪೋ ಬಲದಿಂದ, ಅಮೃತ ಹಸ್ತದಿಂದ ಮುಟ್ಟಿದುದೆಲ್ಲವೂ ಚಿನ್ನವಾಗಿರುವುದು. ಅವರದು ಸ್ವರ್ಣದಂತಹ ಹೊಳೆಯುವ ಬದುಕು. ತಮ್ಮ ಕಡೆಗೆ ಬಂದವರೆಲ್ಲರನ್ನೂ ಸತ್ಸಂಗದ ಮಾರ್ಗದರ್ಶನ ಮಾಡುತ್ತ ಮೋಕ್ಷ ಹೊಂದಲು ತರಬೇತಿಗೊಳಿಸಿದವರು. ನಾವು ಏನನ್ನೂ ಮಾಡುವುದು ಬೇಡ ಅವರ ಪದ್ಯಗಳನ್ನು ದಿನನಿತ್ಯವೂ ಪಠಿಸುತ್ತ,ಮನನ ನಿಧಿ–ಧ್ಯಾನ–ಧ್ಯಾಸ ಮಾಡಿಕೊಳ್ಳುತ್ತ ಹೋದರೆ ಸಾಕು ತನ್ನಿಂದ ತಾನೇ ಮೋಕ್ಷ ಪ್ರಾಪ್ತಿಯಾಗುತ್ತದೆ. ಮೋಕ್ಷವೆನ್ನುವುದು ಮೇಲಿಲ್ಲ, ಕೆಳಗಿಲ್ಲ ಪಾತಾಳದಲ್ಲಿಲ್ಲ. ನಾವು ನಿಂತ ಸ್ಥಳದಲ್ಲಿಯೇ ಇದೆ. ಸತ್ಕಾರ್ಯಗಳನ್ನು ಮಾಡುವುದು, ಅನಾಥ–ದೀನಬಂಧುಗಳ ಕಣ್ಣೀರೊರೆಸುವುದಲ್ಲದೇ ಅವರ ಸೇವೆಯನ್ನು ಮಾಡುತ್ತ ಹೋದರೆ ದೇವರು ಮೆಚ್ಚುತ್ತಾರೆ. ಇದುವೇ

ಮೋಕ್ಷವೆನಿಸಿಕೊಳ್ಳುತ್ತದೆ. ನೆಮ್ಮದಿ ಸುಖ–ಸಮೃದ್ಧಿ ಎಲ್ಲಿದೆಯೋ ಅದುವೇ ಮೋಕ್ಷದ ಪವಿತ್ರ ಸ್ಥಳವೆಂದು ನನ್ನ ಭಾವನೆಯಾಗಿದೆ. ಅಂತಹ ಮೋಕ್ಷ ಪ್ರಾಪ್ತಿಯ ಹಾದಿಗಾಗಿ ಸಾಗಲು ಇರುವ ಮಹಾಯೋಗಿ ವೆಮನರ ಕೆಲವೆ ಕೆಲವು ಪದಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಅವರು ರಚಿಸಿದ್ದು ಹದಿನೈದು, (ಹಲವಾರು) ಸಾವಿರ ಪದಗಳು. ಆದರೆ ದೊರೆತವುಗಳು ನಾಲ್ಕೈದು ಸಾವಿರದಷ್ಟು, ಪ್ರಕಟಿತವಾದವು. ಅವುಗಳಲ್ಲಿ ಕೆಲವು ಜೀವನೋಪಯೋಗಿ ಪದ್ಯಗಳನ್ನು ಪಠಿಸುವುದಕ್ಕೆಂದು ಇಲ್ಲಿ ಕೊಡಲು ಪ್ರಯತ್ನ ಮಾಡಿರುವೆನು.

ವೇಮನರನ್ನು ಕವಿಗಳು, ದಾರ್ಶನಿಕ ಕವಿಗಳೆಂದು ಕರೆಯಬಹುದು. ಅವರು ಲೌಕಿಕ ಸಾಹಿತ್ಯವನ್ನು ರಚಿಸಿದ್ದರೂ ಕೂಡ ಅಧ್ಯಾತ್ಮದ ತಿರುಳನ್ನೇ ನೀಡುತ್ತವೆ. ಅವರದು ವಿಮಲ ಸಾಹಿತ್ಯದ ರಚನೆ. ಅವರು ರಾಜ–ರಂಕ, ಅರಸ–ಆಳು, ಚೆಲವು–ಒಲವುಗಳ ಮನರಂಜನೆಗಾಗಿ ಸಾಹಿತ್ಯ ರಚಿಸಿದವರಲ್ಲ. ಅವರ ಪ್ರತಿಯೊಂದು ಪದ್ಯದಲ್ಲಿ ಲೌಕಿಕತೆಯ ಹೊಳವು ಇದ್ದರೂ ನೀತಿಯ ಬದುಕಿಗೆ ಏಣಿ ಹಿಡಿದಿವೆ. ಅಧ್ಯಾತ್ಮದಲ್ಲಿದ್ದರೂ ದಾರ್ಶನಿಕತೆಯಿದೆ. ಅವರು ಒಟ್ಟು ೧೫ ಸಾವಿರ ಪದ್ಯ ಬರೆದಿದ್ದಾರೆ. ಹಲವು ಸಹಸ್ರ ಬರೆದಿದ್ದಾರೆಂದು ಇನ್ನೊಂದು ಕಡೆಗೆ ಹೇಳಿಕೊಂಡಿದ್ದಾರೆ. ಆಶು ಕವಿಯೆಂದೂ ಪ್ರಸಿದ್ಧಿಗೆ ಬಂದವರು. ಮಾತನಾಡಿದರೆ ಪದ್ಯಗಳೇ ಅವರ ಮುಖದಿಂದ ಬರುತ್ತಿದ್ದವು. ಕೆಲವು ವಿಷಯಗಳನ್ನು ಶತ ಸಂಖ್ಯೆಯ ಪದ್ಯ ಗುಚ್ಛದಲ್ಲಿಯೂ ಸಂಕಲಿಸಿದ್ದಾರೆ.

ಮೇಲೆ ಹೇಳಿರುವಂತೆ ವೇಮನಯೋಗಿಯ ಸಾವಿರಾರು ಪದ್ಯಗಳನ್ನು ಸದ್ಭಕ್ತಿಯಿಂದ ಪಠಣ ಮಾಡಿ ಸನ್ಮತಿಯಿಂದ, ಸನ್ನಡತೆಯಿಂದ ನಡೆದುಕೊಂಡವರಿಗೆ ಮೋಕ್ಷ ಪ್ರಾಪ್ತಿಯಾಗುತ್ತದೆಯೆಂದು ಅದರ ಫಲಶ್ರುತಿಯನ್ನು ಸೂಚಿಸಿದ್ದಾರೆ. ಹಾಡಿನಲ್ಲಿ ಅನುರಕ್ತಿ ಹೊಂದಿ, ರಮ್ಯವಾಗಿ ಬರೆದು ಶ್ರವಣ ಮಾಡಲು ಜನರು ಈಶನಲ್ಲಿ ಶ್ರದ್ಧೆ ತಾಳಿ, ಭಕ್ತಿ ಹೊಂದುತ್ತಾರೆ. 'ಭಕ್ತಿಯೇ ಮುಕ್ತಿಗೆ ಸೋಪಾನ' ಎಂಬಂತೆ ಭಕ್ತಿ ಮಾಡಿ ಪದ್ಯಗಳನ್ನು ಸ್ತುತಿಸಿದವರಿಗೆ ಮೋಕ್ಷ ಸಿಗುವುದು ಖಚಿತವೆಂಬ ವಿಶ್ವಾಸವೆನ್ನುವಂತಿದೆ. ಭಕ್ತಿಯಿಂದಲೇ ಮುಕ್ತಿ ಮಾರ್ಗ ಮೋಕ್ಷಕ್ಕೆ ರಹದಾರಿಯಿದ್ದಂತೆ ಎಂದು ತಿಳಿಯಪಡಿಸಿದ್ದಾರೆ. ಭಕ್ತಿಯ ಸುರಿಮಳೆಯನ್ನೇ ತಮ್ಮ ಪದ್ಯಗಳಲ್ಲಿ ಸುರಿಸಿದ ಬಗೆಯು ನಿರರ್ಗಳವಾಗಿ ಬಂದಿದೆಯೆಂಬುದನ್ನು ಅನೇಕ ದಾರ್ಶನಿಕರೂ, ವಿದ್ವಾಂಸರೂ ಅಭಿಪ್ರಾಯಪಟ್ಟಿದ್ದಾರೆ.

ವೇಮನಯೋಗಿವರರ ಪದ್ಯಗಳಿಗೂ–ಸರ್ವಜ್ಞನ ವಚನಗಳಿಗೂ ಸಾಮ್ಯತೆಯಿದೆ. ವೇಮನರ ನಾಲ್ಕನೆಯ ಸಾಲು "ವಿಶ್ವದಾಭಿರಾಮ ವೇಮ ಕೇಳು" ಎಂಬೀ ಅಂಕಿತವನ್ನು ಬಿಟ್ಟರೆ ಸರ್ವಜ್ಞನ ತ್ರಿಪದಿಯನ್ನೇ ಜ್ಞಾಪಿಸುವಂತಿವೆ. ಉದಾ:



ಶ್ರೀಕರ ಶಿವತತ್ತ್ವ ಶೀಲನೈ ವೇಮನನ
ಹದಿನೈದು ಸಾವಿರ ಪದ್ಯಗಳನು
ಲೋಕದಲ್ಲಿ ಪಠಿಸೆ ಪಾಕೃತರು ದಡ ಸೇರಲ್ಬೆ
–(ವಿಶ್ವದಾಭಿರಾಮ ಕೇಳು ವೇಮ)– ॥ವಿಶ್ವ॥

ವೇಮ ಹಾಡಿದ ಹಲ ಸಾಸಿರ ಪದ್ಯಂಗಳ
ತನ್ನನುಳಿದು ಕಂಡು ಒಪ್ಪು ತಿಳಿದು,
ಗುಣ ಗುರಿಯಂ ತೋರಿ ಗಳಿಸು ವಿದ್ಯೆ ಬುದ್ಧಿ ॥ವಿಶ್ವ॥

ಸಾವಿರ ಪದ್ಯಗಳ ಸದ್ಭಕ್ತಿ ವಿವೇಕದಿ
ಪಠಿಸುವಂತಹ ಪರಮ ಭಕ್ತ ಜನಕೆ
ಅವಗತವದು ಮೋಕ್ಷ ಅವರಂಗೈಯೊಳಗೆ ॥ವಿಶ್ವ॥

ಸಾಸಿರ ಪದ್ಯಗಳ ಶುದ್ಧ ಭಕ್ತಿಯಿಂದ
ಪಠಣಗೈಯ್ಯುವಂಥ ಭಕ್ತ ಜನಕೆ
ತಪ್ಪದೇ ಮೋಕ್ಷ ಪದವಿ ಅಂಗೈಲಿಹುದು ॥ವಿಶ್ವ॥

ಸಾವಿರ ವಿಧಗಳು ವೇಮನ ಪದ್ಯಗಳು,
ಅರ್ಥವೀವವನೆ ಅರಸಿ ನೋಡೆ,
ನೋಡು ನೋಡಲುಂಟು, ಅದ್ಭುತ ಜ್ಞಾನವು ॥ವಿಶ್ವ॥

ಶ್ರೀಕರ ಪರತತ್ತ್ವ ಶೀಲನೈ ವೇಮನ
ಲಿಖಿತ ಸಾವಿರಾರು ಪದ್ಯ ಸಮುಚ್ಚಯವ
ಲೋಕವೆಲ್ಲ ಓದಿ ಒಳ ಹೊರ ತಮವಳಿಯಲಿ ॥ವಿಶ್ವ॥

ನೀತಿ ವೈರಾಗ್ಯ–ಭಕ್ತಿ ವಿನೀತ ಜನರಿಗೆ
ಜ್ಞಾತುಕರಿಗಲ್ಲದೆ, ಜ್ಞಾನ ಸಂಕಲಿತ ಜನರಿಗೆ
ಬರೆದಿರುವಂಥ ಪದ್ಯಗಳು ಸಾವಿರ ಸಂಖ್ಯೆ
ಚೇತನ ಹೊಂದಿ ವೇಮ ಸರಿದಿಹದಿ
ಇಹ–ಪರಂಗಳಿಗೆ ಇದುವೆ ಸಾಧನವೆಂದು
ಬರೆದು ಓದಿ ಕೇಳಿದವರಿಗೆಲ್ಲ
ಮಂಗಳಾದಿಯುಂಟು; ಮಹಿಯೊಳಗೆ ನಿಜವಿದು ॥ವಿಶ್ವ॥

ಅರಿಯೆ ವೇಮಣ್ಣ ಹೇಳಿದ ಆತ್ಮ ವಿಧವ
ತಿಳಿಯಲಾರದಂಥ ಅಜ್ಞಾನಿ ತುಚ್ಛರೆಲ್ಲ

ತಲೆಯ ಮೇಲಿಟ್ಟಿಹ ಕೂದಲು ಗತಿಯೊಳಷ್ಟೆ
ಭುಕ್ತಿ ಮುಕ್ತಿಯ ಹೊಂದಲಾರನೈ ವೇಮ

ಪ್ರಸ್ತುತಾದಿವೇಳೆ, ಪದ್ಯಗಳ ಪಠಿಸಲು
ತಪ್ಪು ಇದ್ದನೂ ಒಪ್ಪೆನಿಸುವವು
ಲಲನೆ ಸುರತ ವೇಳೆ ಬಲ್ಲೆ ಹೊಡೆಯುತಿಹಳು
ರಾಜಗೀಜವಿರಲಿ, ರುದ್ರಾಕ್ಷಿ–ಹೂವಿರಲಿ
ತಿನಲು ರೊಟ್ಟಿ ಇರಲಿ, ತೌಡು ಇರಲಿ
ಕಾವ್ಯ ನುಡಿವ ಕವಿಯ ಕರ್ಮವೇನೆನುವುದು ॥ವಿಶ್ವ॥

ಈ ಮೇಲಿನ ಪದ್ಯಗಳನ್ನೆಲ್ಲ ನಿರುಕಿಸಿದರೆ ಸಾವಿರ, ಹದಿನೈದು ಸಾವಿರ, ಹಲವು ಸಾವಿರ ಪದ್ಯಗಳನ್ನು ವೇಮನಯೋಗಿವರ್ಯರು ರಚಿಸಿರುವ ಪದ್ಯಗಳ ಅಂಕಿ–ಅಂಶಗಳನ್ನು ಸೂಚಿಸುತ್ತವೆಯಲ್ಲದೇ ಭಕ್ತಿ–ಶ್ರದ್ಧೆಯಿಂದ ಸಾವಿರಾರು ಪದ್ಯಗಳನ್ನು ಕಂಠಪಾಠ ಮಾಡಿದವರಿಗೆ, ಸದ್ಭಕ್ತಿ–ಸನ್ನಡೆತೆಯಿಂದ ನಡೆಯುವವರಿಗೆ ಮೋಕ್ಷ ಪ್ರಾಪ್ತಿಯಾಗುವುದು ನಿಶ್ಚಿತವೆಂದುದಾಗಿ ಓದುಗರಿಗೆ, ಸಾಮಾನ್ಯ ಜನರಿಗೂ ಕರೆಕೊಟ್ಟಿದ್ದಾರೆ. ಇವು ಮನುಷ್ಯನ ಬಾಳಿನ ದಾರೀದೀಪ, ತೋರುದೀಪವಾಗಿವೆಯೆಂದು ಓದಿದವರೆಲ್ಲರೂ ಹೇಳದಿರಲಾರರು. ಈ ಭೂಮಿಯಲ್ಲಿರುವ ಇಹದ ಬಾಳು ಸುಖ–ಸಮೃದ್ಧಿಯುಂಟಾಗಬೇಕಾದರೆ ಈ ಪದ್ಯಗಳನ್ನೋದಿ, ಪಠಣ ಮಾಡಿ ಜೀವನವನ್ನು ಪಾವನ ಮಾಡಕೊಳ್ಳಿರೆಂದು ಹೇಳಿರುವುದು ಕಂಡು ಬರುತ್ತದೆ. ನಡೆಯುವುದು ಬಿಡುವುದು ನಮ್ಮ ನಮ್ಮಕೈಯಲ್ಲಿದೆಯಷ್ಟೇ ಅಲ್ಲವೆ?

**ವೇಮನಯೋಗಿಯ ಅಂತಿಮ ದಿನಗಳು :**

ವೇಮನ ಯೋಗಿವರ್ಯರು ವಿವಿಧ ಪ್ರದೇಶಗಳನ್ನು ಸುತ್ತುತ್ತಾ, ತರು–ಮರಗಳಡಿಯಲ್ಲಿ, ಗುಹೆಗಳಲ್ಲಿ ವಾಸವಾಗುತ್ತ ಬದುಕು ಸಾಗಿಸಿದವರು, ಅದೆಷ್ಟೋ ಪಾಮರರನ್ನು ರಕ್ಷಿಸಿದವರು. ತಮ್ಮ ಜ್ಞಾನಾನುಭವವನ್ನು ಅಟವೇಲದಿಗಳ ಮೂಲಕ ರಚಿಸಿದವರು. ಅಲ್ಲದೇ ಅವರು ಇನ್ನುಳಿದ ಮಠಾಧೀಶರುಗಳಂತೆ ಮಠ–ಮಂದಿರಗಳನ್ನು ಕಟ್ಟಿಸಲಿಲ್ಲ. ಅದೊಂದು ಮೂರ್ತಿ ಪೂಜೆಯಾಗುತ್ತದೆಯೆಂದೇ ಭಾವಿಸಿದವರು. ಗುಹೆ–ಗವಿಗಳಲ್ಲಿ ಮತ್ತು ಹುಣಸೇ ಅಥವಾ ಆಲದ ಮರ ಹಾಗೂ ಧರ್ಮಛತ್ರಗಳಲ್ಲಿರುತ್ತಿದ್ದರು. ಅತೀವ ಸೀದಾ–ಸಾದಾ–ಸರಳ ಜೀವನ ನಡೆಸಿದ ದಿವ್ಯ ಪುರುಷರು. ನೀರು, ಅನ್ನ, ಆಹಾರ, ವಸತಿಗಾಗಿ ಎಂದೂ ಹಪಹಪಿಸಿದವರಲ್ಲ. ಧ್ಯಾನ ಮೌನ–ಯೋಗಸಾಧನೆ–ಪ್ರವಚನ– ಪದ್ಯ ರಚನೆ ಇವುಗಳಲ್ಲಿಯೇ ಮಗ್ನರಾದವರು. ಅವರು ಆಶುಕವಿಯೆಂದೇ ಪ್ರಖ್ಯಾತರಾದವರು. ಅವರಿಗೆ ಯೋಗ್ಯ



ಶಿಷ್ಯರುಗಳಾದ ರಾಮರೆಡ್ಡಿ–ನೀಲಕಂಠರು ಯಾವುದೇ ಊರಿಗೆ ಹೋದರೂ ಭಿಕ್ಷಾಟನೆ ಮಾಡಿಕೊಂಡು ಯೋಗಿಗಳನ್ನು ತಣಿಸುತ್ತ ತಾವೂ ಉಂಡು ಸವಿಯುತ್ತಿದ್ದರು. ಸಂಗ್ರಹ ಬುದ್ಧಿ ಇವರಿಂದ ದೂರವೇ ಉಳಿಯಿತು. ಇಂದಿಂಗೆ ನಾಳಿಂಗೆ ಬೇಕೆಂದು ಎಂದೂ ಚಿಂತಿಸಿದವರಲ್ಲ. ಸಾಕಷ್ಟು ಜನರಿಗೆ ಹೋದ ಹೋದಲ್ಲೆಲ್ಲವೂ ಸತ್ಸಂಗದ ಸವಿಜೇನು ಉಣಬಡಿಸಿದವರು. ವೇಮನ ಯೋಗಿಗಳೇ ತಮ್ಮದೊಂದು ಪದ್ಯದಲ್ಲಿ ಹೇಳಿರುವಂತೆ ಹದಿನೈದು ಸಾವಿರ ಪದ್ಯಗಳನ್ನು ರಚಿಸಿರುವೆನೆಂದು ಹೇಳಿದ್ದಾರೆ. ಆದರೆ ಎಸ್.ಆರ್.ಪಾಟೀಲ ಅವರು ಸಂಪಾದಿಸಿದ ವೇಮನ ವಿಶ್ವಗೀತೆ ಎಂಬುದನ್ನು ಮಹಾಯೋಗಿ ವೇಮನ ಪೀಠ ಕ.ವಿ.ವಿ. ಧಾರವಾಡ ಪ್ರಸಾರಾಂಗ ಪ್ರಕಾಶನದ ವತಿಯಿಂದ ೧೯೯೮ ರಲ್ಲಿ ಪ್ರಕಟಗೊಂಡಿತು. ಅದರಲ್ಲಿ ೪ ರಿಂದ ೫ ಸಾವಿರ ಪದ್ಯಗಳು ಮಾತ್ರ ದೊರೆತಿರುವುದಾಗಿ ತಿಳಿಯಪಡಿಸಿದ್ದಾರೆ. ಒಂದು ವೇಳೆ ಹದಿನೈದು ಸಾವಿರ ಪದ್ಯಗಳು ಲಭಿಸಿದರೆ ವೇಮನರ ಸಾಹಿತ್ಯ ಮಹಾಸಂಪುಟಗಳಾಗುತ್ತವೆ. ಸಂಶೋಧನಾ ವಿದ್ಯಾರ್ಥಿಗಳಿಗಿದು ಉತ್ತಮ ಪಥ್ಯ ಅಥವಾ ವಸ್ತು ವಿಷಯವೂ ಆಗುತ್ತದೆ. ಅಂತಹ ಕಾರ್ಯವನ್ನು ತೆಲುಗು ಮತ್ತು ಕನ್ನಡ ನಾಡಿನ ಯುವಕರು ಮಾಡಲು ಮುಂದಾಗಬೇಕಾಗಿದೆ. ಸಂಶೋಧನೆಗಾಗಿ ವೇಮನ ಯೋಗಿಗಳು ಹಾಗೂ ಅವರ ಸಾಹಿತ್ಯದ ಬಗೆಗೆ ಆಯ್ಕೆ ಮಾಡಿಕೊಂಡು ಅಧ್ಯಯನಮುಖಿ ಯಾಗಬೇಕೆಂದು ನನ್ನ ಬಿನ್ನಹ!!

ಮಹಾಯೋಗಿಗಳು ದಕ್ಷಿಣ ಭಾರತದ ಪ್ರದೇಶಗಳನ್ನೆಲ್ಲಾ ನಡೆದಾಡಿದರು. ಸತ್ಸಂಗದ ಮೂಲಕ ಮನುಕುಲದ ಉದ್ಧಾರಕ್ಕಾಗಿಯೇ ಜೀವನವನ್ನು ಮುಡಿಪಾಗಿಟ್ಟರು. ಸರಳ ಜೀವನ ನಡೆಸಿ ಇವರು ದಿಗಂಬರರಾಗಿಯೇ ಸಂಚರಿಸುತ್ತಾ ಉದಾತ್ತ ವಿಚಾರಧಾರೆಗಳನ್ನು ಜನಮನದಲ್ಲಿ ಬಿತ್ತಿದ್ದರು. ಅವರ ಸ್ಪಷ್ಟ ನುಡಿ ಮೊನಚಾದ ಭಾಷೆ, ಕ್ರಾಂತಿಕಾರಕ ವಿಚಾರದೋಹೆಗಳು ಜನರ ಮೇಲೆ ಅಚ್ಚಳಿಯದೇ ಉಳಿಯುವಂತೆ ಪ್ರಭಾವ ಬೀರಿದವು. ಅವರ ನುಡಿಮುತ್ತುಗಳು ಜನರ ನಾಲಗೆಯ ಮೇಲೆ ನರ್ತಿಸಿದವು. ಅವರ ವಿಚಾರಧಾರೆಗಳು ಸಾಧುಗಳಿಗೂ, ಮಹಾಯೋಗಿಗಳಿಗೂ ಉದ್ಬೋಧಕವಾಗಿದ್ದವು. ಯೋಗಿಗಳ ಯೋಗಿ ಮಹಾಯೋಗಿ ಎಂಬ ಮಾತಿಗೆ ಪ್ರಸಿದ್ಧಿಗೆ ಬಂದರು. ತೆಲುಗರಂತೂ ಸಾಮಾನ್ಯ ಗೃಹಸ್ಥನಾಗಲಿ, ಸಾಧಕನಾಗಲಿ ವೇಮನರ ಪದ್ಯದ ಸಾಲುಗಳನ್ನು ನಾಣ್ನುಡಿಯಂತೆ ತಮ್ಮ ನಿತ್ಯದ ಆಡು ಭಾಷೆಯಲ್ಲಿ ಬಳಸುತ್ತಿದ್ದರು. ಅವರ ವಿಚಾರಗಳು ಕ್ರಾಂತಿಕಾರಕವಾಗಿದ್ದುವಲ್ಲದೇ ಯುವಕರನ್ನು ಬಡಿದೆಬ್ಬಿಸುವಂತಿವೆ. ಹನ್ನೆರಡನೆಯ ಶತಮಾನದ ಶಿವಶರಣರಂತೆ ಕಾಯಕ–ದಾಸೋಹಗಳನ್ನು ಕಾರ್ಯಗತ ಗೊಳಿಸಿದವರು. ಅವರ ತತ್ತ್ವ ಚಿಂತನೆಯು ಎಷ್ಟೊಂದು ಕ್ರಾಂತಿಕಾರಿಯಾಗಿತ್ತೆಂದರೆ, ಅದುವರೆಗೆ ಸತ್ಯಾಂಶಗಳನ್ನು ತಿರುಚಿ, ಜನವರ್ಗವನ್ನು ತಾತ್ತ್ವಿಕ ಚಿಂತನೆಗೆ ಎರವು

ಮಾಡಿದ, ಪುರೋಹಿತ ವರ್ಗವು, ತಳಮಳಗೊಂಡು ಅವರ ಪದ್ಯದ ಪೋಥಿಗಳು ಜನರಿಗೆ ಸಿಗದಂತೆ ತಮ್ಮ ತಮ್ಮ ಮನೆಗಳಲ್ಲಿಯೇ ಮರೆಯಾಗಿಸಿದರೆಂದು ತಿಳಿದು ಬರುತ್ತದೆ. ಇಂಥ ಮಹಾನುಭಾವ-ಮಹಾಯೋಗಿಯ ಪದಪದ್ಯಗಳು ತೆಲುಗರ ಮನೆ ಮಾತಾದರೆ, ಕನ್ನಡ ಭಾಷೆಗೂ ಅನುವಾದಗೊಂಡು ಸರ್ವಜ್ಞನಂತೆ ಕನ್ನಡಿಗರ ಮನೆಮಾತಾಗಿರುವರು. ಅಸಂಖ್ಯಾತ ಪದ್ಯಗಳು ತೆಲುಗಿನಿಂದ ಕನ್ನಡಕ್ಕೆ, ತಮಿಳಿಗೆ, ಹಿಂದಿ, ಇಂಗ್ಲೀಷ ಭಾಷೆಗಳಿಗೆ ಅನುವಾದಗೊಂಡು ಜನಮನಕ್ಕೆ ತಲುಪಿವೆ. ಇಂದಿನ ವಿದ್ವಾಂಸರು ಹಿಂದೆಂಗಿಂತಲೂ ಸಕಲ ಸೌಕರ್ಯ-ಸೌಲಭಗಳಿರುವಂಥ ಇಂದಿನ ಕಲಿಯುಗದ ಕಾಲದಲ್ಲಿ ವೇಮನರ್ಯೋಗಿಯ ಪದ್ಯಗಳು ಪ್ರಕಟಗೊಂಡು ಪ್ರಸಾರವಾಗುವದು ಅಗತ್ಯತೆಯಿದೆಯೆಂದು ನನ್ನ ಭಾವನೆ. ಇಂತೆಲ್ಲ ಸಾಧಕನ ಸಾಹಸ ತಾತ್ತ್ವಿಕ ಚಿಂತಕನು ತನ್ನ ದೇಹ ದೇವನಲ್ಲಿ ವಿಲೀನವಾಗುವ ಲಕ್ಷಣಗಳು ಕಂಡು ಬಂದವು. ಬಸವಾದಿ ಶಿವಶರಣರಂತೆ "ಮರಣವೇ ಮಹಾನವಮಿ" ಎಂದು ಸ್ವೀಕರಿಸಿದ ಪುಣ್ಯಾತ್ಮರಿವರು. ಮನುಷ್ಯನಾದವನು ಜೀವಕ್ಕೆ-ಕಾಲಕ್ಕೆ ಹೆದರಬಾರದು; ಯಾವುದನ್ನೂ ಧೈರ್ಯದಿಂದ ಎದುರಿಸಬೇಕೆನ್ನುತ್ತಿದ್ದರು.

ಅಂದು ಶಾರ್ವರಿ ನಾಮ ಸಂವತ್ಸರದ, ಚೈತ್ರ ಮಾಸದ, ಶುಕ್ಲಪಕ್ಷ ನವಮಿ ತಿಥಿಯಿತ್ತು. ವೇಮ ಯೋಗಿ ಪೂರ್ವ ಸೂಚನೆ ನೀಡಿದಂತೆ ಆ ದಿನ ಅವರು ದೇಹ ತೊರೆಯುವ ದಿನ, ಅಣು ಮನಸ್ಸಿನ ಪ್ರಕ್ರಿಯೆಯು ಮರಣವನ್ನು ತಿಳಿಯಲಾರದಂತೆ, ಅವರೇ ಆ ಮುನ್ನ ಒಂದು ಬಾರಿ ತಿಳಿಸಿದರಂತೆ-

ಹನಿಯು ಬೀಳುವಂದ, ಹರಣ ತೊಲಗುವಂದ
ತಿಳಿಯಲಾರ ಘನನೆ ಆದೊಡೇನು?
ತಿಳಿದೊಡಾದ ಕಲಿಯುಗ ಉಳಿಯುವುದು ಎಂತು?
ವಿಶ್ವದಾಭಿರಾಮ ವೇಮ ಕೇಳು

ಆದರೆ, ಬ್ರಾಹ್ಮೀ ಮನವು ಆಗೀಗ ಬೋಧಿ ಸಂಪನ್ನರ ಮೂಲಕ ಕಾರ್ಯವನ್ನು ಮಾಡುವುದುಂಟು. ಆಗ ಅಣು ಮನಸ್ಸಿನ ಎಲ್ಲೆಯಾಚೆಯ ಸಂಗತಿಗಳು ವೇದ್ಯವಾಗುತ್ತವೆ. ಹೀಗಾಗಿ ಯೋಗಿವರ್ಯರು ತಮ್ಮ ದೇಹತ್ಯಾಗದ ವಿಷಯವನ್ನು ಶಿಷ್ಯನಾದ ರಾಮರೆಡ್ಡಿಗೆ ತಿಳಿಸಿದ್ದರು. ಅವನ ಮುಖಾಂತರ ಇತರರಿಗೂ ತಿಳಿದಿತ್ತು. ಹೀಗಾಗಿ ಅವರ ಸಮಾಧಿ ರಚನೆಯು ಅ ಮುನ್ನವೇ ಆಗಿತ್ತು. ಅಂದು ಕಟಾರ್ಲುಪಲ್ಲಿಯ ಹೊರವಲಯದ ದಿನ್ನೆಯ ಮೆಲೆ ಸಾಕಷ್ಟು ಜನರು ಜಮಾಯಿಸಿದ್ದರು. ಯೋಗಿವರ್ಯರ ಜೀವಂತ ಸಮಾಧಿಯ ವಿಚಾರವನ್ನು ಆ ಭಾಗದ ಹಲವು ಜನರು ಗ್ರಂಥಗಳಲ್ಲಿ ಓದಿದ್ದರೇ ಹೊರತು ಕಣ್ಣಾರೆಯಾಗಿ ಕಂಡಿರಲಿಲ್ಲ.



ಮಹಾಯೋಗಿ ವೇಮನರು ಕುಟೀರದಲ್ಲಿ ಆ ದಿನ ವಿಶೇಷ ಸ್ನಾನ ಮಾಡಿ, ನಿತ್ಯದಂತೆ ಧ್ಯಾನ-ಪೂಜಾದಿ ಕ್ರಿಯೆಗಳನ್ನು ಮುಗಿಸಿದರು. ರಾಮರೆಡ್ಡಿಯು ಕೊಟ್ಟ ಒಂದು ಬಟ್ಟಲು ಸಿಹಿ ಹಾಲು ಸೇವಿಸಿದರು. ಹಾಲು ನೀಡುವಾಗ ಇದೇ ಕೊನೆಯ ಸೇವೆಯೆಂದು ನೆನಪಾಗಿ, ರಾಮರೆಡ್ಡಿಯ ಕಣ್ಣಂಚಿನಲ್ಲಿ ನೀರು ತಂದರು. ಕುಟೀರದ ಹೊರಗೆ ಜನರ ಗದ್ದಲ ದುಃಖ ಮಡುವುಗಟ್ಟಿತ್ತು. "ವೇಮನ ಯೋಗಿಗಳಿಗೆ ಜಯವಾಗಲಿ ಪರಂಜ್ಯೋತಿ ವೇಮನ ಚಿರಾಯುವಾಗಲಿ!" ಎಂಬ ಉದ್ಘೋಷಗಳು ಭಕ್ತ ವೃಂದದಿಂದ ಕೇಳಿ ಬರುತ್ತಿದ್ದವು. ವೇಮನರು ಕುಟೀರದಿಂದ ಹೊರ ಬಂದರು. ತಮಗಾಗಿ ಸಿದ್ಧಪಡಿಸಿದ ಸಮಾಧಿ ಕಟ್ಟಡದತ್ತ ಹೆಜ್ಜೆ ಹಾಕಿದರು. ಕೂಡಿದ ಜನರೆಲ್ಲ ಭಾವಾವೇಷಕ್ಕೊಳಗಾದರು.

ತೊರೆಯದಿರು ತಂದೆ, ನಮ್ಮನ್ನು ತೊರೆಯದಿರು ನಮ್ಮನ್ನು ಅನಾಥರನ್ನಾಗಿ ಮಾಡದಿರು ಲೋಕೋದ್ಧಾರದ ಕಾರಣಿಕ ಮಹಾಪುರುಷ ನೀನು ನಮ್ಮನ್ನೆಲ್ಲ ಉದ್ಧಾರಗೈದವನು ನೀನು ನಮ್ಮನ್ನು ತೊರೆಯದಿರು ಎಂದು ಗೋರ್ಗರದು ರೋದನಗೈದರು. ಆಗಲೂ ವೇಮನರು ಅಧೀರರಾಗದಿರಿ, ತತ್ತ್ವದಂತೆ ಬದುಕಿ ಬಾಳಿರಿ, ದಯೆಯಿರಲಿ ಅನಾಥ-ಬಡವರಲ್ಲಿ, ದೇಹದಿಂದ ನಾನಿಲ್ಲವೆಂಬ ಭಾವ ನಿಮ್ಮಲ್ಲಿದೆ. ಆ ಭಗವಂತನು ಮಹಾದೊಡ್ಡವನು. ಅವನ ಆಣತಿಯಂತೆ ನಡೆಯುವ ಸೂತ್ರದ ಗೊಂಬೆಗಳು ನಾವು. ಈ ಜಗವೆಲ್ಲವೂ ದೇವನ ಮನೆ, ನಾವಿರುವುದು ಇಲ್ಲಿ ಸುಮ್ಮನೇ, ಮೇಲಿರುವುದು ನಮ್ಮ ಮನೆ ಎಂದು ಹೇಳಿದರಲ್ಲದೇ ಆಗಲೂ ಪದ್ಯಗಳನ್ನು ಹೇಳಿದರು-

"ಹುಟ್ಟುವವರು ಯಾರು? ಹುಟ್ಟದವರು ಯಾರು?
ಹುಟ್ಟಿ ಹುಟ್ಟದಂಥ ಪುರುಷರು ಯಾರು?
ಹುಟ್ಟಿ ಹುಟ್ಟದಿಹುದ ಬೋಧಿಸಲು, ಕಾಣಿರೋ?
ವಿಶ್ವದಾಭಿರಾಮ ಕೇಳು ವೇಮ

ಬದುಕುವವರು ಯಾರು? ಬದುಕದವರು ಯಾರು?
ಬದುಕಿ ಬದುಕದಂಥ ಪ್ರಾಣಿ ಯಾರು?
ಬದುಕು ಇರದ ಬದುಕು ಭ್ರಮೆಯಿಳಿದು ಕಾಣಿರೋ
ವಿಶ್ವದಾಭಿರಾಮ ಕೇಳು ವೇಮ

ಕಟ್ಟುವವರು ಯಾರು? ಕಟ್ಟದವರಾರು?
ಕಟ್ಟಿಯೂ ಕಟ್ಟದಂತಹ ಕರ್ಮಿಯೂ ಯಾರು?
ಗಟ್ಟಿ ಹಿಡಿದು ಲೇಸ, ಕಣ್ಣು ಬಿಟ್ಟು ನೋಡಿಕೋ?
ವಿಶ್ವದಾಭಿರಾಮ ಕೇಳು ವೇಮ

ನೀಡುವವರು ಯಾರೋ? ನೀಡದವರು ಯಾರೋ?
ನೀಡಿಯೂ ನೀಡದಂಥ ನಿಷ್ಠರಾರೋ?
ಪಟ್ಟು ಹಿಡಿದು ಇದರ ಗುಟ್ಟ, ಭಾವಿಸಿಕೋ
ವಿಶ್ವದಾಭಿರಾಮ ಕೇಳು ವೇಮ

ಸಾಯುವವರು ಯಾರು? ಸಾಯದವರು ಯಾರು?
ಸತ್ತು ಬದುಕುವಂಥ ಸುಜನರಾರು?
ಬಿಚ್ಚಿ ತೆರೆದು ಬಿಡಿಸಿ ಬಗೆದು ನೋಡಿರಯ್ಯ
ವಿಶ್ವದಾಭಿರಾಮ ಕೇಳು ವೇಮ

ಇಷ್ಟೆಲ್ಲ ಪದ್ಯಗಳನ್ನು ಪಠಿಸಿದವರೇ ಶಿಷ್ಯ ರಾಮರೆಡ್ಡಿಯತ್ತ ನೋಡಿದರು. ಸುದೀರ್ಘ ಕಾಲ ಗುರುಸೇವೆಯಲ್ಲಿದ್ದ ರಾಮರೆಡ್ಡಿಯು ಅವರ ಇಂಗಿತವನರಿತರು. ಆತನೂ ಯೋಗಿಗಳು ಹೇಳಿದ ಪದ್ಯಗಳನ್ನು ಮನನ ಮಾಡಿಕೊಳ್ಳುತ್ತಿದ್ದನು. ಅಂತಹ ಸದ್ಬೋಧಗಳನರಿಯಬೇಕೆನ್ನುವ ಭಾವ ಅವನಲ್ಲಿ ಕುದುರಿತು. ಮೈ ರೋಮಂಚನಗೊಂಡಿತು. ಬೇವರಿದ, ದುಃಖದ ಕಟ್ಟೆಯೊಡೆಯಲಾರಂಭಿಸಿದ. ಇನ್ನು ಮೆಲಿನಿಂದ ನಾನು ಯಾರ ಸೇವೆ ಮಾಡಿ ಬದುಕಲಿ ಈ ಇಹದಲಿ? ಎಂದು ಮರುಗಿದ. ಶಿಷ್ಯನ ಅಂತರಂಗವನ್ನರಿತ ವೇಮನಯೋಗಿ ಪ್ರವರರು–

ನುಡಿದ ಸದ್ಗುರು ಬೋಧೆ ನಿತ್ಯವರಿತು
ಮರೆಯದಿರುವಂಥವರು, ಮಾಯೆ ಜಗಕೆ
ಅಂಟರೆನ್ನುತಿಹರು, ಅಂದವಾಗಿ
ತಿಳಿಸಿ ಹೇಳಿದ ವೇಮನ ದೇಶಿಕಾರ್ಯ

ಇಷ್ಟೆಲ್ಲ ಪಠಿಸಿದ ಮೇಲೆ ಮಹಾಯೋಗಿವರ್ಯರು ಕಣ್ಣು ತೆರೆದರು. ಕೂಡಿದ ಜನರತ್ತ ಕೃಪಾದೃಷ್ಟಿ ಬೀರಿ ಹರಸಿದರು. ವರದ ಹಸ್ತ ಎತ್ತಿ ಅಭಯ ಮುದ್ರೆ ದಯಪಾಲಿಸಿದರು. ಜನಮಧ್ಯೆ ವಿದ್ಯುತ್ ಸಂಚರವಾದಂತಾಯಿತು. ಗಂಭೀರತೆ ಪಸರಿಸಿತು. ಯೋಗಿಗಳು ಎದ್ದು ಸಮಾಧಿ ಸ್ಥಳಕ್ಕೆ ಸಾಗಿ,ಅಲ್ಲಿ ವೀರಾಸನದಲ್ಲಿ ಕುಳಿತು, ಮತ್ತೊಮ್ಮೆ ಜನತಾ ಜನಾರ್ಧನನಿಗೆ ನಮಸ್ಕರಿಸಿ "ಓಂ ನಮಃ ಶಿವಾಯ" ಎಂದು ಷಡಕ್ಷರಿ ಮಂತ್ರವನ್ನು ಪಠಿಸಿದರು. ಶ್ರೀರಾಮ ಶ್ರೀರಾಮ ಎಂದು ಹೇಳಿದವರೇ ಕಣ್ಣು ಮುಚ್ಚಿದರು. ಮುಂದೆ ರಾಮರೆಡ್ಡಿಯು ಗುರುವಿನ ವಿಧಿ ವಿಧಾನಗಳನ್ನು ಪೂರೈಸಿದನು. ವೇದಾತೀತನು ವೇಮನು, ವೇಮನ ಮಾತೇ ವೇದವು ಎಂದು ಪಠಿಸಿದರು. ಓಂ ಶಾಂತಿಃ ಶಾಂತಿಃ ವೇಮನ ಮಹಾಯೋಗಿ ಚಿರಾಯುವಾಗಲಿ ಎಂಬ ಘೋಷವು ಎಲ್ಲೆಡೆ ಎಂದು ಕೂಡಿದ ಜನರೆಲ್ಲರೂ ಒಕ್ಕೊರಲಿನಿಂದ



ಮಾರ್ದನಿಸಿದರು. ಮಹಾಯೋಗಿಯ ದೇಹ ದೇವನಲ್ಲಿ ಲೀನವಾಯಿತು. ಮಣ್ಣಿಂದ ಕಾಯ ಮಣ್ಣಿಗೆ ಸೇರಲೆಬೇಕು ಎಂಬಂತೆ ನಾವೆಲ್ಲರೂ ಇಂದಿಲ್ಲ ನಾಳೆ ಮಣ್ಣಿನಲ್ಲಿ ಒಂದಾಗುವವರೇ ಆದರೆ ಮಹಾಯೋಗಿ ವರ್ಯರ ವೇಮನನಂಥವರು ಮತ್ತೇ ಹುಟ್ಟಿ ಬರುವುದು ದುರ್ಲಭವು ಎಂದು ಜನತೆ ಪದೇ ಪದೇ ನೆನಪಿಸುತ್ತ ಸತ್ಸಂಗದ ಸವಿಜೇನು ಇನ್ನು ಮುಂದೆ ಯಾರು ಉಣಿಸುವವರು? ಎಂದು ಮಮ್ಮಲ ಮರುಗಿದರು. ಜೈನ ಧರ್ಮದ ಮುಮುಕ್ಷು–ತೀರ್ಥಂಕರರು ಜೀವಂತ ಸಮಾಧಿ ಹೊಂದುವಂತೆ ಮಹಾಯೋಗಿ ವೇಮನರೂ ಅವರಂತಾದ ಚರಿತ್ರೆಯೋದಿ ನನಗೂ ಅಚ್ಚರಿಯಾಯಿತಲ್ಲದೇ ಈ ಸಮಾಧಿ ಮರಣವನ್ನೇಕೆ ಬಯಸಿದರು ಎಂದೆನಿಸಿತು. ಇಂತಹ ಪುಣ್ಯಪುರುಷನನ್ನು ಕಳೆದುಕೊಂಡು ನಾವಿಂದು–ಎಂದೆಂದಿಗೂ ಮಮ್ಮಲಮರುಗುವಂತಾಯಿತು. ಆದರೂ ಅವರು ತಮ್ಮ ಬದುಕಿನ ಆಯಾಮಗಳನ್ನು, ಸತ್ಸಂಗದ ಸವಿಜೇನನ್ನು ತಮ್ಮ ಪದ್ಯಗಳಲ್ಲಿ ಎರಕ ಹೊಯ್ದಿರುವರು. ಅವುಗಳನ್ನು ಮೆಲುಕು ಹಾಕುತ್ತ, ಅವರ ಆದರ್ಶಗಳನ್ನು ಪಾಲಿಸುತ್ತ ನಮ್ಮೆಲ್ಲರ ಜೀವನವನ್ನು ಪಾವನ ಮಾಡಿಕೊಳ್ಳೋಣವೆಂದು ಬಯಸುತ್ತ ಪ್ರಾರ್ಥಿಸಿಕೊಳ್ಳುವೆ.

■■

# ಅಧ್ಯಾಯ – ೬

# ತಿರುವಳ್ಳುವರ್ ಮತ್ತು ವೇಮನರ ಪದ–ಪದ್ಯಗಳ ತಾತ್ವಿಕಾಂಶಗಳ ತೌಲನಿಕ ಅಧ್ಯಯನ

ಇವರಿಬ್ಬರೂ ಮಹಾನ್ ಚಿಂತಕರು. ಸಮಾಜದ ಹಿತವನ್ನು ಬಯಸಿ ಭೂಮಿಗೆ ಬಂದ ಭಗವಂತನ ಅವತಾರಿಗಳು. ಲೋಕದ ಒಳಿತಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು ಎಂಬುದನ್ನು ಅವರವರ ಚರಿತಾಮೃತದಲ್ಲಿ ಕಂಡರಿಸಲಾಗಿದೆ. ಇವರಿಬ್ಬರದೂ ಕಾಲಮಾನದ ವ್ಯತ್ಯಾಸವಿದ್ದರೂ ಆಯಾಯ ಕಾಲಘಟ್ಟದಲ್ಲಿದ್ದ ಜನರ ದುಃಖ ದುಮ್ಮಾನಗಳನ್ನು ದೂರಗೊಳಿಸಿದ ಪುಣ್ಯಪುರುಷರು. ಅವರು ಇಂದಿಗೂ, ಎಂದೆಂದಿಗೂ ಪೂಜ್ಯನೀಯರು. ಅವರ ಪದ್ಯಗಳನ್ನು ಓದಿ ಪದೇ ಪದೇ ಮೆಲುಕು ಹಾಕುತ್ತಾ ನಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದದ್ದೇಯಾದರೆ ನಮ್ಮೆಲ್ಲರ ಜೀವನ ಪಾವನವಾಗುವುದರಲ್ಲಿ ಸಂದೇಹವೇ ಇಲ್ಲ. ಸಂಸಾರದಲ್ಲಿದ್ದರೂ ಅವುಗಳನ್ನು ಪಾಲಿಸಿದರೆ ಜೀವನ್ಮುಕ್ತಿಯಾಗಲು ಸಾಧ್ಯವಿದೆ. ಅಂತಹ ಉತ್ತಮವಾದ ನೀತಿಯ ಬೋಧನೆಯನ್ನು ತಮ್ಮ ತಮ್ಮ ಪದ್ಯಗಳ ಮೂಲಕ ತಿಳಿಯಪಡಿಸಿದ್ದಾರೆ. ಮಾನವ ಜನ್ಮದ ಸಾರ್ಥಕತೆಗೆ ಬೇಕಾಗಿರುವ ಜೀವನ ಮೌಲ್ಯಗಳನ್ನು ತಮ್ಮ ಪದ್ಯಗಳಲ್ಲಿ ತಿಳಿಸಿದ್ದಾರೆ. ಮಾನವ ಜನ್ಮದ ಸಾರ್ಥಕತೆಗೆ ಧರ್ಮ ಅರ್ಥ–ಕಾಮ–ಮೋಕ್ಷಗಳೆಂಬ ಪುರುಷಾರ್ಥಗಳ ಸಮನ್ವಯ ಜ್ಞಾನ ಅತಿ ಮುಖ್ಯ. ಅದರಲ್ಲೂ ತಿರುವಳ್ಳವರ್‌ರು ಹೇಳುವ ಪ್ರಮುಖ ಸಿದ್ಧಾಂತವೇನೆಂದರೆ – ಪುರುಷಾರ್ಥಗಳಲ್ಲಿ ಮೊದಲಿನ ಮೂರನ್ನು, ಅಂದರೆ ಧರ್ಮ, ಅರ್ಥ, ಕಾಮ – ಇವುಗಳನ್ನು ಸಮರ್ಪಕವಾಗಿ ನಿಯಮಾನುಸಾರ ಮತ್ತು ನೀತಿಯಿಂದ ಬಳಸಿದ್ದೇಯಾದರೆ ಮೋಕ್ಷವು ಪಾಲಿಸಿದಾತನಿಗೆ ಪ್ರಾಪ್ತವಾಗುವುದರಲ್ಲಿ ಸಂದೇಹವೇ ಇಲ್ಲವೆಂದು ನುಡಿದು ನಡೆದು ತೋರಿಸಿದ್ದಾರೆ. ಇದರಿಂದಾಗಿ ಈ ಇಬ್ಬರೂ ಮಹಾಯೋಗಿಗಳು ನಮಗೆ ಆದರ್ಶರಾಗಿದ್ದಾರೆ. ಇಂಥ ಜ್ಞಾನಾಮೃತವನ್ನು ತಮ್ಮ ಗ್ರಂಥಗಳ ಮೂಲಕ ತಿಳಿಸಿದ್ದಾರೆ. ಈ ಜ್ಞಾನಾಮೃತವನ್ನು ಕೃತ್ರಿಮತೆಯಿಲ್ಲದ, ನೇರವಾದ, ನಿರ್ದಿಷ್ಟವಾದ, ಸಾರಭೂತವಾದ, ರಸಮಯವಾದ ಸಣ್ಣ ಸಣ್ಣ ಪದ್ಯಗಳ ಮೂಲಕ ಓದುಗನ ಹೃದಯವನ್ನು ಸೇರುವಂತೆ ಮಾಡಿದ್ದು ತುಂಬಾ ಶ್ಲಾಘನೀಯವಾದುದು.



ಒಂದೆರಡನೆಯ ಶತಮಾನದಲ್ಲಿ ಬಾಳಿ–ಬದುಕಿದ್ದ ಮಹರ್ಷಿ ತಿರುವಳ್ಳುವರ್‌ರು ತಮ್ಮ 'ತಿರುಕ್ಕುರಳ್'ಎಂಬ ಕಾವ್ಯದಲ್ಲಿ ಹೇಳಿರುವ ಅಂಶಗಳು; ೧೪–೧೫ನೆಯ ಶತಮಾನದಲ್ಲಿದ್ದ ಮಹಾಯೋಗಿ ವೇಮನರ ಗೀತೆಗಳಲ್ಲಿಯೂ ತಾತ್ತ್ವಿಕಾಂಶಗಳು ಮೂಡಿ ಬಂದಿವೆ. ಮಾನವನು ಈ ಪ್ರಪಂಚದಲ್ಲಿ ಮಾನವೀಯತೆಯಿಂದ ಬಾಳಿ ಬದುಕನ್ನು ಹಸನಾಗಿಸಿಕೊಳ್ಳಬೇಕೆಂಬ ಉದಾತ್ತವಾದ ನೀತಿಯ ಮಾತುಗಳು ಇವರ ಕೃತಿಗಳಲ್ಲಿ ಹರಳುಗಟ್ಟಿವೆ. ಆಸ್ತಿಕ ಮತ್ತು ನಾಸ್ತಿಕ ಬಾಂಧವರೆಲ್ಲರ ಹೃದಯವನ್ನು ಸೂರೆಗೊಂಡು ವಿಶ್ವಮಾನ್ಯ ಕೃತಿಗಳೆಂದು ಹೇಳಲು ತುಂಬಾ ಹೆಮ್ಮೆ ಮತ್ತು ಅಭಿಮಾನವೆನಿಸುತ್ತದೆ. ವಿಶ್ವದ ಜನತೆ ಇವರ ಗೀತೆಗಳನ್ನು ಬರಮಾಡಿಕೊಳ್ಳುವಂತಿವೆ. ಇವರು ಹೇಳಿದ ಪದ್ಯಗಳನ್ನಾಯ್ದುಕೊಂಡು ತೌಲನಿಕವಾಗಿ ಹೇಳಲು ಕೆಲವು ವಿಭಾಗಗಳನ್ನಾಗಿ ಮಾಡಿಕೊಂಡು ಬಣ್ಣಿಸಲು ಪ್ರಯತ್ನಿಸಲಾಗಿದೆ. ಅವು ಇಂತಿವೆ. ಧರ್ಮಭಾಗ, ಅರ್ಥ ವಿಭಾಗ, ಕಾಮ ವಿಭಾಗ, ಮೋಕ್ಷ ವಿಭಾಗ ಎಂಬುದಾಗಿದ್ದು; ಅವರವರ ಪದ್ಯಗಳ ಹಿನ್ನೆಲೆಯಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ.

## ಅ. ಧರ್ಮ ಭಾಗ

ಮಾನವನ ಮೌಲ್ಯಗಳಲ್ಲಿಯೇ ಇದುವೇ ಪ್ರಮುಖವಾದ ವಿಭಾಗವಾಗಿದ್ದು; ಚತುರ್ವಿಧ ಪುರುಷಾರ್ಥಗಳಲ್ಲಿಯೂ ಇದುವೇ ಮೊದಲನೆಯ ಭಾಗವಾಗಿದೆ. ಮಾನವನ ನಡೆ ನುಡಿ; ಆಚಾರ –ವಿಚಾರಗಳಿಗೆ ಧರ್ಮದ ನಡೆಯೇ ಮುಖ್ಯ. ಧರ್ಮದಿಂದ ನಡೆದರೆ ಅದೇ ಜನ್ಮ ಕಡೆ. ಅಂದರೆ, ಮೋಕ್ಷ ಕಟ್ಟಿಟ್ಟ ಬುತ್ತಿ ಎಂದು ಹಿರಿಯರು ಹೇಳಿದ ಮಾತು ನಿತ್ಯ ಸತ್ಯ! "ಧರ್ಮೋ ರಕ್ಷತಿ ರಕ್ಷಕಃ" ಎಂಬ ವಾಕ್ಯೋಕ್ತಿಯೊಂದಿಗೆ ಯಾರು ಧರ್ಮವನ್ನು ರಕ್ಷಿಸುತ್ತಾರೆಯೋ ಅಂಥವರನ್ನು ಧರ್ಮ ರಕ್ಷಿಸುತ್ತದೆ ಎಂದಂತೆ! ಆದುದರಿಂದ ಮಾನವೀಯ ಮೌಲ್ಯಗಳ ಮೊದಲ ಹೆಜ್ಜೆ ಧರ್ಮದ ನಡೆಯಾಗಿದೆ. ಇದನ್ನು ಪ್ರಪಂಚದ ಎಲ್ಲ ದಾರ್ಶನಿಕರೂ ಹೇಳುವ ಮಾತು.

ಧರ್ಮ ಮಾನವರನ್ನು ಉದ್ಧಾರ ಮಾಡಬೇಕೇ ಹೊರತು ಅದು ಅವನನ್ನು ವಿನಾಶ ಮಾಡಬಾರದು. ಒಂದು ಕಾಲದ ಸಮಾಜ ಅರ್ಥರಹಿತ ಆಚರಣೆಗಳನ್ನು ಜಾರಿಗೊಳಿಸಿತ್ತು. ಮೌಢ್ಯ ಕಂದಾಚಾರಗಳೆಂಬ ಕೂಪದಲ್ಲಿ ತಳ್ಳಿತ್ತು. ಅದನ್ನು ತಳ್ಳಿ ಹಾಕುವಲ್ಲಿ ಯಶಸ್ವಿಯಾದವರು ಬುದ್ಧ, ಮಹಾವೀರ, ಬಸವಾದಿ ಶಿವಶರಣರು ಎಂಬುದು ಇತಿಹಾಸ. ರೂಢ–ಮೂಲ ಕಂದಾಚಾರಗಳನ್ನು ತೊಡೆದು ಹಾಕಿ ಅದಕ್ಕೆ ಯೋಗ್ಯ ಚಿಕಿತ್ಸೆ ಮಾಡುವುದು, ಒಳ್ಳೆಯ ಧರ್ಮದ ಸಿದ್ಧಾಂತಗಳನ್ನು ಜಾರಿಗೊಳಿಸುವುದು ಅಂದಿನ ಕಾಲಘಟ್ಟದಲ್ಲಿ ಅನಿವಾರ್ಯವಾಗಿತ್ತು. ಕಾಲವೇ ಅಂತಹ ಯೋಗ್ಯವಾದ ವ್ಯಕ್ತಿಗಳನ್ನು ಹುಡುಕುತ್ತದೆ ಎಂಬಂತಾಗಿದೆ. ಭಾರತದ

ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಇಂತಹ ಅದೆಷ್ಟೋ ಸಂದರ್ಭಗಳನ್ನು ನಾವು ಕಾಣಬಹುದು. ವೇದಗಳಲ್ಲಿಯ ಮೂಲ ಸತ್ಯಾಂಶವು ಮರೆಯಾಗಿ ಕರ್ಮ ಕಾಂಡ ಹೆಚ್ಚಾಗಿ / ಬೆಳೆದು ಯಜ್ಞ–ಯಾಗಾದಿಗಳು ಮನುಕುಲಕ್ಕೆ ಮಾರಕವಾಗುತ್ತ ಬಂದವು. ಶರಣರು ಇವುಗಳಿಗೆ ತಕ್ಕ ಮದ್ದು ಕೊಡುವ ಪೂರ್ವದಲ್ಲಿಯೇ ತಮಿಳಿನ ಮಹರ್ಷಿ ತಿರುವಳ್ಳುವರ್‌ರೂ ಕಂಡು, ರೇಗಿ ತಕ್ಕ ಔಷಧ ಕೊಟ್ಟು ಚಿಕಿತ್ಸೆ ಮಾಡಿದವರೆಂಬುದು ಅವರ ಪದ್ಯಗಳಿಂದ ತಿಳಿದು ಬರುತ್ತದೆ. ಜನರು ಸಂತೋಷದಿಂದ ಬಾಳುವಂತಾಗಬೇಕಾದರೆ ಧಾರ್ಮಿಕ ಕ್ಷೇತ್ರದಲ್ಲಿ ಯಾರಿಗೂ ಮೇಲು–ಕೀಳೆಂಬ ತಾರತಮ್ಯ ಭಾವನೆ ಬರದಂತೆ, ಸಮಾನ ನೆಲೆಗಟ್ಟಿನ ಮೇಲೆ ಮನುಷ್ಯ ತನ್ನ ಬದುಕನ್ನು ಸಾಗಿಸಬೇಕೆಂದು ಮಹರ್ಷಿಗಳು ಬಯಸಿದರು.

ಧರ್ಮ ಮಾನವ ಮಾನವರನ್ನು ಹತ್ತಿರಕ್ಕೆ ತರಬೇಕು. ಆಚರಿಸುವ ಧರ್ಮಗಳು ಬೇರೆ ಬೇರೆಯಾದರೂ ಸೇರುವುದು ಒಂದೇ ಸ್ಥಳವಲ್ಲವೆ? ಹೌದು. ಮಣ್ಣಿನಿಂದ ಹುಟ್ಟಿದ ಕಾಯ ಮಣ್ಣಿಗೆ ಸೇರುವಂತಹದು ಎಂಬಂತೆ! ಇದು ಸೃಷ್ಟಿಕರ್ತನ ಲೀಲೆ! ಆತನಾಡಿಸಿದಂತೆ ಆಡುವ ಸೂತ್ರದ ಗೊಂಬೆಗಳು ಮಾತ್ರ ನಾವು! ಧರ್ಮದ ನಡೆಯೆಂದರದು ಶುದ್ಧ ಪರಿಶುದ್ಧ, ಪ್ರಸಿದ್ಧ ಸಾತ್ವಿಕ ನಡೆ. ನಡೆ–ನುಡಿಗಳೊಂದಾದ ಬದುಕು. ನಡೆಯೊಂದು ಪರಿ–ನುಡಿಯೊಂದು ಪರಿಯಾಗಬಾರದು. ಇಂತು ಅರಿತು ನಡೆದರೆ ಮಾನವನ ಉದ್ಧಾರವಾಗಲು ಸಾಧ್ಯ! ಧರ್ಮದ ಹೆಸರಿನಲ್ಲಿ ಏನೇನೋ ಶೋಷಣೆಗಳೂ ನಡೆಯಬಾರದು. ಶೋಷಣೆರಹಿತ ಸಮಾಜದ ನಿರ್ಮಾಣದ ಕನಸು ಕಂಡವರು ತಿರುವಳ್ಳುವರ್ ಮತ್ತು ವೇಮನರು. ಇವರು, ಧರ್ಮ ಅನುಸರಿಸುವ ಮಾರ್ಗವು ಕಠಿಣವಾದರೆ ಜನರ ಆಚರಣೆಯ ಅಭಾವದಿಂದಾಗಿ ಅದು ಜಾರಿಗೊಳ್ಳುವ ಸಾಧ್ಯತೆಯುಂಟು ಎಂಬುದಾಗಿ ಕಣ್ಣಾರೆ ಕಂಡು, ಎಲ್ಲರೂ ಅನುಸರಿಸಬೇಕಾದ, ಅನುಸರಿಸಬಹುದಾದ ಸುಲಭವಾದ ತತ್ತ್ವಗಳನ್ನು ತಮ್ಮ ಪದಗಳಲ್ಲಿ ವ್ಯಕ್ತಪಡಿಸಿ, ಅವುಗಳನ್ನು ಆಚರಣೆಯಲ್ಲಿ ತಂದರು. ಜನರು ತಿಳಿದುಕೊಂಡು ಆಚರಿಸುತ್ತ ಬಂದಿರುವ ಮೌಢ್ಯಗಳನ್ನು ಹೊಡೆದೋಡಿಸುವಲ್ಲಿ ಪ್ರಯತ್ನಿಸಿದರು. ಸಾಮಾನ್ಯನೂ ಕೂಡ ತನ್ನ ದೈವವನ್ನು ಆರಾಧಿಸುವ ಹಕ್ಕು ಅವನಿಗಿದೆ. ಯಾವ ಜಾತಿ ಅಂತಸ್ತಿನವನೇ ಇರಲಿ, ಪೂಜಿಸುವ ಹಕ್ಕು ಅವನಿಗಿದೆಯೆಂದು ಹೇಳಿ ಪೂಜಾರಿಗಳ ಶೋಷಣೆಯಿಂದ ಜನರನ್ನು ಪಾರುಮಾಡುವಲ್ಲಿಯೂ ಯಶಸ್ವಿಯಾದವರು ಎಂಬುದೂ ಇವರ ರಚನೆಗಳಿಂದ ತಿಳಿದು ಬರುತ್ತದೆ. ದೇವೋಪಾಸನೆಯ ನೆಪದಲ್ಲಿ ನಡೆಯುವ ಶೋಷಣೆಯನ್ನು ತಪ್ಪಿಸಿ, ಆಚರಣೆಗೆ ಅನುಕೂಲವಾಗುವಂತಹ ಸುಲಭ ರೀತಿಯ ಉಪಾಸನಾ ಮಾರ್ಗವನ್ನು ಇವರು ಕಂಡುಕೊಂಡರೆಂದು ಹೇಳಬಹುದು. ಒಟ್ಟಿನಲ್ಲಿ ಧರ್ಮವನ್ನು ಕುರಿತು, ಧಾರ್ಮಿಕ ವಿಚಾರ ಕುರಿತು, ಆಚರಣೆಯ ಕುರಿತು



ಇವರೀರ್ವರೂ ತಳೆದ ಹೊಸ ವಿಚಾರ ಹೊಸ ಸಮಾಜದ ಪರಿಕಲ್ಪನೆಯನ್ನು ತಂದುಕೊಡುತ್ತದೆ.

ಧರ್ಮ ವರ್ಗದಲ್ಲಿ ಇಬ್ಬರೂ ಹೇಳಿದ್ದು ದೇವರ ಕಲ್ಪನೆ, ಸೃಷ್ಟಿಕರ್ತನ ಲೀಲೆಯ ಮಹತ್ವದ ಕುರಿತು. ಪ್ರಪಂಚದ ಚರಾಚರ ವಸ್ತುವೆಲ್ಲವೂ (ಸೃಷ್ಟಿ) ಸೃಷ್ಟಿಕರ್ತನ ಲೀಲೆ ಅಥವಾ ಅನುಗ್ರಹದಿಂದಲೇ ನಡೆಯುವವು. "ತೃಣನಪಿ ನ ಚಲತಿ ನಿನ್ನ ವಿನಾ" ಎಂದು ಹೇಳಿದ್ದು ಇದೇ ಅರ್ಥದಲ್ಲಿ. ಪಂಚಮಹಾಭೂತಗಳು ಅವನ ಆಜ್ಞಾನುಸಾರವೇ ನಡೆಯುತ್ತವೆ. ಅವುಗಳಲ್ಲಿ ಬಂದು ನಿಂತರೆ, ಸಂಪು ಮಾಡಿದರೆ ಜೀವಿಗಳ ಗತಿಯೇನು? ಎಂಬುದರ ಆಲೋಚನೆ ಮಾಡಿ ನೋಡಿ! ಒಂದು ಕ್ಷಣ? ಆದುದರಿಂದ ಸೃಷ್ಟಿಯಲ್ಲಿಯ ಕೆಲವು ಅಗಾಧ ಹಾಗೂ ಚಮತ್ಕಾರಗಳನ್ನು ಕಂಡುಕೊಂಡು ಮನುಷ್ಯ ತನ್ನ ಶಕ್ತಿ ಸಾಮರ್ಥ್ಯಕ್ಕಿಂತ ಮಿಗಿಲಾದುದೊಂದು ಯಾವುದೋ ಶಕ್ತಿ ಇಲ್ಲಿ ಇದೆಯೆಂದು ಭಾವಿಸಿ, ಅದನ್ನು ಆರಾಧಿಸುತ್ತ ಬಂದನು. ಸೂರ್ಯ, ಚಂದ್ರ, ಸಮುದ್ರ, ನದಿ, ಪರ್ವತ ಭೂಮಿ, (ನೆಲ–ಜಲ), ಮುಂತಾದವುಗಳು ತಮ್ಮ ಪ್ರಕೋಪವನ್ನು ಮಾನವನ ಮೇಲೆ ಪ್ರದರ್ಶಿಸದೇ ಇರಲಿ ಮತ್ತು ಅವು ಅವನಿಗೆ ಆಶ್ರಯ ಕೊಟ್ಟು ರಕ್ಷಿಸಲಿ ಎಂದು ಬಗೆದು ಆತ ಆ ಅದ್ಭುತಗಳಿಗೆ ಶರಣಾಗುತ್ತಾ ಬಂದು, ಕಾಲ ಗತಿಸಿದಂತೆ, ಬುದ್ಧಿಗೆ ಹೊಳೆದಂತೆ ಹೊರಗಿನ ಅದ್ಭುತಗಳಿಗೂ ತನ್ನ ಮನದೊಳಗಾಗುವ ತುಮುಲಕ್ಕೂ ಕಾರಣವೇನು? ಎಂಬುದರ ಬಗೆಗೆ ಚಿಂತಿಸತೊಡಗಿದ. ಸಾವಿರಾರು ವರುಷಗಳ ಚಿಂತನೆಯ ಫಲದಿಂದ ಜಗತ್ತಿನಲ್ಲಿಯ ಮೂಲ ವಸ್ತುಗಳನ್ನು ವಿಭಜಿಸಿ, ಅವುಗಳ ಸ್ವರೂಪವನ್ನು ಅವುಗಳಿಗಿರುವ ಪರಸ್ಪರ ಸಂಬಂಧವನ್ನು ತಿಳಿಯಲು ಹವಣಿಸುತ್ತ ಬಂದನು. ಕಾಲ ಬದಲಾದಂತೆ ಹೊಸ ಹೊಸ ವಿಶ್ವದ ರಹಸ್ಯ ಕುರಿತು ಹೊಸ ಆವಿಷ್ಕಾರಗಳನ್ನು ಕಂಡುಕೊಳ್ಳುತ್ತ ಬಂದನು. ಹೀಗಾಗಿ ಮಾನವನ ಅಂತಃ ಪ್ರಜ್ಞೆ ತೀಕ್ಷ್ಣಗೊಳ್ಳುತ್ತ ಬಂದಿತು. ಸೃಷ್ಟಿಯನ್ನು ಕುರಿತು, ಸೃಷ್ಟಿಯ ಹಿಂದೆ ಇರುವ ಶಕ್ತಿಯನ್ನು ಕುರಿತು ಆತ ವಿಚಾರಿಸಹತ್ತಿದ. ಈ ಸೃಷ್ಟಿಗೆ ಕರ್ತನೊಬ್ಬ ಇದ್ದಿರಲೇಬೇಕೆಂಬ ಬಲವಾದ ನಂಬಿಕೆಯೊಂದು ಮನುಷ್ಯನ ಜೊತೆ ಬೆಳೆದು ಬಂದಿತು. ಕಣ್ಣಿಗೆ ಕಾಣುವ ಈ ಪ್ರಪಂಚ ಶುದ್ಧ ಮಿಥ್ಯವೆಂದು ಅವರು ಭಾವಿಸಲಿಲ್ಲ. ಶಿವ–ಶಕ್ತಿಯರ ಅವಿನಾಭಾವ ಸಂಬಂಧದಿಂದ ಪ್ರಪಂಚ ಸೃಷ್ಟಿಯಾಯಿತೆಂದು ಶರಣರ ಹೇಳಿಕೆಯನ್ನು ಇಬ್ಬರೂ ಮಹಾತ್ಮರು ಒಪ್ಪಿದಂತೆ ತೋರುತ್ತದೆ. ಶಕ್ತಿಯು ಶಿವನೊಡನೆ ಬೇರ್ಪಡಿಸಲಾಗದ ಸಹಜವಾದ ರೀತಿಯಲ್ಲಿ ಮೈದೋರಿ ಸೃಷ್ಟಿ ಕಾರ್ಯವನ್ನು ನಿರ್ವಹಿಸುತ್ತದೆಯೆಂದು ಹೇಳಿದ್ದು ಸಮರ್ಥನೀಯ. (ಶರಣರ ಅನುಭಾವ ಸಾಹಿತ್ಯ – ಡಾ.ತಿಪ್ಪೇರುದ್ರಸ್ವಾಮಿ – ಪುಟ–೨೮). ವಚನಕಾರನ ವಚನವೊಂದು ಇದಕ್ಕೆ ಪುಷ್ಟಿಯನ್ನೀಯುತ್ತದೆ.

ಉದಾ : **"ಆದಿ ಅನಾದಿಯಿಂದತ್ತತ್ತವಾದ ನಿರಾಕಾರ ಪರವಸ್ತು, ತನ್ನ ಸ್ವರೂಪವ ತಾನರಿಯದೆ ಅನಂತ ಕಲ್ಪಾಂತರವಿರ್ದು ತನ್ನ ಸ್ವಲೀಲೆಯಿಂದ ತಾನೇ ಜಗತ್‌ಸೃಷ್ಟಿ ನಿಮಿತ್ತವಾಗಿ ನೆನಹುದೋರಲು, ಆ ನೆನಹೇ ನಿರ್ಧಾರವಾಗಿ ಚಿತ್ತೆನಿಸಿತ್ತು. ಆ ಚಿತ್ತಿನಿಂದ ಚಿನ್ನದ ಚಿದ್ಬಿಂದು ಚಿತ್ಕಳೆಗಳೊಗೆದವು"** ಎಂಬುದು ಸೃಷ್ಟಿಯ ರಚನೆಗೆ ಶಿವನಲ್ಲಿ ಹುಟ್ಟಿದ ಸಹಜ ಶಕ್ತಿಯೇ ಕಾರಣವೆಂಬುದು ಸ್ಪಷ್ಟವಾಗುತ್ತದೆ. ಶಿವನ ಈ ಶಕ್ತಿಯು ತುಂಬ ವ್ಯಾಪಕವಾದುದು. ಆತನು ತನ್ನ ಶಕ್ತಿಯ ಮೂಲಕವೇ ಈ ಜಗತ್ತನ್ನು ಸೃಷ್ಟಿಸಿದರೂ ತಾನು ಅದರ ಒಳಗಿಲ್ಲ. ಅದರಿಂದ ಅತೀತನಾಗಿದ್ದಾನೆ. ತನ್ನ ಶಕ್ತಿಯಿಂದ ನಿರ್ಮಿಸಿದರೂ ಯಾವುದೇ ಬಂಧನಕ್ಕೆ ಸಿಲುಕದೇ ಅವನು ಅಖಂಡನೂ ಪರಿಪೂರ್ಣನೂ ಆಗಿ ನಿಂತಿದ್ದಾನೆ. ಅಲ್ಲಮಪ್ರಭುದೇವರ ಒಂದು ವಚನವು ಸೃಷ್ಟಿಯ ರಚನೆಯು ಪೂರ್ವದಲ್ಲಿ ಏನಿತ್ತು? ಆ ದಿವ್ಯ ಚೈತನ್ಯ ಯಾವುದು? ಎಂಬುದನ್ನೆಲ್ಲಾ ಸೊಗಸಾಗಿ ತಿಳಿಸುತ್ತದೆ.

ಆದಿ ಅನಾದಿ ಇಲ್ಲದಂದು, ಹಮ್ಮು-ಬಿಮ್ಮುಗಳಿಲ್ಲದಂದು
ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಶೂನ್ಯವಿಲ್ಲದಂದು
ಸಚರಾಚರವೆಲ್ಲ ರಚನೆಗೆ ಬಾರದಂದು
ಗುಹೇಶ್ವರನೊಬ್ಬನೇ ಇದ್ದೆಯಲ್ಲ ಇಲ್ಲದಂತೆ!

ಎಂಬ ವಚನವನ್ನು ಗಮನಿಸಿದರೆ ಭಗವಂತ ಆದಿ, ಅನಾದಿ. ತನ್ನ ಲೀಲೆಗಾಗಿ ಸೃಷ್ಟಿಯನ್ನು ರಚಿಸಿ ತಾನು ಇದ್ದೂ ಇಲ್ಲದಂತಿದ್ದಾನೆ. 'ಲೀಲೆಯಾದೊಡನೆ ಉಮಾಪತಿ ಲೀಲೆ ತಪ್ಪಿದೊಡೆ ಸ್ವಯಂಭು!' ಶಿವ ತನ್ನ ಲೀಲಾ ವಿನೋದಕ್ಕೋಸ್ಕರ ಈ ಸೃಷ್ಟಿಯನ್ನು ರಚನೆ ಮಾಡಿದನೆಂದು ವಚನಕಾರರ ಹೇಳಿಕೆಯಾಗಿದೆ. ಈ ಮಾತಿಗೆ ಸಾಕ್ಷಿ ಎನ್ನುವಂತೆ ವೈರಾಗ್ಯನಿಧಿ ಅಕ್ಕಮಹಾದೇವಿಯು ತಮ್ಮದೊಂದು ವಚನದಲ್ಲಿ –

"ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಸಕಲ ಪ್ರಪಂಚವನ್ನು ತನ್ನ ವಿನೋದಕ್ಕೆ ತಾನೇ ತಿರುಗಿಸಿದ ಅನಂತ ದುಃಖಗಳಲ್ಲಿ ಇಂತೆನ್ನ ಚನ್ನಮಲ್ಲಿಕಾರ್ಜುನನೆಂಬ ಪರಶಿವನು ಜಗದ್ವಿಲಾಸ ಸಾಕಾದೊಡೆ ಮತ್ತೆ ಪರಿವನಾ ಮಾಯಾಪಾಶವನು." ಅಂದರೆ ತಾನೇ ಸೃಷ್ಟಿಸಿದ ಪ್ರಪಂಚದ ವಿನೋದ ತನಗೆ ಸಾಕಾದೊಡೆ ಆತನು ಮಾಯಾಪಾಶವನು ಹರಿವನು, ಲೀಲೆ ಸಾಕಾದೊಡೆ ಅದನ್ನು ತನ್ನಲ್ಲಿ ಅಡಗಿಸಿಕೊಳ್ಳುವನು. ಶಿವ ತನ್ನ ಶಕ್ತಿಯ ಸಹಾಯದಿಂದ ಈ ಪ್ರಪಂಚವನ್ನು ಸೃಷ್ಟಿಸಿದ್ದಾನೆಂದು ವಚನಕಾರರು ಹೇಳುತ್ತಾರೆ.

ಪ್ರಾರಂಭದಲ್ಲಿ ಸರ್ವಶೂನ್ಯ ನಿರಾಲಂಬ ಸ್ಥಿತಿಯಲ್ಲಿದ್ದ ಶಿವ ನಿರಂಜನ ಬ್ರಹ್ಮನಾಗಿ ಪರಿಣಮಿಸಿದ. ಈ ನಿರಂಜನ ಬ್ರಹ್ಮನಲ್ಲಿ ಉಂಟಾದ ನೆನಹು. ಇದೇ ನಿರಂಜನ



ಓಂಕಾರ ಶಕ್ತಿ. ಈ ಶಕ್ತಿಯಿಂದ ಶೂನ್ಯಲಿಂಗವಾಯಿತು. ಇದಕ್ಕೆ 'ಮಹಾಜ್ಞಾನ ಚಿತ್ತು' ಎಂಬುದು ಅಂಗವಾಗಿ ಪರಿಣಮಿಸಿತು. ಈ ಶೂನ್ಯಲಿಂಗದಿಂದ ಜ್ಞಾನ ಚಿತ್ತನ್ನು ಅಂಗವಾಗುಳ್ಳ ನಿಷ್ಕಲಬ್ರಹ್ಮ ಉದ್ಭವಿಸಿತು. ಈ ನಿಷ್ಕಲಬ್ರಹ್ಮ ತನ್ನ ಜ್ಞಾನಚಿತ್ತುವಿನ ಸಹಾಯದಿಂದ ಚಿನ್ನಾದ, ಚಿದ್ಬಿಂದು, ಚಿತ್ಕಳೆ ಇವುಗಳಿಗೆ ಕಾರಣವಾಯಿತು. ಇವು ತಮ್ಮ ಮೂಲ ಶಕ್ತಿಯಾದ ಜ್ಞಾನ ಚಿತ್ತುವಿನೊಡನೆ ಸೇರಿ – ಈ ನಾಲ್ಕೂ ಒಟ್ಟುಗೂಡಿ ಓಂಕಾರವೇ ಪೀಠವಾದ ಮಹಾಲಿಂಗವಾಗಿ ಪರಿಣಮಿಸಿತು ಎಂದಿದ್ದಾರೆ. ಸೃಷ್ಟಿಯನ್ನು ಕುರಿತು ಶರಣರು ಹೇಳಿದ ಮನೋಭಾವವು ಹೊಸದೆನಿಸಿದರೂ ಸೃಷ್ಟಿಕರ್ತನ ನಿಜವಾದ ಸ್ವರೂಪವನ್ನು ಅರಿತಿದ್ದಾರೆಂದು ಹೇಳಬಹುದು. ಕಲ್ಲು, ಮರ, ಮಡಕೆ ದೈವವೆಂದು ಆರಾಧಿಸಿದವರಲ್ಲ. ದೈವವನ್ನು ಕುರಿತು ಅಂದಿನ ಜನರು ತಳೆದ ಮೂಢನಂಬಿಕೆಯನ್ನು ಹೋಗಲಾಡಿಸಲು ಪ್ರಯತ್ನಪಟ್ಟಿದ್ದಾರೆ. ಉಪನಿಷತ್ತಕಾರರು ತಳೆದ ಅಭಿಪ್ರಾಯವು ವಚನಕಾರರಲ್ಲಿ ಕಂಡು ಬಂದರೂ ಹೇಳುವ ರೀತಿ ಸಹಜವಾಗಿದೆಯೆಂದು ನನ್ನ ಅಭಿಪ್ರಾಯ. ತಿಳಿಯದ ವಿಷಯವನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಹೇಳುವ ಜಾಣ್ಮೆಯುಳ್ಳವರು ವಚನಕಾರರು. ಅವರಂತೆಯೇ ಸರಳ-ಸುಲಭವಾದ ರೀತಿಯಲ್ಲಿಯೇ ಈ ಇಬ್ಬರೂ ಮಹಾತ್ಮರು ತಮ್ಮ ತಮ್ಮ ರಚನೆಗಳಲ್ಲಿ ಹೇಳಿರುವುದನ್ನು ಗಮನಿಸುವಂತಿದೆ.

'ಮಹರ್ಷಿ ತಿರುವಳ್ಳುವರ್‌ರು' ತಮ್ಮ ಕಾವ್ಯ ತಿರುಕ್ಕುರಳ್‌ದ ಮೊದಲನೆಯ ಧರ್ಮ ಭಾಗದಲ್ಲಿ ದ್ವಿಪಾದದ ಛಂದಸ್ಸಿನಲ್ಲಿ ೩೮೦ ಪದ್ಯಗಳಲ್ಲಿ "ದೇವರ ಸ್ತುತಿ"ಯೊಂದಿಗೆ ಪ್ರಾರಂಭಿಸಿದ್ದಾರೆ. ಹಾಗೆಯೇ 'ಮಹಾಯೋಗಿ ವೇಮನರು' 'ಧರ್ಮವರ್ಗ ಗೃಹಸ್ಥ' ಎಂಬ ಶೀರ್ಷಿಕೆಯಡಿಯಲ್ಲಿ ಸಕಲಕೆಲ್ಲಕೂ ಕಾರಣನು ದೇವರು" ಎಂಬುದರಿಂದ ಪ್ರಾರಂಭಿಸಿದ್ದು; ಇದರಲ್ಲಿ ೧೧೭೩ ಪದ್ಯಗಳಿವೆ. (ಎಸ್.ಆರ್.ಪಾಟೀಲರು ಸಂಪಾದಿಸಿದ ಮಹಾಯೋಗಿ ವೇಮನ-ವಿಶ್ವಗೀತೆ ಪುಟ-೮೭ ರಿಂದ ೨೭೭ ರ ವರೆಗಿವೆ).

ತಿರುವಳ್ಳುವರ್‌ರು ಧರ್ಮ ಭಾಗದಲ್ಲಿ ಹೇಳಿರುವುದನ್ನು ಗಮನಿಸುವಂತಿದೆ. ಧರ್ಮದ ಎರಡು ಸ್ಥಿತಿಗತಿಗಳೆಂದರೆ ಗೃಹಸ್ಥ ಧರ್ಮ ಮತ್ತು ಋಷಿ (ತ್ಯಾಗ) ಧರ್ಮವೆಂದಿದ್ದಾರೆ. ಇವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದಿದ್ದಾರೆ. ಒಬ್ಬ ವ್ಯಕ್ತಿಯು ತನ್ನ ಪ್ರೀತಿಯನ್ನು ತನ್ನ ಮಡದಿ ಮಕ್ಕಳಿಂದ ತೊಡಗಿ ಸಮಾಜದ ಮೂಲಕ ಇಡೀ ಮಾನವ ಸಮಷ್ಟಿಯೆಡೆಗೆ ಹರಸುತ್ತಾನೆ. ಆದರೆ ಋಷಿ ಧರ್ಮದ ಮುಖ್ಯ ಗುರಿ ವಿಶ್ವಕ್ಷೇಮ. ಅಂದರೆ ಇಡೀ ಮಾನವ ಸಮಸ್ಟಿಯ ಕಲ್ಯಾಣ. ಆ ಬಳಿಕ ಸಮಾಜದ ಮೂಲಕ ಕುಟುಂಬದೆಡೆಗೆ ಅಂತರ್ಮುಖಿಯಾಗಿ ಋಷಿಯು

ತನ್ನ ಪ್ರೀತಿಯನ್ನು, ಕರುಣೆಯನ್ನು ಹರಿಸುತ್ತಾನೆ. ತಿರುವಳ್ಳುವರರು ಹೇಳುವ ಋಷಿ ಧರ್ಮವು ಮಡದಿ, ಮಕ್ಕಳನ್ನು ತ್ಯಜಿಸುವ ಮತ್ತು ಐಹಿಕ ಜೀವನವನ್ನು ತಿರಸ್ಕರಿಸುವ ವಿರಕ್ತ ಮಾರ್ಗವಲ್ಲ ಎಂದಿದ್ದಾರೆ.

ವೈಯಕ್ತಿಕ ಮೋಕ್ಷ ಸುಖದ ಹಂಬಲವುಳ್ಳ ಸನ್ಯಾಸಿ ಮಾರ್ಗವು ತಿರುವಳ್ಳುವರರ ಪ್ರಕಾರ ಅಸಂಗತವಾದುದು ಮಾತ್ರವಲ್ಲ ಧರ್ಮ ಬಾಹಿರವಾದುದು. ಆದುದರಿಂದ ಅವರು 'ಕಪಟಾಚಾರ' ಎಂಬ ಅಧ್ಯಾಯದಲ್ಲಿ ಅವರು ಲೋಕ ಖಂಡಿಸಿದ ದುಷ್ಕೃತ್ಯಗಳನ್ನು ಬಿಟ್ಟುಬಿಟ್ಟರೆ ಸಾಕು ಎನ್ನುತ್ತಾರೆ.

ದೇವರ ಬಗೆಗಿನ ತಿರುವಳ್ಳುವರರ ವಿವರಣೆ ಬಹಳ ಉನ್ನತ ಮಟ್ಟದ್ದು. ಪರಿಶುದ್ಧ ಜ್ಞಾನ, ನಿಷ್ಪಕ್ಷಪಾತ, ಕಾರುಣ್ಯ, ಪಂಚೇಂದ್ರಿಯಗಳ ನಿಗ್ರಹ ಈ ಮೊದಲಾದ ಮಾನವೀಯ ಗುಣಗಳನ್ನೇ ದೇವರಿಗೆ ಆರೋಪಿಸಿದ್ದಾರೆ. ವಿಶ್ವವ್ಯಾಪಕ ಮತ್ತು ವಿಶ್ವನಿಯಾಮಕ ಶಕ್ತಿಯನ್ನು ತಿರುವಳ್ಳುವರರು 'ಇರೈವನ್' ಎನ್ನುತ್ತಾರೆ. ಇದರರ್ಥ ಇದೊಂದು ಸಾಂಸ್ಕೃತಿಕ ಶಬ್ದದ ಪ್ರತಿಮೆ. ಇದಕ್ಕೆ ಪ್ರಭು, ಒಡೆಯ, ಅರಸ, ಎಲ್ಲೆಲ್ಲೂ ವಾಸಿಸುವವ ಅಥವಾ ಎಲ್ಲಾ ಕಡೆಯಿಂದಲೂ ಆಜ್ಞಾಪಿಸುವವನು ಎಂಬ ಅರ್ಥಗಳನ್ನು ವಿದ್ವಾಂಸರು ಹೇಳುತ್ತಾರೆ. ತಿರುವಳ್ಳುವರ್‌ರ ಪದಗಳಿಂದ ತಾವಿದನ್ನು ತಿಳಿಯಬಹುದು.

## ಆ. ದೇವರ ಸ್ತುತಿ

ಆಕಾರ ಮೊದಲಿಹುದು ಅಕ್ಷರಗಳಿಗೆಲ್ಲ
ಆದಿ ಭಗವಂತನು ಮೊದಲಿಗನು ಜಗಕೆಲ್ಲ

ಹಲವು ಕೃತಿಗಳನು ಕಲಿತುದರಿಂದಾದ ಫಲವೇನು?
ಶುದ್ಧ ಜ್ಞಾನಿಯ ಸತ್ಪಾದವನು ನಮಿಸದಿರಲು?

ಹೃತ್ಕಮಲದಲಿ ನೆಲೆಸಿರುವವನ ನೆನೆದವರು
ಪೃಥ್ವಿಯಲಿ ನಿಡುಗಾಲ ಬಾಳುವರು

ರಾಗದ್ವೇಷಗಳು ಇಲ್ಲದನ ಸಿರಿವಡಿಗೆ ಎರಗಿದವರು
ದುಃಖದಿಂದೆಂದೂ ಪರಿತಪಿಸರು.

ಕತ್ತಲೆ ಕವಿದ ಕರ್ಮವೆರಡೂ ಸೇರವು, ಭಗವಂತನ
ಅರ್ಥ ತುಂಬಿದ ಕೀರ್ತಿಯನು ಆಶಿಪರೊಳು

ಪಂಚೇಂದ್ರಿಯಗಳ ಗೆದ್ದವನ ನಿಜವಾದ
ನೀತಿಮಾರ್ಗದಲಿ ನಿಂದವರು ನಿಡುಗಾಲ ಬಾಳುವರು



ತನಗೆ ಉಪಮೆಯಿಲ್ಲದನ ಅಡಿಯ ನೆನೆದವರು
ಮನಃಕ್ಲೇಶದಿಂದ ಮುಕ್ತರಾಗುವರು

ಧರ್ಮಸಾಗರ ದಯಾಳುವಿನ ಅಡಿಗೆ ಎರಗದವರು
ಅರ್ಥ ಕಾಮ ಸಾಗರಗಳ ದಾಟಲಾರರು.

ಗ್ರಹಣಶಕ್ತಿಯಿಲ್ಲದ ಇಂದ್ರಿಯಗಳಂತೆ ನಿರರ್ಥಕವಹುದು
ಎಂಟು ಗುಣವುಳ್ಳವನಡಿಯ ನಮಿಸದ ಶಿರವದು

ಹುಟ್ಟೆಂಬ ಹಿರಿಗಡಲ ದಾಟುವರು ದೇವನಡಿಯ ನೆನೆದವರು
ದಾಟಲಾರರು ಅದನು ನೆನೆಯದವರು.

ಅಕ್ಷರಗಳಿಗೆ ಆಕಾರವು ಹೇಗೆ ಮೊದಲಾಗಿರುವುದೋ ಹಾಗೆಯೇ ಈ ಜಗಕೆಲ್ಲ ಭಗವಂತನೇ ಮೊದಲಿಗನು. ಅಂತಹ ಪರಮಾತ್ಮನನನು ನಿತ್ಯ ಸ್ಮರಿಸುವುದು ಲೇಸು. ಹತ್ತು ಹಲವು ಕೃತಿಗಳನ್ನು ಮಾಡಿದರೇನು ಫಲ ಭಗವಂತನನ್ನು ಸ್ತುತಿ ಮಾಡದಿದ್ದರೆ ಎಂದು ಪ್ರಶ್ನಿಸುತ್ತಾನೆ ಕವಿ. ಶುದ್ಧ ಜ್ಞಾನಿಯ ಲಕ್ಷಣವೇನೆಂದರೆ ಆ ದೇವನನ್ನು ಸ್ತುತಿಸಿದರೆ, ಹೃದಯ ಮಂದಿರದಲ್ಲಿ ಮತ್ತು ಈ ಪೃಥ್ವಿಯಲ್ಲಿರುವವನನ್ನು ನೆನೆದವನು ನಿಡುಗಾಲ, ದೀರ್ಘಕಾಲ ಬಾಳುವನು ಎಂಬ ಜಾಗೃತಿಯ ನುಡಿಗಳನ್ನು ಮಹರ್ಷಿ ಕೊಟ್ಟಿದ್ದಾನೆ. ಮಾನವನ ನಿತ್ಯ ಬದುಕಿನಲ್ಲಿ ಅನೇಕ ದುರ್ಘಟನೆಗಳು ಪೀಡನೆಗಳು, ತೊಂದರೆಗಳು ಬಂದೇ ಬರುತ್ತವೆ. ರಾಗ-ದ್ವೇಷಗಳು ಮನದಲ್ಲಿ ಮೂಡಿಸಿಕೊಳ್ಳದಂತೆ ನಡೆಯುವುದು ಕ್ಷೇಮಕರ ಎಂದಿರುವನು. ರಾಗ-ದ್ವೇಷಾಸೂಯೆಗಳನು ಅಳಿಸಿ ಹಾಕಿದವನ ಶ್ರೀ ಮುಡಿಗೆ ನಮಿಸಿದರೆ ದುಃಖ ದುಮ್ಮಾನಗಳು ತಮ್ಮಷ್ಟಕ್ಕೆ ತಾವೇ ಓಡಿ ಹೋಗುತ್ತವೆ ಎನ್ನುತ್ತಾರೆ. ಭಗವಂತನನ್ನು ಫಲಾಪೇಕ್ಷೆಯಿಲ್ಲದೇ ತುಂಬು ಮನದಿಂದ ನೆನೆದೊಡೆ ದುಃಖ ನರಕಗಳು ದೂರಗೊಳ್ಳುವವು. ಪಂಚೇಂದ್ರಿಯಗಳನ್ನು ತನ್ನ ಅಂಕಿತದಲ್ಲಿಟ್ಟುಕೊಂಡು ಬಾಳುವವನು ನೀತಿ ಮಾರ್ಗದಲಿ ನಡೆಯುವವನು, ಮನಃಕ್ಲೇಶದಿಂದ ಮುಕ್ತರಾಗಿ ದೀರ್ಘ ಕಾಲ ಬಾಳಲು ಸಾಧ್ಯವಾಗುವುದು. ಅಷ್ಟಮದ, ಅರಿಷಡ್‌ವರ್ಗಗಳನ್ನು ಸುಟ್ಟು; ದೈವೀ ಗುಣಗಳಾದ ಪ್ರೀತಿ, ದಯೆ, ಸಹನೆ, ಸಂಯಮ, ಕೃತಜ್ಞತೆ, ಸಮದರ್ಶಿತ್ವ, ಸತ್ಯಾನುಸಂಧಾನ, ಅಹಿಂಸೆ, ಇವೆಂಟು ಸದ್ಗುಣಗಳನ್ನು ನಡೆ -ನುಡಿಗಳಲ್ಲಿ ಯಾರು ಆಚರಣೆಗೆ ತರುವರೋ ಅವರು ಪರಮಾತ್ಮನ ಸ್ವರೂಪರು, ಅವರೇ ದೇವರು ಇದ್ದಂತೆ! ಅಂಥವರ ಅಡಿಗೆ ಎರಗುವುದು ಕರ ಲೇಸು ಎಂದು ಪ್ರತಿಪಾದಿಸಿದ್ದಾರೆ ತಿರುವಳ್ಳುವರರು. ನೀತಿಯ ನೆಲೆಗಟ್ಟಿನ ಮೇಲೆ ಬಾಳುವವರು ಹುಟ್ಟೆಂಬ ಹಿರಿದಾದ ಕಡಲವನ್ನು ದಾಟಲಿಕ್ಕೆ ಅರ್ಹರಾದವರು ಎಂಬ ತುಡಿತ ಮೇಲ್ಕಾಣಿಸಿದ ಪದ್ಯಗಳಲ್ಲಿ ಕಂಡರಣೆಗೊಂಡಿದೆ. ದೇಹವೇ

ದೇವಾಲಯ ಅಥವಾ ನೀವೇ ದೇವರಾಗುವ ಶಕ್ತಿಯಿದೆ ಎಂದರ್ಥ! ನಾನು ಭಕ್ತನಾದರೆ ನೀನೇ ದೇವ ಎಂಬರ್ಥದಲ್ಲಿದೆ. ದೇಹದೊಳಗೆ ದೇವಾಲಯವಿದ್ದು; ಮತ್ತೆ ಬೇರೆ ದೇಗುಲವೇಕಯ್ಯಾ? ಅಲ್ಲಮಪ್ರಭುದೇವರು ಹೇಳಿರುವಂತೆ

ನಾ ದೇವನಲ್ಲದೆ ನೀ ದೇವನೆ?
ನೀ ದೇವನಾದಡೆ ಎನ್ನನೇಕೆ ಸಲಹೆ?
ಆರೈದು, ಒಂದು ಕುಡಿತೆ ಉದಕವನೆರೆವೆ,
ನಾ, ದೇವ ಕಾಣಾ ಗುಹೇಶ್ವರಾ!

ಎಂದಂತೆ ತಿರುವಳ್ಳುವರರ ಹೇಳಿಕೆಯಿದೆ. ಅಂತಹ ದೈವೀ ಶಕ್ತಿ ನಿಮ್ಮಲ್ಲಿಯೇ ಇರುವಾಗ ಕಲ್ಲು-ಮಣ್ಣು ದೇವರುಗಳಿಗೇಕೆ ಕೈಮುಗಿಯುವಿರಿ? ನಡೆದುಕೊಳ್ಳುವಿರಿ? ಎಂದು ಪ್ರಶ್ನಿಸಿದಂತಿದೆ.

**ದೇವರ ಬಗೆಗೆ ವೇಮನರ ಪದ್ಯಗಳು :**

ಮಹಾಯೋಗಿ ವೇಮನರು ದೇವರ ಬಗೆಗೆ ಹೇಳಿದ ಪದ ಪದ್ಯಗಳನ್ನು ನೋಡೋಣ. ದೇವರು ಒಬ್ಬನೇ. ದೇವನೊಬ್ಬ ನಾಮ ಹಲವು ಎಂಬಂತೆ ಬೇರೆ ಬೇರೆ ಹೆಸರುಗಳಿಂದ ನಾವು ಕರೆದಿದ್ದೇವೆಯಷ್ಟೇ! **"ಏಕಂ ಸತ್ಯ ಬಹುಧಾ ವದಂತಿ ವಿಪ್ರಾ:"** ಎಂದು ಶ್ರುತಿಯೂ ಸಾರಿದೆ. ಆದರೆ ಈ ದೇವರ ಬಣ್ಣನೆಯು ಏಕದೇವೋಪಾಸನೆಗೆ, ದೇವಕಲ್ಪನೆಗೆ ಎಳೆದೊಯ್ಯದಂತಿರಬೇಕೇ ಹೊರತು, ಭಿನ್ನತೆಗೆ ಎಳೆದು ತರಬಾರದು, ಹಾಗಾದರೆ ವೇಮನರು ದೇವರ ಕುರಿತು ಹೇಳಿರುವ ಮಾತುಗಳು ಎಂಥವು? ದೇವರನ್ನು ಕಲ್ಪಿಸುವುದಾದರೆ ಹೇಗೆ ಕಲ್ಪಿಸಬೇಕು? ಅವನ ವಿಶಾಲತೆ, ವಿಸ್ತಾರಗಳೇನು? ಅವನ ಮೂಲ ಕಾರ್ಯವೇನು? ಕಾರ್ಯವಿಧಾನವೇನು? ಆ ವಿಧಿಯು ಮಾನವ ಬದುಕನ್ನು ಹೇಗೆ ನಿರೂಪಿಸುತ್ತದೆ? ಅವನು ಇರುವುದೆಲ್ಲಿ? ಅವನ ಮಹಿಮೆಯೇನು? ಈ ಮುಂತಾದ ಪ್ರಶ್ನೆಗಳಿಗೆ ಉತ್ತರದಾಯಿಯಾಗಿ ವೇಮನರು ತಮ್ಮ ಪದ್ಯಗಳಲ್ಲಿ ಹಿಡಿದಿಟ್ಟಿದ್ದಾರೆ. ಆ ಮಹಾಮಹಿಮನ ನೆರಳಿನಲ್ಲಿ ನಾವು ನಮ್ಮ ಬಾಳನ್ನು ರೂಪಿಸಿಕೊಳ್ಳಬೇಕು, ಬಾಳಿನಲ್ಲಿ ಎದುರಾಗುವ ಬೇಗೆಯನ್ನು ನಿವಾರಿಸಿಕೊಳ್ಳಬೇಕು. ಹೇಗೆ ಚಿಂತೆಯನ್ನು ದೂರಗೊಳಿಸಿಕೊಳ್ಳಬೇಕು? ಭಕ್ತಿ ಶ್ರದ್ಧೆ-ಧರ್ಮ ಮಾರ್ಗವನ್ನು ಹೊಂದುವ ಪರಿಯೆಂತು? ಎಂಬುದರ ಬಗೆಗೆ ವೇಮನ ಯೋಗಿಗಳು ತಿಳಿಸಿದ್ದು ಹೀಗೆ-

ಟೀಕೆ ಬರೆಯುವಂಥ ಹಿರಿಯರೆಲ್ಲ
ಲೋಕ ಹೇಳಿದರು ಏಕದೇವ
ಕಾಗೆಯಂಥ ಜನರು ಕಾಣರಿದರ ಭಾವ ॥ವಿಶ್ವ॥



ಧ್ವಜವನೆತ್ತಿ ಸಾರು ದೇವನೊಬ್ಬನೆಂದು
ನಿಜದಿಹುದು ಒಳಗೆ ನಿಂತಿರುವನು
ಚೊಕ್ಕ ನೋಡಲವನ ಸಂತಸದಿ ಮುಳುಗುವೆ ॥ವಿಶ್ವ॥

ದೇವನೆನಲು ಬೇರೆ ದೇಶದಲ್ಲಿಹನೆ?
ದೇಹಿಯೊಡನೆ ಸತತ ದೇಹದಲ್ಲಿ
ಹತ್ತಿ ವಾಹನಗಳ ಹೊಡೆದುಕೊಂಡು ಹೋಗು ॥ವಿಶ್ವ॥

ಕಿವಿಯ ಗೂಡುಗೈದು, ಕೂಗಿದನು ವೇಮನ;
ಬಟ್ಟ ಬಯಲೊಳುಂಟು ಬ್ರಹ್ಮವೆಂದು;
ಹೊಳೆಯೆ ಬುದ್ಧಿಗದನೆ ಹೊಂದಿ ಸುಖಿಸಬಹುದು ॥ವಿಶ್ವ॥

ಏಕಬ್ರಹ್ಮವು ನಿತ್ಯವು;
ವೈಕಲ್ಪಿತವಾದಂತಹ ವಸ್ತುಗಳೆಲ್ಲಂ
ಏಕತ್ವದೊಳಗೆ ಅರಿತೊಡೆ
ಶೋಕವಿರದಂಥ ಮುಕ್ತಿಯು, ಸುಲಭವು ವೇಮಾ

ನಿಖಿಲಾಕಾರನು ಆತನು
ನಿಖಿಲಾತ್ಮನು ಸರ್ವಸಾಕ್ಷಿ, ನಿಜದಲಿ ತಾನೈ
ನಿಖಿಲದ ಒಳಗೇ ನೋಡಲು,
ನಿಖಿಲಾಗಿ ಉಂಟು ತಾನೇ ನಿಜವಿದು ವೇಮಾ!

ಅಖಿಲಾಕಾರನು ಅನಂತನು
ಸಕಲಾತ್ಮಕತೆಯಲ್ಲಿ ಸರ್ವ ಸಾಕ್ಷಿಯು ತಾನೈ
ನಿಖಿಲವದು ನಿರ್ವಿಕಾರವು
ನಿಕರವು ಬ್ರಹ್ಮವು ಎನ್ನುವುದು ನಿಜವೈ, ವೇಮಾ

ವಿಶ್ವೋತ್ಪತ್ತಿಗೆ ಅಂಜನನೆ,
ವಿಶ್ವವ ರಕ್ಷಿಪನು ಚೊಕ್ಕ ವಿಷ್ಣುವಿರೆ ಮತ್ತಾ
ವಿಶ್ವವ ಅಳಿಸುವ ಹರನೆನೆ
ವಿಶ್ವೇಶನಿಗಿಷ್ಟು ಹೆಸರು, ವಿನುತಮ, ವೇಮಾ

ವಿಶ್ವ ನಡೆಸುವವನು ವಿಶ್ವೇಶರನಿರಲು
ಪ್ರಭುವು ನಾನು ಎಂದು ಪೇಳಲೇಕೆ?
ವನದೊಳಗಿಹ ಕೋತಿ ವಸುಧೆ ನಡೆಸಬಹುದೆ? ॥ವಿಶ್ವ॥

ವಿಶ್ವದ ಒಳ–ಹೊರ ತಾನೇ
ವಿಶ್ವಾತೀತನು; ಮೇಣಾ ವಿಶ್ವಂಭರನೈ
ವಿಶ್ವಗಳಿಗೆ ಬೇರಾಗುತ,
ವಿಶ್ವದೊಳಗೆ ಬೆಳಗುತಿರುವ ಶಾಶ್ವತ ವೇಮಾ

ಭಗವಂತನಾದ ದೇವನು
ಜಗಗಳ ತನ್ನೊಳಗೆ ಬೆಳೆಸಿ, ಜಾಲವ ತೋರ್ಪಂ
ಮಿಗೆ ಪರಿಯಲಿ ತಾನೆಲ್ಲೆಡೆ
ಅಗಣಿತನಾಗಿ ಬೆಳಗುತಿಹನಣುವಿನಲಿ ವೇಮಾ

ಬ್ರಹ್ಮ ಘಟವು ದೇಹ, ಪ್ರಾಣವೆನಲು ಗಾಳಿ
ನೇಸರ ಶಶಿ ವಹ್ನಿ ನೇತ್ರಚಯವು;
ಮತ್ತೆ ಬ್ರಹ್ಮವೆನಲು ಮ(ಹಿ)ಯ ಮೇಲೆ ಇಹುದೆ?
ಬ್ರಹ್ಮಾಂಡವೇ ದೇಹ, ಪ್ರಾಣವೆನಲು ಗಾಳಿ
ಕಣ್ಣುಗಳು ರವಿ ಚಂದ್ರ ಗೌರವವಿದು.
ಇದರಕ್ಕಿಂತ ಬ್ರಹ್ಮ ಇರುವುದೇನು ಬೇರೆ?

ದೇವರ ಬಗೆಗಿನ ನಿಜವಾದ ಸಂಗತಿಗಳನ್ನು ತಮ್ಮ ಪದ್ಯಗಳಲ್ಲಿ ಅನಾವರಣಗೊಳಿಸಿದ್ದು ಹೀಗಿದೆ. ಕಲ್ಲು–ಮಣ್ಣಿನ–ಶಿಲೆಯ ಮೂರ್ತಿಗಳನು ಮಾಡಿ, ಗುಡಿ–ಗುಂಡಾರಗಳಲ್ಲಿ ಪ್ರತಿಷ್ಠಾಪಿಸಿ ಎರಗುವವರನು ಕಂಡು ಹೇಳಿದ ಪದ್ಯಗಳಂತಿವೆ.

ಮಣ್ಣು ಲೋಹಗಳಲಿ, ಮರ ಶಿಲಾದಿಗಳಲಿ,
ಪಟ ಗೋಡೆಗಳಲಿ, ಪ್ರತಿಮೆಗಳಲಿ
ತನ್ನ ನೆನಪು ಕೊಡಲು ತವಕಿಸಲಾರ ಪರಮಾತ್ಮ ॥ವಿಶ್ವ॥

ಶಿವನೆಂದು ಭ್ರಮಿಸಿ ಶಿಲೆಗೆ ಶರಣೆಂಬಿರಿ
ಮೂರ್ಖ ಜೀವಿಗಳೇ! ಮೋಹ ಬಿಡಿರಿ
ಜೀವದೊಳಿರುತಿಹುದು, ಶಿಲೆಯೊಳಗೇನುಂಟು? ॥ವಿಶ್ವ॥

ಶಿವನು ಇರುವನೆನುತೆ, ಶಿಲೆಗಳಿಗೆ ಮಣಿಯುವ
ಮೂರ್ಖ ಜೀವಿಗಳೇ ಮೋಹ ಬಿಡಿರಿ
ಜೀವಿಯಲ್ಲೆ ಹೊರತು, ಶಿಲೆಯೊಳೇನು ಉಂಟು? ॥ವಿಶ್ವ॥



ಶಿಲೆ ಪ್ರತಿಮೆ ಗೈದು ಕತ್ತಲೆಯೊಳಿಟ್ಟು
ಶರಣೆನ್ನಬಾರದು ಮೂಢ ಮನುಜ!
ಹೃದಯದೊಳಗಿರುವ ಬ್ರಹ್ಮನ ತಿಳಿದು ನಡೆ ॥ವಿಶ್ವ॥

ಕಲ್ಲು–ಮಣ್ಣಿನ ದಿನ್ನೆಯಿಂದ ಕಟ್ಟಿ ಗುಡಿಯ, ಮತ್ತೆ
ಬೇರೆ ಶಿಲೆಯ ಕೊರೆದು, ವಿಗ್ರಹವೆಂದು
ಪೂಜೆ ಮಾಡಿದಾಗ ಪುಣ್ಯ ಬರುವುದೇನು? ॥ವಿಶ್ವ॥

ಶಿಲೆಯ ನೋಡಿ ನರರು ಶಿವನೆಂದು ಭಾವಿಪರು
ಶಿಲೆಯು ಶಿಲೆಯೆ ಹೊರತು ಶಿವನು ಅಲ್ಲ
ತನ್ನೊಳಿರುವ ಶಿವನ ತಾನು ತಿಳಿಯನೇಕೋ ॥ವಿಶ್ವ॥

ದೇಹದೊಳಗೆ ಇಪ್ಪ ದೇಹಿ ದೇವನನ್ನು
ಕಂಡುಕೊಂಡ ಬುಧರು ತೀರ್ಥಯಾತ್ರೆ,
ಗೆಯ್ಯರಯ್ಯ ಜಗದಿ, ಆತ್ಮರೂಪ ತಿಳಿದು, ॥ವಿಶ್ವ॥

ಭೂಮಿ, ಹೆಸರಿನಿಂದ ಪುಣ್ಯ ಸ್ಥಳವೇ ಆಯ್ತು;
ಮಿನುಗುವ ಶಿಲೆಯಿಂದ ಮೂರ್ತಿಯಾಯ್ತು
ನೀರು, ಹೆಸರಿನಿಂದ ನಿಖಿಲ ತೀರ್ಥವಾಯ್ತು ॥ವಿಶ್ವ॥

ದೇವ ಭೂಮಿಯಲ್ಲಿ, ದೇವಾಲಯಗಳಲ್ಲಿ
ದೇವನೆಂದು ಮಣಿದು ತಿಳಿಯಲಿಲ್ಲ
ತಿರುಗುತಿರುವ ಅವನೇ ದೇವಾದಿದೇವನು ॥ವಿಶ್ವ॥

ತನ್ನ ಆತ್ಮದಲ್ಲಿ ದೈವವಿರುವಾಗ
ತೀರ್ಥಯಾತ್ರೆಗೆಂದು ಇಳೆಯ ತಿರುಗುವ ನರ;
ಗಂಧದ ಕಡ್ಡಿಗಳನು ಕತ್ತೆ ಹೊತ್ತ ಚಂದ ॥ವಿಶ್ವ॥

ಅಡವಿ ತಿರುಗಲಿಲ್ಲ; ಆಗಸದಲ್ಲು ಇಲ್ಲ
ಅವನ ತೀರ್ಥಯಾತ್ರೆಯಲ್ಲೂ ಇಲ್ಲ,
ಒಡಲು ಶುದ್ಧಗೊಳಿಸಿ ಒಡೆಯನನ್ನು ನೋಡು ॥ವಿಶ್ವ॥

ಅಕ್ಷರವನರಿಯದೆ, ಅಡವಿಯೊಳು ತಿರುಗುತ,
ಬೆಟ್ಟ ಕಲ್ಲು, ಹಳ್ಳ–ಕೊಳ್ಳ ಬಳಸಲೇಕೆ?
ಹೃದಯದಲ್ಲಿ ಶಿವನ ಇರವ ತಿಳಿಯರೇಕೋ? ॥ವಿಶ್ವ॥

ದೇವ ಭೂಮಿಯಲ್ಲಿ, ದೇವಾಲಯಗಳಲಿ,
ದೇವನೆಂದು ಮಣಿದು ಸೇವೆ ಮಾಡಿ
ತಿಳಿಯೆ, ವಿಶ್ವಕರ್ಮ ದೇವಾದಿದೇವನು ॥ವಿಶ್ವ॥

**ತಾತ್ಪರ್ಯ :**

ಗುರು–ಹಿರಿಯರು ಹೇಳಿರುವವರು ದೇವನೊಬ್ಬನೇ! ಆದರೆ, ಕಾಗೆಯಂಥ ಕಾಕು ಜನರು ತಿಳಿಯಲಾರರು! ಅದರ ಭಾವ; ನಿಜದೊಳಗೆ, ಸತ್ಯದಲ್ಲಿಯೇ ದೇವನು ಇರುವನು. ಅಂತರಂಗದೊಳಿರುವ ಆತ್ಮನೇ ಪರಮಾತ್ಮನು. ಆತ ಬೇರೆ ದೇಶದಲಿಲ್ಲ, ಗುಡಿ–ಗುಂಡಾರ–ಚರ್ಚು–ಮಸೀದಿಗಳಲ್ಲಿಲ್ಲ ದೇಹದೊಳಿದ್ದಾನೆ ಎಂದಿರುವರು. ಬಯಲೇ ಆ ಬ್ರಹ್ಮ ತೇಜವುಂಟು! ಆಲಯ ಕಟ್ಟಿ ಕೂಡ್ರಿಸುವುದು ಮೂರ್ಖತನ!. ಏಕತ್ವದೊಳಗೆ ಅರಿತೊಡೆ, ಅಂತರಂಗದೊಳಿಣುಕಿ ನೋಡಿಕೊಳ್ಳಿರೆಂದಿದ್ದಾರೆ. ಆತನು ಅಖಿಲಾಕಾರನು, ಅನಂತನು, ನಿರ್ವಿಕಾರ, ಪರಬ್ರಹ್ಮನವನು. ವಿಶ್ವದ ಉತ್ಪತ್ತಿಗೆ ಕಾರಣನೂ ಅವನೇ, ವಿಶ್ವ ರಕ್ಷಿಸುವವನೂ ಅವನೇ, ಆತನನ್ನು ಬ್ರಹ್ಮ, ವಿಷ್ಣು, ಮಹೇಶ್ವರ, ಶಿವ ಮುಂತಾದ ಹೆಸರುಗಳಿಂದ ಕರೆಯುವರು ನಾವು ಮಾತ್ರ. ಆತ ವಿಶ್ವದೊಳಗೆ ಬೆರೆತಿರುವಂತಹ ಅಗಾಧ ಶಕ್ತಿಯುಳ್ಳವ ಮತ್ತು ಮಹಾಮಹಿಮನಹನು. ಜಗದೊಳಗೆ ತಾನು ತನ್ನೊಳಗೆ ಜಗವಿಹುದು, ಜಗದೊಳಗಿದ್ದೂ ಇಲ್ಲದಂತಿರುವವನು. ಪೃಥ್ವಿ, ಅಪ್ಪ್, ತೇಜ, ವಾಯು, ಆಕಾಶಗಳೆಂಬ ಪಂಚಮಹಾಭೂತಗಳಲ್ಲಿರುವವನು ಅವನೇ! ಇವುಗಳಿಂದ ಉತ್ಪತ್ತಿಯಾದುದೇ ಜಗತ್ತಿನ ಚರಾಚರ ವಸ್ತುಗಳೆಲ್ಲವೂ ಮತ್ತು ೮೪ ಲಕ್ಷ ಜೀವರಾಶಿ; ಇವೆಲ್ಲವೂ ಆತನ ಅಣತಿಯಂತೆಯೇ ನಡೆಯುವವು. ಇದು ಜಗದ ನಿಯಮ. ಬಸವಣ್ಣನವರೆಂದಂತೆ ಆತ ಜಗದಗಲ ಮುಗಿಲದಗಲ ಮಿಗೆಯಗಲ, ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ, ಅಗಮ್ಯ, ಅಗೋಚರ, ಅಪ್ರತಿಮವೆಂದು ಹೇಳಿ ತಾವು ಅನುಸರಿಸಿದ ಇಷ್ಟಲಿಂಗದಲ್ಲಿ ಕಂಡಿದ್ದಾರೆ. ಸ್ವಾಮಿ ನೀನು ಶಾಶ್ವತ ನೀನು, ಎತ್ತೆತ್ತ ನೋಡಿದಡತ್ತತ್ತ ನೀನೇ ದೇವಾ, ಸಕಲ ವಿಸ್ತಾರದ ರೂಹು ನೀನೇ ದೇವಾ, ವಿಶ್ವತೋ ಚಕ್ಷು, ವಿಶ್ವತೋಮುಖ ವಿಶ್ವತೋ ಬಾಹು, ವಿಶ್ವತೋ ಪಾದ ನೀನೇ ದೇವಾ ಎಂದಿದ್ದಾರೆ ಬಸವಣ್ಣ! ಆದುದರಿಂದ ವೇಮನರು ಮೂರ್ತಿಪೂಜೆಯು ಸಲ್ಲದು ಎಂದು ಹೇಳಿದ್ದಾರೆ. ಮಣ್ಣು ಕಲ್ಲು ಲೋಹಗಳಲ್ಲಿ ಶಿಲಾದಿಗಳಲ್ಲಿ ದೇವನಿಲ್ಲ. ಅಂತಹ ವಸ್ತುಗಳಲ್ಲಿ ದೇವರಿರುವನು ಎನ್ನುವವರು ಮೂರ್ಖರೇ ವಿನಾ ಜ್ಞಾನಿಗಳಲ್ಲ. ಜ್ಞಾನಿಗಳ ಹೃದಯದಲ್ಲಿ ದೇವರಿರುತ್ತಾನೆಂದಿದ್ದಾರೆ ವೇಮನಯೋಗಿ!.

**ಮನಸಾ ಕಲ್ಪಿತಾ ಮೂರ್ತಿಃ ನೃಣಾ ಚೇನ್ಮೋಕ್ಷ ಸಾಧನೀ**
**ಸ್ವಪ್ನ ಲಬ್ಧೇನ ರಾಜ್ಯೇನ ರಾಜಾ ನ ಮಾನವಸ್ತಥಾ**



ಕೇವಲ ಮಾನವನು ಮನಸ್ಸಿನಿಂದ ಮೂರ್ತಿಯನ್ನು ಕಲ್ಪಿಸಿಕೊಂಡರೆ, ಅದೆಂತು ಮೋಕ್ಷ ಸಾಧನೆಯಾಗಬಲ್ಲುದು? ಸ್ವಪ್ನದಲ್ಲಿ ರಾಜ್ಯ ಪಡೆದುಕೊಂಡ ಮಾನವನು ರಾಜನಾಗಬಲ್ಲನೆ? ಆದ್ದರಿಂದ

**ಮೃಚ್ಛಿಲಾ ಧಾತು ದಾರವಾದಿ ಮೂರ್ತಾವೀಶ್ವರೌ ಬುದ್ಧಯೋ**
**ಕ್ಲಿಶ್ಯಂತಸ್ತಪಸಾ ಜ್ಞಾನಂ ವಿನಾ ಮೋಕ್ಷ ನ ಯಾಂತಿತೇ**

ಅಂದರೆ ಈಶ್ವರನು ಮಣ್ಣು, ಶಿಲೆ, ಧಾತು, ಮತ್ತು ಕಟ್ಟಿಗೆಗಳಿಂದ ಮಾಡಿದ ಮೂರ್ತಿಗಳಲ್ಲಿ ಇರುವನೆಂದು ಮೂಢರು ಬಗೆಯುತ್ತಾರೆ. ಆದರೆ, ತಪಸ್ಸಿನಿಂದ ಜ್ಞಾನಪಡೆಯದೇ ಅವರೆಂದೂ ಮೋಕ್ಷ ಹೊಂದಲಾರರು. ಆದ್ದರಿಂದ ವೇಮನಯೋಗಿಗಳು ಶಿಲೆಯನ್ನೇ ಶಿವನೆಂದು ಬಗೆಯುವ ಮಂದಮತಿಗಳಿಗೆ ಬಗೆಬಗೆಯಾಗಿ ತಿಳಿಯಪಡಿಸಿದ್ದಾರೆ.

**ಉತ್ತಮೋ ಬ್ರಹ್ಮ ಸದ್ಭಾವೋ**
**ಮಧ್ಯಮಾ ಧ್ಯಾನ ಧಾರಣಾ**
**ಜಪಸ್ತುತಿಯಧಮಾ ಚ**
**ಮೂರ್ತಿ ಪೂಜಾ ಅಧಮಾಧಮಾ**

ಲೋಹದಿಂದಾಗಲಿ, ಶಿಲೆಯಿಂದಾಗಲಿ ಮೂರ್ತಿಗಳನ್ನು ಮಾಡಿದರೆ ಅದ್ಹೇಗೆ ದೇವರಾಗಬಲ್ಲುದು? ಅದರಲ್ಲಿ ಪ್ರಾಣವು ಹೇಗೆ ಪ್ರತಿಷ್ಠಾಪಿತವಾದೀತು? ಇದನ್ನು ಸರಿಯಾಗಿ ತಿಳಿಯದೇ ತಮ್ಮ ಮನರಂಜನೆಗಾಗಿ ರಂಗು ರಂಗಿನ ವಸ್ತ್ರ ಉಡಿಸಿ, ಆಭರಣ ತೊಡಿಸಿ, ಇಂದ್ರಿಯ ವ್ಯಾಪಾರದ ರೂಢಿಯನ್ನೇ ಪ್ರಬಲಿಸಿದರೆ ಅವರನ್ನು ಅಧಮರೆಂದು ಶಾಸ್ತ್ರ ಹೇಳುತ್ತದೆ.

ತನ್ನೊಳಗಿರುವ ಶಿವನ ತಾನು ತಿಳಿಯದೇ ಮಾಡುವ ಮೂರ್ಖರಿವರು ಎಂದು ಹೀಗಳೆದಿದ್ದಾರೆ ವೇಮನರು. ದೇಹದೊಳಗಿರುವ ದೇಹಿ ದೇವರನ್ನು ಕಂಡುಕೊಳ್ಳದೆಯೇ ಕಾಶೀ, ರಾಮೇಶ್ವರ, ಶ್ರೀಶೈಲ, ಪರ್ವತ, ತಿರುಪತಿ ಬೆಟ್ಟ ಮುಂತಾದೆಡೆಗಳಲ್ಲಿ ತೀರ್ಥಯಾತ್ರೆ ಮಾಡುತ್ತಿರುವುದನ್ನು ಕಂಡು ವ್ಯಂಗ್ಯ ಮಾಡಿದ್ದಾರೆ. ಭೂಮಿಯೇ ಪುಣ್ಯಸ್ಥಳ, ನಿಖಿಲ ನೀರೇ ತೀರ್ಥ, ಮನೆಯೊಳಿರುವ ತಂದೆ–ತಾಯಿ–ಗುರು–ಹಿರಿಯರೇ ದೇವರು, ಅಂಥವರ ಸೇವೆ ಮಾಡಿದೊಡೆ ಮೋಕ್ಷ ಲಭಿಸುವುದು ಎಂಬುದಾಗಿ ಮೇಲಿನ ಪದ್ಯಗಳಲ್ಲಿ ವೇಮನ ಯೋಗಿಯವರು ಹಸನಾಗಿ ತಿಳಿಸಿದ್ದಾರೆ.

ತಾಯಿಯೇ ಪಾರ್ವತಿಯು; ತಂದೆಯೇ ಶಂಭುವು
ಪ್ರಮಥಗಣವು ಅಖಿಲ ಬಂಧು–ಬಳಗವು
ತಾನು ಹುಟ್ಟಿದ ಮನೆಯು ಕೈಲಾಸವು ॥ವಿಶ್ವ॥

ತಾಯಿ ತಂದೆಯರೇ ತನಗೆ ಗುರುವು, ದೈವ;
ತಾಯಿ ತಂದೆಯರೆ ತನಗೆ ಜೋಡು
ತಾಯಿ-ತಂದೆಯಿಂದ ತನುವು ಆಯಿತಲ್ಲ ॥ವಿಶ್ವ॥

ತಾಯಿ ತಂದೆ ತಿಳಿಯೆ ಮೊದಲ ಗುರುವು
ಪಾರ್ವತಿ ಭವರೆಲ್ಲ ಪರಮ ಗುರುವು
ಕೂಲಿ ಕೊಳ್ಳುವವನ ಗುರುವೆನಲು ದ್ರೋಹವು॥ವಿಶ್ವ॥

ಮೊದಲಿಗಿಹ ಮಾತೃ ದೇವತೆ
ತದನಂತರ ಜನಕನು ಇರುವ ಪರಿಕಿಸುತಿರಲ್,
ಕುದುರಿದ ಸದಮಲ ಗುರುವೇ
ತುದಿದೈವವು; ಪರರು ಬೇರೆ ತೋರರು ವೇಮ

ಕುಟುಂಬ ಜೀವನದಲ್ಲಿ ಕೂಡಿ ಬಾಳಿದರೆ ಸ್ವರ್ಗಸುಖ ಎನ್ನುವಂತೆ ತಂದೆ-ತಾಯಿಯರನ್ನು ದೇವರೆಂದು ಇರುವಾಗಲೇ ಕಾಣಬೇಕು. ಅವರು ತೀರಿದಾಗ ಪೂಜಿಸುವುದಲ್ಲ. **'ಮಾತೃ ದೇವೋಭವಃ, ಪಿತೃ ದೇವೋಭವಃ'** ಎಂದು ಶ್ರುತಿಯು ಇದನ್ನೇ ಹೇಳುತ್ತದೆಯೆಂದುದಾಗಿ ಯೋಗಿ ವೇಮನರು ನಮಗೆ ಅರುಹಿದ್ದಾರೆ. ಪ್ರಸನ್ನ ಮನಸ್ಕರಾಗಿ ಅನುದಿನವೂ ಕಾಯಕ ಮಾಡಿ, ತಂದೆ-ತಾಯಿ ಗುರು-ಹಿರಿಯರ ಸೇವೆ ಮಾಡಿ ಪುಣ್ಯ ಪ್ರಾಪ್ತಿ ಮಾಡಿಕೊಳ್ಳಿರೆಂದುದಾಗಿ ಮೇಲಿನ ಪದ್ಯಗಳಲ್ಲಿ ಹೇಳಿದ್ದಾರೆ.

ದೇವರ ಕುರಿತಾಗಿ ಹೇಳಿರುವ ಈ ಇಬ್ಬರೂ ಮಹಾಯೋಗಿಗಳವರ ಪದ-ಪದ್ಯಗಳನ್ನು ತೌಲನಿಕವಾಗಿ ಅವಲೋಕಿಸಿದಾಗ ಇಬ್ಬರಲ್ಲಿಯೂ ಸಾಮ್ಯತೆಯ ಅಂಶಗಳು ದಟ್ಟವಾಗಿವೆ. ದೇಹವೇ ದೇವರ ವಾಸಸ್ಥಾನವೆಂಬುದಾಗಿಯೇ ಅಭಿಪ್ರಾಯಪಟ್ಟಿದ್ದಾರೆ. ಆರಂಭಿಕ ಅನುಭವಾತ್ಮಿಕ ಸೌಂದರ್ಯ ಇಬ್ಬರಲ್ಲೂ ಹರಳುಗಟ್ಟಿದೆ. ವರಕವಿ ಬೇಂದ್ರೆಯವರು ಹೇಳುವಂತೆ 'ನಾನು-ನೀನು-ಆನು-ತಾನು ಎಂದು 'ನಾನು-ನೀನು-ಸ್ವಯಂ-ಪರಂಗಳ 'ಚತುರ್ಮುಖವನ್ನು ಅಭಿವ್ಯಕ್ತಿಸಿದ್ದಾರೆ. ಅಂದರೆ ಬೇಂದ್ರೆಯವರಿಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಮೋಕ್ಷ ಸಂಪಾದನೆಗಾಗಿ ಈ ಹಿಂದಿನ ಮೂರುಗಳ ತುಡಿತ; ಜೀವನ, ಪ್ರಕೃತಿ, ಕಲೆ ಹಾಗೂ ಕಲೆ ಕಾವ್ಯವೆಂದು ನಾಲ್ಕು ಮುಖಗಳಲ್ಲಿ ಕೃತಿಗಳನ್ನು ರಚಿಸಿದ ಬಗೆಯಿದೆ. ಅಂತೆಯೇ ಅವರಿಗೆ "ನಾಕು ತಂತಿ" ಕೃತಿಗೆ ಜ್ಞಾನ ಪೀಠ ಪ್ರಶಸ್ತಿಯು ಸಂದಿರುವುದು ಅವರ ಹಿರಿಮೆ-ಗರಿಮೆಗೆ ಸಾಕ್ಷಿ! ಜೀವನಕ್ಕೆ ಪ್ರಥಮ ಆದ್ಯತೆ, ಜೀವನ ಅರಳುವುದು ನಂತರದ ಮೂರು ಮುಖಗಳ ಮೂಲಕವೇ!



ಇವೆಲ್ಲವುಗಳು ಒಂದಕ್ಕೊಂದು ಸಾವಯವ ಸಂಬಂಧದ ಕೊಂಡಿಗಳೇ. ಇದು ಬದುಕಿನಲ್ಲಿಯ ಸಮಗ್ರತೆಯನ್ನು ಸೂಚಿಸುತ್ತದೆ.

ಆದುದರಿಂದ ಸಾರ್ಥಕ ಬದುಕಿಗೆ ಕಾಯಕ ಧರ್ಮ ಪಾಲಿಸುವುದು, ತಾನುಂಡು ಉಳಿದುದನ್ನು ದಾಸೋಹ ಮಾಡುವುದು, ನಿರ್ಗತಿಕರ, ದರಿದ್ರರ, ರೋಗಿಗಳ, ಬಡ-ಬಗ್ಗರಿಗೆ ಆಪತ್ಕಾಲದಲ್ಲಿ ಸಹಾಯ ಸಲ್ಲಿಸಿ, ಸೇವೆಗೈಯ್ಯುಮದರಲ್ಲಿ ಸುಖವಿದೆ, ಸಂತೋಷವಿದೆ, ನೆಮ್ಮದಿಯಿದೆಯೆಂಬುದು ಮಹಾತ್ಮರ ದಿವ್ಯ ವಾಣಿಯಾಗಿದೆ. ಇವರಿಬ್ಬರೂ ಕೇವಲ ಉಪದೇಶ ಮಾಡಲಿಲ್ಲ, ಉಪದೇಶಿಸಿದಂತೆ ನಡೆದು ತೋರಿದ ದಿವ್ಯರು. ಆದುದರಿಂದ ನಾವೆಲ್ಲರೂ ನವೋದಯದ ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪನವರ ಅನ್ವೇಷಣೆಯ ಭಾವಗೀತೆಯನ್ನು ಮೆಲುಕು ಹಾಕೋಣ!

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು-ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ

ಎಲ್ಲಿದೆ ನಂದನ ಎಲ್ಲಿದೆ ಬಂಧನ
ಎಲ್ಲಾ ಇವೆ ಈ ನಮ್ಮೊಳಗೆ
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯಿದೆ ನಾಲಗೆಗೆ

ಹತ್ತಿರವಿದ್ದೂ ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯೊಳಗೆ
ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ

ದೇಹವೇ ಗುಡಿಯು
ಭಾವವೇ ಮಡಿಯು
ನಡೆಯೇ ಗುಡಿಯಾ ಗೋಪುರವು
ಪ್ರೀತಿಯ ನುಡಿಯೇ ಗಂಟೆಯ ನಾದವು
ಹೀಗಿದೆ ಜೀವನ ಪಾವನವು!!

ಅಹಂಕಾರವೊಂದನ್ನು ಬಿಟ್ಟರೆ ಏನೆಲ್ಲಾ ಸಾಧಿಸಬಹುದೆಂಬಂತೆ ಅಷ್ಟಮದಗಳ ದಾಸರಾಗದೇ ಸರ್ವರೊಳಗೊಂದಾಗಿ ಬೆರೆತು ಎಲ್ಲರೂ ನಮ್ಮವರೆಂಬ ಜೀವ

ಭಾವದಿಂದ ಬದುಕು ಸಾಗಿಸಿದರೆ ದೇಶಕ್ಕೆ ದೇಶವೇ ಪ್ರಪಂಚವೇ ಸುಖ–ಸಮೃದ್ಧಿಯ ಸಾಗರದಲ್ಲಿ ಓಲಾಡುವಂತಾಗಬಲ್ಲುದೆಂದು ಈ ಮಹಾಯೋಗಿದ್ವಯರ ಆಶೀರ್ವಾದದ ಕೃಪೆಯಾಗಿದೆ. ಇವರು ಭಾರತದ ಹೆಮ್ಮೆಯ ಮಹಾ ಪುರುಷರು! ಅಂಥವರ ಪದಗಳನ್ನು ನಮ್ಮ ಉಸಿರಿರುವವರೆಗೂ ಪಠಿಸೋಣ! ಅನುಷ್ಠಾನಕ್ಕೆ ತರೋಣ!! ಇದುವೇ ನನ್ನ ಹೆಬ್ಬಯಕೆಯಾಗಿದೆ, ಆಗಲೇಬೇಕು. ಸರ್ವರ ಪ್ರಗತಿಗಾಗಿ ಈ ಕವಿತೆಯ ಸಾಲುಗಳು ಅಣಿಮುತ್ತುಗಳಂತಿವೆ.

## ಇ. ಧರ್ಮ ವಿಭಾಗ

ಈಗಾಗಲೇ ಹೇಳಿದಂತೆ ಧರ್ಮವೆಂದರೆ ಎತ್ತಿ ಹಿಡಿಯುವುದು, ತುಳಿತಕ್ಕೊಳಗಾದವರನ್ನು, ದೀನರನ್ನು ಉದ್ಧರಿಸುವುದು. ಅವರಿಗೆ ಸಹಾಯ ಸಹಕಾರ ಸಲ್ಲಿಸುವುದಾಗಿದೆ. ಸ್ವಾರ್ಥ ಲಾಲಸೆಯನ್ನು ಬಿಟ್ಟು ನಿಸ್ವಾರ್ಥ ಜೀವನ ನಡೆಸಿ ಪರರಿಗೆ ಉಪಕಾರ ಮಾಡುವುದು. ಅಂದರೆ ನೆರೆಹೊರೆಯವರಿಗೆ ಕೇಡಾಗದಂತೆ ನಮ್ಮ ಬಾಳನ್ನು ನಡೆಸಿದರೆ ಅದುವೇ ಧರ್ಮಜೀವವೆನಿಸುತ್ತದೆ. ಜೊತೆ ಜೊತೆಗೆ ನಮ್ಮ ಬಾಳನ್ನು ಎತ್ತರಿಸಿಕೊಳ್ಳುವುದಾಗಿದೆ. ಮನೆ–ಮಾರು, ತಂದೆ–ತಾಯಿ, ಹೆಂಡತಿ ಮಕ್ಕಳು, ಬಂಧು–ಬಳಗದವರು, ನೆರೆಹೊರೆಯವರು, ಇಷ್ಟಮಿತ್ರ – ಆಪ್ತರು ಈ ಮೊದಲಾದ ಐಹಿಕ ಸಂಬಂಧಗಳ ಅಂದರೆ ವ್ಯಕ್ತಿ, ವಸ್ತು ಮತ್ತು ವಿಚಾರ ಸಂಬಂಧ ಕುರಿತು ಇರುವ ನಡೆ–ನುಡಿಗಳನ್ನು ಧರ್ಮ ಭಾಗದಲ್ಲಿಯೇ ಗೃಹಸ್ಥ ಧರ್ಮ ಮತ್ತು ಯೋಗಿ ಧರ್ಮ ವಿಭಾಗಗಳಲ್ಲಿ ಇಬ್ಬರೂ ಮಹಾತ್ಮರಲ್ಲಿಯೂ ಕಾಣುತ್ತೇವೆ. ಆದರೆ, ನಾನಿದರಲ್ಲಿ ಗೃಹಸ್ಥ ಧರ್ಮದವರಿಗಿರಬೇಕಾದ ಜೀವನ ಧರ್ಮದ ಅಗತ್ಯತೆಗಳನ್ನು ಕುರಿತು ಹೇಳಲು ಪ್ರಯತ್ನಿಸಿದ್ದೇನೆ.

ಚರಿತ್ರೆಗಿಂತಲೂ ಚಾರಿತ್ರ್ಯ ಮುಖ್ಯವೆಂಬಂತೆ ಧರ್ಮದ ಆಚರಣೆಯು ಮುಖ್ಯವಾಗುತ್ತದೆ. ವಿಚಾರವು ಆಚಾರಕ್ಕೆ ಮೂಲವಾಗಿದೆ. ಸ್ನಾನ, ನಿರಸನ, ಜಪ, ತಪ, ದೇವಪೂಜೆ, ಉಪವಾಸ ವ್ರತದ ನಿಯಮ ಸಾಧನೆಯ ಅಂಗಗಳೇನೋ ನಿಜ. ಆದರೆ ಕೇವಲ ಮಡಿ–ಮೈಲಿಗೆಯ ಭಾವನೆಯಿಂದ ಮಾಡುವ ಸ್ನಾನ, ನೀರು ಮುಳುಗುಗಳಿಗೆ ವಿಶೇಷ ಅರ್ಥವಿಲ್ಲ. ಕಪ್ಪೆ–ಮೀನುಗಳ ಸ್ನಾನದಂತೆಯೇ ಸರಿ. ಯಾವುದಕ್ಕೂ ನಿರ್ಮಲವಾದ ಮನಸ್ಸೇ 'ಮಡಿ' ಎಂದಿದ್ದಾರೆ ಯೋಗಿಗಳು. 'ಉಪವಾಸ' ಎಂದರೆ ದೇವರ ಬಳಿ ಅಥವಾ ಸಮೀಪದಲ್ಲಿರುವುದು ಎಂದರ್ಥ. ಅಂದರೆ ದೇವರ ಧ್ಯಾನ–ಪ್ರಾರ್ಥನೆ ಮಾಡುವುದೆಂದರ್ಥ. ತಿರುವಳ್ಳುವರರು, ವೇಮನ ಯೋಗಿವರಪುಂಗವರು ತಮ್ಮ ಅನುಭವಗಳನ್ನು ಆಚಾರ–ವಿಚಾರಗಳ ಸನ್ಮಾರ್ಗವನು, ಧರ್ಮಮಾರ್ಗವನು ತೋರಿಸಿ ಕೊಟ್ಟಿರುವರು. ಅವುಗಳನ್ನು ಸದಾಚಾರದಿಂದ,



ನಿಯತದಿಂದ ಪಾಲಿಸುವುದು ಗೃಹಸ್ಥನಾದವನ ಧರ್ಮ. ಅವರು ಸ್ವಾರ್ಥವ ತೊರೆದು ಜಗವ ಸುತ್ತಿ ಹೇಳಿದ ಅಮೃತ ವಾಣಿಗಳು ಅಮರವಾಗಿವೆ. ಅವರೇ ಹೇಳಿದಂತೆ ಅರ್ಥ ಮತ್ತು ಕಾಮಗಳ ವಿಚಾರವರಿತು ಧರ್ಮವ ಪಾಲಿಸುವವರಿಂದ (ಮುನಿಗಳಿಂದ) ಬೆಳಗುವುದು ಈ ಜಗವು. ತನ್ನ ಮನೋಬಲವೆಂಬ ಅಂಕುಶದಿಂದ ಪಂಚೇಂದ್ರಿಯಗಳೈವರನು ಗೆದ್ದವನೇ ಮೋಕ್ಷಕ್ಕೆ ಅರ್ಹಗೊಂಡು ಮೋಕ್ಷವೆಂಬ ನಿಧಿಗೊಂಡು ಬೀಜವಾಗುವನು. ಐದು ಇಂದ್ರಿಯಗಳನು ಅಡಗಿಸಿದವನ ಶಕ್ತಿಗೆ–ಸಗ್ಗದೊಡೆಯ ಇಂದ್ರನೇ ಸಾಕ್ಷಿಯಾಗಿರುವನು ಎಂದಿದ್ದಾರೆ ಮಹರ್ಷಿ ತಿರುವಳ್ಳುವರರು. ಅವರೇ ಇನ್ನೊಂದು ಪದದಲ್ಲಿ ರಸ, ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳೆಂಬ ಐದರ ಬಗೆಗಳನು ಬಲ್ಲವರ ಜ್ಞಾನದಲಿ ನೆಲೆಸಿಹುದೀ ಜಗವು ಎಂದಿದ್ದಾರೆ. ಧರ್ಮಗುಣದಿಂದರುವರೆನಿಪ ಋಷಿ–ಮುನಿಗಳ ಉದಾತ್ತವಾಗಿರುವಂತಹ ಉಕ್ತಿಗಳನು ಶಿರಸಾವಹಿಸಿ ಪಾಲಿಸುವ ಗೃಹಸ್ಥನಾದವನೂ ಧರ್ಮ ಗುಣದಿಂದಿರುವವರೇ ಸಂತರೆನಿಸಿಕೊಳ್ಳುವವರು. ಅವರೇ ನಿಜಾರ್ಥದಲ್ಲಿ ಸಕಲ ಜೀವಿಗಳಲ್ಲಿ ದಯೆ, ಕರುಣೆ ತೋರುವವರಾಗುತ್ತಾರೆಂದು ಉಪದೇಶಿಸಿದ್ದಾರೆ.

**ವರಯೋಗಿ ವೇಮನರ ಧರ್ಮದರ್ಶನ :**

ವಿಚಾರವು ಆಚಾರಕ್ಕೆ ಮೂಲವಾಗಿದೆ. ಕೆಲವರು ಜಪಮಣಿ ಎಣಿಸುತ್ತ, ತಿರುಗಿಸುತ್ತ ಹತ್ತೆಂಟು ಬಾಹ್ಯ ವ್ಯಾಪಾರಗಳಲ್ಲಿ ತೊಡಗಿರುತ್ತಾರೆ. ಅದೇ ರೀತಿ ತಪ–ನೇಮ–ವ್ರತಗಳನ್ನು ದೈಹಿಕ ಕ್ರಿಯೆಯಿಂದ ಮಾಡದೇ ಮಾನಸಿನ ಏಕಾಗ್ರತೆಯಿಂದ ಮಾಡಬೇಕೆಂದು ತಮ್ಮ ಪದಗಳಲ್ಲಿ ತಿಳಿಯಪಡಿಸಿದ್ದಾರೆ.

ಗಂಗೆ ಸ್ನಾನ ಮಾಡಿ ಘನವೆನಿಸಿದವರೆಲ್ಲ
ಭಂಗಪಡುವರಧಿಕ ಬಾಧೆ ಹೊಂದಿ,
ಗಂಗೆ ನೀರಿಗಿಂತ, ಗಯೆ ತೀರ್ಥಕ್ಕಿಂತ
ಎಣಿಸೆ, ಬೇವಿನ ರಸ ಗಣ್ಯ ವೇಮ.

ನೀರು ಮುಳುಗುವವನು ನಿರ್ಮಲಾತ್ಮನಲ್ಲ;
ಪೂರ್ಣವಾದ ಮುಕ್ತಿ ಪೊಂದಲಾರ
ನೀರುಗೋಳಿ, ಮೀನು ನಿರುತ ನೀರೊಳು ಮುಳುಗದೆ॥ವಿಶ್ವ॥

ಶುಭ್ರ ಸ್ನಾನಗೈದು ದಾನವೀಯದನಕ
ನೀರಲಿ ಮುಳುಗೆ ಬಂದ ಭಾಗ್ಯವೇನು?
ನೀರೊಳಗೆ ನೀರುಗೋಳಿ, ಕಪ್ಪೆ ಮುಳುಗದೇನು? ॥ವಿಶ್ವ॥

ನೀರು ಮುಳುಗಲೇನು? ನಿಧಿಯ ಹೂಳಲೇನು?
ಮನದಿ ಗುಡಿಯೆಡೆ ಕರ ಮುಗಿದರೇನು?
ಕಪಟ ಕಲ್ಮಷಗಳು ಒಡಲು ತುಂಬಿರಲು ॥ವಿಶ್ವ॥

ನೀರು–ಅನ್ನಗಳನು, ನಿದ್ರೆಯ ತಾ ಬಿಟ್ಟು,
ಮುಕ್ತಿಗಾಗಿ ಅಲೆಯುವ, ಮೂಢ ಮನುಜ!
ಹುಚ್ಚು ನಾಯಿಯಂತೆ ವ್ಯಥೆಯ ಅಲೆತವಷ್ಟೇ ॥ವಿಶ್ವ॥

ದಶಮಿ ಏಕಾದಶಿ ಎಂಬ ವ್ರತ ಮಾಡಿ
ತಿನ್ನದಿರಲು ದುರ್ಗುಣವಡಗುವುದೇ?
ಹುತ್ತ ಮೇಲೆ ಹೊಡೆಯೆ ಹಾವು ಸಾಯದಲ್ಲ?
ಈ ರೀತಿಯ ಮೌಢ್ಯ; ಈ ರೀತಿಯ್ಯೆವೇಮ?

ತಾನು ಯೋಗಿಯಾಗಲೆಂದು ಈ ಪರಿಯ ವ್ರತ–ನೇಮ–ಉಪವಾಸಗಳಿಂದ ದೇಹ ದಂಡಿಸಿ ಪ್ರಯೋಜನವಿಲ್ಲ. ತಪವು ಏಕೆ ಬೇಕು? ಅರಿವು ಇರಬೇಕಷ್ಟೇ? ಶಿವನ ಮೇಲೆ ಒಪ್ಪವಿಟ್ಟು ಮನಸ್ಸು ಚದುರದಂತೆ ಈ ಧರಿತ್ರಿಯಲ್ಲಿ ಕಾಣಿರೋ; ವ್ರತ ನಿಯಮಗಳ ಬಾಳು ವ್ಯರ್ಥ, ಇದರಿಂದ ಆತ್ಮ ಸಿಕ್ಕಿತೇನು? ಆದರೆ, ಆತ್ಮವೇ ಪರಮಾತ್ಮನೆಂದು ಭಾವಿಸಿ ನಡೆದೊಡೆ ಆತ್ಮ ಸಿಕ್ಕೀತು. ಅಂಥವನೇ ಯೋಗಿಯೆಂದ ಮೇವನ. ಶರಣರು ಹೇಳಿದಂತೆ ಕಲಿಯುಗದಲಿ ಧರ್ಮ ಕೋಟಿಗೊಬ್ಬಗುಂಟು ಎಂದಿದ್ದಾರೆ. ಇಲ್ಲ ಇಲ್ಲವೆನುತ ಇಹನು ಲೋಭಿ ಅಷ್ಟು ಧರ್ಮಿಷ್ಠತನ ಆಚೆಗೇನಿರುವುದು? ಎಂದು ಪ್ರಶ್ನಿಸಿದ್ದಾರೆ ವೇಮನ. ದೇವ ಪೂಜೆಗೆಯ್ಯೆ ದಿವ್ಯ ಜೋಗವುಂಟು; ಹಾಗೆಯೇ ತತ್ತ್ವವನ್ನು ಅರಿಯುವವನು ದೇವರಿಗೆ ಸರಿ ಸಮಾನನು. ಇವುಗಳ ಅರ್ಥವನ್ನೆ ಅರಿಯದ ಮನುಜನಿಗೆ ದುರ್ಗತಿಯೇ ಗತಿಯಾಗುವುದೆಂದ ವೇಮನನು. ಆದುದರಿಂದ ಅವರೇ ಒಂದು ಪದದಲ್ಲಿ ಹೇಳಿರುವಂತೆ

ಪೂಜೆ ಮಾಡಿ ಪೂಜಾರಿ ತಾನಾದ;
ಪೂಜ್ಯ ವಸ್ತುವೆನಲು ಭುವಿಯಲಿ
ಎಲ್ಲಿ ಪೂಜೆಗೆಯ್ಯೆ? ಎಲ್ಲ ದಿಶೆಯಲಿ ತಾನೆ?
ತಾನು ನಾನು; ನಾನೇ ತಾನು ವೇಮ!

ಪೂಜೆ ಮಾಡುವ ಪೂಜಕನು ಏಕಾಗ್ರಚಿತ್ತದಿಂದ ಎಲ್ಲವನ್ನು ಕರುಣಿಸಿದ ದೇವನನ್ನು ಪೂಜಿಸಿದರೆ, ಈ ಭೂಮಿಯಲ್ಲಿರುವ ಸಕಲ ಪಡಿಪದಾರ್ಥಗಳಲ್ಲಿ ಆತನಿರುತ್ತಾನೆಂಬ ಭಾವದಲಿ ಪೂಜಿಸಿದರೆ, ಆತ ದಶದಿಕ್ಕುಗಳಲ್ಲಿಯೂ ಇರುತ್ತಾನೆಂದು



ತಾನು ಭಾವಿಸಿಕೊಂಡು ನಡೆದರೆ ತಾನೇ ತಾನಾಗುವ (ದೇವ) ನೆಂದ ಮಹಾಯೋಗಿ ವೇಮನ. ಇದು ಅದ್ವೈತ ಸಿದ್ಧಾಂತದ ತತ್ತ್ವದ ತಿರುಳೂ ಹೌದು. ದೇವನೇ ತಾನು – ತಾನೇ ದೇವನಾಗುವುದು ಎಂದರ್ಥ!

ತಾಯಿ–ತಂದೆಯರೇ ದೇವರೆಂದು ತಿಳಿದು ಅವರ ಸೇವೆಯನು ಮಾಡುವುದು; ತಾನು ದುಡಿದು ಗಳಿಸಿದ ಸ್ವಲ್ಪು ಭಾಗವನ್ನಾದರೂ ದಾನ ಧರ್ಮ ಮಾಡಿದರೆಯೂ ದೈವ ತಾನಾಗುವನೆಂದ ದೈವೀ ನುಡಿಗಳನ್ನು ಇಬ್ಬರೂ ಮಹಾತ್ಮರು ತಮ್ಮ ತಮ್ಮ ಪದಗಳಲ್ಲಿ ಸರಳ–ಸುಂದರವಾಗಿ ನಿರೂಪಿಸಿದ ಬಗೆಯಿದೆ.

ಧರ್ಮದ ನಡೆ ಅಷ್ಟು ಸುಲಭವಲ್ಲವದು, ತಿರುವಳ್ಳುವರರು ಹೇಳಿದ್ದು ಶ್ರೇಯನೆನಿಸಿಕೊಂಡವನು ಸಂಪತ್ತನ್ನು ಗಳಿಸಿದರೂ ಅದನ್ನು ದಾನ ಮಾಡಿದೊಡೆ ಧರ್ಮಕ್ಕಿಂತ ಮಿಗಿಲಾದ ಭಾಗ್ಯ ಯಾವುದೂ ಇಲ್ಲವೆಂದಿದ್ದಾರೆ. ಆದರೆ ಧರ್ಮವನು ಮರೆಯುವವನಿಗೆ ಮಿಗಿಲಾದ ಕೇಡು ಮತ್ತೊಂದಿಲ್ಲವೆಂದುದಾಗಿ ಮನುಜ ಕುಲಕ್ಕೆ ಎಚ್ಚರಿಕೆ ನೀಡಿದ್ದಾನೆ. ನಿನ್ನಿಂದ ಎಷ್ಟು ಸಾಧ್ಯವಿದೆಯೋ ದಾನ–ಧರ್ಮವನು ಎಡೆಬಿಡದೇ ಮಾಡು; ಅದೂ ಮನದಲ್ಲಿ ದೋಷವಿರಕೂಡದು. ದೋಷದಿಂದ ಕೂಡಿದ ಧರ್ಮವು ಬದುಕಿನಲ್ಲಿ ಯಶಸ್ಸು ಕೊಡಲಾರದು. ಅದರಿಂದ ಹಾನಿಯೇ ವೃದ್ಧಿ! ಮನದಲ್ಲಿ ದೋಷವಿಲ್ಲದಿರುವಷ್ಟೇ ಧರ್ಮವೆನಿಸುವುದು; ಮತ್ತು ಉಳಿದುವು ಎಲ್ಲವು ಡಂಭಾಚಾರಗಳು ಎಂದು ಅರುಹಿದ್ದಾನೆ. ಧರ್ಮ–ದಾನ ನಾನೇ ಮಾಡಿದ್ದೇನೆಂಬ ಭಾವವು ಮನದಲ್ಲಿ ಲವಲೇಶವೂ ಮೂಡಬಾರದೆಂದು ಮನುಜರಿಗೆ ಅರುಹಿದ್ದಾರೆ.

ಅಸೂಯೆ, ಆಸೆ, ಮುನಿಸು, ಕಟುನುಡಿ ಈ ನಾಲ್ಕನೂ
ತೊರೆದು ನಡೆಯುವುದೇ ಧರ್ಮವೆನಿಸುವುದು;
ಮುಂದೆ ನೋಡೋಣವೆನದೆ ಧರ್ಮವ ಮಾಡಿಂದೆ
ಮರಣ ಕಾಲದಲಿ ಅದು ಅಮರ ಸಂಗಾತಿಯಹುದು.

ಧರ್ಮ ಮಾರ್ಗವಿದುಯೆಂದು ನುಡಿಯದಿರುವುದು ಲೇಸು. ಮಾಡಿದ್ದೇನೆಂಬ ಭಾವವೂ ಮನದಲ್ಲಿ ಮೂಡಬಾರದಂತೆ. ವ್ಯರ್ಥವಾಗಿ ದಿನಗಳನು ಕಳೆಯದೆ ಧರ್ಮದವನೊಬ್ಬ ಮಾಡಿದರೆ,

ಅದು ಅವನ ಬಾಳ್ದಿನದ ಹಾದಿಯಲ್ಲಿಟ್ಟ ಅಡ್ಡಗಲ್ಲಿನಂತಹುದು.
ಧರ್ಮದಿಂದ ಬರುವುದೇ ಸುಖ ಬೇರೆಲ್ಲವು
ದುಃಖವನು ತರುವವು, ಕೀರ್ತಿಯನು ತೊಲಗಿಸುವವು.
ಮಾಡಲು ತಕ್ಕದಾದುದೇ ಧರ್ಮ; ಮಾಡಲು
ತುಕ್ಕುದಲ್ಲದುದು ನಿಂದಾ ಕಾರ್ಯವದು.

ಧರ್ಮದಿಂದ ನಡೆದು ಕಾಯಕ ಮಾಡುವುದು ದಾಸೋಹ ಧರ್ಮದೊಳಿದ್ದು ದಾನ ಧರ್ಮ ಮಾಡುವುದು ಮಾನವನು ಮಾಡಬಹುದಾದ ಸತ್ಕಾರ್ಯಗಳಿವು. ಅದನ್ನು ಬಿಟ್ಟು ತಾಮಸ ಗುಣಗಳನ್ನು ಹೊಂದಿ ಕೋಪಿಷ್ಠನಾಗಿ ನಿಂದಾ ಕಾರ್ಯಗಳನ್ನು ಮಾಡುವವನು ಹಂದಿ ಸ್ವರೂಪನು ಎಂದು ವ್ಯಂಗ್ಯವಾಗಿ ಟೀಕಿಸಿದ್ದಾನೆ ಮಹರ್ಷಿ ತಿರುವಳ್ಳುವರರು.

ಇವರಿಬ್ಬರ ವಾಣಿಗಳನ್ನು ಗಮನಿಸಿದಾಗ ಧರ್ಮ ಮಾರ್ಗವಿಡಿದು ನಡೆದವನ ಬಾಳು ಹಸನಾಗುತ್ತದೆ. ಅದು ಮಾಡಿದ ಧರ್ಮ–ದಾನಗಳು ಪರಮಾತ್ಮನಿಗೇ ಸಲ್ಲುತ್ತವೆಯೆಂಬ ತಾತ್ಪರ್ಯವಿದೆ.

**ದಾನ ಧರ್ಮ ಮಾಡುವುದು :**

ತಾನು ಗಳಿಸಿದ್ದುದರಲ್ಲಿ ಕೊಡುಗೆ ಅಥವಾ ದಾನ ಮಾಡುವುದೊಳಿತು ಎಂದಿದ್ದಾರೆ ಇಬ್ಬರೂ ಮಹಾತ್ಮರು. ಅನ್ನದಾನ ಉಳಿದೆಲ್ಲ ದಾನಗಳಿಗಿಂತಲೂ ಮಿಗಿಲು. ಹಸಿದು ಬಂದವರಿಗೆ ಹಿಡಿ ಅನ್ನ ನೀಡಿದರೆ, ಅವರು ಹರಸಿ ಸವಿಯುತ್ತಾರೆ. ದಾನವೀಯುವವರ ಪುಣ್ಯವು ಒರತೆಯಂತೆ ವರ್ಧಿಸುತ್ತಲೇ ಹೋಗುತ್ತದೆ. ತಾನೇ ತಿಳಿದು ನೀಡಿದರೆ, ತಮಗೆ ಬೇಕಾದಷ್ಟು ಉಳಿಯುತ್ತದೆ. ದಾನ ಮಾಡುವಾಗ ಕೋಪ–ತಾಪ ತಾಳದೇ, ಸಿಟ್ಟು–ಸೆಡವು ಮಾಡಲಾರದೇ, ಬಯ್ಯದೇ, ತನ್ನ ಆಸ್ತಿ ಎನ್ನದೇ, ಅಡ್ಡ–ತಿಡ್ಡ ಮಾತಾಡದೇ ದಾನ ಮಾಡಬೇಕು. ಗಳಿಸಿಟ್ಟ ಹಣವು ಧನವು, ಸಿರಿ–ಸಂಪತ್ತು ತನ್ನದಲ್ಲವೆಂದೇ ತಿಳಿಯುವುದು; ತಾನು ಇನ್ನೋರ್ವ ಬಡವ–ನಿರ್ಗತಿಕನಿಗೆ ದಾನ ನೀಡಿ ಪಡೆದ ಪುಣ್ಯವೇ ತಮ್ಮದೆಂದು ಭಾವಿಸಲೇಬೇಕು. ಸಾವು ಎಲ್ಲರಿಗೂ ಸುನಿಶ್ಚಿತ. ಆದರೆ ಹುಟ್ಟು ಸಾವಿನ ಮಧ್ಯದ ಬದುಕಿನಲ್ಲಿ ದುಡಿದು ಗಳಿಸಿದ್ದುದರಲ್ಲಿ ದಾನ ನೀಡಿ ಪುಣ್ಯ ಸಂಚಯಿಸುವುದು. ಕೆರೆಯ ನೀರನು ಕರೆಗೆ ಚೆಲ್ಲಿ ವರವ ಪಡೆಯುವುದು, ಅಂದರೆ ದೇವರು ಕೊಟ್ಟಂತಹ ಧನ–ದೌಲತ್ತನ್ನು ಇಲ್ಲದವರಿಗೆ ನೀಡಿ ಧನ್ಯ ಪಡೆಯುವುದಾಗಿದೆ. ನಾಲ್ಕು ಜನರ ಬಾಯಿಯಲ್ಲಿ ಅನ್ನ ನೀಡಿದರೆ, ದಾನವಿತ್ತವನು ಸತ್ತೂ ಬದುಕಿದವನೆನಿಸಿಕೊಳ್ಳುತ್ತಾನೆ. ಇದೊಂದು ಧರ್ಮ ಭಾಗವೇ ಆಗಿದೆ. ದಾನಧರ್ಮ ಪ್ರಕೃತಿ (ವಿಶ್ವ) ನಿಯಮವನ್ನು ಸಮಷ್ಟಿ ಜೀವನದ ಬಾಂಧವ್ಯ ಮತ್ತು ನಿರಂತರತೆಯನ್ನು ರಕ್ಷಿಸಲು ಸಮಾಜದ ನೇತಾರರಾದ ಇಂಥ ಮಹಾಯೋಗಿ ಋಷಿವರ್ಗದವರಿಂದ ನಿರ್ಣಯಿಸಲ್ಪಟ್ಟ ಕಟ್ಟಳೆ, ನೀತಿ ಮತ್ತು ನಿಯಮಗಳನ್ನು ಸೂಚಿಸುತ್ತದೆ. ದಾನದ ಮಹಿಮೆಯನ್ನು ಇವರಿಬ್ಬರೂ ಮಹಾತ್ಮರು ಹೇಳಿದ ಬಗೆಯಿಂತಿದೆ. ತಿರುವಳ್ಳವರರು ಹೇಳಿರುವ ಪದ್ಯಗಳಲ್ಲಿ–

ಬಡವರಿಗೊಂದನು ಕೊಡುವುದೇ ದಾನವೆನಿಸುವುದು
ಮಿಕ್ಕವೆಲ್ಲಾ ಪ್ರತಿಫಲವ ನೋಡುವ ಗುರಿಯುಳ್ಳದುದು.



ಬೇಡುವುದು ಋಜುಮಾರ್ಗವೆಂದರೂ ಲೇಸಲ್ಲವದು
ಪರಲೋಕ ಲಭಿಸದೆಂದರೂ ಈವುದೇ ಲೇಸು.

ಬಡವ ತಾನೆಂದು ಕೀಳ್ನುಡಿಯನಾಡದೇ ಬೇಡಿದವಗೆ
ಕೊಡುವುದು ಕುಲಜನ ಗುಣವದು.

ಬೇಡುವವರ ನಗೆಮೊಗವ ಕಾಣುವವರೆಗೆ ಅವರಿಂದ
ಬೇಡಿಸಿಕೊಳ್ಳುದೂ ದುಃಖವನು ತರುವುದು.

ಹಸಿವ ತಾಳುವ ತಪಸಿಗಳ ಬಲಕಿಂತ, ಬಡವರ
ಹಸಿವ ತೀರಿಸುವ ದಾನಿಗಳ ಬಲವದು ಹಿರಿದು.

ಬಡವರ ಕಡು ಹಸಿವ ತೀರಿಸುವುದು; ಒಬ್ಬಂಗೆ
ತನ್ನ ಸಂಪದವ ಸಂರಕ್ಷಿಸಿಡುವ ಸ್ಥಳವದು.

ಹಲವರಿಗೆ ಹಂಚಿಕೊಟ್ಟುಣ್ಣುವ ಅಭ್ಯಾಸವುಳ್ಳವಗೆ
ಹಸಿವೆಂಬ ಕೆಟ್ಟ ರೋಗವದು ಸೋಂಕದು.

ಕೊಟ್ಟು ನಲಿವ ಸುಖವನರಿಯರೋ ತಮ್ಮಸಿರಿಯ
ಕೂಡಿಟ್ಟು ಕಳಕೊಳುವ ಕಲ್ಲೆದೆಯರು?

ಬೇಡುವುದಕ್ಕಿಂತ ದುಃಖವದು ದುಡಿದು ಕೂಡಿಟ್ಟುದನು
ತಾನೇ ಒಂಟಿಯಾಗಿ ಉಂಬುವುದು

ಸಾವಿಗಿಂತ ಸಂಕಟವಾದುದಿಲ್ಲ; ಆ ಸಾವೇ ಹಿತವಹುದು
ದೀನರಿಗೊಂದನು ಕೊಡಲಾರದ ಸ್ಥಿತಿಯಿರಲು.

ದಾನ ಮಾಡುವುದೆಂದರೆ ಇಲ್ಲದವರಿಗೆ, ದುರ್ಬಲ ನಿರ್ಗತಿಕರಿಗೆ, ಬಡ–ಬಗ್ಗರಿಗೆ ದಾನ ಮಾಡುವುದು ಇದ್ದವರಿಗಲ್ಲ. ಬೇಡುವುದೂ ಋಜು ಮಾರ್ಗವಲ್ಲ. ಅದನ್ನು ಬೇಡುವವರು ಅರಿತುಕೊಂಡು ನಡೆಯಬೇಕು. ದುಡಿಯಲು ಶಕ್ತಿ ಸಾಮರ್ಥ್ಯವುಳ್ಳವರು ದಾನ ಬೇಡಬಾರದು. ಅಂಥವರಿಗೆ ಪರಲೋಕ ಲಭಿಸದು. ಹೇ ಬಡವಾ ತೆಗೆದುಕೋ ಎಂದು ಕೀಳು ನುಡಿಯನಾಡದೇ ಪ್ರಸನ ವದನದಿಂದ ನಗು ಮೊಗದಿಂದ ದಾನ ಈಯುವುದು ಕೊಡುವವನ ಕರ್ತವ್ಯ. ದಾನ ನೀಡುವಲ್ಲಿ ಅಹಮಿಕೆಯಿರಬಾರದು. ಕಡು ಬಡವರ ಹಸಿವನ್ನು ತೀರಿಸುವುದೆಂದರೆ ತಪಸ್ವಿಗಳ ಬಲಕ್ಕಿಂತಲೂ ಶ್ರೇಷ್ಠ ಮತ್ತು ಮಿಗಿಲಾದುದು. ತಾನು ಮಾಡಿದ ಸಂಪತ್ತು ಸುರಕ್ಷಿತವಾಗಿ ಉಳಿಯಬೇಕಾದರೆ ಕಡು ಬಡವನಿಗೆ ದಾನ ಮಾಡಿದರೊಳಿತು ಎನ್ನಲಾಗಿದೆ.

ಎಲ್ಲರೊಂದಿಗೆ ಹಂಚಿಕೊಂಡು ಉಣ್ಣುವುದೂ ಲೇಸು! ಆದರೆ, ಇಂದು ಹರಿದುಕೊಂಡು ತಿನ್ನುವವರೇ ಹೆಚ್ಚಾಗಿದ್ದಾರೆ. ಇಂಥವರಿಂದ ದಾನ ಮಾಡುವುದೆಂದರೆ ದೂರವೇ ಸರಿ! ಉಳಿದೀತು. ಕೊಟ್ಟು ನಲಿಯುವ ಸುಖವೇ ಲೇಸು ಕೂಡಿಟ್ಟವನಿಗೆ! ಬೇಡುವುದೂ ದುಃಖ ತರುವುದು. ಸಾಮರ್ಥ್ಯವುಳ್ಳವರು ಬೇಡಬಾರದು, ದುಡಿದು ಉಣ್ಣುವುದೇ ಮೇಲೆಂದೂ ಉಪದೇಶಿಸಿದ್ದಾರೆ. ದೀನ–ದರಿದ್ರರಿಗೆ ಇದ್ದವನು ದಾನ ಮಾಡದಿದ್ದರೆ ಇದ್ದೂ ಸತ್ತಂತೆಯೇ ಎಂದಿದ್ದಾರೆ ತಿರುವಳ್ಳುವರರು. ಪರಮಮಹಾಯೋಗಿ ವೇಮನರು ಹೇಳಿರುವ ದಾನಧರ್ಮದ ಮಹಿಮೆಯಿಂತಿದೆ.

ಉಣ್ಣುವ 'ಬಾನ'ದೊಳು ಇನಿತು ದೈವಕಿಡಲು
ಪುಣ್ಯ ಲೋಕಕವನು ಹೋಗುತಿಪ್ಪ
ಅನ್ನದಾನಕ್ಕಿಂತಮಿನ್ನ ದಾನವಿಲ್ಲ ॥ವಿಶ್ವ॥

ಅನ್ನವಿಡುವುದಕಿಂತ ಮಿನ್ನ ದಾನವಿಲ್ಲ
ಏನುಗೆಯ್ದೊಡೇನು ಎಣಿಕೆ ಇರದು
ಅನ್ನವೆಷ್ಟು ಜೀವ ಆಧಾರವಪ್ಪುದು? ॥ವಿಶ್ವ॥

ಅದೂ ಹಸಿದು ಬಂದವರಿಗೆ ದಾನ ಮಾಡುವುದೊಳಿತು ಎಂದು ಹೇಳುತ್ತಾರೆ ವೇಮನಯೋಗಿ –

ಹಸಿವು ಆಗಿ, ಬಂದಿರುವಂತಹ ಪರದೇಶಿಗೆ
ಹಿಡಿಯಾದರೂ ಅನ್ನ ಕೊಡುವುದಿಲ್ಲ;
ಸೂಳೆ ಮಗನು ಮತ್ತೆ ಸೂಳೆಗೇಯುತಿಪ್ಪ ॥ವಿಶ್ವ॥

ದಾನದಲ್ಲಿ ಅನ್ನ ದಾನವತಿ ದೊಡ್ಡದು;
ಗಾನದಲ್ಲಿ ಸಾಮಗಾನ ಹೆಚ್ಚು
ಧ್ಯಾನದಲ್ಲಿ ಶಿವಧ್ಯಾನವೇ ಶ್ರೇಷ್ಠವು ॥ವಿಶ್ವ॥

ಅಖಿಲದಾನಕ್ಕಿಂತ ಅನ್ನದಾನವೇ ಮೇಲು;
ಹಡೆದವರಿಗಿಂತ ಹೆಚ್ಚು ಯಾರು,
ಎನ್ನ ಗುರುವಿಗಿಂತ ಯಾರೂ ಹೆಚ್ಚಲ್ಲ! ॥ವಿಶ್ವ॥

ನೀಡುತ್ತಿವವರ ಸಂಪದ ಈಡಾಗದೇ?
ಎಂದಾದರೂ ಕುಂಠಿತವಹುದೆ?
ಕೂಡಿ ಸೇರುತಿಹುದು, ತೀರದ ವಿಧವದು ವೇಮಾ!



ತಾನು ಗೈದ ದಾನ ತನುಜೆಗೆ ಸಮ ಜಗದಿ ತಂದೆ
ದಾನವೆಲ್ಲ ತನಗೆ ಸಮವು
ತಾಯಿ ಸಮವೆನಿಪುದು, ಹೆರವರಿತ್ತ ದಾನ ॥ವಿಶ್ವ॥

ದಾನ ಒಪ್ಪಗೆಯ್ಯ ದಡ ಸೇರಬಹುದು;
ಮನವ ನಂಬಿ ಇರಲು, ಮಾಯೆ ಮುಳುಗು
ಜ್ಞಾನ ಕಳೆಯ ನಂಬಿ, ಜಡಿಯೋ ವೈರಿಗಳನು ॥ವಿಶ್ವ॥

ಮೇಲಿನ ಪದಗಳನ್ನು ಗಮನಿಸುವುದಾದರೆ ಪರದೇಶಿಗಳಿಗೆ ಅನ್ನದಾನ ಮಾಡುವುದು ಉತ್ತಮ ಗುಣವು ಎನ್ನಲಾಗಿದೆ. ಅದರಲ್ಲೂ ಎಲ್ಲ ದಾನಗಳಲ್ಲಿಯೇ ಅನ್ನದಾನವು ಮಿಗಿಲಾದುದು. ನೀರುದಾನ, ದೇಹದಾನ, ನೇತ್ರದಾನ, ಆಸ್ತಿದಾನ, ವಿದ್ಯಾದಾನ, ಸಮಾಧಾನ, ನಿಧಾನ ತರುವ ದಾನಗಳಿವು ಅನಂತರದವು ಎನ್ನಲಾಗಿದೆ. ವೇಮನರು ಹೇಳುತ್ತಾರೆ ದಾನ ಪಡೆಯುವವರೂ ಯೋಗ್ಯರಿರಬೇಕು. ಅಂಗ ಊನವುಳ್ಳವರು, ಅಂಧರು, ಕೈಕಾಲುಯಿಲ್ಲವರು, ದುಡಿಯಲು ಸಾಧ್ಯವಿಲ್ಲದವರು ಮಾತ್ರ ದಾನ ಪಡೆಯಲಿಕ್ಕೆ ಅರ್ಹರು ಎಂದಿರುವುದನ್ನು ತಮ್ಮ ಪದದಲ್ಲಿ ಹೇಳಿದ್ದಾನೆ.

ದಾನ ಕೇಳುವವನು ಧರಣಿಯೊಳಗಧಮನು;
ದಾನ ಕೇಳದವನು ದೈವ ಸಮನು
ದಾನ ಕೊಡದಿರುವವ ಧನ್ಯನಲ್ಲ ನೋಡು ವೇಮ ॥ವಿಶ್ವ॥

ಸಿರಿಯ ನೀಡುವವನು ಸಮನೆನಿಸದ ದಾನಿ
ದೋಚುವವ ಮತ್ತೆ ದ್ರೋಹಿಯೆನಿಪ
ಪ್ರಾಪ್ತಿ ತೋರುತಿಹನೆ ಪರಮ ಪೂಜ್ಯನಪ್ಪ ॥ವಿಶ್ವ॥

ದಾನ ಮಾಡುವಾತನು ತಾನೇ ದುಡಿದು ಸಂಪತ್ತಿನಲ್ಲಿ ದಾನ ಮಾಡಬೇಕು. ಪರರ ಮನ ನೋಯಿಸಿ ಆಸ್ತಿ ಗಳಿಸಿದ್ದುದರಲ್ಲಿಯಲ್ಲ! ದಾನ ಪಡೆಯುವವನೂ ಅರ್ಹಗುಣವುಳ್ಳವನಿರಬೇಕು. ಪಡೆದವನು ದಾನ ಕೊಟ್ಟವನ ಉಪಕಾರ ಸ್ಮರಣೆ ಮಾಡುತ್ತಿರಬೇಕು. ಬೇಡುವವನಲ್ಲಿ ದ್ರೋಹ ಗುಣವಿರಲೇಬಾರದೆಂದು ವೇಮನರು ಹಿತನುಡಿದಿದ್ದಾರೆ. ಇದನ್ನು ಕೊಡ ಮಾಡಿದವನು ಪರಮಾತ್ಮನೇ ಅಲ್ಲವೆ? ಅಂದಮೇಲೆ ನಾನೇ ಕೊಟ್ಟೆನೆಂದು, ದಾನ ಮಾಡಿದೆನೆಂದು ಅಹಂಕಾರಪಡದಿರು ಮನುಜನೇ ಎಂದದ್ದು ಹೀಗಿದೆ.

ಕೊಡುವವರು ಯಾರೋ? ಕೊಡದವರು ಯಾರೋ?
ಕೊಟ್ಟುಕೊಡದ ಅಂತಹ ದಿಟ್ಟರಾರೋ?
ಪಟ್ಟು ತಪ್ಪದಿದ್ದು ಭಾವಿಸಿ ನೋಡಿರೋ ॥ವಿಶ್ವ॥

ಇಳೆ, ಬೆಳೆ, ವಾಯು, ಅಗ್ನಿ, ಆಕಾಶ, ಪೃಥ್ವಿ(ಭೂಮಿ), ಈ ಪಂಚಮಹಾಭೂತಗಳನ್ನು ನೀಡಿದವನೇ, ಕರುಣಿಸಿದವನೇ ಪರಮಾತ್ಮನು (ಶಿವ). ಮಾನವರಿಗೆ ಜೀವದಾನ ನೀಡಿದವನು ಪರಶಿವನೇ ಎಂದ ಮೇಲೆ, ಅವನಿಗೇ ನೀವು ಮರುಅರ್ಪಣೆ (ದಾನ) ಮಾಡಿದಂತೆ; ಅಂದರೆ ಪರಶಿವನ ರೂಪದಲ್ಲಿರುವವರೇ ಬಡವರು– ಅನಾಥರು, ನಿರ್ಗತಿಕರು, ಅಂಗವಿಕಲಚೇತನರು. ಈ ಅಂಶವನ್ನು ಅರಿತು ನಡೆಯೆಂದು ಮನುಜ ಕುಲಕ್ಕೆ ಎಚ್ಚರಿಕೆ ನೀಡಿದ ಬಗೆಯು ಮೇಲೆ ಹೇಳಿದ ಪದ್ಯಗಳಲ್ಲಿ ಹರಳುಗಟ್ಟಿದೆ. ಹುಟ್ಟಿದವರು ಸಾಯಲೇಬೇಕು ನಿಜ! ಆದರೆ, ಸಾಯುವ ಪೂರ್ವದಲ್ಲಿರುವ ಮಧ್ಯದ ಬದುಕಿನಲ್ಲಿ ಇಂಥ ಧರ್ಮದಾನದ ನಡೆಯಿರಬೇಕೆಂದು ಹೇಳಿದ್ದು ಹೀಗೆ–

ಸಾಯುವವರು ಯಾರು? ಸಾಯದವರು ಯಾರು?
ಸತ್ತು ಬದುಕುತಿರುವ ಸುಜನರಾರು?
ಒಟ್ಟು ಪಾಶ ಕಳಚಿ ವಿವರಿಸಿ ನೋಡಿರೋ ॥ವಿಶ್ವ॥

ಎಂದು ಹೇಳಿರುವುದನ್ನು ಗಮನಿಸಿದರೆ ನಾವಿಂದು ಎಲ್ಲರೂ ಅರಿತುಕೊಂಡು ನಡೆಯಬೇಕಾದ ಅಗತ್ಯತೆಯಿದೆ. ಆದುದರಿಂದ ವೇಮನ ಮತ್ತು ತಿರುವಳ್ಳುವರರು ಹೇಳಿರುವಂತೆ ನಡೆಯುವುದು ನಮ್ಮ ಸದ್ಗತಿಗೆ ಪೂರಕವಾಗುತ್ತದೆಯೆಂದು ಧೈರ್ಯದಿಂದ ಹೇಳಬಲ್ಲೆ. ಅದರಂತೆ ಆಚರಣೆಯ ಭಾಗ ನಮ್ಮ ಹೊಣೆಯಾಗಿದೆ. ವೇಮನರೆಂದಂತೆ –

ಕೊಡುಗೆಯಷ್ಟು ಫಲವು, ಕೊಡುವುದುಪಕಾರ
ಗೈಯ್ಯದಿರಲು; ತಾನು ಕೆಡಿಸದಿರಲು,
ಮದುವೆ ಮಾಡಿದಷ್ಟು ಮಹಾಫಲವು ನೋಡು ॥ವಿಶ್ವ॥

ಸಕಲ ತನುಗಳೆತ್ತಿ, ಸಂಚರಿಸುವ ಜೀವಿ,
ಕನಕ ಬಲವು ತಗಲಿ ಕನವರಿಸುವ;
ಆತ್ಮ ತೇಜ ಗಟ್ಟಿ ಅಚ್ಚಿನಂತೆ ನೋಡು ॥ವಿಶ್ವ॥

ಎಂದು ಹೇಳಿದ ಈ ಪದಗಳನ್ನು ಮನದಟ್ಟಾಗಿ ಅರಿತುಕೊಂಡು ನಡೆಯುವುದೇ ಶ್ರೇಷ್ಠ ಬದುಕು. ಉಪಕಾರ ಜೀವಿಯಾಗಿ ಬದುಕಬೇಕು. ದಾನ–ಧರ್ಮ ಮಾಡುವುದರಿಂದ ಧನ–ಕನಕ–ದೇಹ–ಬಲ ಗಟ್ಟಿಯಾಗಿ ಆಯುಷ್ಯ ಹೆಚ್ಚುವುದು. ಧ್ಯಾನ, ತಪಸ್ಸು ಮಾಡಿದ ಋಷಿ–ಮುನಿಗಳಿಗಿಂತಲೂ ದಾನ ಮಾಡಿ ಧರ್ಮದಿಂದ ನಡೆಯುವುದೇ ಮಿಗಿಲು ಎಂದುದಾಗಿ ಹೇಳಲಾಗಿದೆ. ಅದು ಕಾರಣ, ಉಳ್ಳವರು ದೇವರ ಹುಂಡಿಗೆ ಯಾರಿಗೂ ಗೊತ್ತಿಲ್ಲದೇ ಹಾಕುವುದಕ್ಕಿಂತಲೂ ಇಂತಹ ಏನೂ



ಇಲ್ಲದ ಕಡು ಬಡವರಿಗೆ, ನಿರ್ಗತಿಕರಿಗೆ ದಾನ ಮಾಡಿ ಪುಣ್ಯಫಲ ಪಡೆದುಕೊಳ್ಳುವುದೇ ಶ್ರೇಷ್ಠವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಈರ್ವರೂ ಮಹಾತ್ಮರು ಕೀರ್ತಿ ಭಾಗದಲ್ಲಿ ಹೇಳಿರುವಂತೆ, ದಾನವನು ಕೊಟ್ಟು ಯಶದಿಂದ ಬಾಳುವುದಕ್ಕಿಂತ ಅನ್ಯ ಶ್ರೇಯವದು ಇಲ್ಲ ಮನುಜನಿಗೆ ಎಂದುದಾಗಿ ತಿರುವಳ್ಳುವರರು ಹೇಳಿದರೆ; ದಾನ ಧರ್ಮ ಗೈಯ್ಯೆ ದೇವ ತಾನಾಗುವನೆಂದಿದ್ದಾರೆ. ಕನಕವಿರುವವನು ಇಲ್ಲದ ನಿರ್ಗತಿಕನ ಕಂಡು ಕರೆದು ಕೊಟ್ಟಂತಹ ಮನವು ಉಕ್ಕಿ ಹಾಲು ಮರಳುವಂತೆಯೇ, ಆದುದರಿಂದ ದಾನ ಮಾಡಿ ಉಪಕಾರಿಯಾಗೆಂದು ಹಿತ ನುಡಿದ ಬಗೆ ಇವರಿಬ್ಬರ ಪದಗಳಲ್ಲಿ ಓತೋಪ್ರೋತವಾಗಿ ಹರಿದು ಬಂದಿದೆ. ದಾನ ಮಾಡಿದವರನ್ನು ಜಗವೆಲ್ಲವು ಕೊಂಡಾಡುವುದು ಸಹಜ ಗುಣವೆನ್ನಲಾಗಿದೆ. ತಿರುವಳ್ಳುವರರು ಹೇಳಿದ್ದು ಹೀಗಿದೆ–

ಜಗವೆಲ್ಲವೂ ಕೊಂಡಾಡುವುದು, ಬೇಡಿದವರಿಗೆ
ದಾನವನು ಈವವನ ಕೀರ್ತಿಯನು,

ಈಡಿರದ ಕೀರ್ತಿಯ ಹಿರಿಮೆಯಂತೆ ಶಾಶ್ವತವಾಗಿ
ನಿಲುವುದು ಈ ಜಗದಿ ಬೇರೊಂದಿಲ್ಲ

ಲೋಕದಲ್ಲಿ ಚಿರಕೀರ್ತಿ ಗಳಿಸಿದವನು ಸ್ತುತಿವುದಲ್ಲದೆ
ಅಮರರನು ಸ್ತುತಿಸದು ಅಮರಲೋಕವದು.

ಭೌತಿಕ ಸಾವಿನೊಡನೆ ಚಿರಕೀರ್ತಿ ಲಭಿಸುವುದು
ಬಲ್ಲಿದರಗಿಲ್ಲದೆ ಅನ್ಯರಿಗದು

ಹುಟ್ಟುವುದಾದರೆ ಕೀರ್ತಿಯೊಡನೆ ಹುಟ್ಟುವುದು
ಅಂತಿಲ್ಲದಿರೆ ಹುಟ್ಟದಿಹುದೇ ಲೇಸಹುದು

ಕೀರ್ತಿ ಗಳಿಸಿ ಬಾಳಲರಿಯದವರು, ತಮ್ಮನ್ನ ತಾವು ನಿಂದಿಸಿಕೊಳ್ಳದೇ
ಹೆರರು ನಿಂದಿರೆ ನೋಯುವುದೇಕೋ?

ಯಶವೆನುವ ಶಿಶುವ ಪಡೆಯದಿರುವುದನು,
ಅದೊಂದು ಲೋಪವೆಂಬರು ಬಲ್ಲವರು

ವಿಪುಲ ಬೆಳೆಯು ಕುಂದುವುದು, ಕೀರ್ತಿ ಗಳಿಸದ
ಮನುಜ ಕಾಯುವನು ಹೊತ್ತಿಹ ನೆಲದೊಳು

ನಿಂದೆಯಿಲ್ಲದೆ ಬಾಳುವವರೇ ನಿಜದಿ ಬಾಳುವವರು
ಕೀರ್ತಿಯಿಲ್ಲದೆ ಬಾಳುವವರು ಬದುಕಿದ್ದವರೂ ಸತ್ತವರು

ಈ ಸಾಲುಗಳನ್ನು ಗಮನಿಸಿದರೆ ಕೀರ್ತಿಯೆಂಬುದ ಶಾಶ್ವತ ಸತ್ಯವು. ಮನವನು ತನ್ನ ಜೀವಮಾನದಲ್ಲಿ ಧರ್ಮದಿಂದ ನಡೆದು, ದಾನವನು ಮನವಾರೆ ಕೀರ್ತಿ ಗಳಿಸಿಕೊಳ್ಳಬೇಕು. ಸಿರಸಂಗಿ ಲಿಂಗರಾಜನು ತನ್ನ ಸಮಸ್ತ ಆಸ್ತಿ–ಪಾಸ್ತಿಯನ್ನೆಲ್ಲ ಬಡಮಕ್ಕಳ ಶಿಕ್ಷಣಕ್ಕಾಗಿ ದಾನ–ಮಾಡಲಿಲ್ಲವೆ? ಅವರ ದಾನದ ಮಹಿಮೆ ಚಿರಕಾಲ ಉಳಿಯವಂತಾಗಿದೆ. ಈಗ ಶಿಕ್ಷಣ ಪಡೆದವರು ಈಗಲೂ ಮುಂದೆಯೂ ಸ್ತುತಿಸುವರು. ಇಂಥ ಬದುಕೇ ಸಾರ್ಥಕವಾದುದು ಎಂಬುದಾಗಿ ಮೇಲಿನ ಪದಗಳು ತಿಳಿಸುತ್ತವೆ. ಮಾನವ ಜನ್ಮ ತಳೆದು ಬಂದ ಮೇಲೆ ಈ ಭೂಮಿಯ ಋಣವನು ತೀರಿಸಲೇಬೇಕು. ದಾನ–ಧರ್ಮ ಮಾಡಿಯೆಂಬುದು ಇಲ್ಲಿ ಪ್ರಮುಖವಾಗಿದೆ. ಈ ಜಗತ್ತಿನಲ್ಲಿ ನಿಂದೆಯಿಲ್ಲದೇ ಬಾಳುವುದು ಮತ್ತು ಕೀರ್ತಿ ಗಳಿಸಲೆಂದೇ ಬಾಳುವುದು ಮನುಷ್ಯನಾದವನ ಪ್ರಮುಖ ಪಾತ್ರವಾಗಿದೆಯೆಂದಿದ್ದಾರೆ ಮಹರ್ಷಿ ಕವಿ.

ಇದೇ ರೀತಿಯಲ್ಲಿ ಮಹಾಯೋಗಿ ವೇಮನರು ಹೇಳಿದ್ದು ಹೀಗೆ–

ಗುಬ್ಬಿಗಾಗಿ ದೇಹ ಕೊಯ್ದನಾ ಶಿಬಿರಾಜ
ವಾರ್ತೆ ಬಿಡದೆ ಬಂತು, ಕೀರ್ತಿ ಪಡೆದ
ಎಣಿಸದಿರಲು ಕೀಳು ಎನುವರು ಉಪಕಾರಿ ||ವಿಶ್ವ||

ನಡೆ ಜೀವ ಸ್ಥಾವರಗಳು,
ಗಡ ಸುತ್ತು ಹೋಹುದನರಿತು, ಭಾವದ ಒಳಗೇ
ಬಿಡದೆ ಬ್ರಹ್ಮವ ತಲುಪರು
ಬಿಡು ಸತ್ತು ಹೋಗುವುದುಂಟೇನು? ಜಗದಿ ವೇಮಾ

ಇಹದ ಬಾಧೆಯಷ್ಟೋ, ಇರಲು ಬಹುದು ಬಾಳಿ
ಯಮನ ಬಾಧೆಯಿರದೆ, ಅಮರರಂತೆ
ಪರದಿ ವ್ಯಥೆಯಿರದ, ಬದುಕ ಅರಿಯಿರಿ ನರರೆ ||ವಿಶ್ವ||

ಬದುಕುವವರು ಯಾರು? ಬದುಕದವರು ಯಾರು?
ಬದುಕಿ ಬದುಕದಿರುವ ಪ್ರಾಣಿ ಯಾರು?
ಕ್ಷಿತಿಯ ಶೋದಗೆಯ್ದು, ಸ್ಥಿರವಾಗಿ ನೋಡಿರೋ ||ವಿಶ್ವ||

ಸಾಯುವವರು ಯಾರು? ಸಾಯದವರು ಯಾರು?
ಸತ್ತು ಬದುಕುತಿರುವ ಸುಜನರಾರೊ?
ಪೂರ್ಣವಾಗಿ ಕಂಡು ಪರಿಕಿಸಿ ನೋಡಿರೋ ||ವಿಶ್ವ||



ಯಾವನರಿಯದಿದ್ದು, ಎಲ್ಲಿಗೊ ಹೋಗುವನು?
ತೊಲಗಿತಕಟ ಜೀವ, ದೇಹ ತೊರೆದು
ಅಷ್ಟು ಮಾತ್ರಕೂನು ಅಪಕೀರ್ತಿ ಕಾಣನು
ಮನುಜರನ್ನರಿಯೋ ಮಂಕು ವೇಮ

ಹುಳುವು ಸೇರಿದ ಗಿಡ ಹೂ ಫಲಗಳ ಬಿಡದು
ನಡುವು ಮುರಿದ ನಾಯಿ ನಡೆಯದಲ್ಲ
ಕೀರ್ತಿಗೆಟ್ಟ ಯೋಗಿ ಮೂರ್ತಿ ಕಾಣಲಾರ ||ವಿಶ್ವ||

ಈ ಮೇಲ್ಕಾಣಿಸಿದ ಪದಗಳನ್ನು ಗಮನಿಸಿದಾಗ ಶಿಬಿ ಮಹಾರಾಜನು ಗುಬ್ಬಿಗಾಗಿ ತನ್ನ ದೇಹವನ್ನೇ ಕೊಯ್ದನು. ಈ ಉಪಕಾರದ ಸುದ್ದಿ ಅನಂತಕಾಲ ಉಳಿಯಿತಲ್ಲವೆ? ಯಾವಾಗಲೂ ಬಡವರಿಗೆ ಉಪಕಾರ ಮಾಡಬೇಕು, ಕೊಟ್ಟ ಮಾತಿಗೆ ತಪ್ಪಲೇಬಾರದು. ಏನೂ ಇಲ್ಲದ ಬಡವರಿಗೆ ಅವರು ಬಯಸಿದ ಪದಾರ್ಥ ಕೊಡುವುದೇ ದಾನವೆನ್ನಿಸುವುದು. ನಿಮಗೆ ಉಪಯೋಗಕ್ಕೆ ಬಾರದಿರುವ ವಸ್ತುವನ್ನು ದಾನರೂಪದಲ್ಲಿ ಕೊಡಬಾರದು. ನಿಮಗೆ ಇಷ್ಟವಿಲ್ಲದ್ದು ದಾನ ಪಡೆಯುವವರಿಗೆ ಇರಬೇಕಲ್ಲವೇ? ಬೇರೆ ಕೀರ್ತಿಯಿಂದ ಕೊಟ್ಟರೆ ಅದು ದಾನವಲ್ಲ. ಏಕೆಂದರೆ ಅಲ್ಲಿ ಪ್ರತಿಫಲದ ಅಪೇಕ್ಷೆಯಿರುತ್ತದೆಯೆನ್ನುತ್ತಾರೆ ವೇಮನ. ದಾನ ಮನೋ ನಿಗ್ರಹದ ಮೊದಲನೆಯ ಮೆಟ್ಟಲು ಎನ್ನಲಾಗಿದೆ.

ದಾನ ಮಾಡುತ್ತ ಬಾಳಿದರೆ, ಸತ್ತ ಮೇಲೂ ಹೆಸರು ಉಳಿಯುವುದು ಖಚಿತ. ಕೊಟ್ಟ ಮಾತನ್ನುಳಿಸಿಕೊಂಡನೆಂದೇ ಶಿಬಿ ಚಕ್ರವರ್ತಿಯು ಕೀರ್ತಿ ವಿಶೇಷನಾಗಿ ಬಾಳಿದನು. ಅನ್ಯರ ಕೀಳನ್ನು ಎಣಿಸದವನು ಉಪಕಾರಿಯೇ ಸರಿ, ಮನುಷ್ಯ ಜೀವನದ ಬದುಕು ಅದೆಷ್ಟು ಕಾಲ ಅವನ ಸ್ಥಾವರ ಆಸ್ತಿ–ಪಾಸ್ತಿ ಎಷ್ಟು ಕಾಲದ್ದು? ಆದ್ದರಿಂದ ವಿದೇಹಿಯು ನಿತ್ಯವಾದ ಬ್ರಹ್ಮವನ್ನು ತಲುಪಬೇಕಲ್ಲವೇ? ಸಂಸಾರ ಜೀವನದಲ್ಲಿ ಕಷ್ಟ–ಕಾರ್ಪಣ್ಯಗಳು ಎದುರು ಬರುವುದು ಸಹಜ. ಆದ್ದರಿಂದ ಕಷ್ಟಗಳಿರದ ಪರದ ಬದುಕನ್ನು ಬಾಳಲು ಕಲಿಯಬೇಕು. ನಿತ್ಯಸತ್ಯ ಯಾವುದೆಂಬುದನ್ನು ಅರಿತುಕೊಳ್ಳಬೇಕಾದರೆ ಭೂಮಿಯ ಮೇಲಾಗುವ ಆಗು–ಹೋಗುಗಳನ್ನರಿತು ವಿಮರ್ಶಿಸಿ ಗುರುತಿಸಿಕೊಳ್ಳುವುದುಚಿತವೆಂದಿದ್ದಾರೆ ವೇಮನರು. ಇಂಥ ವಿವೇಕಿಯು ಮಾತ್ರ ಸತ್ತು ಬದುಕುವ ರಹಸ್ಯವನ್ನು ತಿಳಿಯಬಲ್ಲನು ಎಂದಿದ್ದಾರೆ. ಹೀಗೆ ಮಾಡದೇ ಹೇಗೋ ಬದುಕಿ, ಎಲ್ಲಿಗೋ ಹೋದರೆ ಧ್ಯೇಯ ಸಿದ್ಧಿ ದೊರಕಲಾರದು, ಅಷ್ಟೇ ಅಲ್ಲದೆ ಬಾಳು ಹಾಳಾಗುವುದು. ಇದರಲ್ಲಿ ಅಂಥವರು ಅಪಕೀರ್ತಿಯನ್ನು ಕಾಣರೆಂಬುದೇ ದುರ್ದೈವವೆಂದಿದ್ದು ಗಮನೀಯ!!

ಇವರಿಬ್ಬರೂ ಮಹಾತ್ಮರ ಹೇಳಿಕೆಗಳನ್ನು ತೌಲನಿಕವಾಗಿ ಗಮನಿಸುವುದಾದರೆ, ಮನುಷ್ಯ ಹುಟ್ಟುವುದು ಆಕಸ್ಮಿಕವಾದರೂ ಸಾವು ಬಿಡದು. ಅಂದ ಬಳಿಕ ಬದುಕಿನಲ್ಲಿ ಒಳಿತು ನಡೆ–ನುಡಿ–ದಾನ–ಧರ್ಮಗಳನ್ನು ಮಾಡಿ ಪುಣ್ಯ ಪ್ರಾಪ್ತಿ ಮಾಡಿಕೊಳ್ಳಬೇಕು. ಇಂಥ ಕಾರ್ಯದಿಂದ ಕೀರ್ತಿಯು ಲಭಿಸುವುದು; ಇದುವೇ ಶಾಶ್ವತ ಸತ್ಯವೆಂದು ಮನುಕುಲಕ್ಕೆ ಅರುಹಿದ್ದಾರೆ.

**ಗೃಹಸ್ಥ ಧರ್ಮ :**

"ಸೃಷ್ಟಿಯ ಸಕಲ ಚಲನೆಗೆ ಕಾರಣವಾದುದು ಪುರುಷ ಶಕ್ತಿಯೆಂದೂ, ಪ್ರಕೃತಿ ಶಕ್ತಿಯಾದ ಸ್ತ್ರೀ ಶಕ್ತಿಯು ಪುರುಷ ಶಕ್ತಿಯ ಅಧೀನವೆನ್ನುವ ಧಾರ್ಮಿಕ ನಂಬಿಕೆಗಳು ಪ್ರಬಲಗೊಂಡಂತೆ ಮಾತೃಪ್ರಧಾನತೆಯ ವಿಚಾರಗಳು ಧಾರ್ಮಿಕ ಮತ್ತು ಕೌಟುಂಬಿಕ ನೆಲೆಗಳೆರಡರಿಂದಲೂ ಹಿನ್ನೆಲೆಗೆ ಸರಿಯುವಂತಾಗಿದೆ. ಆದಿಮ ಕಾಲದಲ್ಲಿ ಸ್ತ್ರೀಯಾತ್ಮಕವಾಗಿಯೇ ಗ್ರಹಿಸುತ್ತಿದ್ದ ಆದಿಶಕ್ತಿಯ ದೈವೀಕಲ್ಪನೆಯು ಪಲ್ಲಟಗೊಂಡು ಪುರುಷನಿಷ್ಠ ಚಿಂತನೆಗಳೇ ವ್ಯವಸ್ಥೆಯ ನಿಯಂತ್ರಕ ಶಕ್ತಿಗಳಾಗಿ, ಧಾರ್ಮಿಕಾಚರಣೆಗಳಲ್ಲಿಯೂ ಪುರುಷ ಶಕ್ತಿಯ ಪ್ರಾಧಾನ್ಯತೆಗೆ ಕಾರಣವಾಗಿದೆ. ಇನ್ನೆಲ್ಲ ಏರುಪೇರುಗಳ ನಡುವೆಯೂ ಮಾತೃ ಪೂಜೆಯ ಕುರುಹುಗಳು ಸಂಪೂರ್ಣ ಮರೆಯಾಗದೇ ಇಂದಿಗೂ ಅನೇಕ ನಾಗರಿಕ ಅರೆನಾಗರಿಕ ಸಮುದಾಯಗಳಲ್ಲಿ ಕಂಡು ಬರುತ್ತಿರುವುದು ಮಹತ್ವದ್ದಾಗಿದೆ. ಭಾರತದಲ್ಲಿ ಇಂದಿಗೂ ಶಕ್ತಿ ಪಂಥವು ಜನಪ್ರಿಯವಾಗಿದ್ದು; ಮಾತೃಶಕ್ತಿ ಆರಾಧನೆಯನ್ನೇ ಕೇಂದ್ರವಾಗಿಟ್ಟುಕೊಂಡಂಥ ಅತ್ಯಂತ ಪ್ರಾಚೀನ ಪರಂಪರೆಯನ್ನು ಹೊಂದಿದೆ ಎಂದು ಹೇಳಿದ ಡಾ. ಶಾಂತಾ ಇಮ್ರಾಪೂರ ಅವರ ಮಾತು ಸ್ವೀಕಾರಯೋಗ್ಯ (ಧರ್ಮ–ಮಹಿಳೆ ಮತ್ತು ಸಮಾಜ–ಪುಟ–೪).

ಕುಟುಂಬವು ಸಮಾಜದ ಒಂದು ಘಟಕ. ಸಮಾಜದ ಹಿತಕ್ಕಾಗಿ ಮತ್ತು ಸ್ವ ನೆಮ್ಮದಿಗಾಗಿ ಕುಟುಂಬವತ್ಸಲರಾಗಿ ಬದುಕುವುದು ಅನಿವಾರ್ಯ. ತಾಯಿ–ತಂದೆಯರನ್ನು ದೇವರೆಂದು ಕಾಣಬೇಕು. **"ಮಾತೃ ದೇವೋ ಭವಃ ಪಿತೃ ದೇವೋ ಭವಃ"** ಎಂಬ ಋಷಿ ವಾಕ್ಯ ಇದನ್ನೇ ಹೇಳುತ್ತದೆ. ಸಮಾಜದಲ್ಲಿ ಸರ್ವರೂ ಸಮಾನತೆಯಿಂದ ಬಾಳಬೇಕು. ಎಲ್ಲರೂ ನಮ್ಮವರೆಂಬ ಭಾವವು ಬಲಿಯಬೇಕು. ಸತಿಪತಿಯರು ಪರಸ್ಪರರು ಒಲಿದು ಸಹಕರಿಸಿ ಬಾಳಿದರೆ ಮಾತ್ರ ದಾಂಪತ್ಯವು ಸುಖದ ಸಾಗರವಾಗುತ್ತದೆ. ಇಲ್ಲವಾದರೆ ವಿರಸ ಬೆಳೆದು ದುಃಖದ ಮಡುವಾಗುತ್ತದೆ. ಇದನ್ನೇ ವರಕವಿ ಬೇಂದ್ರೆಯವರು ಸಮರಸವೇ ಜೀವನವೆಂದಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಪತಿಯು ಹೆಂಡತಿಯನ್ನು ರಕ್ಷಿಸುವ ಹೊಣೆಯಿರುತ್ತದೆ. ಪತ್ನಿಯ ದೋಷವನ್ನು ಸಕಾಲದಲ್ಲಿ ಅರಿತು ತಿದ್ದಬೇಕು. ಗೃಹಿಣೀ ಗೃಹಮುಚ್ಯತೇ" ಅಂದರೆ ಗೃಹಿಣಿ ಇದ್ದರೆ ಮಾತ್ರ ಗೃಹಕ್ಕೆ ಶೋಭೆ. ಒಳ್ಳೆಯ ಸತಿ, ಸಚ್ಚರಿತ್ರೆಯ



ಸುಪುತ್ರರಿದ್ದರೆ ಬೇರೆ ಸ್ವರ್ಗವೇಕೆ? ಇಂಥ ಸತಿ ಶಿರೋಮಣಿಯು ಸುಶೀಲೆಯಾಗಿ ಪತಿಭಕ್ತಿ ಪರಾಯಣೆಯಾಗಿ ವರ್ತಿಸಿದರೆ, ಅವಳ ಬಾಳು ಸೌಖ್ಯದ ಬುಗ್ಗೆಯಾಗುತ್ತದೆ. ಅಲ್ಪಸ್ವಲ್ಪ ವಿರಸಗಳು ದಾಂಪತ್ಯ ಜೀವನದಲ್ಲಿ ಒಳನುಸುಳಿದರೂ ಸಹ ಆ ವಿರಸವನ್ನೇ ದೊಡ್ಡದನ್ನಾಗಿಸಿ, ಪತಿಯನ್ನು ಸತಿ, ಸತಿಯನ್ನು ಪತಿಯಾಗಲಿ ತೊರೆಯುವುದು ಮೂರ್ಖತನ. ಸಹನೆಯಿಂದ ಒಬ್ಬರಿಗೊಬ್ಬರು ಮಾತನಾಡಿ ಪರಿಹರಿಸಿಕೊಂಡು ಕೂಡಿ ಬಾಳುವುದೇ ಪರಮ ಸುಖ. ಗಂಡನೂ ಸಹ ಏಕಪತ್ನೀ ವ್ರತಸ್ಥನಾಗಿರಬೇಕು. ಪತಿಯು ಮಾಡುವ ಪುಣ್ಯ ಕರ್ಮ ಫಲದಲ್ಲಿ ಸತಿಗೆ ಅರ್ಧ ಪಾಲು ಸಿಕ್ಕುವುದೆಂದು ಧರ್ಮಶಾಸ್ತ್ರಕಾರರು ತಿಳಿಸಿ, ಸತಿಯ ಧಾರ್ಮಿಕ ಸ್ವಾತಂತ್ರ್ಯವನ್ನು ನಿರಾಕರಿಸಿದ್ದಾರೆ. ಒಟ್ಟಿನಲ್ಲಿ ಸತಿ–ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ಶರಣರ ಮಾತು ನಿತ್ಯ ಸತ್ಯ ಎಂಬುದನ್ನು ಅರಿತು ನಡೆಯುವುದು ಚಂದ. ಸನ್ಯಾಸ ಧರ್ಮಕ್ಕಿಂತಲೂ ಗೃಹಸ್ಥ ಧರ್ಮವೇ ಮಿಗಿಲು, ಆದರೆ, ಏಕ–ಪತ್ನಿ–ಏಕ ಪತಿ ವ್ರತಧಾರಿಯಾಗಿರಬೇಕು. ಪರಸ್ತ್ರೀಯರನ್ನು ತಾಯಿ, ಸಹೋದರಿಯರಂತೆ ಕಂಡು ಆಚರಿಸಬೇಕು. ಇದುವೇ ಸದ್‌ಗೃಹಸ್ಥ ಜೀವನದ ಒಳಗುಟ್ಟು! ನಿಜ ತಂದೆ–ತಾಯಿಗಳೇ ದೇವರು ಎಂದೇ ಅವರ ಸೇವಾನುರಾಗದಲ್ಲಿ ತೊಡಗಬೇಕು. ವೇಮನರು ಹೇಳಿರುವಂತೆ–

ತಾಯಿಯೇ ಪಾರ್ವತಿಯು; ತಂದೆಯೇ ಶಂಭುವು।
ಪ್ರಮಥ ಗಣವು ಅಖಿಲ ಬಂಧು ಬಳಗ
ತಾನು ಹುಟ್ಟಿದ ಮನೆಯೇ ಕೈಲಾಸವು ॥ವಿಶ್ವ॥

ತಾಯಿ ತಂದೆಯರೇ ತನಗೆ ಗುರುವು, ದೈವ
ತಾಯಿ–ತಂದೆಯರೇ ತನಗೆ ಜೋಡು
ತಾಯಿ–ತಂದೆಯಿಂದ ಈ ತನುವು ಆಯಿತಲ್ಲ ॥ವಿಶ್ವ

ತಾಯಿ–ತಂದೆ ಹಿತರು ಬಂಧು ಬಳಗವೆಲ್ಲ,
ಒಳಿತು ಕೋರಿ ವರನ ಇರವ ನೋಡಿ
ಕನ್ನೆ ಕೊಡುವರಷ್ಟೇ? ಭಾಗ್ಯಕೊಡಲರಿಯರು? ॥ವಿಶ್ವ॥

ಮೊದಲಿಹ ಮಾತೃ ದೇವತೆ;
ತದನಂತರ ಜನಕನು ಇರುವ ಪರಿಕಿಸುತಿರಲ್
ಕುದುರಿದ ಸದಮಲ ಗುರುವೇ
ತುದಿ ದೈವವು, ಪರರು ಬೇರೆ ತೋರರು ವೇಮ

ಹಡೆದ ತಾಯಿ-ತಂದೆ ಹೊರೆಯುವುದನು ಬಿಡಲು
ಹಡೆದು ಬೆಳೆಸಿದ ಋಣ ಹಿಂಗದಯ್ಯ
ತಾಯಿ-ತಂದೆ ನೋಯೆ, ತಪವು ಸಿದ್ಧಿಸಬಹುದೇ ॥ವಿಶ್ವ

ಮೇಲಿನ ಪದಗಳನ್ನು ಗಮನಿಸಿದಾಗ, ಹೆತ್ತ-ತಂದೆ-ತಾಯಿಗಳೇ ಸಮಾಜದಲ್ಲಿ ಅಗ್ರಜರು! ಅವರೇ ದೇವರ ಸ್ವರೂಪರು. ಅವರ ಸೇವೆಯನ್ನು ಮಾಡಿ ಕೃತಾರ್ಥರಾಗುವಲ್ಲಿಯೇ ಬದುಕಿನ ಸಾರ್ಥಕತೆಯಿದೆ. ಇದು ಗೃಹಸ್ಥ ಜೀವನದ ಮೊದಲ ಮೆಟ್ಟಿಲು! ತಂದೆ-ತಾಯಿಯರನ್ನು ನಿಕೃಷ್ಟವಾಗಿ ಕಂಡವರು ಸಾಕಷ್ಟು ಇದ್ದರು ಎಂಬ ಕಾರಣಕ್ಕೆ ಇಂಥ ಮಾತುಗಳನ್ನು ಮಹಾಯೋಗಿ ವೇಮನರು ಹೇಳಿದ್ದುಂಟು ಎಂಬುದಾಗಿ ನನ್ನ ಗ್ರಹಿಕೆ. ಎಲ್ಲರೂ ಶ್ರವಣಕುಮಾರನಂತೆ ಬದುಕು ಸಾಗಿಸುತ್ತಿದ್ದರೆ ಇಂತಹ ಮಹಾನುಭಾವರ ತತ್ತ್ವ-ಸಂದೇಶ-ಉಪದೇಶಗಳು ಸೃಷ್ಟಿಯಾಗುತ್ತಿರಲಿಲ್ಲ.

ಗೃಹಸ್ಥ ಧರ್ಮದ ನಡೆಗಿರುವ ಜೀವನ ಮೌಲ್ಯಗಳನ್ನು ಈ ಇಬ್ಬರೂ ಯೋಗಿಗಳು ಹೇಳಿರುವ ಪದಗಳನ್ನು ನೋಡಿ! ತಿರುವಳ್ಳುವರರು ಗೃಹಸ್ಥನೆಂಬುವವನು ಧರ್ಮ ಗುಣವುಳ್ಳ ಮೂವರೂ ಸತ್ಪಥದಲಿ ನಿಲಲು ಸಹಕಾರಿಯಾಗಿಹನು. (ಸತ್ಯ-ಧರ್ಮ, ಕನ್ನಡತೆಯುಳ್ಳವರಾಗಿರಬೇಕು)

ಅನಾಥರಿಗೂ, ದರಿದ್ರರಿಗೂ, ಮೃತರಿಗೂ
ಗೃಹಸ್ಥನೆಂಬುವವನೇ ನೆರವಾಗಿಹನು

ಪಿತೃಗಳು ದೈವ, ಅತಿಥಿ, ಬಂಧು, ತಾನೆಂಬ ಐದು ಮಾರ್ಗದಲಿ
ಧರ್ಮವನು ರಕ್ಷಿಪುದೇ ಶ್ರೇಷ್ಠವೆನಿಸುವುದು.

ನಿಂದೆಗಂಜಿ ತನ್ನ ಉಣಿಸನು ಹಂಚಿ ಉಣ್ಣುವವನ
ವಂಶಕೆ ನಾಶವೆಂದಿಗೂ ಇಲ್ಲ.

ಪ್ರೇಮ, ಧರ್ಮಗಳು ಗೃಹ ಜೀವನದಲಿ ನೆಲೆನಿರಲು
ಅವುಗಳೇ ಆ ಜೀವನದ ಗುಣವೂ, ಫಲವೂ

ಧರ್ಮ ಮಾರ್ಗದಿ ಗೃಹ ಜೀವನವ ನಡೆಸಿದರೆ
ವಿರಕ್ತ ಮಾರ್ಗದಲಿ ಹೋಗಿ ಪಡೆಯುವುದೇನು?

ಧರ್ಮ ಗುಣದಿಂದ ಗೃಹ ಜೀವನವ ನಡೆಸುವವನು
ಶ್ರೇಯಕ್ಕಾಗಿ ಯತ್ನಿಸುವ ಮುನಿಗಳಿಗಿಂತ ಶ್ರೇಷ್ಠನು



ಅನ್ಯರನೂ ಧರ್ಮದಿಂದ ನಡೆಯುವಂತೆ ಮಾಡಿ ತಾನೂ ಧರ್ಮದಿಂದಲಿ
ಗೃಹ ಜೀವನ ನಡೆಸುವವನು, ತಪಸಿಗಿಂತ ಬಲಾಢ್ಯನು

ಗೃಹ ಜೀವನವೆ ಧರ್ಮವೆಂದೆನಿಸಿಕೊಳ್ಳುವುದು
ಅದು ಅನ್ಯರ ನಿಂದೆಯಿಲ್ಲದೆ ಲೇಸಹುದು

ಈ ಲೋಕದಲ್ಲಿ ಆದರ್ಶ ಜೀವನವ ನಡೆಸುವವನು
ಸ್ವರ್ಗ ಲೋಕದ ಅಮರರಂತೆ ಎಣಿಸಲ್ಪಡುವನು.

ತಿರುವಳ್ಳುವರರು ಹೇಳಿರುವಂತೆ ತಂದೆ-ತಾಯಿ-ಹೆಂಡತಿ-ಮಕ್ಕಳು-ಅತ್ತೆ-ಸೊಸೆ, ನಾದಿನಿ-ಅಣ್ಣ-ತಮ್ಮ-ಅಳಿಯ, ಭಾವ, ಮೈದುನ, ಮಾವ, ಅಜ್ಜ-ಅಜ್ಜಿ ಈ ಮುಂತಾದ ಬಂಧು ಬಳಗದ ಸರ್ವ ಸದಸ್ಯರು ಅನ್ಯೋನ್ಯತೆ, ಪ್ರೀತಿ, ಮಮತೆ, ವಾತ್ಸಲ್ಯದಿಂದ ಸತ್ಯ ಶುದ್ಧ ವ್ರತಸ್ಥರಾಗಿ ಧರ್ಮದಿಂದ ನಡೆದರೆ ಸನ್ಯಾಸಿ ಜೀವನದ ಗೊಡವೆ ಏಕೆ ಬೇಕೆಂದು ಪ್ರಶ್ನಿಸಿದರೆ; ಮಹರ್ಷಿ!! ಗೃಹಸ್ಥ ಜೀವನವು ಸುಗಮವಾಗಿ ಸಾಗಿ ಬದುಕು ಬಂಗಾರವಾಗಬೇಕಾದರೆ ಸತ್ಯ, ನ್ಯಾಯ, ನೀತಿ, ಧರ್ಮ, ಪ್ರಾಮಾಣಿಕತೆ, ಕಾಯಕ ನಿಷ್ಠೆ, ದಯೆ, ದಾನಧರ್ಮ, ಮತ್ತೊಬ್ಬರ ಹಿತ ಬಯಸುವುದು ಈ ಮುಂತಾದ ಸದ್ಗುಣಗಳಿಂದೊಡಗೂಡಿದ ಬಾಳು ಸುಂದರ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಇಂಥ ಗೃಹಸ್ಥ ಜೀವನದ ಮೌಲ್ಯಗಳನ್ನು ಮೇಲಿನ ಪದಗಳಲ್ಲಿ ಮಹರ್ಷಿ ತಮ್ಮ ತ್ರಿಗರ್ತ ಕಾವ್ಯದಲ್ಲಿ ಬಣ್ಣಿಸಿದ್ದುದು ನಮಗೆ ಮಾರ್ಗದರ್ಶಿಕೆಯಾಗಿದೆ.

ಪತ್ನಿಯರು ಹೇಗಿರಬೇಕು ಎಂಬುದಕ್ಕೆ ತಿರುವಳ್ಳುವರರು ಕೊಡುವ ಪದಗಳು ಇಂತಿವೆ:

ಮನೆಗೆ ತಕ್ಕ ಸುಗುಣಿಯಾಗಿ ಗಂಡನ ಗಳಿಕೆಗೆ
ತಕ್ಕಂತೆ ಬಾಳುವವಳೇ ಜೀವನ ಸಂಗಾತಿ

ಗೃಹ ಜೀವನಕೆ ತಕ್ಕ ಗುಣ ಮಡದಿಯಲ್ಲಿಲ್ಲದಿರೆ
ಅದು ಸಿರಿತನದ ಬಾಳಾದರೂ ವ್ಯರ್ಥ!

ಬಡತನವೇನುಂಟು ಮಡದಿ ಸುಗುಣೆಯಾಗಿರಲು?
ಸಿರಿತನವೇನುಂಟು ಮಡದಿ ಸುಗುಣೆಯಾಗಿರಲು?

ಹೆಣ್ಣಿಗಿಂತ ಹಿರಿಯ ಸಿರಿ ಯಾವುದಿಹುದು?
ಅವಳು ಶೀಲವೆಂಬ ಸ್ಥಿರತೆ ಪಡೆದಿರಲು?

ದೈವಕೆ ಮಣಿಯದೆ ಪತಿಯ ಮಣಿಯುವವಳು
ಸಕಾಲಕ್ಕೆ ಹುಯ್ವ ಮಳೆಯಂಥವಳು

ತನ್ನ ಶೀಲವ ರಕ್ಷಿಸಿ, ಪತಿಯ ಪಾಲಿಸಿ ಹಿರಿದೆನಿಸುವ
ಕೀರ್ತಿಯ ಗಳಿಸಬಲ್ಲವಳೇ ಸತಿಯು

ಸತಿಯರನು ಸೆರೆಯಿರಿಸಿ ರಕ್ಷಿಸುವುದರಲೇನಿಹುದು? ಅವರು
ತಮ್ಮ ಶೀಲವ ತಾವು ರಕ್ಷಿಸುವುದೇ ಶ್ರೇಷ್ಠ!

ಪತಿಯನು ಸೇವಿಪ ಸೌಭಾಗ್ಯವನು ಪಡೆದ ಸತಿಯು
ಸುರರಿರುವ ಲೋಕದಲಿ ಶ್ರೇಯವನು ಪಡೆವಳು

ಕೀರ್ತಿಯನು ರಕ್ಷಿಸದ ಸತಿಯನು ಪಡೆದ ಪತಿಯು
ಸಿಂಹದಂತೆ ನಡೆಯನು, ಹಗೆಗಳ ಮುಂದೆ

ಮನೆಗೆ ಮಂಗಳ ಮಡದಿಯ ಸದ್ಗುಣವು
ನಲ್ಮಕ್ಕಳ ಭಾಗ್ಯ ಮತ್ತದಕೆ ಭೂಷಣವು

ಗೃಹಸ್ಥ ಜೀವನ ಬಾಳು ಮೂರು ಒಲೆಗುಂಡಿದ್ದಂತೆ. ಪತಿ–ಪತ್ನಿ–ಮಕ್ಕಳು ಸಮನಾಗಿ ಪ್ರೀತಿಯಿಂದ ಬಾಳುವುದಾಗಿದೆ. ಒಂದು ಒಲೆಗುಂಡಿಲ್ಲದಿದ್ದರೆ ಹೇಗೆ ಪಕ್ವಾನ್ನ ಸಿದ್ಧಗೊಳ್ಳಲು ಸಾಧ್ಯವಾಗದೋ ಹಾಗೆಯೇ ಎಲ್ಲರೂ ಕೂಡಿ ಬಾಳಬೇಕು. ಸದ್ಗುಣಗಳನ್ನು ಅಳವಡಿಸಿಕೊಳ್ಳಬೇಕು. ಸತಿ–ಪತಿಯರು ತಮ್ಮ ಬಾಳ–ಪಯಣದಲಿ ಅರ್ಥೈಸಿಕೊಂಡು ಬಾಳಬೇಕು. ವಿರಸವುಂಟಾಂಗದಂತೆ ನಡೆಯುವದರಲ್ಲಿ ಬಾಳಿನ ಗುಟ್ಟು! ದೈವ ಸಾಕ್ಷಿಯಾಗಿ ಸಪ್ತಪದಿ ತುಳಿದು ಗುರು–ಹಿರಿಯರಿಂದ ಅನುಗ್ರಹ ಪಡೆದು ಪವಿತ್ರ ದಂಪತಿಗಳಾಗಿರುವಾಗ ಅವರ ಕೃಪೆ–ಆಶೀರ್ವಾದದ ಬಲದಿಂದ ಒಳ್ಳೆಯವರಾಗಿಯೇ ಬದುಕಬೇಕು. ಉತ್ತಮ ಗೃಹಸ್ಥರಿಂದ ಉತ್ತಮ ಫಲ ನಿರೀಕ್ಷಿಸುವುದು ಸರ್ವೇ ಸಾಮಾನ್ಯವಾಗಿದೆ. ಮನೆತನದ ಕೀರ್ತಿಗೆ ಪತಿ–ಪತ್ನಿಯರ ಸಹ ಬಾಳ್ವೆಯೇ ಪೂರಕವಹುದು. ಮನೆಗೆ ಮಂಗಳಕರ ವತಾವರಣವುಂಟಾಗ ಬೇಕಾದರೆ ಮಡದಿಯ ಸದ್ಗುಣವೇ ಮುಖ್ಯವಾಗುತ್ತದೆ. ಯಾಕೆಂದರೆ ನಲುಮೆಯ ಸದ್ಗುಣವಂತ ಮಕ್ಕಳು ಅವರಿಂದ ಜನ್ಮಧರಿಸಿ ಭೂಮಂಡಲಕ್ಕೆ ಭೂಷಣ ವಾಗುತ್ತಿದೆಯೆಂದು ಕೊನೆಯ ಚರಣಗಳಲ್ಲಿ ಮಹರ್ಷಿ ಹೇಳಿದ್ದುದು ಔಚಿತ್ಯಪೂರ್ಣವಾಗಿದೆ. ಮಕ್ಕಳೆಂದರೆ ನಿಜವಾದ ಈ ದೇಶದ ಸಂಪತ್ತು. ಮಕ್ಕಳೇ ಸುಂದರ ತೋಟದ ಪುಷ್ಪಗಳು! ಮಕ್ಕಳಿದ್ದರೇನೇ ಮನೆ, ನಾಡು, ದೇಶ ಚಂದ, ಆದುದರಿಂದ ಮಕ್ಕಳಿರಲೆವ್ವ ಮನೆ ತುಂಬ; ಬಡತನವಿದ್ದರೂ ಚಿಂತೆಯಿಲ್ಲ ಬಾಳ



ಮಕ್ಕಳಿರಲಿ ಎಂದು ಗರತಿಯರು ಹಾಡಿದ್ದಾರೆ. ಮಕ್ಕಳಿದ್ದರೆ ಬೀಸಣಿಕೆ ಗಾಳಿ ಬೀಸ್ಯಾವ! ಮಕ್ಕಳ ಕೊಡು ಶಿವನೇ ಮತ್ತೊಂದು ನಾನು ಬಯಸಲಾರೆ. ಮಕ್ಕಳಿಲ್ಲದ ಬಾಳು ಅದೇತರ ಬದುಕು? ಬಂಜೆಯೆಂಬ ಶಬುದ ಬೇಡ ಶಿವನೇ! ಎಂದು ಜನಪದ ಗರತಿಯರು ಮಕ್ಕಳ ಬಗೆಗಿರುವ ಕಕ್ಕುಲಾತಿಯನ್ನು ಮನದಣಿಯದೇ ಹಾಡಿದ್ದಾರೆ. ಹಾಗೆಯೇ ಮಕ್ಕಳ ಬಗೆಗೆ ರಚಿಸಿದ ಮಹರ್ಷಿಯವರ ದ್ವಿಪಾದಗಳಲ್ಲಿ ಹೀಗೆ ಹೇಳಲ್ಪಟ್ಟಿವೆ.

**ಮಕ್ಕಳ ಭಾಗ್ಯ :**

ಪಡೆಯತಕ್ಕ ಭಾಗ್ಯವದು! ಅರಿವುಳ್ಳ ಮಕ್ಕಳನ್ನು ಪಡೆವುದು!
ಇದಲ್ಲದ ಅನ್ಯ ಭಾಗ್ಯವನು ನಾವು ಗಣಿಸಲಾರೆವು

ಏಳು ಜನ್ಮಗಳಲೂ ದುಃಖವಿರದು, ನಿಂದೆಯಿಲ್ಲದ
ಸದ್ಗುಣದ ಮಕ್ಕಳನು ಪಡೆದರೆ,
ತಮ್ಮ ಸಿರಿಯೆಂಬರು ತಮ್ಮ ಮಕ್ಕಳನು; ಆ ಸಿರಿಯೂ
ತಮ್ಮ ತಮ್ಮ ಕರ್ಮದಿಂದ ಬರುವುದು.

ಅಮೃತಕ್ಕಿಂತ ಅತಿ ಮಧುರ, ತಮ್ಮ ಮಕ್ಕಳ
ಕಿರುಗೈಯಿಂದ ಕಲಸಿದಶನ

ಮಕ್ಕಳ ಮೈ ಮುಟ್ಟುವುದು, ಸುಖ ಮೈಯ್ಯಿಗೆ;
ಮತ್ತವರ ನುಡಿಯನಾಲಿಸುವುದು ಸುಖ ಕಿವಿಗೆ,

ಕೊಳಲಿಂಪು ವೀಣೆಯಿಂಪೆಂಬರು, ತಮ್ಮ ಮಕ್ಕಳ
ತೊದಲ್ನುಡಿಯನು ಕೇಳಿದವರು

ತಂದೆ ಮಗನಿಗೆ ಮಾಡುವ ನೆರವು, ಬಲ್ಲಿದರ ಸಭೆಯೊಳು
ಮೊದಲಿಗನಾಗಿರುವಂತೆ ಮಾಡುವುದು

ತಮ್ಮ ಮಕ್ಕಳ ಮತಿವಂತಿಕೆಯು ತಮಗಿಂತಲೂ
ಈ ಜಗದ ಜನಕೆಲ್ಲ ಸುಖವ ತರುವುದು

ಹೆತ್ತ ಹೊತ್ತಿಗಿಂತ ಹೆಚ್ಚಾಗಿ ನಲಿವಳು, ತನ್ನ ಮಗನ
ಜನ ಪ್ರಾಜ್ಞನೆಂದುದನು ಕೇಳ್ದ ತಾಯಿ

ಮಗನು ತಂದೆಗೆ ಮಾಡುವ ನೆರವು ಇವನ ತಂದೆ
ಇವನ ಪಡೆಯಲು ಏನು ತಪಗೈಯ್ದನೋ ಎಂಬ ನುಡಿ

ಮಕ್ಕಳೇ ಸುಂದರ ಲೋಕದ ಪುಷ್ಪಗಳು! ಎಂಬಂತೆ ಮಕ್ಕಳನು ಹೊತ್ತು ಹೆತ್ತು ಲಾಲನೆ-ಪಾಲನೆ ಮಾಡಿ ಬೆಳೆಸುವ ಜವಾಬ್ದಾರಿ ಹೆತ್ತವರದೇ ಪ್ರಮುಖ ಪಾತ್ರವಾಗಿದೆ. ಮಕ್ಕಳನ್ನು ಸತ್ಪ್ರಜೆಗಳನ್ನಾಗಿ, ನಾಗರೀಕರನ್ನಾಗಿಸುವುದೂ ಪಾಲಕರ ಜವಾಬ್ದಾರಿಯಾಗಿದೆ. ಎಳೆತನದಲ್ಲಿಯೇ ಉನ್ನತ ವಿಚಾರಗಳನ್ನು ಅವರ ಮನಸ್ಸಿನಲ್ಲಿ ಮೂಡಿಸುವುದೂ ಪಾಲಕರ ಕರ್ತವ್ಯವಾಗಿದೆ. ಮಕ್ಕಳು ಸಚ್ಚಾರಿತ್ರ್ಯವನ್ನು, ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಂಡು ಶ್ರಮ-ಸತ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡು ಮಾನವ ಪ್ರೇಮಿಯಾಗಿ ಬೆಳೆಯುವಂತೆ ಪ್ರೇರೇಪಿಸುವುದೇ ತಂದೆ-ತಾಯಿಗಳ ಹೊಣೆಯಾಗಿದೆ. ಅದಕ್ಕೆ ಎಂದಿರುವುರು ಪೂರ್ವಜರು

"ಸತ್ಯವೇ ನಮ್ಮ ತಾಯಿ-ತಂದೆ
ಸತ್ಯವೇ ನಮ್ಮ ಬಂಧು ಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು

ಎಂಬುದಾಗಿ ಗೋವಿನ ಹಾಡಿನಲ್ಲಿ ಕಂಡರಣೆಗೊಂಡಿದೆ. ಇಂತಹ ಉದಾತ್ತ ನೀತಿ ಸತ್ಯವನ್ನೇ ಮಕ್ಕಳ ಮನಸ್ಸಿನಲ್ಲಿ ತುಂಬಬೇಕಾದುದೂ ಪಾಲಕರಾದವರ ಕರ್ತವ್ಯ.

ಬಡತನ ನನಗಿರಲಿ ಭಾಳ ಮಕ್ಕಳಿರಲಿ
ಮ್ಯಾಗ ಗುರುವಿನ ದಯವಿರಲಿ ನನ ಗುರುವೆ
ಬಡತನದ ಚಿಂತಿ ನಿನಗಿರಲಿ

ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳ-ಹೊರಗ ಆಡಿದರೆ
ಬೀಸಣಿಕೆ ಗಾಳಿ ಸುಳಿದಾವ

ಆಡಿ ಬಾ ನನ ಕಂದ ಅಂಗಾಲ ತೊಳೆದೇನು
ತೆಂಗಿನಕಾಯಿ ತಿಳಿನೀರ ತಕ್ಕೊಂಡು
ಬಂಗಾರದ ಮಾರಿ ತೊಳದೇನು!

ಆಸರಿಕಿ ಬ್ಯಾಸರಿಕಿ ಯಾರಿಂದ ಕಳೆಯಲೆ
ಕೂಸ ಕಂದಯ್ಯ ತೊಡಿಮ್ಯಾಲ ಆಡಿದರ
ಬಂದ ಬ್ಯಾಸರಿಕಿ ಬಯಲಾಗಿ



ಹೀಗೆ ಗರತಿಯರ ಈ ಹಾಡುಗಳು ಮಕ್ಕಳ ಬಗೆಗಿನ ಪ್ರೀತಿ-ಮಮತೆಯನ್ನು ಹೊರಹೊಮ್ಮಿಸಿವೆ. ಇಂಥ ಮಾತುಗಳು ತಿರುವಳ್ಳುವರರ ಪದಗಳಲ್ಲಿಯೂ ನಾವು ಕಾಣುತ್ತೇವೆ. ನಿಜವಾದ ಸಿರಿಸಂಪತ್ತು ಎಂದರೆ ಮಕ್ಕಳೆಂಬ ಆಸ್ತಿ! ತಂದೆ ತಾಯಿ ಮಕ್ಕಳಿಗೆ ನೆರವು ಮಾಡಿದರೆ, ಅವರನ್ನು ಮುಪ್ಪಾವಸ್ಥೆಯಲ್ಲಿ ಚೆನ್ನಾಗಿ ಜೋಪಾನ ಮಾಡಬಲ್ಲರೆಂಬ ವಿಶ್ವಾಸವಿರುತ್ತದೆ. ತಮಗಿಂತಲೂ ಮಿಗಿಲಾಗಿ ಮಕ್ಕಳು ಬೆಳೆಯಬೇಕೆಂಬ ಹಂಬಲ ತಂದೆ-ತಾಯಿಗಳಲ್ಲಿರುವುದು ಸಹಜ. ತಂದೆ-ಮಕ್ಕಳ ಸಂಬಂಧವೆಂಬುದೊಂದು ಋಣಾನುಬಂಧದ ಕೊಂಡಿಯೆಂದು ಹೇಳಬಹುದು. ಇದು ನಿರಂತರ ನಡೆದುಕೊಂಡು ಬಂದ ಪರಿ ಎಂದು ಹೇಳಲಾಗಿದೆ.

ತಿರುವಳ್ಳುವರರಂತೆಯೇ ಮಹಾಯೋಗಿ ವೇಮನರು ಹೇಳಿದ ಪದಗಳಲ್ಲಿ ಇಂತಿವೆ.

ತಕ್ಕ ಸತಿಯು-ಪತಿಯು ಧರ್ಮಗೂಡಿರಲು
ಕಡು ಬಲಿಷ್ಠ ಜನಪ ಘನತೆಯೊಡನೆ ಪುರುಷ ಬಲಿಷ್ಠನಿರೆ, ಪುತ್ರಪ್ರಬಲನಿಷ್ಠ॥ವಿಶ್ವ॥

ಒಂದಾದ ದಂಪತಿ ಚಂದದ ಸಂಸಾರ
ನಂದನ ನಡೆ ನುಡಿ ನಂದಿನಿಯೊಳು
ಸತಿಗಿತ್ತ ರಕ್ಷಣೆಯು ಸ್ವಂತಕ್ಕೆ ರಕ್ಷಣೆ ॥ವಿಶ್ವ॥
ಮನವಾರೆ ಮುದ್ದಿಸುವ ಮಡದಿ ತನ್ನವಳಿರೆ
ಮನೆಗಾದರೂ ಒಡೆಯನೆನಿಸಬಹುದು
ಇನಿತಾದರೂ ಇರದ ಬದುಕು ಅಧಮ ಜಗದಿ ॥ವಿಶ್ವ॥

ಭಕ್ತಿ ಮುಕ್ತಿ ಉಂಟು ಭಾಗ್ಯ ಮತ್ತೆ ಉಂಟು
ಚಿತ್ತವರಿತ ಮಡದಿ ಜೊತೆಯೊಳಿರಲು;
ಚಿತ್ತವರಿಯದ ಸತಿ-ಹತ್ತಿರವಿರಲು ಹೊಲ್ಲ ॥ವಿಶ್ವ॥

ಹೆಂಡತಿಯೆನೆ ಆತ್ಮ ಕಣಾ!
ಹೆಂಡತಿಯೆನೆ ತಾಯಿ ಕಣಾ ಅರಿತೊಡೆ ಮನದೊಳೆ
ಹೆಂಡತಿ ತಾಯಿಯೆನಲಾರು?
ಕಂಡರಿಯಬೇಕಿದನೆ ತಪ್ಪದಂತೆ ವೇಮಾ

ಸತಿಪತಿ ಸೌಖ್ಯವು ಇಳೆಯಲಿ
ಇತಿಯೆಂದವಳ ಸತಿಯೆನ್ನಬಹುದೇ ಬಳಿಕಾ
ಸ್ಥಿತಿಯಂತಾಗದೆಇರ್ದೊಡೆ
ಶ್ರುತವಿದು ಯಮದೂತನಂತೆ ಸನಿಹದಿ ವೇಮ

ಪುಣ್ಯವೆಲ್ಲ ಕೂಡಿ, ಪುರುಷನಾಗಿ ಜನಿಸಿ
ಪಾಪವೆಲ್ಲ ಕೂಡಿ, ಬಂದಳು ಸತಿ
ಕಷ್ಟದ ಸತಿಯೆಂದು ಕಾಣುವವರು ಇಲ್ಲ ॥ವಿಶ್ವ॥

ಪತಿಯೊಪ್ಪಿರೆ ಸತಿಯೊಪ್ಪಲು
ಸತಿಪತಿಯೊಂದಾಗಿ ಪರಮ ಪಾವನ ಹೊಂದಲ್
ಸತಿಪತಿ ನ್ಯಾಯವೇ ಮೋಕ್ಷವು;
ಬದುಕೇ ಪರಮಾತ್ಮನೆ ತಾನಾಯಿತು ವೇಮಾ

ಪತಿಯೊಪ್ಪಿರೆ ಸತಿಯೊಪ್ಪಲು
ಸತಿಪತಿಯೊಂದಾಗಲು ಪರಮ ಪಾವನರೋಳ್
ಸತಿಪತಿ ನ್ಯಾಯವೇ ಮೋಕ್ಷಂ
ಪತಿಯೆ ಪರಮಾತ್ಮ; ಐಕ್ಯವು ಆಗರ ವೇಮಾ

ಸತಿಯು ಸುತರು ಕೂಡಿ ಸಾನಂದದಿಂದಿರೆ
ಮೇಲು ಸುತನು ಹುಟ್ಟಿ ಮುದ್ದಿಸುವುದು
ಬಿಡುವು ನೋಡಿ, ಮೀರಿ ಬಿಡಲಾರರಿಳೆಯಲಿ ॥ವಿಶ್ವ॥

ಇವುಗಳಲ್ಲಿರುವ ಸತಿ-ಪತಿ ಧರ್ಮದ ಪಾಲನೆ ಕೆನೆಗಟ್ಟಿದೆ. ಪತಿಯೇ ಪರದೈವ ಅಥವಾ ದೇವರೆಂದು ನಂಬಿ ನಡೆಯುವುದು ಸತಿಯ ಧರ್ಮ. ಅದೇ ರೀತಿ ಏಕ ಪತ್ನಿ ವ್ರತಸ್ಥನಾಗಿ ಪತಿಯೂ ಇರಬೇಕೆನ್ನುವ ಉಪದೇಶ ಪದಗಳಲ್ಲಿ ನಿರೂಪಿತವಾಗಿದೆ. ಸತಿ-ಪತಿಗಳ ಒಪ್ಪಿಗೆಯ ಬದುಕೇ ಅರ್ಪಿತವಾಗಬೇಕು. ಸತಿಪತಿಗಳೊಂದಾಗಿ, ಕಷ್ಟ-ಸುಖಗಳಲ್ಲಿ ಭಾಗಿಯಾಗಿ ಜೀವನ ಪಯಣದಲ್ಲಿ ಸಾಗುವುದೇ ಉತ್ತಮರ ಜೀವನ. ಇಂಥ ಜೀವನದ ಪಯಣದಲ್ಲಿ ಸಾಗುವುದೇ ಉತ್ತಮರ ಜೀವನ. ಇಂಥ ಜೀವನದ ನೆರಳೇ ಪಡಿಯಚ್ಚಾಗಿ ಉತ್ತಮ ಮಕ್ಕಳೂ ಜನಿಸುತ್ತಾರೆಂಬ ಭಾವ ವೇಮನರ ಪದಗಳಲ್ಲಿದೆ. ಹಾಗೆಯೇ ಮುಂದುವರೆದು ಹೇಳುತ್ತಾರೆ-

ಗುಣವತಿಯಿರೆ ಯುವತಿ ಗೃಹವು ಚೊಕ್ಕಟವಯ್ಯ
ಬೀಳು ಮನೆಯ ದೀಪ ಬೆಳಗಿದಂತೆ
ದೇವಿಯಿಪ್ಪ ಗೃಹವು ದೇವಾಲಯಮಯ್ಯ ॥ವಿಶ್ವ॥

ಸುಗುಣವಂತೆ ಕಾಂತೆ ಸುದತಿಯಾಗಿರ್ದೊಡೆ
ಮಿಗಿಲು ಬುದ್ಧಿವಂತ ಮಕ್ಕಳಿರಲು
ಸಗ್ಗವೇತಕಯ್ಯಾ ಸಂಸಾರ ಸಾಲದೆ ॥ವಿಶ್ವ॥



ಮಡದಿ ನೀಡಿದವನ ಒಡಲು ತುಂಬಿದವನ
ಒಡಲು ತಣಿಸಿ, ಘನತೆ ಮೆರೆಸದವನು,
ನಡತೆ ತಪ್ಪಿದವನು; ನೀಜಾಧಮನವನು ॥ವಿಶ್ವ॥

ಪತಿಯ ಮೇಲೆ ಭಕ್ತಿ ಕಳೆದುಕೊಳದ ಕಾಂತೆ
ಮೂರು ಲೋಕದೊಳಗೆ ಮುಕ್ತಿ ಪಾತ್ರ
ಸತಿಮಣಿಯರಿಗೆಲ್ಲ ಪತಿಯೇ ದೇವ ದೇವ ॥ವಿಶ್ವ॥

ಪತಿಯ ಧನದ ಬಲವೇ ಸತಿಗಿಹ ಬಲವೆಲ್ಲ
ಕನಕ ತೀರೆ ಕಾಶಿಗಿಂತ ಕಡೆಗು
ಕೆಲಸಗೇಡಿ ಪತಿಯ ಕಣ್ಣೆತ್ತಿ ನೋಡರು ॥ವಿಶ್ವ॥

ಕಾಂತೆ ತನ್ನ ಕೀರ್ತಿ ಸರ್ವಕಾಲಮಾನ
ಸಂತತಿ ಸ್ಮರಿಸುವಂತೆ ಪ್ರತಿಭೆವಂತೆ
ಕಾಂತೆಗೆ ಪತಿಭಕ್ತಿ ಎಂತೆಷ್ಟು ಹಿತವಹ ॥ವಿಶ್ವ॥

ಪತಿಯ ಕಾಲದಲ್ಲಿ ಸತಿ ಕಷ್ಟಪಡುತಿರೆ
ಸುತರ ಕಾಲ ಸುಖವ ಸವಿಯುತಿಹಳು
ಉಳ್ಳ-ಇಲ್ಲವೆಂಬೆರಡು ತಪ್ಪದಾರಿಗೂ ॥ವಿಶ್ವ॥

ಆಪತ್ತಿರುವಾಗ ನೋಡು ಬಂಧು ಭಾವ
ಭಯದ ವೇಳೆ ನೋಡು, ಬಂಟಗುಣವ
ಬಡತನ ಬಂದಾಗ ಮಡದಿಯ ಗತಿ ನೋಡು ॥ವಿಶ್ವ॥

ಮಾತು ಕೇಳದ ಸತಿ, ತಾ ಮೃತ್ಯು ದೇವತೆ
ಫಣಿ ಹೊತ್ತ ನಾಗಿಣಿ; ಗೃಹ ಪಿಶಾಚಿ
ತನಗೊಲಿಯದ ಮಡದಿ ಕಡುರಕ್ಕಸಿ ಜಗದಿ ॥ವಿಶ್ವ॥

ಗುಣವತಿಯಾದ ಮುದ್ದು ಮಡದಿಯಿರೆ ಅಂಥವನ ಮನೆಯ ಕೀರ್ತಿ ಬೆಳಗುವುದು. ಎಲ್ಲರೂ ಆದರ್ಶ ಸಂಸಾರದ ಮಹಿಮೆಯನ್ನು ಹಾಡಿ ಹರಸುವರು. ಇಂಥ ಸದ್ಗುಣಿಯು ಅಶಾಂತಿಯ ಕತ್ತಲು ತುಂಬಿದ ಮನೆಯಲ್ಲಿ, ಸಂಸಾರದಲ್ಲಿ ಶಾಂತಿಯ ದೀಪ ಬೆಳಗುವಂತೆ ಇರುವವಳು. ಆದರೆ, ಹೆಂಡತಿ ದುರ್ಗುಣಿಯಾದರೆ, ಇರುವಂಥ ಶಾಂತಿಯ ದೀಪವೂ ಆರುತ್ತದೆ. ಒಳ್ಳೆಯ ನಡೆ-ನುಡಿಯ ಮಡದಿಯಿದ್ದರೆ ಅಲ್ಲಿ ಸುಖ ಶಾಂತಿ ನೆಲೆಸುವುದು. ಅಂತಹ ಮನೆ ಚೊಕ್ಕಟ, ಪರಿಶುದ್ಧವಾಗಿರುತ್ತದೆ. ಇಂಥ ಸದ್ಗುಣವಂತೆ ಹೆಂಡತಿ ಮನೆ ತುಂಬಿದಾಗ, ಮನೆ ಕೈಲಾಸವಂತಿರಲು

ಸಾಧ್ಯ. ಒಳ್ಳೆಯ ಹೆಂಡತಿಯು ತನ್ನ ಪ್ರತಿಫಲ ಬೇಡದ ಕರ್ಮದಿಂದ ವನಕುಸುಮದಂತೆ ಕೆಲಸ ಕಾರ್ಯಗೈದು, ಆನಂದ ತರುತ್ತಾಳೆ. ಆನಂದದಿಂದ ಕತ್ತಲೆ ಸರಿದು ಶಾಂತಿಯ ಪ್ರಕಾಶ ಮಿಣುಗುವದು. ಸಚ್ಚಿದಾನಂದ ಸ್ವರೂಪಿಯಾದ ಆತ್ಮ, ದೇಹದಲ್ಲಿರುವುದರ ಪ್ರತೀಕವೇ ದೇವಾಲಯಗಳು. ಮೂರ್ತಿ ನಿಶ್ಚಲ, ವಿರಕ್ತ ಆತ್ಮದ ಪ್ರತೀಕ. ಗರ್ಭಗುಡಿ ಹೃದಯದ ಪ್ರತೀಕ. ಸಂಸಾರಸ್ಥರ ಮನೆಗಳ ಆನಂದ ತುಂಬುವ ಆನಂದಮಯಿಯಾದ ಸತಿಯು ಪ್ರತ್ಯಕ್ಷ ದೇವತಾಮೂರ್ತಿ. ಆ ಮನೆಯೇ ದೇವಾಲಯ ಎಂದು ಬಣ್ಣಿಸಿದ್ದಾರೆ ವೇಮನರು.

ತ್ಯಾಗ ಮತ್ತು ಭೋಗ, ಕಷ್ಟ ಮತ್ತು ಸುಖ ಒಂದಾದ ಮೇಲೊಂದು ಸರತಿಯಿಂದ ಬರುತ್ತವೆ. ರಾತ್ರಿಯ ನಂತರ ದಿನವು (ಹಗಲು) ಬರುವಂತೆ. ಸ್ತ್ರೀಯು ಇದೇ ರೀತಿಯಿರುವಳು. ಪತಿಯು ದುಡಿದು ಹೊಟ್ಟೆ ಹೊರೆಯುವಾಗ ಸತಿಯೂ ಸಹ ಅವನ ಅನುಕೂಲಕ್ಕೆ ತಕ್ಕಂತೆ ಅವಳೂ ದುಡಿಯುತ್ತಾಳೆ. ತನ್ನ ನಿತ್ಯದ ದಿನಕರ್ಮ, ಪತಿಯ ಕ್ಷೇಮ ವಿಚಾರ ಹಾಗೆಯೇ ಮಕ್ಕಳ ಪೋಷಣೆ ಆರೈಕೆ, ಗೃಹ ಧರ್ಮಾಚರಣೆ ಮಾಡುವುದು ಹೀಗೆ ಸ್ತ್ರೀ ಸದಾವಕಾಲವೂ ಕಾರ್ಯ ನಿರತಳಾಗಿ ಶ್ರಮಿಸುತ್ತಿರುತ್ತಾಳೆ. ಬಾಲ್ಯದಿಂದ ತಂದೆ–ತಾಯಿಗಳಿಂದ ಯೌವ್ವನದಲ್ಲಿ ಗಂಡನಿಂದ, ಮುಪ್ಪಾವಸ್ಥೆಯಲ್ಲಿ ಮಕ್ಕಳಿಂದ ರಕ್ಷಿಸಲ್ಪಡುತ್ತಾರೆ. ಕಾರಣ ಸ್ತ್ರೀ ಎಂದೂ ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂಬುದು ನಿಜ.

ಬಡತನವು ಮನುಷ್ಯನ ಗುಣಗಳ ಒರೆಗಲ್ಲು ಎಂದು ಹೇಳುತ್ತಾರೆ. ಧನವುಳ್ಳ ಸಮಯದಲ್ಲಿ ಸಕಲರೂ ಆಪ್ತತ್ವ ತೋರಿ ಸೇರುತ್ತಾರೆ. ಆದರೆ, ನಿಜವಾದ ಬಂಧು–ಭಾವವಿದೆಯೋ ಇಲ್ಲವೋ ಎಂಬುದನ್ನು ಆಪತ್ತಿನ ಸಮಯದಲ್ಲಿ ನೋಡಬೇಕು. ಅಂಥ ಗುಣವು ಇರುವುದೋ ಇಲ್ಲವೋ ಎಂಬುದನ್ನು ನಿರ್ಧರಿಸಬೇಕಾದರೆ, ಭಯಪ್ರದ ಸಂದರ್ಭಗಳಲ್ಲಿ ಬಂಟನು ಹೇಗೆ ನಡೆದುಕೊಳ್ಳುವನೆಂಬುದನ್ನು ಕಂಡು ನಿರ್ಧರಿಸಬಹುದು. ಅದೇ ರೀತಿ ಧನವಿರುವಾಗ ಮಡದಿ ಪತಿಯ ಬಗ್ಗೆ ತಾಳಿದ ಗೌರವವು– ಪತಿಪ್ರೇಮ ಜನ್ಯವೋ ಅಥವಾ ಧನಮೋಹಜನ್ಯವೋ ಗೊತ್ತಾಗದು. ಧನವಿರುವಾಗ ಮಡದಿ, ಅವಳು ಬೀರುವ ನಗೆ ಧನ ಭೋಗ ತೃಪ್ತಿಯ ಅಭಿವ್ಯಕ್ತವೋ ಇಲ್ಲವೆ ಪತಿಯ ಸಂತೋಷದಲ್ಲಿ ಪಾಲುಗೊಂಡದ್ದರ ಪ್ರತೀಕವೋ ಗೊತ್ತಾಗದು. ಆದರೆ ಬಡತನ ಬಂದಾಗ ಧನದ ಗೊಡವೆ ಇರುವುದಿಲ್ಲ. ಆಗ ಅವಳ ನಿಜವಾದ ಭಾವನೆಗಳು ವ್ಯಕ್ತವಾಗುತ್ತವೆ, ಅವಳ ಗತಿ ತಿಳಿಯುತ್ತದೆ. ಕೊನೆಯ ಪದದಲ್ಲಿ ಹೇಳಿರುವುದು ಗಮನಿಸಲೇಬೇಕಾದ ಮಾತು.

ಮನೆತನ ನಡೆಸುವ ಹೊಣೆ ಸಾಮಾನ್ಯವಾಗಿ ಪುರುಷನದು. ಗೃಹ ಕೃತ್ಯದ ಹೊಣೆ ಹೊರುವವರ ಮಾತಿಗೆ ಗೃಹದಲ್ಲಿ ಮನ್ನಣೆ ಅವಶ್ಯ! ಪುರುಷನ ಮಾತಿನಂತೆ



ಸತಿ ನಡೆದುಕೊಳ್ಳಬೇಕು. ಅದು ಸದ್ಗೃಹಿಣಿಯಾದವಳ ಧರ್ಮ. ಮಾತು ಕೇಳದ ಮಡದಿಯಿದ್ದರೆ ಅಂಥವಳು ಅಶಾಂತಿಯ ವಿಷ ಬೀರುವಳು. ಅವಳು ಹಾವಿನಂತೆ ಬುಸುಗುಡುವಳು, ಅವಳು ಗಂಡನಿಗೆ ಅಸಡ್ಡೆ ಮಾಡಿದರೆ ಅವನು ಮನಸ್ಸಿನಲ್ಲಿ ಕಳವಳಗೊಳ್ಳುವನು, ಚಿಂತೆಗೀಡಾಗುವನು, ಗಂಡನ ಪಾಲಿಗೆ ಅವಳು ಗೃಹಶಾಂತಿಭಂಗ ಮಾಡುವ ರಾಕ್ಷಸಿಯೆನಿಸುವಳು, ಹೆಂಡತಿ ಗಂಡನಿಗೆ ಒಲಿಯದಿದ್ದರೆ, ಅವಳು ಅವನ ಕೇಡನ್ನೇ ಬಯಸುವವಳು. ಶ್ರೇಯ ಬಯಸುವವರು ಮಾನವರು; ಕೇಡು ಗೆದವರು ದಾನವರು. ಕೇಡು ಬಯುಸುವ ಹೆಂಡತಿ ಈ ಜಗತ್ತಿನಲ್ಲಿ ರಕ್ಕಸಿಯಿದ್ದಂತೆಯೆಂದುದಾಗಿ ವೇಮನರು ಸತಿ ಪತಿಗಳೊಂದಾಗಿ ಇರದಿದ್ದರೆ ಎಂದು ಕಟುವಾಗಿ ಟೀಕಿಸಿದ್ದಾರೆ. ಆದುದರಿಂದ ಇಂಥ ಸ್ತ್ರೀಯಿದ್ದರೆ, ಮಡದಿಯಿದ್ದರೆ ಪತಿಯಾದವನು ಹೇಡಿಯಂತೆ ವರ್ತಿಸಬಾರದು ಎಂದು ಮತ್ತೊಂದು ಪದದಲ್ಲಿ ಹೇಳಿದ್ದು ಹೀಗೆ–

> ಮಡದಿಯನು ಮಣಿಸದೆ, ಮೊದಲು ಅಧಮನಾಗಿ,
> ಮೀರೆ, ಹಣಿವೆನನಲು ಮಂಕುತನವು
> ಮರವಾಗಿ ಬೆಳೆದುದು ಚಿವುಟಿಲು ಅಳಿವುದೆ? ॥ವಿಶ್ವ॥

ಅಂದರೆ ಪತಿಯಾದ ಪುರುಷನು ತನ್ನ ಮಡದಿಯನ್ನು ತನ್ನ ನಿಯಂತ್ರಣದಲ್ಲಿ ಇರಿಸಿಕೊಳ್ಳುವುದು ಲೋಕಾಚಾರ, ಲೋಕನೀತಿ. ಈ ನಿಯಂತ್ರಣವು ಬಲಾತ್ಕಾರವಲ್ಲ. ಪ್ರೇಮದ ಓಜಸ್ಸು ತೇಜಸ್ಸುಗಳಿಗೆ ಸ್ತ್ರೀ ಮಾಡಿದ ಶರಣಾರ್ಥಿ. ಮಂದಮತಿಯುಳ್ಳ ಸ್ತ್ರೀಯನ್ನು ಮೊದಲು ತನ್ನ ಅಂಕಿತದಲ್ಲಿಟ್ಟುಕೊಳ್ಳಲು ತಪ್ಪಿ, ಅವಳು ಹದ್ದು ಮೀರಿ ವರ್ತಿಸತೊಡಗಲು ಪುರುಷ ಮುಖಭಂಗಿತನಾಗುತ್ತಾನೆ. ಅವಮಾನಿತನಾಗಿ, ಅಧಮನೆನಿಸಿಕೊಳ್ಳುತ್ತಾನೆ. ಅಂಕೆ ತಪ್ಪಿದ ಬಳಿಕ ಮತ್ತೆ ಅವಳನ್ನು ನಿಯಂತ್ರಿಸಿ ಹಾದಿಗೆ ತರುವೆನೆಂಬ ಭಾವನೆಯು ಹುಚ್ಚುತನವಷ್ಟೇ! ಅದು ಹೇಗೆಂದರೆ ಚಿವುಟುವ ಶಕ್ತಿ ಮಾತ್ರ ಇದ್ದವರು ಸಸಿಯಿರುವಾಗಲೇ ಚಿವುಟಿ ಹಾಕಬಹುದು. ಆದರೆ, ಸಸಿಯು ಬೆಳೆದು ಮರವಾದ ಮೇಲೆ ಚಿವುಟಿ ಹಾಕುತ್ತೇನೆಯೆಂದರೆ ಅದು ಹಾಸ್ಯಾಸ್ಪದ ಸಂಗತಿಯಲ್ಲವೆ? ಎಂದು ಸಂಸಾರದ ಬಂಡಿ ಸಾಗಬೇಕಾದರೆ ಬಂಡಿಯ ಗಾಲಿಗಳೆರಡೂ ಸಮನಾಗಿರಬೇಕೆಂದು ಯೋಗಿ ವೇಮನರು ಸಂಸಾರಸ್ಥರಿಗೆ ಬಂಡಿಯ ಹಿತ ನುಡಿದಿದ್ದಾರೆ.

**ವೇಮನರ ಪದಗಳಲ್ಲಿ ಮಕ್ಕಳ ಭಾಗ್ಯ :**

ಸತಿ ಪತಿಗಳು ಸದ್ಗುಣಿಯಾಗಿ ಸದಾಚಾರ ಸಂಪನ್ನರಾದವರಾಗಿದ್ದರೆ ಅವರ ಸಂಸ್ಕಾರದ ಫಲವಾಗಿಯೇ ಸದ್ಗುಣ ಮಕ್ಕಳು ಉದಿಸುತ್ತಾರೆ. ಇಂಥ ಪರಿಸರದಿಂದ

ಹುಟ್ಟಿದ ಮಗ ಪಾಲಕರ ಸಂಸ್ಕಾರದಲ್ಲಿ ಬೆಳೆದು ಕೀರ್ತಿ ತರಬಲ್ಲುದು. ಅವರವರ ಪೂರ್ವ ಸಂಸ್ಕಾರಕ್ಕನುಗುಣವಾಗಿ ಸಂತಾನ ಫಲ ದೊರಕೊಳ್ಳುವುದು. ಪತಿ – ಪತ್ನಿಯರ ಸಂಬಂಧವೂ ಇಲ್ಲಿ ಮಕ್ಕಳ ಹಡೆಯುವಲ್ಲಿ ಪ್ರಮುಖ ಪಾತ್ರವಿರುತ್ತದೆ. ವೇಮನರು ಹೇಳಿರುವ ಪದಗಳಲ್ಲಿ ಇಂತಿದೆ.

ಪೊಡವಿಯಲ್ಲಿ ನರರು ಪುತ್ರರನ್ನು ಕೋರಿ
ಅಳುತಲಿಹರು ಬಹಳ ಆಸೆಯಿಂದ
ಕುವರ ಹುಟ್ಟಿ ಕೊನೆಗೆ ಕುಲವನುದ್ಧರಿಪನೇ? ॥ವಿಶ್ವ॥

ತಂದೆಗಿದ್ದ ಧನವು, ತನಯರಿಲ್ಲದಿರಲು
ಪುತ್ರರಾಸೆಯಿಂದ ಹೊರಳುತಿಹರು
ಪುತ್ರಪ್ರಾಪ್ತಿಯಾಗೆ, ಭೂಮಿ ಮೇಲೆ ಪುಣ್ಯ
ಪುರುಷರೆನುವರೆಂಬ ಬುದ್ಧಿ ವೇಮ

ಕುವರನಿಲ್ಲವೆಂದು ಗುಡಿಗೆ ಹೋಗಿ ಮಣಿಯೆ
ಬಂಜೆ ಹೆಣ್ಣಿಗೇನು ಬಹನು ಕಂದ?
ಧರ್ಮಹೀನನೊಡನೆ ಧನವು ಇರದ ರೀತಿ ॥ವಿಶ್ವ॥

ಗರ್ಭದಿಂದ ಹುಟ್ಟು ಸುಖ–ದುಃಖಗಳೆರಡೂ
ಪತಿಗೆ–ಸತಿಗೆ ಜನಿಪ ಪೊಳೆವ ಸುತನು
ಸತಿಗೆ ಪುತ್ರರಿಂದ ಸೌಖ್ಯ ಉಂಟಾಗದೇ? ॥ವಿಶ್ವ॥

ತಾಯಿ ತಂದೆಯರಲಿ ದಯೆ ತೋರದ ಪುತ್ರ,
ಹುಟ್ಟಲೇನು? ಮತ್ತೆ ಸತ್ತರೇನು?
ಹುತ್ತದಲಿ ಗೆದ್ದಲು ಹುಟ್ಟವೆ ಸಾಯವೇ? ॥ವಿಶ್ವ॥

ಹಡೆದ ಮಗನ ಆಸೆ, ಹೊನ್ನಿನ ಮೇಲಾಸೆ
ಸ್ತ್ರೀಯ ಮೇಲಾಸೆ, ಚಿತ್ತ ಕನಲಿ,
ಭ್ರಮೆಯ ಹೊಂದಿ ಇರಲು ಬ್ರಹ್ಮ ತೋಚುವುದೇ ॥ವಿಶ್ವ॥

ಕಾಯೊ ಕಾಯೋ ಎಂದು ಕರುಣೆಯಿಂದ ಕರೆವ
ಕಂದನನ್ನು ಕಂಡು; ಕರೆದು ಮುದ್ದಿಸಿ
ಕೊಟ್ಟುಹಾಲು ಕುಡಿಸೆ, ಕಡು ಪುಣ್ಯವಂತಿಯಲಾ ॥ವಿಶ್ವ॥

ಕಂದನು ಬೆಳೆದು ಹಿರಿಯನಿಗೆ
ವಂದಿಸಿ ವಿಧೇಯನಿರಲಾನಂದವೆನಿಸಪ್ಪುದೈ



ಹೊಂದಿ ಕೆಡನು ಸತ್ಪುರುಷರ
ನಿಂದೆಗಿಳಿಯೆ ಚಿಂತೆಯುಂಟು, ನಿಜವಿದು ವೇಮಾ!

ಉತ್ತಮರ ಉದರದಿ ಉಡಾಫೆ ಹುಟ್ಟಿದೊಡೆ
ಅವನು ಕೆಡಿಸುತಿಹನು ಅಖಿಲವಂಶ,
ಕಬ್ಬು ತೆನೆಯು ಹುಟ್ಟಿ ಕೆಡಿಸದೆ ಸಿಹಿಯೆಲ್ಲ ॥ವಿಶ್ವ॥

ಓರ್ವ ತಾಯಿಯುದರ, ವಸುಧೆಯಲಿ ಹತ್ತು ಜನ
ಪುತ್ರ ಸಂತತಿಯು ಪುಟ್ಟಿ ಬಳಿಕ,
ಓರ್ವಗೀವ ಬುದ್ಧಿ, ಓರ್ವಗೀಯ ಹರನು ॥ವಿಶ್ವ॥

ತನಯನಾವನಿರಲಿ; ತನ್ನ ತಂದೆಗಿಂತ
ಘನತೆ ಗಳಿಸಿ ಹೆಸರುವಾಸಿಯಾಗಿ
ತನ್ನ ಪಿತನ ಹೀನನೆನಿಸಿ ಕೇಡು ಕಾಣು ॥ವಿಶ್ವ॥

ಕುವರ ಸತಿಯರ ಖ್ಯಾತ ಬಂಧು–ಬಳಗ
ಸಂಪದವ ತನುಗಳ; ಚೊಕ್ಕ ನಂಬೆ
ಸಂತಸಕರರೆನುವರು; ಕ್ಷಣ ಭಂಗುರ
ತಿಳಿಯಲಾರರೇಕೋ? ತಿಳಿಸು ವೇಮಾ!

ಸೇರಿ ಉಣ್ಣಬಹುದು ಸ್ವಂತ ಪುತ್ರನಿರಲು
ದತ್ತಕ ಮಗನ ಎಂಜಲು ಎತ್ತುತಿಹರೆ?
ಆದರವನ ಬಗೆಗೆ ಕಾಣರು ಈ ರೀತಿ ॥ವಿಶ್ವ॥

'ಅಪುತ್ರಸ್ಯ ಗತಿರ್ನಾಸ್ತಿ' ಎಂಬಂತೆ ಮಕ್ಕಳಿಲ್ಲದವರ ಬಾಳು ದುಃಖಿತವು! ಆದುದರಿಂದ ಹೆಣ್ಣುಮಕ್ಕಳು ಬಂಜೆಯತನವನ್ನು ಹೋಗಲಾಡಿಸು ಶಿವನೇ ಎಂದು ಪ್ರಾರ್ಥಿಸಿಕೊಳ್ಳುವ ಬಗೆಯನ್ನು ನಾವು ಜನಪದ ಗರತಿಯರ ಹಾಡುಗಳಲ್ಲಿ ಕಾಣುತ್ತೇವೆ. ಮಕ್ಕಳ ಕೊಡು ಶಿವನೆ ಮತ್ತೊಂದು ನಾ ಬಯಸಲಾರೆನು ಎನ್ನುವರು. ಇದು ಮದುವೆಯಾದ ಮೇಲೆ ದಂಪತಿಗಳನ್ನು ಕಾಡುವ ಪ್ರಶ್ನೆ ಸಹಜ! ಒಂದಾದ ದಂಪತಿ ಚಂದದ ಸಂಸಾರ, ನಂದನನ ನಡೆ–ನುಡಿ ನೋಡಬೇಕೆಂಬ ಆಸೆ ಅವರಲ್ಲಿ ಸಹಜವೂ ಹೌದು! ಸತಿ ಪತಿಯರು ಪ್ರೀತಿ ಪ್ರೇಮದಿಂದಿರುವಾಗ, ಸಂಸಾರವು ಸುಖದ ಬುಗ್ಗೆ ಇಬ್ಬರ ಅನಿಸಿಕೆ ಮಕ್ಕಳ ಭಾಗ್ಯದ ಕಡೆಗೆ ಚಿತ್ ಹರಿಯುತ್ತದೆ.

ತಂದೆ–ತಾಯಿ ಸತಿ, ಸುತ, ಅಣ್ಣ–ತಮ್ಮಂದಿರರು ಪ್ರೀತಿಯಿಂದ ಬೆಳೆದರೆ ಬಾಳಿಗೊಂದು ಘನತರ–ಗೌರವ ವರ್ಧಿಸುತ್ತದೆ. ಹಾಗೆಯೇ ಮಕ್ಕಳು ಹಿರಿಯರ

ವಚನಗಳನ್ನು ಪ್ರೀತಿಯಿಂದ ಪರಿಪಾಲಿಸಿ ಅವರ ಸೇವೆಯನ್ನು ಅನುರಾಗ -ಭಕ್ತಿ-ಶ್ರದ್ಧೆಯಿಂದ ಮಾಡಿದರೆ ವರ ಪುಣ್ಯಲಭಿಸುವುದು. ಅಂಥವರು ದೀರ್ಘಾಯುಷಿಗಳಾಗಿ ಬಾಳಲು ಸಾಧ್ಯವಾಗುತ್ತದೆ. ನೂಲಿನಂತೆ ಸೀರೆ ತಾಯಿಯಂತೆ ಮಕ್ಳು' ಎಂಬೋಕ್ತಿಯಂತೆ ತಂದೆ ತಾಯಿಗಳ ಸಂಸ್ಕಾರಗಳೇ ಎಳೆಯ ಮಕ್ಕಳ ಮೇಲಾಗುತ್ತದೆ ಎಂಬುದಿದರ ತಾತ್ಪರ್ಯ! ಆದರೆ ಉತ್ತಮರ ಹೊಟ್ಟೆಯಿಂದ ಉಡಾಫೆ; ಕಿಡಿಗೇರಿ ಮಕ್ಕಳು ಹುಟ್ಟಿದರೆ ತಂದೆ ತಾಯಿಗಳಿಗೆ ಕೇಡಲ್ಲವೆ? ಮಿತ್ರ ವರ್ಗದವರ ಸಂಪರ್ಕದಿಂದ, ಅನೀತಿವಂತರ ಒಡನಾಟವಿದ್ದುದೇಯಾದರೆ ಅಂಥ ಮಕ್ಕಳು ಕೆಡಲು ಸಾಧ್ಯವಿದೆ. ಇದರಿಂದಲೂ ತಂದೆ-ತಾಯಿಗಳಿಗೇ ಕೇಡಲ್ಲವೆ? ಹೆಣ್ಣು ಮಕ್ಕಳಿರಲಿ, ಗಂಡು ಮಕ್ಕಳಿರಲಿ ನೀತಿಯುತ ಬದುಕಿಗೆ ಸ್ಪಂದಿಸಿದರೆ ತನಗೂ ಒಳಿತು ಪಾಲಕರಿಗೂ ಒಳಿತು ಆಗುವುದು. ತಂದೆಯನ್ನು ಮೀರಿಸುವಂತೆ ಉದಾತ್ತತೆಯಿಂದ ನಡೆದರೆ ಗೌರವ=-ಘನತೆ ಇಬ್ಬರದೂ ಹೆಚ್ಚುತ್ತದೆ. ಇದರಿಂದ ನಾಡು ನುಡಿಗೂ ಗೌರವ ತಂದಂತಾಗುತ್ತದೆ. ಮಾನವ ಎಂದ ಮೇಲೆ ಆಚಾರ-ವಿಚಾರಗಳಲ್ಲಿ ತಾಳಮೇಳವಿರಬೇಕು. ಅತಿಯಾದ ಪುತ್ರ ವ್ಯಾಮೋಹ ಸಲ್ಲದು. ಎಲ್ಲರೂ ತಮ್ಮ ತಮ್ಮ ಹೊಣೆಯರಿತು, ಕುಟುಂಬದಲ್ಲಿ, ಸಮಾಜದಲ್ಲಿ ಬಾಳಬೇಕು.

ಮಕ್ಕಳು ಜ್ಞಾನವಂತರಾಗಬೇಕು; ಸದ್ಬುದ್ಧಿಯ ಕಣಜರಾಗಬೇಕು. ಅಂತಹ ಸತ್ಪುತ್ರರು ತಮ್ಮ ಸಂಪತ್ತು, ಪುಣ್ಯಕಾರ್ಯಗಳಲ್ಲಿಯೇ ಭಾಗಿಯಾಗಿರುವವರನ್ನು ಕಂಡ ಜನರು ಮಕ್ಕಳಿದ್ದರೆ ಹೀಗೆ ಇರಬೇಕೆಂದು ತಂದೆ-ತಾಯಿಗಳಿಗೆ ಸಂತಸವಾಗಬೇಕು. ಹೆತ್ತ-ತಾಯಿ-ತಂದೆ ಧನ್ಯರು ಎನ್ನುವಂತಾಗಬೇಕು. ಆದರೆ, ಗುಣವಂತರಾಗದ ಮಕ್ಕಳು ಹೆಸರು ಕೆಡಿಸುತ್ತಾರೆ. ಇಂಥವರಿಂದ ಹೆತ್ತ ತಂದೆ-ತಾಯಿಗಳಿಗೆ ದುಃಖ ಕಣ್ಣೀರು. ಕೇವಲ ಮಕ್ಕಳ ಪ್ರಾಪ್ತಿ ಶ್ರೇಯ-ಪ್ರೇಯಗಳಿಗೆ ಕಾರಣವಲ್ಲ. ಆದರೆ ಒಳ್ಳೆಯ ಮಕ್ಕಳನ್ನು ಹೆರುವುದು, ಹೆತ್ತ ಮಕ್ಕಳು ಒಳ್ಳೆಯ ನಡೆ-ನುಡಿ ಹೊಂದುವಂತೆ ಪೋಷಿಸುವುದು. ಸುಖ-ಸಂತೋಷಕ್ಕೆ ಶ್ರೇಯ-ಪ್ರೇಯಗಳಿಗೆ ಕಾರಣವಾಗಿದೆಯೆನ್ನುತ್ತಾರೆ ವೇಮನರು. ತಾನೂ ಗುಣವಂತನಾಗಿ ಈತರರೂ ಗುಣವಂತರಾಗುವಂತೆ ಮಾಡುವುದೇ ಮೇಲು ಅಲ್ಲವೇ? ಒಳ್ಳೆಯ ರೀತಿ ನೀತಿ ನಡತೆಗಳುಳ್ಳ ಸತಿ ಸುತರು ದೊರೆತಾಗ ಆಗುವ ಸಂತಸ ಅಷ್ಟಿಷ್ಟಲ್ಲ. ಅದಕ್ಕೆ ಸರ್ವಜ್ಞ ಕವಿಯು

> ಬೆಚ್ಚನೆ ಮನೆಯಾಗಿ; ವೆಚ್ಚಕ್ಕೆ ಹೊನ್ನಾಗಿ
> ಇಚ್ಛೆಯನರಿವ ಸತಿಯಾಗೆ, - ಸ್ವರ್ಗಕ್ಕೇ
> ಕಿಚ್ಚು ಹಚ್ಚೆಂದ ಸರ್ವಜ್ಞ!



ಸರ್ವಜ್ಞ ಕವಿಯು ಹೇಳಿದ ಮಾತು ಗೃಹಸ್ಥ ಧರ್ಮ ಭಾಗದಲ್ಲಿ ಈಗಾಗಲೇ ನಿರೂಪಿತವಾದ ತಂದೆ-ತಾಯಿ, ಸತಿ-ಸುತ, ಅಥವಾ ಮಡದಿ-ಮಕ್ಕಳು ಹೇಗಿದ್ದರೆ ಬಾಳು ಸುಗಮವಾಗುತ್ತದೆ ಎಂಬುದರ ಕುರಿತಾಗಿ ತಿರುವಳ್ಳುವರರು ಹಾಗೂ ಮಹಾಯೋಗಿ ವೇಮನರು ಹೇಳಿದ ಮಾತುಗಳು ಒಂದೇ ರೀತಿಯಾಗಿವೆ. ತೌಲನಿಕವಾಗಿ ಗಮನಿಸಿದರೆ ಇವರಿಬ್ಬರ ಹೇಳಿಕೆಗಳಲ್ಲಿ ಸಾಮ್ಯತೆಯ ಅಂಶಗಳೇ ದಟ್ಟವಾಗಿವೆ. ಇವರು ಹೇಳಿದ ಪ್ರತಿಯೊಂದು ಮಾತುಗಳೂ ನೀತಿಯ ಬದುಕಿಗೆ ಬೇಕಾಗಿರುವ ನಿಕ್ಷೇಪ, ನಿಧಿ, ಪರಿಪಾಲನೆ ಮಾಡುವ ಧರ್ಮ ನಮ್ಮೆಲ್ಲರದಾಗಿದೆಯಷ್ಟೇ! ಇವರ ಈ ಎಲ್ಲ ನುಡಿ ಮುತ್ತುಗಳು ಜನಾಂಗೀಯ ಬದುಕಿಗೆ ದಾರಿದೀಪವಾಗಿವೆ.

ಹಾಗೆಯೇ ಒಲವು ಅಥವಾ ಪ್ರೀತಿಯೇ ದಾಂಪತ್ಯ ಜೀವನದ ಯಶಸ್ಸಿಗೆ ಕಾರಣವಾಗುತ್ತದೆ. ಪ್ರೀತಿಯಂತಹ ವಸ್ತು ಜಗದಲ್ಲಿ ನಾಕಾಣೆ ಎಂಬ ಮಧುರಚೆನ್ನರ ಮಾತನ್ನು ನೆನಪಿಸಿಕೊಳ್ಳುವುದು ಕ್ಷೇಮ! "ಒಲವೇ ನಮ್ಮ ಬದುಕು ಬಳಸಿಕೊಂಡೆವದನು ಅದಕು ಇದಕು ಎದಕು" ಎಂದೂ ವರಕವಿ ಬೇಂದ್ರೆಯವರೂ ಹೇಳಿದ್ದಾರೆ. ಇಂಥ ಮಾತುಗಳನ್ನು ಸಾವಿರಾರು ವರುಷಗಳ ಹಿಂದೆಯೇ ತಿರುವಳ್ಳುವರರು ಹೇಳಿದ್ದುದನ್ನು ಕೇಳಿ

> ಅಂತರಂಗದಿ ಒಲವಿಲ್ಲದರ ಬಾಳು, ಮರುಳ್ಗಾಡೊಳು
> ಒಣಗಿದ ಮರವು ಕೊನರಿದಂತೆ.
>
> ಒಲವೇ ಜೀವನದ ನೆಲೆವೀಡು; ಅದಿಲ್ಲದಿಹ ದೇಹವದು
> ಎಲುಬಿಗೆ ತೊಗಲು ಹೊದಿಸಿದಂತಹುದು.

ಎಂದುದಾಗಿ ತಿರುವಳ್ಳುವರರು ಹೇಳಿದ್ದಾರೆ. ವೇಮನರ ಮಾತುಗಳಲ್ಲಿ ನೋಡುವುದಾದರೆ-

> ತಾಯಿ ತಂದೆ ತಮ್ಮ ತನಯ ಅಣ್ಣ ತಮ್ಮ
> ಸುಖದಿ ಬಂದು ಭೃತ್ಯ ಸಕಲ ಜನರು
> ಕಲೆತು ವರ್ಧಿಸಲ್ಕೆ ಘನತೆ ಇರುವುದಷ್ಟೇ ॥ವಿಶ್ವ॥
>
> ಪಿರಿಯರ ವಚನಗಳ ಪ್ರೀತಿಯಿಂದ ಕಂಡು
> ಅಂತೆ ನಡೆದುಕೊಳುವ; ಅನುವಿರದಿರೆ
> ಹುಲಿಯ ಕಂಡು ನರಿಯು ಗಂಧ ಬಳಿದ ರೀತಿ ॥ವಿಶ್ವ॥
>
> ಕಾಂತೆಯಲಿ ಪ್ರೇಮ, ಸ್ವಂತ ರಂಜನೆಯದು
> ಚಿಂತೆ ತೀರುತಿಹುದು ಸಿಗಲು ತರುಣಿ
> ಶಿವನೊಳಿರುವ ಭಕ್ತಿ ಚಿಂತೆಯೊಳಗೆ ಇರದು ॥ವಿಶ್ವ॥

ಬಾಯಿಯಲಿ ಪ್ರೀತಿಸುವವನ ಪೂಜೆ ದೋಷ
ಉರದಿ ಪ್ರೀತಿಸುವವನ ಊಹೆ ಲೇಸು
ನೆತ್ತಿಯಲಿ ಪ್ರೀತಿಸುವವನ ಭಕ್ತಿಗೆ ಫಲ ॥ವಿಶ್ವ॥

ಪರಸ್ಪರ ಆಕರ್ಷಣೆಯೇ ಪ್ರೀತಿಯಾಗಿದೆ. ಪ್ರೀತಿಯು ವ್ಯವಹಾರ ಸುಮಧುರವಾದುದು. ಪ್ರೀತಿಯು ಸಹೃದಯವನ್ನುಂಟು ಮಾಡುವುದು. ಸಹೃದಯತೆಯಿಂದ ಸ್ನೇಹ ವರ್ಧಿಸುತ್ತದೆ. ತಾಯಿ, ತಂದೆ, ಸತಿ, ಪತಿ, ಅಣ್ಣ, ತಮ್ಮಂದಿರರು ಪ್ರೀತಿಯಿಂದ ಬೆಳೆದರೆ ಬಾಳಿಗೊಂದು ಘನತೆ ಬರುತ್ತದೆ. ಗುರು–ಹಿರಿಯರ–ವಚನಗಳನ್ನು ಪ್ರೀತಿಯಿಂದ ಸ್ವೀಕರಿಸಿ ಆಚರಿಸುವುದು. ಬಂಧು ಮಿತ್ರರಲ್ಲಿ, ತಂದೆ–ತಾಯಿ–ಬಂಧು ಬಳಗದಲ್ಲಿ ಪ್ರೀತಿಯಿಂದ ಬಾಳುವುದು. ಪತಿ–ಪತ್ನಿಯರು ಪ್ರೀತಿಯಿಂದ ಬಾಳುವುದು, ಇದು ಸಂತೋಷದ ಮಧುರ ಕ್ಷಣ, ಪ್ರೀತಿಯೇ ಬಾಳಿಗೆ ಶೃಂಗಾರ, ಪ್ರೀತಿಯಿದ್ದಷ್ಟು ಪ್ರೀತಿ ಹೆಚ್ಚಾಗುತ್ತದೆ. ದೀಪಕ್ಕೆ ದೀಪ ಸೇರೆ ಬೆಳೆದಂತೆ. ಪ್ರೀತಿಯು ಬರೀ ಬಾಯಿಂದ ಬರಕೂಡದು; ಅದು ಮಾತಿನಾಚೆ ಹೃದಯವೇಧಕವಾಗಿರಬೇಕು. ಮನಸಾ ಪ್ರೀತಿ ಒಬ್ಬರಿಗೊಬ್ಬರಲ್ಲಿ ಬೆರೆಯಬೇಕೆಂದು ಇಬ್ಬರೂ ಮಹಾಯೋಗಿಗಳು ಹೇಳಿದ ಮೇಲಿನ ಮಾತುಗಳನ್ನು ಗಮನಿಸಿ ನಮ್ಮ ಮಧುರ ದಾಂಪತ್ಯ ಜೀವನಕ್ಕೆ ನಾಂದಿ ಹಾಡಿಕೊಳ್ಳಬೇಕು!

ಪತಿಯಾಗಲಿ, ಸತಿಯಾಗಲಿ, ಮಗನಾಗಲಿ, ಮಗಳಾಗಲಿ, ಯಾರೇ ಆದರೂ ಸರಿ ತನ್ನ ತಾನರಿತು ಸರಿಯಾದ ನೀತಿ ಮಾರ್ಗದಲಿ ನಡೆಯುವುದೇ ಬಾಳು ಬಂಗಾರವೆಂದಿದ್ದಾರೆ ಮಹಾತ್ಮರು!

ಆತ್ಮಶುದ್ಧಿಯಿರದ ಆಚಾರವದೇಕೆ?
ಮಡಿಕೆ ಶುದ್ಧಿಯಿರದ ಅಡುಗೆಯೇತಕೆ?
ಭಾವ ಶುದ್ಧಿಯಿರದ ದೇವ ಪೂಜೆಯೇಕೆ ॥ವಿಶ್ವ॥

ನಮ್ಮ ಹೃದಯವು ಹಸನುಗೊಳ್ಳದೆ, ಹೊರಗೆ ಆಚಾರ–ವ್ರತಗಳನ್ನು ಮಾಡಿದರೇನೂ ಫಲವಿಲ್ಲ. ಅದೆಂತೆಂದರೆ ಪಾತ್ರೆಯನ್ನು ಸ್ವಚ್ಛಗೊಳಿಸಲಾರದೇ ಅದರಲ್ಲಿ ಅಡಿಗೆ ಬೇಯಿಸಲು, ಅದು ರುಚಿಯಹುದೆ? ಮೇಲಾಗಿ ದೇವರ ನೈವೇದ್ಯಕ್ಕೆ ಸಮರ್ಪಿತವಾಗುವುದೆ? ಆದುದರಿಂದ ಯಾವುದೇ ಕಾರ್ಯ ಮಾಡಬೇಕಾದಾಗಲೂ ಪರಿಶುದ್ಧ ಮನಸ್ಸಿನಿಂದ ಮಾಡಿದಾಗ ಮಾತ್ರ ಅದು ರುಚಿಕಟ್ಟು ಮತ್ತು ದೇವರಿಗೆ ಅರ್ಪಿಸಲು ಸಾಧ್ಯವಾಗುತ್ತದೆ. ಭಾವಶುದ್ಧಿಯೇ ಬದುಕಿಗೆ ನೆಲೆಬೆಲೆ ಪೂರಕ ಮತ್ತು ನೀತಿಯೇ ಪ್ರಧಾನ.

ಗುರು–ಹಿರಿಯರಲ್ಲಿ, ಕುಟುಂಬ ಬಂಧು–ಬಳಗದವರಲ್ಲಿ ಸವಿ ಸವಿಯಾದ ಮಧುರ ಮಾತುಗಳೊಂದಿಗೆ ವರ್ತಿಸುವುದು ಸುಯೋಗ್ಯವಾದುದು. ಏಕೆಂದರೆ



ಇದರಿಂದ ಸಮಾಜ ಸುಧಾರಿಸಿ, ಸಮಾಜದ ಕಾರ್ಯಗಳೂ ಸುಗಮವಾಗಿ ಸಾಗುತ್ತವೆ. ಸಮಾಜದ ಬಾಳ್ಕೆಯಲ್ಲಿ ಉಪಕಾರ–ಪ್ರತ್ಯುಪಕಾರ ಸದಾಕಾಲವೂ ಮಾಡುತ್ತಲಿರಬೇಕು. ಒಳ್ಳೆಯ ಮಾತುಗಳಿಂದ ಒಳ್ಳೆಯ, ಸುಸಂಸ್ಕೃತ ಸಮಾಜವನ್ನು ಕಟ್ಟಲು ನೆರವಾಗುತ್ತದೆ. ಆದುದರಿಂದ ಸಜ್ಜನರ ಸಂಗವನು ಮಾಡಿ ಬದುಕು ರೂಪಿಸಿಕೊಳ್ಳುವುದು ಉಚಿತವೆಂದಿದ್ದಾರೆ ಮಹರ್ಷಿ–ಯೋಗಿಗಳವರು. ಸವಿ ನುಡಿಯಾಡುವುದು ಮನುಷ್ಯನ ಮತ್ತಿತರ ಮಹಾನುಭವರ ಆದ್ಯ ಕರ್ತವ್ಯವಾಗಬೇಕು. ಅವರ ಕೆಲವು ಪದಗಳನ್ನು ನೋಡಿದರೆ ನಮಗದರ ಅರಿವು ಆಗುತ್ತದೆ.

ಪರತತ್ತ್ವವರಿತವರ ನುಡಿಯೇ ಸವಿ ನುಡಿಯೆಂಬುದು
ಅದು ಪ್ರೀತಿ ಮತ್ತು ನಿರ್ವಂಚನೆಯಿಂದ ಕೂಡಿದುದು.

ತುಂಬು ಮನದಿಂದ ಕೊಡುವುದಕ್ಕಿಂತ ಲೇಸಹುದು
ನಗೆ ಮೊಗದಿ ಸವಿ ನುಡಿಯ ನುಡಿವುದು

ಮೊಗವರಳಿಸಿ ಹಿತದಿ ನೋಡಿ ಎದೆ ತುಂಬಿ
ಸವಿ ನುಡಿಯ ನುಡಿವುದೇ ಧರ್ಮ

ಬಡತನದ ಕೋಟಲೆಗೆ ಸಿಕ್ಕಿ ದುಃಖಿಸರು, ಎಲ್ಲರೆಡೆ
ಸುಖ ತರುವ ಸವಿ ನುಡಿಯ ನುಡಿವವರು

ಅನುನಯವೂ ಸವಿ ನುಡಿಯೂ ಒಬ್ಬನಿಗೆ
ಭೂಷಣವೆನಿಸುವುದು ಬಾಳಿದವುಗಳಿಗಲ್ಲ.

ಪಾಪಗಳು ಅಳಿದು ಧರ್ಮವು ವೃದ್ಧಿಸುವುದು
ಲೇಸನೆಳಸಿ ಸವಿ ನುಡಿಯನು ನುಡಿಯಲು

ಸುಖವಿತ್ತು ಸತ್ಫಲಗಳನು ತುಂದು ಕೊಡುವುದು
ಲೇಸುಳ್ಳ ಗುಣ ಪೂರ್ಣ ನುಡಿಯು

ಹೆರರ ನೋಯಿಸದ ಸವಿ ನುಡಿಯು, ಇಹದೊಳು
ಪರದೊಳೂ ಸುಖವನೀವುದು

ಸವಿ ನುಡಿಯು ಸಫಲವೀವುದೆಂಬುದನು ಅಹಿತವನು
ಕಹಿ ನುಡಿಯ ನುಡಿಯುವುದು ಅದೇತಕೋ?

ಸವಿ ನುಡಿಯಿರಲು ಕಹಿ ನುಡಿಯನಾಡುವುದು
ಫಲಿತ ಹಣ್ಣಿರಲು ಕಸುಗಾಯ ತಿಂದಂತೆ

ಸಮಾಜದಲ್ಲಿ ಬಾಳುವ ಪ್ರತಿಯೊಬ್ಬ ವ್ಯಕ್ತಿಯೂ ಸವಿನುಡಿ ಯನ್ನಾಡುವುದರಿಂದ ಉತ್ತಮ ಸುಸಂಸ್ಕೃತ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಇಲ್ಲಿ ಸಿರಿತನ ಬಡತನವೆಂಬುದು ವ್ಯತ್ಯಾಸ ಬರಲಾರದು. ತಾನು ಒಳ್ಳೆಯನಾದರೆ ನಾಡೆಲ್ಲವೂ, ಸಮಾಜವೂ ಒಳ್ಳೆಯದೆಂಬಂತೆ ಬಾಳುವುದು ಸುಖಕರ ಎನ್ನಲಾಗಿದೆ. ನಗುಮುಖದಿಂದ ಎಲ್ಲರೊಂದಿಗೆ ಸವಿ ಸವಿಯಾದ ಮಾತುಗಳನ್ನಾಡುತ್ತಾ ಸಮಾಜದ ಕಾರ್ಯಗಳನ್ನು ಮಾಡುತ್ತಲಿದ್ದರೆ ಸಮಾಜದ ಸಿರಿಯು ಹೆಚ್ಚುತ್ತದೆ. ಭೂಲೋಕವೇ ಸ್ವರ್ಗಧಾಮವಾಗುತ್ತದೆಯೆಂದುದಾಗಿ ಮೇಲಿನ ಪದಗಳಲ್ಲಿ ತಿರುವಳ್ಳುವರರು ಹೇಳಿದುದು ಕಂಡು ಬರುತ್ತದೆ. ಸವಿ ನುಡಿ ಆಡುವುದರಿಂದ ಪಾಪವು ಅಳಿದು– ಧರ್ಮ ವೃದ್ಧಿಯಾಗುವುದು. ಆ ಸದ್ಧರ್ಮದ ಹಾದಿಯೇ ನಮ್ಮ ಬಾಳಿಗೆ ದಾರಿದೀಪವಾಗುತ್ತದೆ. ಆದುದರಿಂದ ನಾವೆಲ್ಲರೂ ಸವಿ ಮಾತುಗಳನ್ನಾಗಿ ವ್ಯವಹಾರ ಧರ್ಮವನ್ನು ಸಾಗಿಸಲು ಮುಂದಾಗೋಣ!

ಮಹಾಯೋಗಿ ವೇಮನರು ಮಧುರ ಮಾತಿನ ಮರ್ಮವನ್ನು ಇಂತು ಹೇಳಿದ್ದಾರೆ.

ಕೋಗಿಲೆ ವನದಲ್ಲಿ ಕೂಽ ಕೂಽ ಹಾಡುವಂತೆ
ನುರಿತ ಜನರ ಭಾವ, ನಡೆಯು, ನುಡಿಯು
ಕಾಗೆ ಕೂಗಿನಂತೆ ಕಲುಷಾತ್ಮನ ವಚನ ||ವಿಶ್ವ||

ಭಾಷೆಯಾಡದಿರಲು ದೇಶ ಮೆಚ್ಚದಯ್ಯ
ಭಾಷೆಯಾಡುವಾಗ ಬೇಕು ಹೊಣೆಯು
ಭಾಷೆ ಹಿರಿಮೆಯರಿತು ಈಶನರಿಯಬೇಕು ||ವಿಶ್ವ||

ಮಾತು ಮುನ್ನ ಅರಿತು, ಮತ್ತೋರ್ವನ ನುಡಿಗೆ
ಪ್ರತಿ ನುಡಿಯೆ ಅಮಿತ ಸಂತಸಕರ
ಮನವರಿಯದೆ ಒಳಗೊಳಗೆ ತಳಮಳವೇಕೆ? ||ವಿಶ್ವ||

ತನ್ನ ಒಳಿತು ಕೋರಿ, ಧರ್ಮ ಕರ್ಮ ತಿಳಿಸೆ
ಮುನ್ನ ಜರಿದು ನುಡಿವ, ದುರಿತ ಖಳನು
ತಿನ್ನಲಿಡಲು ಗೂಳಿ, ಕೊಂಬು ತಿವಿವ ಪರಿಯು ||ವಿಶ್ವ||

ಘೋಂಗಿ ಮಾತನಾಡೆ ದೊರಕಬಹುದೇ ಮೋಕ್ಷ?
ಆಗು ಹೋಗದಂಥ ಕೂಗುಹೊಲ್ಲ
ಸದ್ಗುರುವಿನ ಚಿನ್ಹೆಯಲ್ಲ; ದುರ್ಗುಣಿಯದು ||ವಿಶ್ವ||



ಅಲ್ಪನಾಡುತಿಪ್ಪ ಆಡಂಬರದ ನುಡಿ
ಒಳ್ಳೆಯವನಾಡುವ ಮಧುರ ನುಡಿಯ
ಮೊಳಗುವುದೇ ಹೊನ್ನು, ಕಂಚು ಧ್ವನಿಸುವಂತೆ ||ವಿಶ್ವ||

ಮಾತು ಕೇಳಿ ಒಬ್ಬ ಹೌದು ಅಹುದು ಎನಲು
ಕೆಲವರು ಸಿದ್ಧ ಅಲ್ಲವೆನಲು ಕ್ಷಣದಿ
ದಾನಿ ನೀಡಬಹುದು ದಾತನೆನಿಸುವಂತೆ ||ವಿಶ್ವ||

ಮಾತೇ ಜ್ಯೋತಿರ್ಲಿಂಗವೆಂದು ಅಲ್ಲಮರು ಹೇಳಿದಂತೆ, ನುಡಿ ನಡೆ ಆಚಾರ ವಿಚಾರಗಳು ಒಂದೇ ತೆರನಾಗಿರಬೇಕು. ಮಾತಿನಿಂದಲೇ ಜಗವು, ಮಾತಿನಿಂದಲೇ ಹಗೆಯು, ಮಾತಿನಿಂದಲೇ ಸರ್ವ ಸಂಪದವು, ಮಾತೇ ಮಾಣಿಕ್ಯವು ಎಂದಂತೆ! ನಮ್ಮ ನುಡಿ ಮುತ್ತಿನ ಹಾರದಂತೆ, ಸ್ಪಟಿಕದ ಸಲಾಕೆಯಂತೆ ಸ್ವಚ್ಛ ಮತ್ತು ನಿರ್ಮಲ ಮನಸ್ಸಿನಿಂದ ಕೂಡಿರಬೇಕು ಎಂದಿದ್ದಾರೆ. ಹಾಗೆಯೇ ವೇಮನ ಯೋಗಿಯೂ ಮಾತು ಮನಸ್ಸಿನ ಅಭಿವ್ಯಕ್ತಿ; ಮಾತು ಸಂಸ್ಕೃತಿಯ ಬೇರು, ಸೂಚಕ, ಮಾತಿನಿಂದಲೇ ಏನೆಲ್ಲ ಕಾರ್ಯಗಳು ಲಭಿಸುತ್ತವೆ.ಮಾತು ಮಧುರವದ ಕೋಗಿಲೆಯ ದನಿಯಂತಿರಬೇಕು. ಕಾಗೆಯ ಕುರ್ಕಶ ದನಿಯಂತಲ್ಲ. ಮಾತುನಾಡಿದರೆ ಲೋಕ ಮೆಚ್ಚುವಂತಿರಬೇಕು. ಮಾತು ಬಲ್ಲವ ಮಾಣಿಕ್ಯ ತಂದ ಎಂಬಂತಿರಬೇಕು. ಬೇರೆಯವರು ಮಾತನಾಡುವಾಗ ಏಕಮನಸ್ಸಿನಿಂದ ಆಲಿಸಿ ಉತ್ತರವೀಯಬೇಕು. ಆಗ ಇನ್ನೊಬ್ಬರಿಗೂ ಒಳಿತು, ಇದುವೇ ಮಧುರ ಸಂಬಂಧವಾಗುತ್ತದೆ. ಆದರೆ ಅದೆಷ್ಟೋ ಜನರು ತಮ್ಮ ಒಳಿತು ಕೋರಿ ಹೇಳಿದ ಮಾತಿನಿಂದ ರೇಗಿ ಪ್ರತಿಕ್ರಿಯಿಸುತ್ತಾರೆ. ತಿನ್ನಲಿಕ್ಕೆ ಮೇವು ಹಾಕಿದರೆ ಗೂಳಿ ಕೊಂಬಿನಿಂದ ತಿವಿಯುವಂತೆ ಇವರ ರೀತಿ ಎಂದು ವೇಮನರು ಹೋಲಿಕೆ ಕೊಟ್ಟಿದ್ದಾರೆ. ಒಳ್ಳೆಯವರ ನುಡಿ ಬಂಗಾರ ಮೊಳಗಿದಂತೆ. ಅವರದು ಸದ್ದು ಕಡಮೆ. ಬೆಲ್ಲದಂತಹ ಮಾತುಗಳಿಂದ ಮಾತು ಫಲಿಸುತ್ತದೆ. ಆದರೆ, ಅಲ್ಪ ಜನರ ಮಾತು ಕಂಚು ಮೊಳಗಿದಂತೆ, ಸದ್ದು ಜೋರಷ್ಟೇ, ಅದು ಫಲ ನೀಡಲಾರದು. ಲೋಕಮೆಚ್ಚುವಂತೆ ಮಾತನಾಡುವುದೇ ವಿಹಿತ ಮಾರ್ಗ ಎಂದುದಾಗಿ ವೇಮನರು ಹೇಳಿದ್ದು ನಮ್ಮ ಬದುಕಿಗೆ ಪೂರಕವಾಗಿದೆ.

ಇವರಿಬ್ಬರೂ ಮಹಾತ್ಮರು ಹೇಳಿರುವ ಮಾತುಗಳನ್ನು ಗಮನಿಸುವುದಾದರೆ ಮಾತು, (ನಡೆ) ನುಡಿಗಿರುವ ಬೆಲೆ ಮತ್ತಾವ ಪದಾರ್ಥ, ವಸ್ತುವಿಗೂ ಇರಲಾರದು. ಮಾತು ಹಿತಮಿತವಾಗಿರಬೇಕು, ತೂಕಬದ್ಧವಾಗಿರಬೇಕು. ಯಾರ ಮನಸ್ಸಿಗೂ ನೋವಾಗದಂತಿರಬೇಕು. ಅಂದಾಗ ಆಡಿದ ಮಾತಿಗೆ ಬೆಲೆ ಬರುತ್ತದೆ. ನುಡಿ– ನಡೆಗಳೊಂದಾಗಿದ್ದುಕೊಂಡು ಮಾತನಾಡಿದರೆ ಸಾಕ್ಷಾತ್ ಪರಮಾತ್ಮನೇ ಒಲಿಯುತ್ತೇನೆ.

ಮಾತು-ಕೃತಿಗಳೆರಡೂ ಒಂದಾಗಿರಬೇಕು. ನುಡಿದಂತೆ ನಮ್ಮ ನಡತೆಯಿರಬೇಕು. ಮತ್ತೊಬ್ಬರ ಹೃದಯವನ್ನು ಮುಟ್ಟುವಂತಿರಬೇಕು. ಅರ್ಥವಿಲ್ಲದ ಮಾತು, ಅರ್ತಿಯಿಲ್ಲದ ಭಕ್ತಿ ವ್ಯರ್ಥ ಎಂದಿದ್ದಾರೆ ಮಹಾತ್ಮರು. ಮಾತೇ ಮುತ್ತು-ಮಾತೇ ಮೃತ್ಯು ಎಂಬ ಮಾತುಂಟು! ರಸಿಕನಾಡಿದ ಮಾತು ಶಶಿಯುದಿಸಿ ಬಂದಂತಿರಬೇಕು. ನಯ-ವಿನಯ-ನಾಜೂಕಾಗಿರಬೇಕು. ಹಿತಮಿತ ಸಂದರ್ಭೋಚಿತವಾದ ಮಾತುಗಳು ಮತ್ತೊಬ್ಬರಿಗೆ ನೋವನ್ನುಂಟು ಮಾಡುವಂತೆ ಇರಬಾರದು. ಮಾತುಗಳು ಎಂಥ ಕಠಿಣ ಹೃದಯಿಯ ಕದವನ್ನು ತೆರೆಯಿಸಿ, ಆತನನ್ನು ಆನಂದ ಸಾಗರದಲ್ಲಿ ತೇಲಾಡಿಸುವಂತಿರಬೇಕು. ಮತ್ತೊಬ್ಬರ ಇಚ್ಛೆಯನ್ನರಿತು ಮಾತನಾಡಿದರೆ ಪಕ್ವವಾದ ಹಣ್ಣಿನಂತೆ ರುಚಿಯಾಗಿರುತ್ತದೆ. ಮತ್ತೊಬ್ಬರ ಮನವನ್ನರಿತು ಮಾತನಾಡುವುದು. ಸವಿ-ಸವಿಯಾದ ಮಾತುಗಳು ಸುಮಧುರ ವಾತಾವರಣವನ್ನುಂಟು ಮಾಡಬಲ್ಲವು ಎಂದು ಇಬ್ಬರೂ ಪ್ರತಿಪಾದಿಸಿದಂತಹ ಬಗೆಯಿದೆ. ಮಾತಿನಿಂದಲೂ ಸದ್ಗತಿ ಪ್ರಾಪ್ತವಾಗುವುದೆಂದಿದ್ದಾರೆ.

**ಉಪಕಾರ ಸ್ಮರಣೆ :**

**"ಪರೋಪಕಾರ್ಥಾಯಮಿದಂ ಶರೀರಂ"** ಎಂಬೋಕ್ತಿಯಂತೆ, ಮನುಷ್ಯನಾಗಿ ಹುಟ್ಟಿ ಬಂದ ಮೇಲೆ ಪರರಿಗೆ ಉಪಕಾರ ಮಾಡುವ ಗುಣ ಹೊಂದಿರಬೇಕು. "ಅಳಿಯುವದು ಕಾಯ-ಉಳಿಯುವುದು ಕಾರ್ಯ" ಎಂಬಂತೆ ಇರುವ ಅವಧಿಯಲ್ಲಿಯೇ ಸತ್ಕಾರ್ಯಗಳನ್ನು ಮಾಡುತ್ತ ಪರೋಪಕಾರಿಯಾಗಿ ಬದುಕುವುದೇ ಸಾರ್ಥಕವಾದ ಬದುಕು ಎನ್ನಲಾಗಿದೆ. ಯಾರು ತನಗಾಗಿ, ತನ್ನವರಿಗಾಗಿ, ಇತರರಿಗಾಗಿ ಎಂಬ ಸ್ವಾರ್ಥ ಮನೋಭಾವದಿಂದ ಬದುಕುತ್ತಾರೆಯೋ ಅಂಥವರಿಂದ ಇತಿಹಾಸ ನಿರ್ಮಿಸಲು ಸಾಧ್ಯವಿಲ್ಲ. ಅವರಿಗೆ ಪರರ ಬಗೆಗೆ ಅರ್ಥವೂ ಆಗುವುದಿಲ್ಲ. ಆದರೆ ಯಾರು ನಿಸ್ವಾರ್ಥವಾಗಿ ತಮ್ಮನ್ನು ತಾವು ಸಮಾಜಕ್ಕೆ, ದೇಶಕ್ಕೆ ಸಮರ್ಪಿಸಿಕೊಂಡು ತ್ಯಾಗ ಜೀವನ ನಡೆಸಿ ಉಪಕಾರ ಮಾಡುತ್ತಾರೋ ಅವರು ಇತಿಹಾಸ ಪರುಷುರಾಗುತ್ತಾರೆ. ಉದಾಹರಣೆಗಾಗಿ ಬುದ್ಧ, ಮಹಾವೀರ, ಬಸವಣ್ಣ, ಗುರುನಾನಕ, ಶರೀಫರು, ಸ್ವಾಮಿವಿವೇಕಾನಂದ, ಪರಮಹಂಸರು ಮುಂತಾದವರನ್ನು ಹೆಸರಿಸಬಹುದು. ಅಂತಹ ಮಹಾತ್ಮರ ಸಾಲಿನಲ್ಲಿರುವ ಮಹರ್ಷಿ ತಿರುವಳ್ಳುವರರು ಮತ್ತು ಮಹಾಯೋಗಿ ವೇಮನರು ಹೇಳಿರುವ ಪರೋಪಕಾರದ ಮಾತುಗಳನ್ನು ಅವರ ಪದಗಳಲ್ಲೂ ಹೇಳಿದ್ದಾರೆ ತಿರುವಳ್ಳುವರರು.

ಪ್ರತಿಫಲಾಕ್ಷೆಯಿಲ್ಲದೆ ಉಪಕಾರವ ಮಾಡಿದವನೆ
ಭೂಸ್ವರ್ಗವನಿತ್ತರೂ ಸಮವಾಗದು



ಸಕಾಲದಲ್ಲಿ ಮಾಡಿದುಪಕಾರವು ಅಲ್ಪವಾದರೂ
ಅದು ಭೂಲೋಕಕ್ಕಿಂತ ಅತಿ ಹಿರಿದು

ಪ್ರತಿಫಲವ ಗಣಿಸದೆ ಮಾಡಿದುಪಕಾರದ ಹಿರಿಮೆಯನು
ಅಳೆದರದು ಜಲಧಿಗಿಂತ ಹಿರಿದು

ನವಣೆಯನಿತು ನೆರವನಿತ್ತರೂ ತಾಳೆಯಮರದನಿತು
ಭಾವಿಪರು ಅದರ ಫಲವನರಿತವರು

ಉಪಕಾರವನು ಪ್ರತಿ ಉಪಕಾರದಿಂದ ಅಳೆಯಲಾಗದು
ಅದು ಉಪಕಾರವನು ಪಡೆದವನ ಯೋಗ್ಯತೆಯಷ್ಟಿಹುದು.

ಮರೆಯದಿರು ಕುಂದಿಲ್ಲದರ ಮೈತ್ರಿಯನು, ತೊರೆಯದಿರು
ಸಂಕಟದಿ ನೆರವಿತ್ತವರ ನೇಹವನು

ಕೃತಜ್ಞರು ಏಳೇಳು ಜನ್ಮಗಳಲೂ ನೆನೆವರು ತಮ್ಮ
ಕಷ್ಟವನು ಕಳೆದವರ ಕೆಳೆತನವ

ಉಪಕಾರವ ಮರೆವುದು ಲೇಸಲ್ಲ; ಅಪಕಾರವ
ಅಂದೇ ಮರೆವುದು ಲೇಸು

ಕೊಲುವಂಥ ಕೆಡುಕನೆಸಗಿದರೂ ಅವರು ಮಾಡಿದ
ನೆರವನೊಂದನು ನೆನೆಯೆ ಮರೆವುದನದು

ಯಾವ ಧರ್ಮವನು ಮರೆತವನೂ ಉಳಿವುಂಟು,
ಉಳಿವಿಲ್ಲ ಮಾಡಿದುಪಕಾರವ ಮರೆತವಗೆ.

ಉಪಕಾರ ಮಾಡಿದವರನ್ನು ನೆನೆಯುವುದು ಪಡೆದವನ ಕರ್ತವ್ಯವಾಗಿದೆ. ಆದರೆ, ಉಪಕಾರ ಮಾಡಿದವನ ಎದೆಯಲ್ಲಿ ಪ್ರತಿಫಲದ ಅಪೇಕ್ಷೆಯಿರಬಾರದು. ಸಕಾಲದಲ್ಲಿ ಮಾಡಿದ ಉಪಕಾರವು ಅದು ಅಲ್ಪ ಸ್ವಲ್ಪವಾದರೂ ಅದು ಭೂಲೋಕಕ್ಕಿಂತ ಅತಿ ಹಿರಿಮೆಯ ಸ್ಥಾನವನ್ನು ಹೊಂದಿರುವಂಥದು. ಹದವರಿತು, ಹವನರಿತು ನವಣೆಯಷ್ಟಾದರೂ ಉಪಕಾರ ಮಾಡುವುದೊಳಿತು. ಆದರೆ ಮಾಡಿದ ಉಪಕಾರವನ್ನು ಯಾವುದರಿಂದಲೂ ಅಳೆಯಲಾರದು. ಉಪಕಾರ ಪಡೆದವರು ಪ್ರತ್ಯುಪಕಾರವನ್ನು ಮಾಡಿಯಾದರೂ ಸ್ಮರಿಸುವದು ಒಳಿತು. ಅದೆಷ್ಟು ಜನ್ಮ ತಳೆದು ಬಂದರೂ ಉಪಕಾರ ಮಾಡಿದವರನ್ನು ಸ್ಮರಿಸುವುದು ಉತ್ತಮ ಗುಣವುಳ್ಳವರೆನಿಸಿಕೊಳ್ಳುತ್ತಾರೆ. ಉಪಕಾರವನ್ನು ಮರೆಯಲಸಾಧ್ಯ; ಆದರೆ ಅಪಕಾರವನ್ನು ಅಂದೇ ಮರೆಯುವುದು

ಲೇಸೆಂದು ತಿಳಿದವರು ಹೇಳಿದ್ದಾರೆ. ಇದು ತಿರುವಳ್ಳುವರರು ಹೇಳಿದ ಮಾತಾಗಿದೆ. ಮಹಾಯೋಗಿ ವೇಮನರು ಹೇಳುತ್ತಾರೆ–

ಮರೆವೆಯೆಂದು ತಿಳಿದು, ಮನದಿ ಸುಜನರೆಲ್ಲ
ಯಾರೋ ಗೆಯ್ದ ಮೇಲ್ಮೆ ಎಂಥದಿರಲಿ?
ಮರಳಿ ಮೇಲ್ಮೆ ಬಗೆದು, ಮರ್ಯಾದೆ ಕಾಣುವರು ||ವಿಶ್ವ||

ಸುಗುಣವಂತನಿಗಿನಿತು ಉಗುರಿನಷ್ಟು ಒಳಿತು
ಬಗೆಯೆ ಬೆಟ್ಟದಷ್ಟು; ಅವನ ಗುಣದಿ
ನಗದಳತೆಯ ಮಾಡೆ ಗುಣಹೀನನರಿವನೆ? ||ವಿಶ್ವ||

ಮರೆಯಬೇಕು ಪಾಪ ಸಂಗತಿ,
ಮರೆಯಬೇಕು ಯುದ್ಧವ ಮತ್ತೀ ಜಗದೋಳ್
ಮರೆಯಬೇಕು ಪರರ ದೋಷವ;
ಮರೆಯಬೇಡ ಪರರ ಮೇಲ್ಮೆಯ ಮಹಿಯಲಿ ವೇಮ

ತನಗೆ ನೇಯ್ದ ಮೇಲು, ತಾನು ಅರಿಯೆ ಕಲಿತು,
ಹರುಷದಿಂದ ಸೊಣಗ ಅರಿವುದಿಳೆಯ
ತನಗೆ ಗೆಯ್ದ ಮೇಲು ತಾ ತಿಳಿಯದಿದ್ದರೆ
ಮನುಜನಂಥ ಖಳನು ಮಹಿಲಿ, ವೇಮಾ!

ತನಗಿತ್ತ ಪರರಿಗಿತ್ತುದೊಂದೆ;
ಕಾಣದನುಭವಿಸದಿರೆ, ಕಡು ಚೋದ್ಯವು?
ತನ್ನ ಸತಿಯ ಮಾರಿ ದಾಸಿ ರಕಿಪ ರೀತಿ ||ವಿಶ್ವ||

ಉಪಕಾರವೇ ಜೀವನವಾಗಬೇಕು. ಪರರಿಗೆ ಪ್ರಸಂಗಕ್ಕನುಗುಣವಾಗಿ ಸಹಾಯ–ಸಹಕಾರ ಸಲ್ಲಿಸುವುದೊಳಿತು. ಹಾಗೆಯೇ ತನಗೆ ಒಬ್ಬನು ಮಾಡಿದ ಒಳಿತನ್ನು, ಉಪಕಾರವನ್ನು ಸ್ಮರಿಸುವುದು ಸಜ್ಜನಿಕೆಯ ಲಕ್ಷಣ. ಉಪಕಾರ ಸ್ಮರಣೆಯಿಂದ ಸದ್ಭಾವವು ಕುದುರುತ್ತದೆ. ಹಾಗೆಯೇ ಪರಸ್ಪರರಲ್ಲಿ ಪ್ರೀತ್ಯಾದರಗಳು ವೃದ್ಧಿಸುತ್ತವೆ. ಒಳಿತು ಮಾಡಿದವರನ್ನು ನೆನೆಯುವುದು ಮಾಡಿಸಿಕೊಂಡವರ ಧರ್ಮ. ಇದರಿಂದ ಸಜ್ಜನತ್ವ ಹೆಚ್ಚಿಸುತ್ತದೆ. ಅದರಲ್ಲೂ ಸಜ್ಜನನಿಗೆ ಉಗುರಿನಷ್ಟು, ಎಳ್ಳ ಕಾಳಿನಷ್ಟು ಉಪಕಾರ ಮಾಡಿದರೂ ಸಹ ಅವನು ಅದನ್ನೇ ಗುಡ್ಡದಷ್ಟು ಎಂದು ನೆನೆಪಿಸಿಕೊಂಡು ವಿನಯಶೀಲನಾಗುತ್ತಾನೆ. ಇದರಿಂದ ಸಜ್ಜನರ ಬಳಗವು ಹೆಚ್ಚುತ್ತದೆ. ದೇವರು



ನಮಗೆ ಅರಿವು ನೀಡಿದಂತೆ ಮರೆವನ್ನು ವರವಾಗಿ ನೀಡಿದ್ದಾನೆ. ಅರಿತರೆ ಶರಣ ಮರೆತರೆ ಮಾನವ ಎಂದಿದ್ದಾರೆ ಶರಣರು. ಆದುದರಿಂದ ನಾವು ಪಾಪ ಸಂಗತಿಗಳನ್ನು ಮರೆಯಬೇಕು. ಅನ್ಯರು ಮಾಡಿರುವ ಆತಂಕ–ದೋಷಗಳನ್ನು ಮರೆಯಬೇಕು. ಆದರೆ, ಬೇರೆಯವರು ಮಾಡಿದ ಮೇಲ್ಮೆಯನ್ನು ಅಂದರೆ ಉಪಕಾರವನ್ನು ಮರೆಯಲಾರದೇ ಸದಾವಕಾಲವೂ ಸ್ಮರಿಸುತ್ತಿರಬೇಕು. ಇದು ವೇಮನರ ಹಿತನುಡಿಯಾಗಿದೆ.

ಇವರಿಬ್ಬರು ಮಹಾತ್ಮರ ಹಿತ ವಚನಗಳನ್ನು ಸಮೀಕರಿಸಿ ಹೇಳುವುದಾದರೆ ಉಪಕಾರ ಮಾಡುವುದೇ ಮಾನವನ ಧರ್ಮದ ತಿರುಳಾಗಿದೆ. ನಾವು ಇತರರಿಂದ ಪ್ರತ್ಯುಪಕಾರವನ್ನು ಬಯಸದೇ, ಅಗತ್ಯವಿರುವವರಿಗೆ ಮನಃ ಪೂರ್ವಕವಾಗಿ ಸಹಾಯ ಸಲ್ಲಿಸುವುದು ಪುಣ್ಯದ ಕಾರ್ಯ. ಹಾಗೆಯೇ ಇನ್ನೊಬ್ಬರು ನಮಗೆ ತೊಂದರೆಯನ್ನು ಕೊಟ್ಟರೆ, ನಾವೂ ಅವರಿಗೆ ತೊಂದರೆಯನ್ನು ಕೊಡುವುದು ಪಾಪದ ಕೆಲಸವೇ ಸರಿ! ಉಸಿರು ಇರುವತನಕ ಹೆಸರು ಉಳಿಯಬೇಕಾದರೆ ಪರರಿಗೆ ಉಪಕಾರ ಮಾಡಬೇಕು. ಅದನ್ನೇ ನಿಜಗುಣ ಶಿವಯೋಗಿಗಳು "ಪುಣ್ಯವನೇ ಮಾಡು, ಹರನಡಿವಿಡಿ, ಶಾಂತರೊಡನಾಡು" ಅಂದಾಗ ನಿನ್ನ ಬದುಕು ಸಾರ್ಥಕವಾಗುತ್ತದೆ ಎಂದಿದ್ದಾರೆ. ಆದುದರಿಂದ ಅರಿವಿನ ಜನ್ಮವಿರುವತನಕ ಸತ್ಕಾರ್ಯದಲ್ಲಿ ಭಾಗಿಯಾಗಿ, ಉಪಕಾರಿಯಾಗಿದ್ದುಕೊಂಡು ಬದುಕು ಸಾಗಿಸುವುದೇ ಸಾರ್ಥಕದ ಬದುಕಾಗಿದೆಯೆಂದು ಇಬ್ಬರೂ ಹಿತೋಪದೇಶ ನೀಡಿದ್ದಾರೆ. ಪರರಿಗೆ ಉಪಕಾರ ಮಾಡುವುದೆಂದರೆ ಸಮಾಜಕ್ಕೆ ಉಪಕಾರ ಮಾಡಿದಂತೆಯೇ ಎಂಬುದಾಗಿ ಇಬ್ಬರೂ ಮಹಾತ್ಮರು ಹೇಳಿದ್ದು ಹೀಗಿದೆ.

ಪ್ರತ್ಯುಪಕಾರ ಬೇಕಿಲ್ಲ ಕರ್ತವ್ಯಕೆ; ಮಳೆಗರೆವ ಮೋಡಕೆ
ಯಾವ ಪ್ರತಿಫಲವನೀವುದು ಈ ಜಗವು?

ಶ್ರಮಿಸಿ ತರುವ ಸಿರಿಯನೆಲ್ಲವ ಯೋಗ್ಯರಿಗೆ ಕೊಟ್ಟು
ಉಪಕರಿಪ ಉದ್ದೇಶಕೆಂದು ತಿಳಿವುದು

ದೇವಲೋಕದೊಳಗೂ ಭೂಲೋಕದೊಳೂ ಕಾಣಲರಿದು
ಉಪಕಾರದಂಥ ಉನ್ನತ ಕಾರ್ಯವನು

ಉಪಕರಿಪ ಪ್ರಜ್ಞೆಯುಳ್ಳವನೇ ಜೀವದಿಂದಿರುವವನು
ಉಳಿದವರೆಲ್ಲಾ ಸತ್ತವರೆಂದು ಎಣಿಸಲ್ಪಡುವರು.

ಊರ ಕೆರೆಯೊಳು ನೀರುನೆರೆದಂತೆ, ಲೋಕಕೀವ
ಮಹಾಪ್ರಾಜ್ಞನ ಐಸಿರಿಯು,

ಊರ ನಡುವಿನ ಮರವು ಫಲ ಬಿಟ್ಟಂತೆ
ಉದಾರಿಯೊಳು ಸಿರಿಯು ಸೇರಿರಲು

ರೋಗವನು ನಿವಾರಿಸುವ ಔಷಧಿಯ ಮರದಂತೆ
ಸಹೃದಯನಲಿ ಸಿರಿಯು ಸೆರಿರಲು

ಸಿರಿಬರದ ಕಾಲದೊಳೂ ಉಪಕರಿಸಲಂಜರು
ಕರ್ತವ್ಯ ಪ್ರಜ್ಞೆಯುಳ್ಳ ಕರುಣಾಳುಗಳು

ಕೊಡುಗೈಯವನು ಬಡವನಾದರೆ ತಾ ಮಾಡುವ
ಉಪಕಾರವ ಮಾಡಲಾಗದುದಕೆ ಮರುಗುವನು

ಉಪಕಾರದಿಂದ ಕೇಡುಂಟೆಂದರೂ, ತನ್ನನೇ ಮಾರಿ
ಅದನು ಕೊಳುವುದು ತಕ್ಕುದೆನಿಸುವುದು

ಸಮಾಜದ ಒಂದು ಘಟಕ ಅಥವಾ ಅಂಗವಾದ ಮನುಷ್ಯ ಸಮಾಜದ ಋಣವನ್ನು ತೀರಿಸಲೇಬೇಕಾದುದು ಅವನ ಕರ್ತವ್ಯದ ಭಾಗವೂ ಹೌದು. ಆದರೆ ಮಾಡಿರುವ ಉಪಕಾರಕ್ಕೆ ಪ್ರತಿಫಲಾಕ್ಷೆ ಮಾಡಬಾರದೆಂದಿದ್ದಾರೆ. ಶ್ರಮಪಟ್ಟು ದುಡಿದು, ಅದರಿಂದ ಬಂದ ಧನ–ದ್ರವ್ಯ–ದವಸ ಧಾನ್ಯಗಳನ್ನು ಸಮಾಜಕ್ಕೆ ಧಾರೆಯೆರೆಯುವುದು, ದಾಸೋಹಗೈಯ್ಯುವುದು ಸಾರ್ಥಕ ಬದುಕಾಗಿದೆಯೆಂದಿದ್ದಾರೆ ಸಂತ ಶರಣರು. ಆ ಪದ್ಧತಿ ಈಗಲೂ ನಡೆದಿದೆ. ಇದು ಒಳ್ಳೆಯ ಬೆಳವಣಿಗೆ, "ಕೆರೆಯ ನೀರನು ಕೆರೆಗೆ ಚಲ್ಲಿ ವರವ ಪಡೆ" ಎಂಬಂತಿದೆ. ಉಪಕಾರ ಮಾಡುವವನು ಭೂಲೋಕದಲ್ಲಿದ್ದರೂ ದೇವಲೋಕದಲ್ಲಿದ್ದಂತೆಯೇ ಭಾಸವಾಗುವುದು. ಉಪಕಾರ ಮಾಡುವುದೆಂದರೆ ಫಲ ಬಿಟ್ಟ ಮರದಂತೆ, ರೋಗ ನಿವಾರಿಸುವ ಔಷಧದ ಮರದಂತೆಯೆನ್ನಲಾಗಿದೆ. ಸಿರಿಯಿದ್ದ ಕಾಲಕ್ಕೆ, ಕರೆದು ದಾನವ ಮಾಡುವುದು, ಸಿರಿಯಿರದಿದ್ದರೂ ಇದ್ದುದರಲ್ಲಿಯೇ ದಾನ ಮಾಡಿ ಕೃತಾರ್ಥರಾಗುವುದು, ಕೊಡುಗೈಯವೇನು ಬಡವನಾದರೆ ತಾನು ಮಾಡುವ ಉಪಕಾರವ ಮಾಡಲಾರದುದಕ್ಕೆ ಮರುಗುವನು. ಸಮಾಜದ ಋಣ ತೀರಿಸುವುದೇ ಉಪಕಾರದ ಕಾರ್ಯವಾಗಿದೆ.

ವೇಮನರು ಹೇಳಿರುವಂತೆ ದಾನ ಮಾಡುವುದೇ ಉಪಕಾರವೆಂದಿರುವರು. ಸತ್ಪಾತ್ರರಿಗೆ, ಸಮಾಜಕ್ಕೆ ದಾನ ಮಾಡಿ ಉಪಕರಿಸುವುದನ್ನು ಹೀಗೆ ಹೇಳಿದ್ದಾರೆ.

ಉಳ್ಳ ಮನುಜ ತಾನು ಉಪಕಾರಿಯಿರದಿರೆ
ಕಣ್ಣು ಕಾಣದೆ ಮದ ತುಂಬಿದ ಜಡ
ದೀನನಿರಲು ತನಗೆ ದಿಕ್ಕು ತೋರ್ಪರಾರು ॥ವಿಶ್ವ॥



ಧನವ ನೀಡದಿರುವ ಕರ್ಮಜೀವಿಗಳಿಗೆ
ತಿರಿಪೆ ಕೂಡ ಸಿಗದು, ದೀನ ಜನರೇ
ತಿಳಿದು ಕಂಡುಕೊಳಿರಿ ದೃಷ್ಟಾಂತವಿದು ನಿಮಗೆ ॥ವಿಶ್ವ॥

ಎಂಥ ಕ್ಷಮವಿರಲಿ, ಎಂಜಲಿಕ್ಕಬೇಡ
ಪರರಿಗಿಕ್ಕು, ಧರ್ಮ ಪರರ ನೋಡಿ;
ಭೂಮಿ ಮೇಲೆಂಜಲು ಪತ್ರೋಳಿ ತೆರಕೆಡುವ ॥ವಿಶ್ವ॥

ಪರರಿಗುಪಕರಿಸಲು ಪಾಪ ಕ್ಷಯವಹುದು;
ಪರರಿಗುಪಕರಿಸಲು ನೆರವು ಆಯ್ತು;
ಪರರಿಗುಪಕರಿಸಲು ಪರಲೋಕ ಸಾಧನ
ಪರರಿಗುಪಕರಿಸಲು ಒಲವು ವೇಮ.

ಉಳ್ಳ ಮನುಷ್ಯನು ಇಲ್ಲದವರಿಗೆ ಸಹಾಯ ಮಾಡುವುದೆಂದರೆ ಸಮಾಜಕ್ಕೆ ಸಹಾಯ–ಸಹಕಾರ ಮಾಡಿದಂತೆಯೇ! ಧನ–ಕನಕ–ದ್ರವ್ಯ ಗಳಿಕೆಯಿಂದೇನು ಪ್ರಯೋಜನ? ಅದನ್ನು ಕೂಡಿಡದೇ ಸಮಾಜಕ್ಕೆ ಧಾರೆ ಎರೆಯಬೇಕೆಂದಿದ್ದಾರೆ. ಆದರೆ, ತಾನುಂಡು ಉಳಿದ ಎಂಜಲನ್ನವನ್ನು ದಾನ ಮಾಡುವವನು ಕಡು ಮೂರ್ಖನೆನಿಸಿಕೊಳ್ಳುತ್ತಾನೆ ಎಂಬ ಎಚ್ಚರಿಕೆಯನ್ನು ತಮ್ಮ ಪದಗಳಲ್ಲಿ ಕೊಟಿದ್ದಾರೆ. ಪರರಿಗೆ ಸಮಾಜಕ್ಕೆ ಸಹಾಯ ಸಲ್ಲಿಸುವುದೆಂದರೆ ದೇವರಿಗೆ ಸಲ್ಲಿಸಿದಂತಾಗುತ್ತದೆ ಎಂಬ ಇಬ್ಬರೂ ಮಹಾತ್ಮರಲ್ಲಿ ಎದ್ದು ಕಾಣುವ ವಸ್ತು–ವಿಷಯವಾಗಿದೆ. ಅದರ ಪಾಲನೆ ಮನುಜ ಕುಲಕೆ ಬಿಟ್ಟುಕೊಟ್ಟದ್ದಾಗಿದೆ. ಹೀಗೆ ಸಮಾಜದ ಹಿತ ಕಾಪಾಡಿಕೊಂಡು ಹೋಗುವಲ್ಲಿ ಮನುಷ್ಯರ ಪಾತ್ರ ಮುಖ್ಯವಾಗಿದೆ ಎಂಬುದರ ತಿಳುವಳಿಕೆಯನ್ನು ಇಬ್ಬರೂ ತಮ್ಮ ತಮ್ಮ ಪದಗಳಲ್ಲಿ ಬಣ್ಣಿಸಿದ್ದುದು ಕಂಡುಬರುತ್ತದೆ.

**ಸಮದರ್ಶಿತ್ವದ ಗುಣ : ಧರ್ಮ ಭಾಗದಲ್ಲಿರುವ ಮುಖ್ಯ ಅಂಶವಿದಾಗಿದೆ**

ಕುಟುಂಬದ ಬಾಳ್ವೆಯಲ್ಲಿ, ಸಮಾಜದ ಸಹವಾಸದಲ್ಲಿರುವವರು ಮನುಷ್ಯರೇ ಹೊರತು ಪ್ರಾಣಿಗಳಲ್ಲ. ಅಂದ ಮೇಲೆ ಎಲ್ಲರನ್ನೂ ಒಂದೇ ರೀತಿ ಕಾಣುವುದೇ ಸಮದರ್ಶಿಯ ಗುಣವಾಗಿದೆ. ಎಲ್ಲರೂ ನಮ್ಮವರೆನ್ನುವ ಭಾವದಿಂದ ನಡೆಯುವುದು, ಇವನಾರು? ಇವನಾರು? ಎಂದೆನ್ನದೇ ಇವರು ನಮ್ಮವರು ಎಂಬುದು ಭಾವವದಲ್ಲಿ ಎಲ್ಲರೂ ಹತ್ತಿರದವರಾಗುತ್ತಾರೆ. ಸಮಾಜಮುಖಿಯಾಗಿ ಪ್ರತಿಯೊಬ್ಬರೂ ತರತಮ, ಭಾವನೆ ತಾಳದೆಯೇ ಸರ್ವರೂ ಸಮಾನತೆಯಿಂದ ನಡೆಯುವುದೇ

ಸಮದರ್ಶಿತ್ವವಾಗಿದೆ. ಜಾತಿ–ವಿಜಾತಿ, ವರ್ಣ, ವರ್ಗ, ಲಿಂಗಭೇದವನ್ನು ತಳೆಯಲಾರದಿರುವುದು ಇದರ ಪ್ರಮುಖ ಲಕ್ಷಣ. ತಿರುವಳ್ಳುವರರು ಹೇಳುವಂತೆ–

ಶತ್ರು, ಮಿತ್ರ, ಅಪರಿಚಿತರ ಬಳಿ ನಿಷ್ಪಕ್ಷಪಾತದಿ ನಡೆವುದು
ಅದೇ ಸಮದರ್ಶಿತ್ವ ಎನ್ನುವ ಧರ್ಮವೆನಿಸುವುದು

ಸಮದರ್ಶಿತ್ವವುಳ್ಳವನ ಸಂಪದವು ಅಳಿಯದೆ
ಅವನ ಸಂತತಿಗೂ ಆಧಾರವಹುದು

ಲೇಸನೇ ತಂದರೂ ಅನ್ಯಾಯದಲಿ ಬಂದ ಸಂಪದವ
ಅಂದೇ ತೊಲಗಿಸಿ ಬಿಡುವುದು

ಯೋಗ್ಯರು ಯೋಗ್ಯ ಹೀನರು ಎಂಬುದನು, ಅವರವರ
ವಂಶದ ಕೀರ್ತಿ ಅಪಕೀರ್ತಿಗಳಿಂದ ಅರಿವುದು

ಬದುಕಿನಲಿ ಬಡತನವು ಸಿರಿತನವು ಇಲ್ಲದವುಗಳಲ್ಲ;
ಸಮಭಾವವುಳ್ಳ ಮನಸ್ಸೇ ಉತ್ತಮರ ಭೂಷಣವು.

ಕೆಡುವೆ ನಾನೆಂಬುದನು ಅರಿವುದು, ತನ್ನ ಮನವು
ಅನ್ಯಾಯದಲಿ ಅಕಾರ್ಯವೆಸಗಿದರೆ

ಕೇಡೆಂದು ಜರಿಯದೀ ಜಗವು, ಋಜುತೆಯನು ಹಿಡಿದು
ಧರ್ಮದಲಿ ನಡೆವವನ ಬಡತನವ

ಸಮನಿಂ ತಳೆವ ತ್ರಾಸಿನೊಲು, ನ್ಯಾಯದಿಂದಲಿ
ನಡೆಯುವುದೇ ಉತ್ತಮರ ಭೂಷಣವು,

ಮನದಲಿ ಕೊಂಕುತನವಿಲ್ಲದಿರೆ, ಆಡುವ ನುಡಿಯೂ
ಕೊಂಕುತನವಿಲ್ಲದೆ ಋಜುತೆಯಿಂದಿರುವುದು

ವಣಿಜರಿಗೆ ಅದೊಂದು ಒಳ್ಳೆಯ ವ್ಯಾಪಾರವೆನಿಸುವುದು,
ಅನ್ಯರ ವಸ್ತುವನೂ ತಮ್ಮದಂತೆ ರಕ್ಷಿಪುದು

ಎಲ್ಲರಲ್ಲೂ ಮೈತ್ರಿ, ಪ್ರೇಮದಿಂದ ವರ್ತಿಸುವುದು, ಸಮದರ್ಶಿತ್ವ ಗುಣವುಳ್ಳವನ ಸಿರಿ–ಸಂಪತ್ತು ಹೆಚ್ಚುವುದು. ಅದು ಅವನ ವಂಶಕ್ಕೂ, ಸಮಾಜದ ಹಿತಕ್ಕೂ ಆಧಾರವಾಗುವುದು. ಅನ್ಯಾಯದಿಂದ ಸಂಪತ್ತು ಗಳಿಸದಿರುವುದು. ಸಮಭಾವವುಳ್ಳವನಲ್ಲಿ ಸಿರಿತನ–ಬಡತನವೆಂಬುದು ಬರಲಾರದು. ಮನದಲ್ಲಿ



ಕೊಂಕುತನವಿಲ್ಲದಿರುವುದೇ ಸಮನ್ವಯದ ಗುಣ. ವ್ಯಾಪಾರ ವಹಿವಾಟ ಮಾಡುವವರು ಮೋಸ ವಂಚನೆಯಿಂದ ಹಣ ಗಳಿಸಿದರೆ ಅದು ಕಳ್ಳರ ಪಾಲಾಗುವುದೆಂದು ಅರಿಯಬೇಕು. ಪರರ ವಸ್ತುಗಳೆಲ್ಲವೂ ನನ್ನವು ಎಂಬ ಭಾವ ವಣಿಕರಲ್ಲಿ ಬರುವುದೇ ಸಮತ್ವವು. ವೇಮನರ ಹೇಳಿಕೆಯಿಂತಿದೆ–

ಸುತ–ಸತಿ–ಪತಿಗಳಲಿ, ಸಕಲರಲ್ಲಿ ಆತ್ಮ
ಮೇಲಾಗಿಯೇ ಇದ್ದು, ಮೆರೆಯುತಿಹುದು
ಬೇರೆ ಬೇರೆಯಾಗಿ ಬೆಳಗುವುದು ರೂಪದಿ ॥ವಿಶ್ವ॥

ತನ್ನ ಹಾಗೆ ಅರಿಯೆ, ಧರೆಯ ಜೀವ ಜಂತು
ಬಗೆಯೆ, ತನ್ನ ಹಾಗೆಯೇ ಬದುಕು ಅತ್ತೆ?
ಜ್ಞಾನಿ ಜ್ಞಾನಿ ಕೊಲಲು ಏನು ಕರಣವಯ್ಯಾ ॥ವಿಶ್ವ॥

ಪರರನು ನೀವೆಂದರಿತೊಡೆ,
ಪರ ಬುದ್ಧಿ ಮೀರದೆ ನೀವು ಆದರದಿ ಇರಲಾ
ಸ್ಥಿರವೇತೃತೆಯಲಿ ತೋಚುವ
ಪರಿಪೂರ್ಣವೇ ಬಟ್ಟ ಬಯಲು, ಚೊಕ್ಕಟ ವೇಮಾ

ಅನ್ಯರಿಗೆ ಬರುತಿಹ ಆಪತ್ ತನ್ನದೆಂದು
ಎನ್ನುವಾತ ಜಗದಿ ಇರುವಂಥವ
ಎಷ್ಟೋ ಅವನ ಒಳಗೆ ಇಹಪರವಿರೆ, ಲೇಸು
ಕಾಣುವವನು ಮಿಗಿಲು ಘನನು ವೇಮಾ

ಸಮವು ಆದ ದೃಷ್ಟಿ ಸಮವಾಗಿಯೆ ನಿಲಿಸಿ
ಬಾಹ್ಯ ರುಚಿಗಳ ತೊರೆದು, ಭದ್ರವಾಗಿ
ಬೆಳಗೆ ನೋಡು, ಬಟ್ಟ ಭಯಲಾಯ್ತು ಬ್ರಹ್ಮ ॥ವಿಶ್ವ॥

ಸಕಲ ಜೀವಿಗಳನು ಸಮನಾಗಿ ನೋಡುವವನು
ಅವನ ಕ್ರಮವ ತಿಳಿಯೆ, ಅವನೇ ಯೋಗಿ
ಅವನ, ನೀವೆನುವುದು, ಅನ್ಯನನ್ನು ಅಲ್ಲ ॥ವಿಶ್ವ॥

ವೇಮನರು ಈ ಜೀವನ ನಾಟಕದಲ್ಲಿ ಭಿನ್ನ ಭಾವದ ಬೂಟಾಟಿಕೆತನವನ್ನು ತೋರದೇ ಸಮಭಾವ ತಾಳುವುದೇ ತುಂಬು ಬಾಳು ಎನ್ನುತ್ತಾರೆ. ನಿನ್ನಷ್ಟಕ್ಕೆ ನೀನಿದ್ದರೇನು ಪ್ರಯೋಜನ? ಸಮಾಜ ಮುಖಿಯಾಗಿ ಸಮನಾಗಿ ಬಾಳುವುದು

ಮುಖ್ಯ ಎನ್ನುತ್ತಾರೆ. ಪತಿ, ಪತ್ನಿ, ಸುತ, ತಂದೆ–ತಾಯಿ–ಅಣ್ಣ–ತಂಗಿ, ಎಲ್ಲರಲ್ಲಿಯೂ ಆತ್ಮವು ಏಕವಾಗಿದೆ. ಭಿನ್ನತೆ ಇರುವುದು ಕೇವಲ ರೂಪದಲ್ಲಿ ಮಾತ್ರ. ಇದೇ ರೀತಿ ಧರೆಯ ಮೇಲಣ ಸಕಲ ಜೀವರಾಶಿಗಳೆಲ್ಲವನ್ನೂ ತನ್ನಂತೆಯೇ ಬಗೆಯುವುದೇ ಸಮದರ್ಶಿತ್ವ; ಹಾಗಾದರೆ, ಇದನ್ನು ಅರಿತ ಜ್ಞಾನಿಯು ಇನ್ನೋರ್ವನನ್ನು ಹೇಗೆ ಕೊಲ್ಲಲೆಳಸುವುದು? ಸ್ವಯಂ, ಪರದ ಎನ್ನುವ ಭಾವ–ಬುದ್ಧಿ ಇರಲೇಬಾರದು, ಇತರರನ್ನು ಸರ್ವ ಜೀವ ಜಂತುಗಳನ್ನು ಸಮಭಾವ–ಸಮದೃಷ್ಟಿಯಿಂದ ಕಾಣಬೇಕು. ಎಲ್ಲರನ್ನು ಸಮದರ್ಶಿತ್ವದಿಂದ ನೋಡುವವನೇ ಸಮದರ್ಶಿ ಅಥವಾ ಯೋಗಿ!

ಹೀಗೆ ಇವರಿಬ್ಬರೂ ಎಲ್ಲರಲ್ಲಿಯೂ, ಎಲ್ಲರನ್ನು ಸರಿಸಮಾನ ದೃಷ್ಟಿಯಿಂದ ಕಾಣಬೇಕು. ಆ ರೀತಿ ಆಚರಣೆಯಲ್ಲಿ ತರಬೇಕೆಂದಿದ್ದಾರೆ.

**ಸಂಯಮ–ಆತ್ಮ ಸಂಯಮ :**

ಇದು ಧರ್ಮ ಭಾಗದಲ್ಲಿರುವ ಪ್ರಮುಖವಾದ ಅಂಗ. ಇದು ಕಣ್ಣಿಗೆ ಕಾಣಲಾರದು. ಆತ್ಮನ ಸ್ವರೂಪವೇ ಪರಮಾತ್ಮ ಎಂಬುದು ಆಧ್ಯಾತ್ಮದ ಪರಿಭಾಷೆಯಲ್ಲಿ ಹೇಳಲಾಗಿದೆ. ಮನಸ್ಸು ಬಂದತ್ತ ಹರಿಯಲಾರದ್ದು ಆತ್ಮ! ಒಮ್ಮೊಮ್ಮೆ ಆತ್ಮಕ್ಕೆ ತಾಮಸ–ಗುಣಗಳೆಂಬ ರಜ (ಧೂಳು) ಅಂಟಬಹುದು. ಪರಿಶುದ್ಧ ವಾಗಿಟ್ಟುಕೊಳ್ಳಬೇಕಾದರೆ ಸತತ ಧ್ಯಾನ, ಭಜನೆ, ಸತ್ಯ ಚಿಂತನೆಯೆಡೆಗೆ ಸಾಗಬೇಕಾಗುತ್ತದೆ. ದೇಹ ಬಿಟ್ಟು–ಆತ್ಮವಿಲ್ಲ–ಆತ್ಮ ಬಿಟ್ಟು ದೇಹವಿಲ್ಲ. ದೇಹ+ಆತ್ಮಗಳ ಬೆಸುಗೆಯೇ ಮನುಷ್ಯ. ಸಂಯಮ, ತಾಳ್ಮೆ, ತಪ, ಧ್ಯಾನ, ಸದ್ಗುಣಗಳನ್ನು ಆಚರಿಸಿ ಸದ್ಗತಿ ಹೊಂದುವುದೇ ಮನುಷ್ಯನ ಕರ್ತವ್ಯ–ಸಾಧನೆಯಾಗಬೇಕು. ಸಹಿಸುವ ಸಂಯಮ ಗುಣವನ್ನು ಹೊಂದಿದವನೇ ಆತ್ಮ ಸಂಯಮಿ. ತಿರುವಳ್ಳುವರರು ಇದರ ಕುರಿತು ಹೇಳಿರುವುದನ್ನು ಗಮನಿಸಿ–

ಆತ್ಮ ಸಂಯಮ ಅಮರರೆಡೆಗೊಯ್ಯುವುದು
ಅಸಂಯಮ ಅಧೋಲೋಕಕ್ಕೊಯ್ಯುವುದು

ಸಿರಿಯಂತೆ ಕಾಯ್ವುದು ಸಂಯಮವು; ಅದಕ್ಕಿಂತ
ಮಿಗಿಲಾದ ಸಿರಿಯು ಬೇರಿಲ್ಲ ಬಾಳಲ್ಲಿ

ಕೀರ್ತಿಯು ಲಭಿಸುವುದು ಸತ್ಕೃತಿಗಳನು ಕಲಿತು
ಸತ್ಪಥದಲಿ ನಿಂತ ಸಂಯಮಶೀಲನಿಗೆ

ತನ್ನ ದೇಹದಲಿ ನಿಶ್ಚಲದಿಂದಹ ಸಂಯಮಿಯ
ಔನ್ನತ್ಯ, ಶಿಖರಕ್ಕಿಂತ ಹಿರಿದು,



ಸಕಲರಿಗೂ ಲೇಸಹುದು ಸಂಯಮದಿಂದಿರುವುದು;
ಸಿರಿವಂತರಿಗೆ ಮತ್ತೊಂದು ಸಿರಿಯದು

ಚಿಪ್ಪಿನಲಿ ತನ್ನಂಗಗಳ ಅಡಗಿಪ ಆಮೆಯಂತೆ ಒಂದು ಜನ್ಮದಲಿ
ಐದಿಂದ್ರಿಯವ ಅಡಗಿವುದು, ಏಳು ಜನ್ಮಕದು ರಕ್ಷೆಯಹುದು

ಯಾವುದನು ಅಡಗಿಸದಿದ್ದರೂ ನಾಲಗೆಯನು ಅಡಗಿಸುವುದು,
ಅಡಗಿಸದವರು ದುಃಖಿಪರು ನುಡಿತಪ್ಪಿ

ನೋವ ತರುವ ಕೆಟ್ಟ ನುಡಿಯ ಒಂದನು ನುಡಿದರೂ
ಅವನ ಅನ್ಯ ಧರ್ಮಗಳೆಲ್ಲಾ ಅನರ್ಥವಾಗುವವು,

ಬೆಂಕಿಯಿಂದ ಸುಟ್ಟ ಹುಣ್ಣು ಒಳಗೆ ಮಾಯುವುದು;
ಮಾಯದು ನಾಲಗೆಯಿಂದ ಸುಟ್ಟ ಗಾಯವದು.

ಸತ್ಕೃತಿಗಳನು ಕಲಿತು ಮುನಿಸನಡಗಿಸಿದ ಸಂಯಮಿಯನು
ಧರ್ಮ ದೇವತೆಯು ಕಾಯುವಳು ಹಾದಿಯಲಿ ನಿಂತು.

ಸಂಯಮ ಧರ್ಮವನ್ನು ಪಾಲನೆ ಮಾಡಿ ಸತ್ಕೃತಿಗಳನು ಮಾಡುವುದು ಸಂಯಮವು ಅಮರತ್ವಕ್ಕೊಯ್ಯುವುದು. ಸಕಲರಿಗೂ ಲೇಸನೆಸಗುವುದೂ ಒಂದು ಸಂಯಮದ ಗುಣವೇ ಆಗಿದೆ. ನಿಶ್ಚಲ ಮನಸ್ಸಿನಿಂದ ಯಾರಿಗೂ ಕೇಡನ್ನುಂಟು ಮಾಡದಿರುವುದೇ ಆತ್ಮ ಸಂಯಮವೆಂದಿದ್ದಾರೆ ಮಹರ್ಷಿ. ಅರಿಷಡ್ ವರ್ಗಗಳಾದ ಕಾಮ, ಕ್ರೋಧ,ಲೋಭ, ಮೋಹ, ಮತ್ಸರ, ಮದ ಎಂಬೀ ಅಸುರೀ ಗುಣಗಳನ್ನು ಶರೀರದಿಂದ ಕಿತ್ತೆಸೆಯುವುದೇ ಸಂಯಮ. ಇವಿದ್ದರೆ ಸತ್ಕಾರ್ಯ ಮಾಡಗೊಡಲಾರವು. ಮೊದಲು ಇವುಗಳನ್ನು ಸುಟ್ಟು ಹಾಕಬೇಕೆಂದಿದ್ದಾರೆ ವೇಮನರು. ನೋಡಿ ಅವರ ಪದಗಳಲ್ಲಿ–

ಅಂಕೆಯರಿತು ಮಾತು ಆಡಲು ಅರಿತಾಗ,
ಸಣ್ಣ ದೊಡ್ಡತನದ ಗಣನೆಯೇಕೆ
ಬಾಲ ಹಿಡಿದ ದೀಪ ಬೆಳಗದೆ ಬಹದಾಗಿ? ॥ವಿಶ್ವ॥

ದ್ವಾರ ಚೌಕಟ್ಟಿಗೆ ಕದದ ಅಳತೆ ಗಡಿಯು,
ಬಾಯಿಗೊಪ್ಪ, ನುಡಿಯೆ ಇತಿಮಿತಿಯು
ಧರ್ಮವರಿತು ತಿಳಿಸಿ ಧನ್ಯನಾಗು ಜಗದಿ ॥ವಿಶ್ವ॥

ಇದು ನನಗೆ ಸಾಲದೆನ್ನುತ
ಅದ ತಾನರಿಯುತ ಎಂದೆಂದು ಮಮತೆ ಮತಿವಂ
ಬದಲಿಸದದ ಬಿಡದಿರುವುದು,
ಅದುವೇ ಸಂಸಾರ ಬೀಜ, ಮನುಜಗೆ ವೇಮಾ!

ಹೇಮಕಾರ ವಿದ್ಯೆ ಅರಿತ ಸಕಲ ಜನರು,
ವ್ಯಥೆಯಪಡದೆ ಇಹರು ವಿದ್ಯೆಯಿಂದ
ತತ್ತ್ವವರಿತ ಬಾಳಿ, ತನಗೆ ಚಿಂತೆಯೇಕೆ? ॥ವಿಶ್ವ॥

ಕೋಪದಿಂದ ನರಕ ಕೂಪವನು ಸೇರುವ;
ಕೋಪದಿಂದ ಗುಣವು ಕೊಂಚಮಯವಹುದು,
ಬಾಳು ಕೋಪದಿಂದ ಕೀಳು ಆಗುತಿಹುದು ॥ವಿಶ್ವ॥

ನುಡಿದು ನುಡಿದು ವಾಕ್ಕು ನಯವು ಹೋಗುತಿಹುದು
ತಿನುತ ತಿನುತ ರುಚಿಯು ಸ್ಥಿರವೇ ಬರದು
ಜಿಹ್ವೆಯ ತಿಂಡಿ ಹೊರತು ಜೀವೇಶ ಹೊಂದುವರೇ ॥ವಿಶ್ವ॥

ನೀತಿ ತಿಳಿಸಿ ಹೇಳು ನಿಜವಾಗಿ ವೇಮನ,
ಪಾಪವೆಲ್ಲ ಹಿಂಗಿ ಹೋಗುವಂತೆ
ಆಳ ತತ್ತ್ವವರಸಿ ಲೋಕಕೆಲ್ಲ ತಿಳಿಸು ॥ವಿಶ್ವ॥

ವೇಮನರು ಹೇಳುವ ಆತ್ಮ ಸಂಯಮವು ಶ್ರೇಷ್ಠವಾದುದಾಗಿದೆ. ಮಾತಿನಲ್ಲಿ ತಾಳ್ಮೆ ಹೊಂದುವುದು ಪ್ರಮುಖ ಅಂಶ. ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು ಎಂಬಂತೆ! ಧರ್ಮ ನೀತಿ ತಿಳಿದು ಮಾತನಾಡಬೇಕು. ಮಾತು ಹಿತಮಿತ ಮತ್ತು ಯಾರಿಗೂ ನೋವಾಗದಂತಿರಬೇಕು. ನಯ–ವಿನಯದಿಂದ ಕೂಡಿ ರುಚಿಯುಂಟಾಗುವಂತಿರಬೇಕು. ನೀತಿಯ ತತ್ತ್ವ ತಿಳಿದು, ಆಚರಿಸಿ ಹೇಳಿದರೆ ಮಾತಿಗೆ ಬೆಲೆ ಮತ್ತು ಬಲ್ಮೆ ಬರುತ್ತದೆ. ಮಿತಿಯಾಗಿರುವಂತೆ ಮಾತಿಗೆ ಧರ್ಮವೇ ಮಿತಿಯಾಗಿರಬೇಕೆಂದು ವೇಮನರ ಹೇಳಿಕೆ ಸರಿಯಾದ ಸಂಯಮತ್ವದ ಮಾತಾಗಿದೆ. ಇದು ನನಗೆ ಸಾಲದು. ಅದೂ ಸಹ ನನಗೆ ಬೇಕೆಂಬ ಅಳತೆ ಮೀರಿದ ಬೇಡಿಕೆಗಳನ್ನಿರಿಸಿಕೊಂಡು ಮಿತಿಮೀರಿ ನಡೆದರೆ ಸಂಯಮದ ಬಾಳು ಹದಗೆಡುತ್ತದೆ. ಬಂಗಾರದ ಗಳಿಕೆ, ವ್ಯಾಮೋಹ ಸರಿಯಲ್ಲ. ಆಭರಣಗಳ ಧರಿಸುವ ಹುಚ್ಚು ಭಯದ ನೆರಳು, ಅದರಿಂದ ಆಪತ್ತು–ವಿಪತ್ತುಗಳೇ ಹೆಚ್ಚು!



ಕೋಪವನ್ನುಳಿದು ಸಂಯಮದ ಮರ್ಮವನರಿತು ಆಚರಿಸುವುದೇ ನಿಜವಾದ ಧರ್ಮವೆಂದಿದ್ದಾರೆ–ವೇಮನರು.

ಇಬ್ಬರೂ ಮಹಾತ್ಮರು ಸಂಯಮ– ಆತ್ಮ ಸಂಯಮಗಳನ್ನು ವ್ಯಕ್ತಪಡಿಸಿದ ಭಾವನೆಗಳು ಒಂದೇ ತೆರನಾಗಿದೆ. ಕೋಪ–ತಪ–ಆಸೆ ಆಕಾಂಕ್ಷೆಗಳನ್ನು ಅಳಿಸಿ ಹಾಕಿ–ಆತ್ಮ ತತ್ತ್ವವನು ಬಲ್ಲ–ಜ್ಞಾನಿಗಳಿಂದ ಅರಿತುಕೊಂಡು ಸಮದರ್ಶಿತ್ವದಲ್ಲಿ ಬಾಳಿರೆಂದು ಉಪದೇಶಿಸಿದ್ದಾರೆ.

ದುಷ್ಕರ್ಮ ಅಥವಾ ದುರಿತ ಕರ್ಮವನು ಮಾಡದಿರುವುದು. ದುಷ್ಕರ್ಮವು ಕೆಡುಕನ್ನೇ ಫಲಿಸುವುದು ಹೊರತು ಒಳಿತಾಗಲಾರದು. ಮರೆತು ಕೇಡನು ಅನ್ಯರಿಗೆ ಮಾಡದಿರುವುದು. ಕೆಡುಕನು ತನ್ನ ವೈರಿಗಳಿಗೂ ಕೂಡ ಮಾಡದಿರುವುದು. ದುಃಖವು ತನಗೆ ಬೇಡವೆಂದು ಬಯಸುವವನು ಪರರಿಗೆ ಕೇಡುಗಳನ್ನು ಎಸಗದಿರುವುದು ಒಳಿತು ಎಂದುದಾಗಿ ತಿರುವಳ್ಳುವರರು ಪ್ರತಿಪಾದಿಸಿದರೆ; ವೇಮನರು ಧರ್ಮದಿಂದ ನಡೆಯುಳ್ಳ ಮನುಜನು ಧರ್ಮಕ್ಕೆ ಕೇಡು ಮಾಡಿ, ಹೀನ–ಕಾರ್ಯವೆಸಗುವವನಿಗೆ ದುಷ್ಟನೆನ್ನುವರು ಇತರರು ಎಂಬುದನು ಬಗೆದು ನೋಡು. ಗುಣವಿಹೀನರಲ್ಲಿ ಗುಣವನರಸಲುಂಟೆ? ಕಪಟವಾದ ಕಾರ್ಯ ಕಡೆತನಕ ನೋಡದೇ ತತ್ತ್ವ ಧರ್ಮದ ಇರುವವನಿಗೆ ಧರ್ಮ ತತ್ತ್ವದ ಮಾತೇಕೆ? ಕಾಲವಶದಿ ಸಿಕ್ಕು ಕರ್ಮಜೀವಿಯ ಹಿಂದೆ ಮತ್ತ ಉನ್ಮತ್ತನಾದವನ ಹಿಂದೆ ಸುಳಿದು; ಅವನೂ ಮದಮತ್ಸರದವನಾಗಿಯೇ ಹೊರಹೊಮ್ಮುವನು. ಮತ್ತರಾದ ಜನರ ಮನವು ಎಂದಾದರೂ ಒಳಿತು ಬಯಸುವುದೇ ಎಂದಿದ್ದಾರೆ ವೇಮನರು. ಆದ್ದರಿಂದ ಈ ಕೀಳು ಗುಣಗಳನಳಿದು ಪರಮಾತ್ಮನ ಸ್ತುತಿಯ ಕಡೆಗೆ ಮುಖ ಮಾಡಿರೆಂದುದಾಗಿ ಇಬ್ಬರೂ ಉಪದೇಶ ಮಾಡಿದ್ದಾರೆ. ಅನ್ಯರೊಡನೆ ಆಸೆಪಡದಿರುವುದು, ಹಿಂದಾಡದಿರುವುದು ಅಂದರೆ ನಿಂದೆ ಮಾಡದಿರುವುದು, ವ್ಯರ್ಥವಾದ ಮಾತುಗಳನ್ನಾಡದಿರುವುದು, ಕೀರ್ತಿಶನಿಯ ಬೆನ್ನು ಹತ್ತದಿರುವುದು, ಮಾಂಸಾಹಾರವನ್ನು ತ್ಯಜಿಸುವುದು, ಧನದಾಸೆಗೆ ಜೋತು ಬಿದ್ದು ಹೀನ ಕೃತ್ಯವೆಸಗಿಯಾದರೂ ತನ್ನದಾಗಿಸಿಕೊಳ್ಳುವುದು. ಬಡತನವಿದ್ರೂ ಪರಧನಕಾಸೆಪಡದಿರುವುದು, ಅಲ್ಪ ಸುಖವನೆಳಸಿ ಅಧರ್ಮ ಕಾರ್ಯ ಮಾಡುವುದು, ಪರಸ್ತ್ರೀ–ಪರ ದ್ರವ್ಯಕ್ಕೆ ಮರುಳಾಗದಿರುವುದು, ಇವೆಲ್ಲ ದುಷ್ಕರ್ಮದ ಆಚರಣೆಗಳಾಗಿವೆ. ಇವುಗಳ ದಾಸನಾಗದೇ ಸದಾಚಾರ–ಸದ್ಗುಣಗಳ ದಾಸನಾಗಿ ಬದುಕು ಸಾಗಿಸುವುದೇ ಉತ್ತಮರ ಜೀವನವೆಂದಿದ್ದಾರೆ ಯೋಗಿಗಳು.

**ಕಪಟಾಚಾರ ಮೋಸ–ವಂಚನೆ ತೊರೆಯುವುದು :**

ಆದರ್ಶ ಸಮಾಜ ನಿರ್ಮಾಣಕ್ಕೆ ಆದರ್ಶ ವ್ಯಕ್ತಿಗಳೇ ಬೇಕು. ಆತ ವ್ಯಷ್ಟಿಯ ಸಮಷ್ಟಿಯ ಹಿತವನ್ನೇ ಬಯಸುತ್ತಿರಬೇಕು. ಸಮಸ್ತ ಮನುಕುಲ ಒಂದೇ ಎಂಬ

ಭಾವವಿರಬೇಕು. ಅವರದು ಸತ್ಯ, ಪ್ರಾಮಾಣಿಕತೆ, ನ್ಯಾಯ ನಿಷ್ಠುರತೆಯ ಬದುಕಾಗಿರಬೇಕು. ನೀತಿ–ನಿಯತತೆಯು ಅವರಲ್ಲಿರಬೇಕು. ಆದರ್ಶ ಅಥವಾ ಮೌಲ್ಯವೆಂದಾಕ್ಷಣವೇ ನೀತಿಯ ಕಲ್ಪನೆಯು ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತದೆ. ನೀತಿಯುತ ಬದುಕಿಗೆ ಯಾವತ್ತೂ ಬೆಲೆಯಿದ್ದೇಯಿರುತ್ತದೆ. ಇದನ್ನು ಸಾಮಾಜಿಕ–ಸುಖ–ಶಾಂತಿ–ಸುವ್ಯವಸ್ಥೆಯ ಇರುವಿಕೆಗೆ ಕಾರಣವಾದ ನೈತಿಕ ವ್ಯವಸ್ಥೆಯೆಂದೂ ಹೇಳಬಹುದು. ಇಂಥ ನೀತಿಯುತ ಬದುಕಿಗೆ ಮೌಲ್ಯ, ಜೀವನ ಮೌಲ್ಯವೆನ್ನುತ್ತಾರೆ. ಮನುಷ್ಯ ಯಾವಾಗಲೂ ಈ ಹಾದಿಯಲ್ಲಿ ನಡೆಯುವುದಾಗಬೇಕು. ಅದನ್ನು ಬಿಟ್ಟು ಮೋಸ, ವಂಚನೆ, ಕಪಟಾಚಾರ, ಕಳ್ಳತನ, ಕೇಡು ಬಗೆಯುವುದು, ಹಿಂಸಿಸುವುದು, ಆಸೆ ಮಾಡುವುದು, ನಿಂದಿಸುವುದು, ಅಸಹ್ಯ ಮಾಡುವುದು, ಹಿಂದಾಡದಿರುವುದು – ಇಂತಹ ದುರ್ಗುಣಗಳಿಂದ ದೂರವಿರುವುದೇ ಮನುಷ್ಯನಾದವನ ಆದ್ಯ ಕರ್ತವ್ಯವಾಗಬೇಕು. ನಮ್ಮದು ಸತ್ಯ, ಅಹಿಂಸೆ, ತ್ಯಾಗ, ಸಹನೆ, ಸಂಯಮ,ಸಹಕಾರ, ಭಕ್ತಿ, ಶ್ರದ್ಧೆ, ಪ್ರೀತಿ–ವಾತ್ಸಲ್ಯ, ಪ್ರೇಮ, ಅಭಿಮಾನ, ಸ್ವಾಭಿಮಾನ, ದೇಶಾಭಿಮಾನ, ನಾಡಾಭಿಮಾನ, ಧೈರ್ಯ–ಸ್ಥೈರ್ಯ, ಕಾಯಕ, ದಾಸೋಹ, ಹಂಚಿಕೊಂಡು ತಿನ್ನುವ ಸ್ವಭಾವ, ಜ್ಞಾನ, ಧರ್ಮ ನ್ಯಾಯ, ನಿಷ್ಠೆ, ಶುಭ್ರತೆ, ದೇವರು, ನಿಸರ್ಗ, ಆಧ್ಯಾತ್ಮ, ಸತ್ಯಂ ಶಿವಂ ಸುಂದರಂ,ಐಕ್ಯತೆ, ಜಾತಿಯೊಂದೇ ಎಂಬ ಭಾವ ಈ ಮುಂತಾದ ಸದ್ಗುಣಗಳುಳ್ಳ ತಾಯಿ ಭಾರತ ದೇಶ ನಮ್ಮದು. ಇಂತಹ ಜ್ಞಾನ ಸಿಂಧೂರವನ್ನು ಅನೇಕ ಋಷಿ–ಮುನಿಗಳು ನಮ್ಮ ಭಾರತ ಭೂಮಿಯಲ್ಲಿ ಉತ್ತಿ–ಬಿತ್ತಿ–ಹೋಗಿ ಅಮರರಾಗಿದ್ದಾರೆ. ಅಂತಹವರ ಉದಾತ್ತ ನೀತಿಯ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಬೇಕೆಂದು ಹೇಳಲು, ಉಪದೇಶಿಸಲು ಪದೇ ಪದೇ ಜನ್ಮ ಧರಿಸಿ ಬರುತ್ತಾರೆ. ಅಂತಹ ಶ್ರೇಷ್ಠ ಮಹಾಯೋಗಿ–ಋಷಿ–ಮುನಿಗಳಲ್ಲಿ ತಿರುವಳ್ಳುವರರು ಹಾಗೂ ಮಹಾಯೋಗಿ ವೇಮನರು ಕಂಗೊಳಿಸುವ ರತ್ನದ್ವಯರು. ಅವರು ಹೇಳಿದ ಪ್ರತಿಯೊಂದು ಮಾತೂ ನಮ್ಮೆಲ್ಲರ ಜೀವನ ಮೌಲ್ಯಗಳನ್ನು ಎತ್ತರಿಸುತ್ತವೆ. ಆದರೆ, ಯಾವುದು ಹಿಡಿಯಬೇಕು, ಯಾವುದನ್ನು ಬಿಡಬೇಕು ಎನ್ನುವ ಅರಿವು ನಮ್ಮಲ್ಲಿರಬೇಕು. ಅಂದಾಗ ನಾವೂ ಅವರಂತಾಗಲು ಸಾಧ್ಯವಾದೀತು ಅಲ್ಲವೆ? ಅವರು ಹೇಳುತ್ತಾರೆ–ಅನ್ಯರಗೊಡವೆಗೆ ಆಸೆಪಡದಿರುವುದು.

ಅನ್ಯಾಯದಲಿ ಅನ್ಯರ ಐಸಿರಿಗೆಳಸಿದರೆ
ಕುಲವುಗೆಟ್ಟು ಕುಂದುಗಳನ್ನೇ ತರುವುದದು.

ಆದುದರಿಂದ ಅನ್ಯರ ವಸ್ತು ವಡವೆಗಳಿಗೆ ಆಸೆಪಟ್ಟು ನಿಂದೆ ತರುವ ಕಾರ್ಯ ಮಾಡದಿರುವುದು ಲೇಸು ಎನ್ನುತ್ತಾರೆ. ಬಡತನವಿದ್ದರೂ, ಕೂಲಿನಾಲಿ



ಮಾಡಿ ಜೀವನ ನಡೆಸಿದರೆ ದೇವನು ಮೆಚ್ಚುತ್ತಾನೆ. ಅದು ಬಿಟ್ಟು ಇದ್ದವರಲ್ಲಿರುವ ವಸ್ತು–ವಡವೆಗೆ ಆಸಿಸಿ ತಂದರೆ ಮೆಚ್ಚಲಾರನಾ ಪರಮಾತ್ಮನು! ಅಲ್ಪಸುಖ ಬಯಸಿ ಅಧರ್ಮ ಅನ್ಯಾಯದ ಕಾರ್ಯವೆಸಗದಿರು ಎಂದು ಕಿವಿ ಮಾತು ಹೇಳಿದ್ದಾರೆ ತಿರುವಳ್ಳುವರರು. ಆಸೆಯನ್ನು ಬಿಡುವುದೆಂಬುದಕ್ಕೆ ತಿರುವಳ್ಳುವರರು ಹೀಗೆ ಹೇಳಿದ್ದಾರೆ–

ಸಕಲ ಜೀವಿಗೂ ಸದಾ ಜನ್ಮ ತರುವ ಬೀಜವನು
ಆಸೆಯೆಂಬರು ಪ್ರಾಜ್ಞರು!
ಬಯಸಿದರೆ ಬಯಸುವುದು ಭವಮುಕ್ತ ಸ್ಥಿತಿಯನು
ಮತ್ತದು ಲಭಿಸುವುದು ಆಸೆಯನು ತೊರೆಯೆ

ಕಾಮರಹಿತ ಸ್ಥಿತಿಯೇ ಮನಃಸಿದ್ಧಿ ಎಂಬುದು;
ಮತ್ತದೂ ವಾಸ್ತವ ಸತ್ಯವನರಿತರೆ ಬರುವುದು.

ಕಾಮನೆಯ ತೊರೆದವರು ಭವ ಮುಕ್ತರೆನಿಸಿಕೊಳುವರು;
ಕಾಮನೆಯ ತೊರೆಯದವರು ಭವದಿ ಮುಳುಗಿರುವರು

ಆಸೆಗೆ ಅಂಜಿ ತನ್ನತನ ಕಾಯ್ದುಕೊಳುವುದೇ ಧರ್ಮವೆನಿಸುವುದು
ಆಸೆಯೇಒಬ್ಬನನು ವಂಚಿಸುವುದು

ಆಸೆಯನೊಬ್ಬ ಕಳೆಯಲು ಮೋಕ್ಷ ಸುಖವದು
ತನು ಬಯಸಿದೊಲು ಬರುವುದು.

ಆಸೆಯಿಲ್ಲದವರಿಗದು ದುಃಖವನಿಲ್ಲ; ಆಸೆಯಿರಲು
ದುಃಖಗಳು ಮೇಲೆ ಮೇಲೆ ಬರುವವು.

ನಿಷ್ಕಾಮದಂಥ ಶ್ರೇಷ್ಠ ಸಿರಿಯು ಈ ಲೋಕದಿ ಬೇರಿಲ್ಲ;
ಆಲೋಕದಲ್ಲಿಯೂ ಅದಕ್ಕೆಣೆಯಿಲ್ಲ

ಸುಖವು ಎಡೆಬಿಡದೆ ಬರುವುದು, ಆಸೆಯೆನುವ
ದುಃಖಗಳೆಲ್ಲೆಲ್ಲಾ ಅತಿ ದೊಡ್ಡ ದುಃಖವಿಲ್ಲದಿರಲು

ಅತೃಪ್ತ ಗುಣವುಳ್ಳ ಆಸೆಯದು ಹರಿದರೆ
ಅಮರ ಸುಖವನು ತರುವುದಾ ಸ್ಥಿತಿಯು

ಆಸೆಯನ್ನು, ಮುನಿಸನ್ನೂ ತೊರೆದವರೇ ಮುನಿವರೇಣ್ಯರು, ಸ್ವಾರ್ಥವನ್ನು ಕಿಂಚಿತ್ತೂ ಯೋಚಿಸದೇ ಸಮಾಜದ, ರಾಷ್ಟ್ರದ ಕ್ಷೇಮವನ್ನು ಬಯಸುವುದು.

ಕಾಮನೆಗಳನು ತೊರೆದರೆ ಧರ್ಮಿಷ್ಠನೆನುವರು. ಆಸೆಯುಳ್ಳವನು ಈಶನತ್ತ ಮುಖ ಮಾಡಲಾರ. ಆಸೆ ಅಳಿದರೆನೇ ಸುಖವು ಪ್ರಾಪ್ತವಾಗುವುದೆಂಬುದನು ಅರಿತು ನಡೆಯಿರಿ ಎಂದಿದ್ದಾರೆ ತಿರುವಳ್ಳುವರರು.

ಇದೇ ಮಾತಿಗೆ ವೇಮನರು ಹೇಳುತ್ತಾರೆ. ಮಾನವನ ದುಃಖಕ್ಕೆ ಮೂಲ ಕಾರಣವೇ ಆಸೆ. ಆಸೆಯನ್ನು ಪೂರೈಸಿದಷ್ಟು ಅದು ಹೆಚ್ಚುತ್ತದೆ. ದೀಪಕ್ಕೆ ಎಣ್ಣೆ ಸುರಿದಂತಾಗುತ್ತದೆ. ಇದು ಮುನಿಗಳನ್ನು ಬಿಟ್ಟಿಲ್ಲವೆನ್ನುತ್ತಾರೆ. ಆಸೆಯನ್ನು ತೊರೆಯಲಾರದೇ ಪಾಶಮುಕ್ತನಾಗಲಾರನು. ಜೀವಾತ್ಮ-ಪರಮಾತ್ಮರ ಐಕ್ಯ ಸಾಧ್ಯವಾಗಲಾರದು. ದುಃಖ ನಿವೃತ್ತಿಯಾಗಲಾರದು, ನಿರ್ವಾಣವೂ ಕೈಗೂಡದು ಎನ್ನುತ್ತಾರೆ ವೇಮನ.

ಏರುತಿಪ್ಪ ಆಸೆ ಎರಡು ಪಟ್ಟು ಆಗೆ
ದಿಕ್ಕುಗೆಟ್ಟು ನರನು ತಿರುಗುತಿಹನು
ಸೊಣಗನಂಥ ಆಸೆ ಸೇರಿಕೊಳಲು ಬಿಡದು ॥ವಿಶ್ವ॥

ಆಸೆಗಿಂತ ದುಃಖ ಅತಿಶಯಾಗಿ ಅಲ್ಲ
ನೋಟ ನಿಲಿಸದಿರಲು ನೆಮ್ಮದಿಯಿಲ್ಲ
ಮನಸು ನಿಲಿಸದಿರಲು ಮತ್ತೆ ಮುಕ್ತಿ ಇಲ್ಲ ॥ವಿಶ್ವ॥

ಹೆತ್ತ ಪುತ್ರನಾಸೆ,ಹೇಮದ ಮೇಲಾಸೆ
ಸ್ತ್ರೀಯ ಮೇಲಿನ ಆಸೆ, ಚಿತ್ತ ಭ್ರಾಂತಿ!
ಭ್ರಮೆಯು ಬಿಡದಿರಲು, ಬ್ರಹ್ಮವನು ಕಾಣರು ॥ವಿಶ್ವ॥

ಆಸೆ ಪಾಪವಹುದು, ಎಲ್ಲಕ್ಕಿಂತ ಆಚೆ
ಆಸೆಯಿಂದ ಮುನಿಯು ಮೋಸಗೊಳನೆ?
ಸಮೀಕ್ಷಿಸಿ ಬಿಡುವನೆ ಶುದ್ಧಾತ್ಮನೆನಿಪನು ॥ವಿಶ್ವ॥

ಆಸೆಯೆಂಬ ಪಾಶ ಅಖಿಲ ಜಂತುಗಳನು
ಕಟ್ಟುತಿಹುದು ಕಾಣು, ಸತ್ಯವ
ಜ್ಞಾನ ಭೂರಿ ಹಿಡಿದು ಜಡವ ಕಡಿಯಬೇಕು ॥ವಿಶ್ವ॥
ಅಲ್ಪ ಸುಖವನೆಲ್ಲ ಆಶಿಸುತ ಮನುಜರು
ಬಹಳ ದುಃಖ ಭಾಧೆಪಡುತಲಿಹರು
ಪರ ಸುಖವನು ಹೊಂದಿ ಬದುಕಲರಿಯರಲ್ಲ ॥ವಿಶ್ವ॥



ಲೋಕದಲ್ಲಿರುವ ಮನುಜರೆಲ್ಲ ಆಸೆಯ ಬೆನ್ನುಹತ್ತಿ ತಮ್ಮನಿಜವಾದ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿರುವರು. "ಅತಿಯಾಸೆ ಗತಿಗೇಡು" ಎಂಬ ಅರಿವು ಇಲ್ಲದಂತೆ ಮಂದಮತಿಗಳು ಮಿತಿಮೀರಿ ವರ್ತಿಸುತ್ತಿರುವವರನ್ನು ಕಂಡು ವೇಮನರು ಮೇಲಿನ ಪದಗಳಲ್ಲಿ ಬಿಚ್ಚುಮನದಿಂದ ಬಣ್ಣಿಸಿದ್ದಾರೆ. ಆದುದರಿಂದ ಅವರು ಆಸೆಯೆಂಬ ಪಾಶದಿಂದ ಮುಕ್ತಿ ಹೊಂದಬೇಕಾದರೆ ಆಸೆ ತೊರೆಯಬೇಕು, ಶುದ್ಧ ಜೀವಿಯಾಗಿ ಬದ್ಧತೆಯಿಂದ ನಡೆದರೆ ಈಶ್ವರನೊಲುಮೆ ಖಚಿತವೆಂದೂ ಹೇಳಿದ್ದಾರೆ.

ಆಸೆಯುಡುಗುವತನಕ ಪಾಶಮುಕ್ತನಲ್ಲ
ಮುಕ್ತನಾಗಬಹುದು; ಮುನಿಯಾಗಲಾರನು
ಮುನಿಯೇ ಆಗಬಹುದು; ಮೋಹವ ಬಿಡಲಾರ ॥ವಿಶ್ವ॥

ಆದುದರಿಂದ ಆತ ಹೇಳುವುದೇನೆಂದರೆ ಆಶಾರಹಿತನಾಗು ಮನುಜನೇ? ಎಂದದ್ದು ಹೀಗಿದೆ-

ಆಸೆಗಳನು ಕಡಿದು; ಅಗ್ನಿಯನು ಆರಿಸಿ,
ಕಟ್ಟಿ ಬಿಗಿದು ಚಡ್ಡಿ, ಕೋಪ ತಗ್ಗಿ
ಆಸೆ ಬಿಟ್ಟು ಇರುವ, ಅವನೇ ಯೋಗಿಯೆನಿಪ ॥ವಿಶ್ವ॥

ಭೋಗಂಗಳಿಗಾಸೆ ಪಡದೆ,
ರಾಗ ದ್ವೇಷಗಳು ಉಡುಗಿ, ತಮ್ಮೊಳ್
ವೇಗದಿ ಮೋಕ್ಷ ಪದಂಗಳ
ಆಗಮನ ಕಂಡ ಆತನೇ ಯೋಗಿ ವೇಮಾ

ಅಂಗದಲ್ಲಿರುವ ಆಸೆಗಳ ಭೇದಿಸಿ
ಮೆರೆವ ಹೃದಯವಂತೆ ಸ್ಥಿರವಗೊಳಿಸಿ
ಗೃಹವ ನಿಲಿಸುವವನು ತತ್ತ್ವವೇದಿಯು ॥ವಿಶ್ವ॥

ಆಸೆ ಬಿಡದ ಹೊರತು ಪಾಶ ಮುಕ್ತನಲ್ಲ
ಕಾಮ ಮುಕ್ತನಾದ ಹೊರತು ಮೃತನೆ
ಆಗದಿರಲು ಕ್ಷಿತಿ ಮೋಹವಳಿಯದು ॥ವಿಶ್ವ॥

ಆಸೆಯೆಂಬ ಲತೆಯ ನಾಶಗೊಳಿಸದತನಕ
ಮೋಹ ಜಲಧಿಯಲ್ಲಿ ಮುಳುಗುತಿಹರು
ಕಾಶಿವಾಸಿಯೇನು? ಕಾಣದೆಂದೂ ಮೋಕ್ಷ ॥ವಿಶ್ವ॥

ಹುಟ್ಟಿ ಬರುವಾಗ ತಾರನು; ಪೊಡವಿ ಬಿಟ್ಟು
ತೊಲಗುವ ಕಾಲ ಕೊಂಡೊಯ್ಯುವಂಥ ಧನವು,
ನಡುವೆ ನಿನ್ನಾಜ್ಞೆ ಬರಲಿ; ತ್ರಿ-ನಯನನೆನುತ,
ಅರ್ಥಿಗೀಯನು ಏನೆಲ್ಲ ವ್ಯರ್ಥ ವೇಮಾ

ಒಂದಾಸೆ ಪೂರೈಕೆಯಾಗೆ ಮತ್ತೊಂದು ಧುತ್ತೆಂದು ಬಂದುನಿಲ್ಲುತ್ತದೆ. ಈ ಶರೀರವೆಂಬುದು ಚಿಂತೆಕಾಂತೆಯ ಮನೆಯೆಂದಿದ್ದಾರೆ ಜ್ಞಾನಿಗಳು! ಅದು ನಿಜದ ಸಂಗತಿಯೂ ಹೌದು. ಆದುದರಿಂದ ಆಸೆಯನಳಿದಾತನೇ ಈಶನಾಗುತ್ತಾನೆ ಎಂದಿದ್ದಾರೆ ವೇಮನರು. ಹುಟ್ಟುವಾಗಲೂ ಏನೂ ತಂದಿಲ್ಲ; ಹೋಗುವಾಗಲೂ ಏನೂ ಒಯ್ಯುವುದಿಲ್ಲ. ಮತ್ತೇಕೆ ಈ ನಡುವಿನ ಬದುಕಿನಲ್ಲಿ ಆಶಾ ಲಂಪಟರಾಗಿ ಕೊರಗುವಿರಿ? ಎಂದು ವಿಡಂಬನಾತ್ಮಕವಾಗಿ ವೇಮನ ಯೋಗಿಯು ಮೇಲಿನ ಪದಗಳಲ್ಲಿ ಹೇಳಿದ್ದಾರೆ.

ಒಟ್ಟಿನಲ್ಲಿ ಇವರಿಬ್ಬರ ಅಭಿಪ್ರಾಯದ ಉಪದೇಶಗಳನ್ನು ಮನುಜ ಕುಲವು ಆಸೆಯ ಪಾಶದಲ್ಲಿ ಸಿಲುಕಿ ತಮ್ಮ ಬದುಕಿನ ಉತ್ತಮ ಕ್ಷಣಗಳನ್ನೇ ಹಾಳು ಮಾಡಿಕೊಳ್ಳುತ್ತಲಿದ್ದಾರೆ ಎಂದು ಹೇಳುತ್ತಾ, ಸನ್ಮಾರ್ಗದಲ್ಲಿ ನಡೆದು ಆಸಾರಹಿತನಾಗಿ ಸಮಾಜದಲ್ಲಿ ಬೆರೆತು-ಹಿತವಾದ ಕಾರ್ಯ ಮಾಡುತ್ತ ಈಶನೊಲುಮೆಯನ್ನು ಪಡೆಯಿರೆಂದು ಹಿತೋಕ್ತಿಯ ನುಡಿಗಳನ್ನಾಡಿದ್ದಾರೆ.

**ವಿಧಿಯ (ವಿಶ್ವನಿಯಮ) ಆಟ :**

ಈ ಪ್ರಪಂಚಕ್ಕೆ ಬಂದ ಮೇಲೆ ನಾವೆಲ್ಲರೂ ಬದುಕನ್ನು ನಡೆಸಲೇಬೇಕು. ಆದರೆ, ಹೇಗೆ ಬದುಕುತ್ತೇನೆ ಎಂಬುದೂ ಮುಖ್ಯ! ಬದುಕಿಗೆ ಅರ್ಥ ಬರುವ ರೀತಿಯಲ್ಲಿ ಬದುಕುವುದೇ ಸಾರ್ಥಕದ ಜೀವನವೆನಿಸುತ್ತದೆ.ನಾನು ಈ ಬದುಕನ್ನು ನಡೆಸಲಾರೆ ಎನ್ನುವವನು ವಿಧಿಯ ಬಾಯಿಗೆ ತುತ್ತಾಗಿ ಸಿಕ್ಕಿ ಹಾಕಿಕೊಳ್ಳದೇ ಇರುವನೇನು? ಆದ ಕಾರಣ, ವಿಧಿ, ನಮಗೆ ವಿಧಿಸಿರುವ ಕರ್ಮಗಳನ್ನು ನಾವು ಮಾಡಲೇಬೇಕು. ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ನಮ್ಮ ನಮ್ಮ ಹಣೆಬರಹದಲ್ಲಿ ಬರೆದುದನ್ನು ತಪ್ಪಿಸಲು ಹರಿ ಹರ-ಬ್ರಹ್ಮಾದಿಗಳಿಂದಲೂ ಸಾಧ್ಯವಿಲ್ಲವೆನ್ನುತ್ತಾರೆ. ವಿಧಿಯ ಕುರಿತು ಮಂಕುತಿಮ್ಮನ ಕಗ್ಗದಲ್ಲಿ ಡಾ. ಡಿ.ವ್ಹಿ.ಜಿ. ಅವರು ಹೀಗೆ ಹೇಳಿದ್ದಾರೆ –

ಬದುಕು ಜಟಕಾ ಬಂಡಿ, ವಿಧಿಯದರ ಸಾಹೇಬ!
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು



ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು
ಪದ ಕುಸಿಯೆ ನೆಲವಿಹುದು-ಮಂಕುತಿಮ್ಮ

ನಮ್ಮ ಜೀವನ ಒಂದು ಜಟಕಾ ಬಂಡಿಯಿದ್ದಂತೆ. ಅದನ್ನು ಓಡಿಸುವ ಚಾಲಕ ವಿಧಿ.. ನೀನು ಆ ಜಟಕಾ ಬಂಡಿ.. ಆ ಜಟಕಾ ಬಂಡಿಗೆ ಕಟ್ಟಿರುವ ಕುದುರೆ, ಆದರೆ ಈ ಜಟಕಾ ಬಂಡಿಯ ಓಟ ಮಾತ್ರ ಅದರಲ್ಲಿ ಕುಳಿತಿರುವ ಪ್ರಯಾಣಿಕರು ಬಯಸಿದಂತೆ ಅಲ್ಲ. ಅದು ವಿಧಿ ಎಲ್ಲಿಗೆ ಕೊಂಡೊಯ್ಯುತ್ತದೆಯೋ ಅಲ್ಲಿಗೆ ಹೋಗಬೇಕು. ವಿಧಿ ಅದನ್ನು ಮದುವೆಗಾದರೂ ಕರೆದುಕೊಂಡು ಹೋಗಬಹುದು. ಇಲ್ಲವೆ ಸ್ಮಶಾನಕ್ಕಾದರೂ ಕರೆದೊಯ್ಯುಬಹುದು.ಒಂದು ಸಂತೋಷಕರವಾದ ಸಮಾರಂಭ ಮತ್ತೊಂದು ದುಖಃಕರವಾದ ಸನ್ನಿವೇಶ. ಆದರೆ, ನೀನು ಅವನು ಹೇಳಿದ ಕಡೆಗೆ ಹೋಗಬೇಕು. ಈ ಸಂದರ್ಭದಲ್ಲಿ ನಿನ್ನ ಹೆಜ್ಜೆ ಕುಸಿದು ಬೀಳುವಂತಾದರೆ, ಗಟ್ಟಿಯಾದ ನೆಲವಿದೆ, ದೇವರಿದ್ದಾನೆ. ಅವನು ನಿನ್ನನ್ನು ಕಾಪಾಡುತ್ತಾನೆ. ಆದುದರಿಂದ ನೀನು ದೇವರ ಮೇಲೆ ನಂಬಿಗೆಯಿಟ್ಟು ಆತ ಕೊಟ್ಟಿರುವ ಕೆಲಸವನ್ನು ತಪ್ಪದೆ ಮಾಡು. ಅದು ಮೇಲು-ಕೀಳು ಎಂದೆನ್ನದೇ ಮಾಡಿ ಜೀವನವನ್ನು ಸಾರ್ಥಕ ಮಾಡಿಕೋ ಎಂದಿದ್ದಾರೆ ಜ್ಞಾನಿಗಳು. ಅಂತಹ ಜ್ಞಾನಿಗಳೂ, ಶಿವನ ಅವತಾರಿಕರೂ ಆದ ತಿರುವಳ್ಳುವರ ಮತ್ತು ವೇಮನರು ವಿಧಿಯ ಕುರಿತು ಹೇಳಿದ ಪದಗಳು ಇಂತಿವೆ.

ಧರ್ಮ, ಅರ್ಥ, ಕಾಮ (ಸೌಖ್ಯ) ಎಂಬ ತ್ರಿವರ್ಗದಂತೆ ತಿರುವಳ್ಳುವರರು ಈ ವಿಶ್ವನಿಯಮವನ್ನು ತ್ರಿವರ್ಗದಲ್ಲಿ ತಿಳಿಯಪಡಿಸಿದ್ದಾರೆ. ವಿಧಿ, ದೈವ, ಪಾಲು ಎಂದು ಮೂರು ವಿಭಾಗಗಳಾಗಿ ವಿಂಗಡಿಸಿದ್ದಾರೆ. ವಿಧಿ ಎನ್ನುವುದು ಬ್ರಹ್ಮಶಕ್ತಿಯ ಅವ್ಯಕ್ತ ಗುಣವನ್ನು ದೈವ ಎನ್ನುವುದು. ಪ್ರಕೃತಿಯಲ್ಲಿ ಬೆರೆತಿರುವ ಬ್ರಹ್ಮಶಕ್ತಿಯ ಅವ್ಯಕ್ತ ಗುಣವನ್ನು "ಪಾಲು" ಎನ್ನುವುದು ದೃಶ್ಯ ಶಕ್ತಿಯ ಪ್ರಕೃತಿಯ ಅವ್ಯಕ್ತ ಗುಣವನ್ನು ಸೂಚಿಸುತ್ತದೆ. ಬ್ರಹ್ಮಶಕ್ತಿ ಎನಿಸಿದ ಈ ವಿಧಿಯು ಪ್ರಕೃತಿಯನ್ನೂ ಮಾನವ ಸಮಾಜವನ್ನು, ಧಾರ್ಮಿಕ ಹಾಗೂ ರಾಜಕೀಯ ಜೀವನವನ್ನು, ಎಲ್ಲದಕ್ಕೂ ಮಿಗಿಲಾಗಿ ಸಮಷ್ಟಿಯ ಜೀವನವನ್ನು ನಿಯಂತ್ರಿಸಿ ಆಳುತ್ತಿದೆ. ಈ ಬ್ರಹ್ಮ ಶಕ್ತಿಯ ಪ್ರಕೃತಿಯ ಅಂಶವನ್ನೇ ನಾವು ರೂಢಿ, ಸಂಪ್ರದಾಯ, ಭಾಷೆ, ಕಲೆ, ಸಾಹಿತ್ಯ, ಸಂಸ್ಕೃತಿ, ನಾಗರಿಕತೆ ಎಂದು ಕರೆಯುತ್ತೇವೆ. ಅದರ ರಾಜಕೀಯ ಅಂಶಗಳನ್ನೇ ನಾವು ರಾಜಾಂಗ ಶಾಸನಗಳು ಎಂದು ಕರೆಯುತ್ತೇವೆ. ಇದು ತಿರುವಳ್ಳುವರರು ಹೇಳಿದ ವಿಧಿ ನಿಯಮದ ತಿರುಳು. ಇದನ್ನೇ ತಮ್ಮ ಪದಗಳಲ್ಲಿ ಹೇಳಿರುವುದನ್ನು ಗಮನಿಸೋಣ!!

ಸಿರಿಯ ವರ್ಧಿಸುವ ಸುವಿಧಿಯಿಂದ ಪ್ರಯತ್ನ ತೋರುವುದು;
ಸಿರಿಯ ಕುಂದಿಸುವ ದುರ್ವಿಧಿಯಿಂದ ಆಲಸ್ಯ ತೋರುವುದು

ದುರ್ದೈವವು ಒಬ್ಬನನ್ನು ಮೂಢನನ್ನಾಗಿ ಮಾಡುವುದು;
ಸುದೈವವು ಒಬ್ಬನ ಅರಿವನು ವರ್ಧಿಸುವುದು

ಹಲರು ಸೂಕ್ಷ್ಮ ಗ್ರಂಥಗಳನ್ನೊಬ್ಬ ಕಲಿತರೂ ಅವನ
ವಿಧಿ ವಿಹಿತ ಅರಿವೆ ಮಿಗುವುದು

ಭೇದವೆರಡುಂಟೀ ವಿಶ್ವನಿಯಮದಲಿ, ಸಿರಿಯ
ಪಡದಿಹರು ಕೆಲರು, ಅರಿವ ಪಡೆದಿಹರು ಕೆಲರು

ಸಿರಿ ಗಳಿಸುವ ಯತ್ನದಲಿ ವಿಧಿಯಿಂದ ಒಳಿತೆಲ್ಲವು ಕೆಟ್ಟದಾಗುವವು;
ಕೆಟ್ಟವೆಲ್ಲವೂ ಒಳಿತು ಆಗುವವು

ನಮ್ಮದಲ್ಲದನು ಹಿಡಿದಿರಿಸಿದರೂ ವಿಧಿ ತಾನು ಉಳಿಸದು;
ನಮ್ಮದಾದುದನು ಕಡೆಗಣಿಸಿದರೂ ವಿಧಿಯದನು ತೊಲಗಿಸದು

ವಿಧಿಯು ಪಾಲು ಮಾಡಿಟ್ಟ ವಿಧದಲ್ಲಲ್ಲದೆ ನಾವು ಕೋಟಿಗಳ
ಕೂಡಿಟ್ಟರೂ ಅನುಭವಿಸಲು ಅರಿದಹುದು

ಬಡವರು ಎಲ್ಲವನು ತೊರೆದು ತ್ಯಾಗಿಗಳಾಗುವರೋ
ವಿಧಿಯಿಂದ ಬರುವ ದುಃಖಗಳು ದೂರವಾದರೆ?

ಶುಭಗಳು ಬಂದಂದು... ಒಳಿತೆಂದದನು ಸುಖಿಸುವವರು
ಅಶುಭಗಳು ಬಂದಂದು ಹಲಬುವುದೇತಕೋ?

ವಿಧಿಗಿಂತ ಬಲವುಳ್ಳದ್ದು ಯಾವುದಿಹುದು? ಮತ್ತೊಂದು
ಮಾರ್ಗವ ನೆನೆದರೂ ಅದು ತಾ ಮುಂಬಂದು ನಿಲುವುದು

ಈ ಮೇಲ್ಕಾಣಿಸಿದ ಪದಗಳಲ್ಲಿ ತಿರುವಳ್ಳುವರರು ಪ್ರಯತ್ನಕ್ಕೆ ಪೂರಕವಾಗಿರುವುದೇ ವಿಧಿ ನಿಯಮ. ಶ್ರಮಪಟ್ಟು ದುಡಿದು ದೇವರಲ್ಲಿ ಶ್ರದ್ಧೆ–ಭಕ್ತಿಯಿಟ್ಟು ನಡೆದರೆ ಸಿರಿ–ಸಂಪತ್ತು, ಸಂತಾನ ಭಾಗ್ಯ ಏನೆಲ್ಲ ಕೂಡಿ ಬೀಳುತ್ತದೆ. ಅದೇ ಆಲಸ್ಯ, ದುಡಿಯದೇ ಸಮಯಹರಣ ಮಾಡಿದರೇನು ಫಲ ಸಿಗುತ್ತದೆ? ಎಂದು ಪ್ರಶ್ನಿಸಿದ್ದಾನೆ. ಅದಕ್ಕೆ ಸುದೈವ ಮತ್ತು ದುರ್ದೈವವೆಂದು ಕರೆಯಲಾಗಿದೆ. ಪರಿಶ್ರಮವಾದಿಗೆ, ಸಚ್ಚಾರಿತ್ರ್ಯವಂತನಿಗೆ ಸುದೈವವು ಒಲಿದರೆ, ಆಲಸಿಗೆ, ಅಮೃತವೂ ವಿಷವಾಗಿ ಪರಿಣಮಿಸುತ್ತದೆ. ಅದು ಆತನೇ ಕಟ್ಟಿಕೊಂಡ ದುರ್ದೈವ ಅಥವಾ



ದುರ್ವಿಧಿ ಎನ್ನಲಾಗಿದೆ. ಮನುಷ್ಯ ಜನ್ಮವೆಂದರೆ ಅರಿವುಳ್ಳ ಪ್ರಾಣಿ! ಅರಿತರೆ ಶರಣ (ಸಂತ ಯೋಗಿ) ನಾಗುತ್ತಾನೆ. ಮರೆತರೆ ಮಾನವನಾಗುತ್ತಾನೆ. ಅರಿವು ಮೂಡಿಸಿಕೊಂಡು ಬದುಕುವವನೇ ಸುದೈವೀ, ವಿದ್ಯಾವಂತ, ಬುದ್ಧಿವಂತ ಎನಿಸಿಕೊಳ್ಳುತ್ತಾನೆ. ವಿದ್ಯೆ ಸಂಪಾದನೆಯೆಂಬುದೊಂದು ಸಿರಿಯಿದ್ದಂತೆ. ವಿದ್ಯೆಯಿಲ್ಲದವನು ಹದ್ದಿಗಿಂತಲೂ ಕಡೆ ಎನ್ನಲಾಗಿದೆ. ವಿಧಿಯು ಕೆಡುಕು–ಒಳಿತುಗಳನ್ನು ನಿರ್ಧರಿಸುತ್ತದೆಯಾದರೂ ತಾನು ಮಾಡುವ ಕರ್ಮಗಳ ಮೇಲೆ ನಿಂತಿರುತ್ತದೆ. ಶುಭವಾದರೆ ಉತ್ತಮ ವಿಧಿ ಎನ್ನುವದುಂಟು. ಅಶುಭವಾದರೆ ಸಮಯ ಸರಿಯಿಲ್ಲ. ಅದು ನಮ್ಮ ವಿಧಿಲಿಖಿತ ದುಃಖ ತಂದಿತು ಎನ್ನುತ್ತೇವೆ. ವಿಧಿಯ ಮೇಲೆ ನಂಬಿ ಭಾರ ಹಾಕಿ ಕುಳಿತುಕೊಳ್ಳುವುದಲ್ಲ. ದುಡಿಯುವುದು ಮತ್ತು ದೇವರ ಮೇಲೆ ನಂಬಿಕೆಯಿಟ್ಟು ದುಡಿದು ಪಡೆಯುದರಲ್ಲಿ ಸುಖವಿದೆ. ಪರರನ್ನು ಅಪಹರಿಸಿದರೆ ದುಃಖವಿದೆ. ಎಲ್ಲವನು ತೊರೆದು ತ್ಯಾಗಿಗಳಾರು ಆಗುವರೋ ವಿಧಿಯಿಂದ ಬರುವ ದುಃಖಗಳು ದೂರವಾಗುವವು ; ಅವರು ಬಡವರಿರಲಿ, ಸಿರಿವಂತರಿರಲಿ. ಯಾರಿದ್ದರೂ ಸರಿಯೇ ಅಂಥವರಿಗೆ ವಿಧಿಯ ಅಂಶ ಕೊಂಚವಾದರೂ ಕೈ ಹಚ್ಚುವುದೆಂದು ಹೇಳಿಕೆಯಿದೆ. ಕೆಲವರು ವಿಧಿಯ ಕಾಡಾಟದ ಮುಂದೆ ಓಡುವವರಾರು? ಎನ್ನುವವರುಂಟು! ಆದರೆ, ಅದಕ್ಕೆ ಅಂಜದೆಯೇ ಧೈರ್ಯದಿಂದ ಮುನ್ನುಗ್ಗುವುದೇ ಉತ್ತಮ ಮಾರ್ಗವೆನ್ನಲಾಗಿದೆ. ಆದುದರಿಂದ ಕೊನೆಯ ಪದದಲ್ಲಿ ತಿರುವಳ್ಳುವರರು ಹೇಳುತ್ತಾರೆ ವಿಧಿಗಿಂತ ಬಲವುಳ್ಳದು ಯಾವುದಿಹುದು? ಮತ್ತೊಂದು ಮಾರ್ಗವ ನೆನೆದರೂ ಅದು ತಾಮುಂದೆ ಬಂದು ನಿಲ್ಲುವುದೆಂದಿದ್ದಾರೆ. ಮಹಾಯೋಗಿ ವೆಮನರು ಹೇಳುವ ವಿಧಿಯ ಕೈವಾಡ:

ಕರ್ಮಕ್ಕೆ ತಕ್ಕ ಪ್ರತಿಕರ್ಮವಿದೆ. ಈ ಪ್ರತಿಫಲದ ಸ್ವರೂಪ, ಆವೇಗಗಳು, ಒಂದು ನಿಯಮಾನುಸಾರ ಘಟಿಸುತ್ತವೆ. ಇದುವೇ ವಿಧಿ ಅಥವಾ ವಿಧಿನಿಯಮ ಎನ್ನಲಾಗಿದೆ. ಈ ವಿಧಿಯನ್ನು ಹೊಂದಿಸುವ ಶಕ್ತಿಯೇ ಇಲ್ಲಿ ಬ್ರಹ್ಮ ಎಂದಿದೆ. ಅದಕ್ಕೇ ವಿಧಿಗೆ ಬ್ರಹ್ಮಲಿಖಿತ ಎಂದು ಕರೆಯಲಾಗಿದೆ. ಬ್ರಹ್ಮ ವಿಧಿಗೆ ಕರ್ತೃ; ಕರ್ಮಕ್ಕೆ ತಾನೇ ಕರ್ತ. ತನ್ನ ಕರ್ಮಾನುಸಾರ ತಾನು ಫಲ ಭೋಗಿಸುತ್ತಾನೆ. 'ಮಾಡಿದ್ದುಣ್ಣೋ ಮಹಾರಾಯಾ' ಎಂದು ಗ್ರಾಮ್ಯರಲ್ಲಿರುವ ಗಾದೆ ಮಾತು ಇದನ್ನೇ ಸೂಚಿಸುತ್ತದೆ. "ಕರ್ಮಣ್ಯೇ ವಾಧಿಕಾರಸ್ತೇ ಮಾಪಲೇಸು ಕದಾಚನ" ಎಂಬ ಗೀತೆಯ ವಾಕ್ಯ ಇದನ್ನೇ ಹೇಳುತ್ತದೆ. ಪಲವು ಯಾವ ಬಗೆಯಾಗಿರಬೇಕೆಂಬುದನ್ನು ಬ್ರಹ್ಮನು ವಿಧಿ ನಿಯಮಾನುಸಾರ ನಿರ್ಧರಿಸುವುದರಿಂದ ಮಾನವನು ಫಲದ ಅಪೇಕ್ಷೆಯನ್ನು ತೊರೆಯದೇ ಗತ್ಯಂತರವಿಲ್ಲ. ತಾನು ಸೌಖ್ಯವನ್ನು ಕೋರಿದರೆ ಸುಖಿಯಾಗುತ್ತಾನೆ. ಆದರೆ, ಶಿವನ ಕರುಣೆಯಿದ್ದರೆ ಮಾತ್ರ. ಹೀಗೆ ತಾನು ಸುಖಿಯಾಗಿದ್ದು,

ಸುಗುಣವಂತನೂ ಆಗಿದ್ದರೆ, ಪ್ರಕೃತಿಯನ್ನು ಮೋದಿಸಿದಾಗ, ಪ್ರಿತಿಸಿದಾಗ ವಿಧಿಯು ಹುಟ್ಟಿಕೊಳ್ಳುವುದೆಂದು ವೇಮನ ಹೇಳುತ್ತಾರೆ.

ಆಗುವ ಕಾರ್ಯ ಆಗೇ ಆಗುತ್ತದೆ. ಆಗದ ಕಾರ್ಯ ಎಂದೂ ಆಗವಾರದು. ಇದರ ಹಿಂದಿನ ಮಹಿಮೆ ವಿಧಿ ನಿಯಮದಲ್ಲಿದೆ, ಮನುಜರಲ್ಲಿಲ್ಲ. ತರುಣಿಗೆ ಶೃಂಗಾರಗಳಿದ್ದು ಗಂಡನ ಕೃಪೆಯಿಲ್ಲವಾದರೆ ಹೇಗೋ ಹಾಗೆಯೇ ವಿಧಿಯು ಬೆನ್ನಿಗಿರದ ಪುರುಷ ಯತ್ನವಾಗುತ್ತದೆ. ತನ್ನ ಪೂರ್ವ ಕರ್ಮದಿಂದ, ತನಗೆ ಭಾಗ್ಯವಿದ್ದರೆ ಕಾರ್ಯ ಸಫಲವಾಗುತ್ತದೆ, ಇಲ್ಲವಾದರೆ ಇಲ್ಲ. ಭಾಗ್ಯಹೀನನಿಗೆ ಪರುಷವೇದಿ ದೊರೆತರೂ ಅದು ನಿಲ್ಲದು. ಈ ಭಾಗ್ಯ ಇಲ್ಲವೆ ವಿಧಿಯನ್ನು ಹಣೆಯ ಬರಹ ಎನ್ನುತ್ತೇವೆ. ಇದನ್ನು ತೆಗೆದು ಹಾಕಲು, ಅಳಿಸಲು ಸಾಧ್ಯವೆ? ಆದುದರಿಂದ ವಿಧಿಯನಿಯಮ ತಿಳಿಯದೇ ತನ್ನ ಕರ್ಮದ ಪೂರ್ವಾಪರ ತಿಳಿಯದೇ, ಶಕುನ, ಮತ್ತಿತರ ಮೂಢ ನಂಬಿಕೆಗಳನ್ನು ಬೆಳೆಸಿಕೊಳ್ಳುವುದು ವ್ಯರ್ಥವೇ ಸರಿ ಎಂದೂ ತಮ್ಮ ಪದಗಳಲ್ಲಿ ತಿಳಿಯಪಡಿಸಿದ್ದಾರೆ ವೇಮನರು –

ವಿಧಿಯು ಬೆನ್ನಿಗಿರಲು ವರವೀವುದು ದೈವ;
ಅದುವೆ ಕರ್ಮದಿಂದ; ಅಲ್ಲ ವಿಧಿಯು
ಕರ್ತ ಅಜನುವಿಧಿಗೆ, ಕರ್ಮಕ್ಕೆ ತಾ ಕರ್ತ ॥ವಿಶ್ವ॥

ವಿಧಿ ಕೃತದೊಳಗಿದೆ ಸಕಲವು;
ವಿಧಿಗೇ ವಿಧಿ ಲೇಸಾಗಿಹ ವಿಷ್ಣುವ ನುತಿಸರ್,
ವಿಧಿ ಯಾರಿಗಾದರೂ ಬಹುದು;
ವಿಧಿ ಬ್ರಹ್ಮವು, ತಿಳಿದು ತಿಳಿದು ಬೆಳಗೈ ವೇಮಾ.

ಸೌಖ್ಯವರಿಯುವಂತೆ ಸೌಖ್ಯವಾಗುತಿಹುದು
ಹರನಂ ಕೃಪೆಯಿಂ ಸೌಖ್ಯ ಹೊಂದಿ ಉಂಟು;
ಸುಖ ಅಸುಖಗಳಿಗೆ ಶೂಲಿ ಕಾರಣನಿಹ ॥ವಿಶ್ವ॥

ಸುಖಸುಖದಲಿ ತಾನು ಸುಗುಣವಾಗುತಿರೆ,
ಪ್ರಕೃತಿ ಮದುವೆಗೆಯ್ದು ಪರವ ಕೆಡಿಸಿ,
ವಿಧಿಗಳ ಹುಟ್ಟಿಸುವ ವಿಧಿಯ ತಾನು ಕಾಣ ॥ವಿಶ್ವ॥

ಬೇಡವೆನಲು ಬಿಡದು;ಬೇಕು ಎನಲು ಬರದು
ತಾನು ಮಾಡಿದಂಥ ದಾನ ಫಲವು
ಹೃದಯದಲ್ಲಿ ದುಃಖಪಡದಿರುವುದೇ ಯೋಗ ॥ವಿಶ್ವ॥



ಲೋಭ ಮೋಹದಿಂದ ಲಾಭ ಪ್ರಾಪ್ತಿಯಿರದು
ನೆನೆದ ಕಾರ್ಯವೆಲ್ಲಾ ನೆರವೇರಲಾರವು
ತಾನೊಂದು ಬಗೆದರೆ ದೈವದ ಬಗೆಯೊಂದು ॥ವಿಶ್ವ॥

ತನಗೆ ಭಾಗ್ಯವಿರಲು ದಕ್ಕೂವುದಲ್ಲದಿರೆ
ಇರುವ ಭಾಗ್ಯವೆಲ್ಲ ಇಲ್ಲವೆಂದು
ನಂಬಿಕೊಂಡು ನೋಳ್ಪ ನರನೇ ಆದ ಯೋಗಿ ॥ವಿಶ್ವ॥

ಎದುರು ಸಿರಿಯ ಕಂಡು, ಎಷ್ಟೋ ಅಳುವವರಿಗೆ
ಭಾಗ್ಯವೆಂತು ಕೊಡುವ ಪರಮ ಗುರುವು?
ತನ್ನ ಪೂರ್ವ ಕರ್ಮ ದೈವವೇನರಿವುದೆ? ॥ವಿಶ್ವ॥

ಎಲೆ ಮೇಲಿನ ಬರಹ ಎಲ್ಲರಿಗೂ ತಿಳಿವುದು
ಕೈಯೊಳಗಿನ ಬರಹ ಕಾಣಬಹುದು
ತೊಗಲು ಹಿಂದಿನ ಬರಹ ದೊಡ್ಡವನು ಅರಿವನೆ? ॥ವಿಶ್ವ॥

ಕೇಡು ಬಂದಿತೆಂದು ಕೆಟ್ಟದೆನುವ ದೈವ
ಮೇಲು ಬಂದಿತೆಂದು ಮೆಚ್ಚು ತನಗೆ
ಕೇಡು ಮೇಲು ತಿಳಿಯ, ಗೈದ ಕರ್ಮವಷ್ಟೇ ॥ವಿಶ್ವ॥

ಶುಭದ ಶಕುನ ನಂಬಿ ಶುಭ ಲಗ್ನವೆಂಬರು
ಒಬ್ಬರವಯೊಳಿಲ್ಲ, ಅಬ್ಬ ಜಗದಿ!
ಹಬ್ಬ ಹರುಷ ಜಗದಿ ಶಕುನದಲ್ಲಿಹವೇ? ॥ವಿಶ್ವ॥

ಹಲ್ಲಿ ನುಡಿಯೆ ಕೇಳಿ, ಪ್ರಜರು ತಮ್ಮ ಕಾರ್ಯ
ಸಫಲವಾಗುವುದೆಂದು ಸಂತಸಿಪರು
ಘಟಿಸದಿರಲು ಕಾರ್ಯ, ಕರ್ಮ ತಮ್ಮದೆನುವರು ॥ವಿಶ್ವ॥

ತನ್ನ ಮನಸ್ಸಿನಿಂದ ತರ್ಕಿಸಿ ಜ್ಯೋತಿಷ
ಎಷ್ಟು ಗೈದನೆಂದು ಯೋಚಿಸುವುದು
ತನ್ನ ಅದೃಷ್ಟವನು ದೈವ ತಿಳಿಯದೇನು? ॥ವಿಶ್ವ॥

ವಿಧಿ ಎಂಬುದು ನಾವು ಮಾಡುವ ಕರ್ಮ ಅಥವಾ ಕ್ರಿಯಾಚರನೆಯಿದೆಯೇ ಹೊರತು ಅದು ದೈವಲೀಲೆಯಲ್ಲಿಲ್ಲ. ಒಳಿತು ಮಾಡಿದರೆ ಪುಣ್ಯದ ರಾಶಿ; ಅದೇ ರೀತಿಯಾಗಿ ಕೆಡುಕು ಮಾಡಿದರೆ ಪಾಪದ ಕೂಪ! ಇದನ್ನು ನಾವು ಮಾಡಿಕೊಂಡಿದ್ದು ಎಂದಿದ್ದಾರೆ ಯೋಗಿಗಳು, ಹಲ್ಲಿ, ಬೆಕ್ಕು, ಮುಂಗೂಸಿ, ತಮ್ಮಷ್ಟಕ್ಕೆ ತಾವು ತಮ್ಮ

ಪಾಡಿಗೆ ಹೋಗುತ್ತಿರುತ್ತವೆ. ಎಡದಿಂದ ಬಲಕ್ಕೆ ಬೆಕ್ಕು ಅಥವಾ ಮುಂಗೂಸಿ ಬಂದರೆ ಶುಭ, ಬಲದಿಂದ ಎಡಕ್ಕೆ ಬಂದರೆ ಅಶುಭವೆಂದು ಭಾವಿಸಿಕೊಂಡು ನಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ಆಗು ಮಾಡುತ್ತೇವೆ. ಸಹಜ ನಾವು ಮಾತನಾಡುವಾಗ ಹಲ್ಲಿಯು ಲೊಚಗುಡುತ್ತಿದ್ದರೆ ಶುಭ-ಅಶುಭವೆಂದು ತಿಳಿದುಕೊಳ್ಳುತ್ತೇವೆ. ಆದರೆ ನಾವು – ಮಾಡುವ ಕೃತ್ಯದಲ್ಲಿದೆಯೆಂದುದಾಗಿ ವೇಮನರು ಸ್ಪಷ್ಟವಾಗಿ ಹೇಳಿದ್ದಾರೆ.

ವಿಧಿಯು ಬೇಡವೆಂದರೆ ಬಿಡದು, ಬಾ ಯೆಂದರೆ ಬರದು. ಸುಗುಣ ವಂತನಾಗಿ ಭಕ್ತಿ-ಶ್ರದ್ಧೆಯಿಂದ ದೇವರ ಮೇಲೆ ನಂಬಿಕೆಯಿಟ್ಟು ದುಡಿದರೆ ಏನೆಲ್ಲ ಪ್ರಾಪ್ತಿಯಾದೀತೆ ಹೊರತು ದುಡಿಯದೇ ವಿಧಿಯ ಮೇಲೆ ನಂಬಿ ನಡೆದರೆ ಹೊಟ್ಟೆ ತುಂಬುವುದೇ? ಇಲ್ಲವಲ್ಲ! ಕೇಡೆಂಬುದಾಗಲಿ, ಮೇಲು ಎಂಬುದಾಗಲಿ ತಿಳಿಯದೆಯೆ ನಾವು ಗೈಯ್ಯುವ ಕರ್ಮದಿಂದಲೇ ಮಾತ್ರ. ಶಕುನ, ಭವಿಷ್ಯ ನಂಬಿ ನಡೆಯದಿರು ಇಹದಲಿ, ನಿಷ್ಠೆ ಸತ್ಯ, ಪ್ರಾಮಾಣಿಕತೆಯಿಂದ ದುಡಿಯುದೊಂದೇ ನಿನ್ನ ಕರ್ತವ್ಯ ಮನುಜ ಎಂದಿದ್ದಾರೆ ವೇಮನರು. ಲೋಭ-ಮೋಹ ಅತಿಯಾಸೆ ಮಾಡುವುದು ತರವಲ್ಲ. ನೆನೆದ ಕಾರ್ಯವೆಲ್ಲ ನೆರವೇರಿಸಲಾರವು. ತಾನೊಂದು ಬಗೆದರೆ ದೈವವೊಂದು ಬಗೆಯಿತು ಎಂಬಂತೆ! ಎಂಬುದನು ಅರಿತು ನಡೆಯಿರೆಂದ ವೇಮನ!

ಇವರಿಬ್ಬರೂ ಮಹಾತ್ಮರ ಹೇಳಿಕೆಗಳನ್ನು ಗಮನಿಸಿದಾಗ ವಿಧಿಗೆ ಗುರಿಯಾಗಿ ಬದುಕು ಹಾಳು ಮಾಡಿಕೊಳ್ಳಬೇಡಿರಿ. ನಿಷ್ಠೆಯಿಂದ ದುಡಿಯಿರಿ. ಬಂದ ಪ್ರಾಪ್ತಿಯಲ್ಲಿ ತಿಂದುಂಡು ಸುಖದಿಂದಿರಿರೆಂಬುದಾಗಿ ತಮ್ಮ ತಮ್ಮ ಪದಗಳಲ್ಲಿ ತಿಳಿಯಾದ ಭಾಷೆ ಮತ್ತು ತಿಳಿಯಾದ ಶೈಲಿಯಲ್ಲಿ ನಮಗೆಲ್ಲ ತಿಳಿಯಪಡಿಸಿದ್ದಾರೆ. ಇಂಥವುಗಳನ್ನು ಓದಿ ಅದರಂತೆ ನಡೆದುಕೊಳ್ಳೋಣವೆಂದು ನನ್ನ ನಿಲುಮೆಯಾಗಿದ್ದು; ನಿಮ್ಮದೂ ಆಗಲೆಂದು ನನ್ನ ಅಭಿಲಾಷೆಯಾಗಿದೆ.

## ಈ. ಅರ್ಥ ವಿಭಾಗ

ಅರ್ಥ ಎಂದರೆ ಸಂಪತ್ತು. ಅದು ಹಣವೂ, ಧನ-ಕನಕವೂ, ದವಸ ಧಾನ್ಯಗಳೂ ಇರಬಹುದು. ಅವುಗಳ ಅತಿಯಾದ ಸಂಗ್ರಹವಿರಬಾರದೆಂಬುದು ಮಹಾನ್ ಚಿಂತಕರ, ಸಮಾಜ ವಿಜ್ಞಾನಿಗಳ ಅಭಿಪ್ರಾಯ. ಅರ್ಥದಿಂದಲೇ ಬದುಕಿಗೆ ಅರ್ಥ ಬರುತ್ತದೆಯೇನೋ ನಿಜ; ಆದರೆ, ಅದು ಸಮಾಜದ ಉದ್ಧಾರಕ್ಕಾಗಿ ವಿನಿಯೋಗವಾಗುವಂತಿರಬೇಕು. ಅಂದರೆ ಸಮಾಜ ಭದ್ರ ಅಥವಾ ಸುಸ್ಥಿರವಿರಬೇಕಾದರೆ ಆರ್ಥಿಕ ಸಮಾನತೆಯೆಂಬುದು ಸರಿಯಾಗಿರಬೇಕು. ಇದರಿಂದ ಸಿರಿವಂತರು ಬಡವರು ಎಂಬ ಭೇದಭಾವನೆ ಬರಲಾರದು. ಅಧ್ಯಾತ್ಮವಾದಿಗಳು ಹೇಳಿರುವುದೇನೆಂದರೆ ಹಣವ ಗಳಿಸಬೇಕೆಂಥಾದು ಯಾರೂ ಕದಿಯಲಾರದಂಥದ್ದು: ಅದಾವುದೆಂದರೆ ವಿದ್ಯೆ ಅಥವಾ ಜ್ಞಾನ, ಜೀವನಕ್ಕೆ ಧನ(ಹಣ) ಅವಶ್ಯಕತೆಯೆಂಬು-ದಾಗಿದ್ದರೂ ದಿನ ನಿತ್ಯದ ಬದುಕಿಗೆ ಬೇಕಾಗುವಷ್ಟಾದರೆ ಸಾಕು. ಇದ್ದುದರಲ್ಲಿಯೇ ತೃಪ್ತಿಯಿಂದ ಬದುಕ ಬಯಸುವುದೇ ನಮ್ಮದಾಗಬೇಕೆಂದಿದ್ದಾರೆ. ಸಿದ್ಧೇಶ್ವರ ಶ್ರೀಗಳವರು ಹೇಳಿದ್ದೇನೆಂದರೆ "ಹಣವನ್ನು ನೀರಿನಂತೆ ಗಳಿಸಿರಿ – ಆದರೆ, ತುಪ್ಪದಂತೆ ಬಳಸಿರಿ" ಎಂದಿದ್ದಾರೆ. ಗಳಿಸಿದ್ದುದರಲ್ಲಿ ಬಳಸಿರಿ-ಉಳಿಸಿರಿ ದಾಸೋಹಗೈಯ್ಯಿರಿ ಎಂದಿರುವುರು. ಧನ ಸಂಗ್ರಹ ಮಾಡುವುದು ಹೆಚ್ಚು ಅಪಾಯಕಾರಿ ಎಂಬುದನ್ನು ದಿನನಿತ್ಯವೂ ನಾವು ಕಾಣುತ್ತೇವೆ. ನಮ್ಮ ಹತ್ತಿರ ಹಣವು ಕೂಡಿಬಿದ್ದಿದ್ದರೆ ಸಂಗ್ರಹವಿದ್ದಿದ್ದರೆ ಪ್ರಾಣಕ್ಕೆ ಸಂಚಕಾರವೆಂಬುದನ್ನು ನಾವು ನಿತ್ಯವೂ ಕಾಣುತ್ತೇವೆ.



ಪ್ರತಿಯೊಬ್ಬರ ಜೀವನಮಟ್ಟ ಸುಧಾರಣೆಯಾಗಬೇಕಾದರೆ ಅವರವರ ಆರ್ಥಿಕ ಮಟ್ಟ ಚೆನ್ನಾಗಿರಬೇಕಾಗುತ್ತದೆ. ಇದಕ್ಕೆ ಧನ ಸಂಗ್ರಹವು ಬದುಕಿನ ಅವಿಭಾಜ್ಯ ಅಂಗವಾಗಿರುತ್ತದೆ. ಪ್ರತಿಯೊಬ್ಬರೂ ನಾನಾ ವ್ಯವಹಾರಗಳಿಂದ ಹಣ ಸಂಗ್ರಹಕ್ಕಾಗಿ ದಿನವೂ ಹೋರಾಟ ಮಾಡಲೇಬೇಕು. ಈಗ ಹಣದ ಜಗತ್ತು ನಿರ್ಮಾಣವಾಗಿದೆ. " ಹಣವಿಲ್ಲದವನು ಹೆಣಕ್ಕಿಂತ ಕಡೆ" ಎನ್ನುವಂತಾಗಿದೆ. ಹಣದಿಂದ ಏನೆಲ್ಲಾ ಹಗರಣಗಳು, ಅವ್ಯವಹಾರಗಳು ನಡೆದಿವೆ. ಹೊಡೆದಾಟ – ಬಡಿದಾಟಗಳೂ ನಡೆದಿವೆ. ಯಾವ ಕಾರ್ಯಕ್ಕಾಗಲಿ ಹಣಬೇಕು. ಹಣವಿಲ್ಲದೆ ಬಾಳರಥವು ಸಾಗಲಾರದು. ಸಮಾಜದ ಅಭಿವೃದ್ಧಿಯೂ ಆಗಲಾರದು. ಅರ್ಥವಿಲ್ಲದ ಬದುಕು ವ್ಯರ್ಥ ಎಂಬಂತಾಗಿದೆ. "ಆವ ನೇಮವಾದರೇನು ಹೇಮವಿಲ್ಲದಂಗೈಸಬಹುದೇ?" ಎಂದಿದ್ದಾರೆ ಬಸವಣ್ಣನವರು. ಅದರಲ್ಲೂ ಮಾನವನಿಗೆ ಧನದಾಶೆ ಬಿಡದೂ ಎಂದಿದ್ದಾರೆ. ಅತ್ಯುತ್ತಮ ವಿನಿಮಯಕ್ಕೆ ಮಾಧ್ಯಮವೆನಿಸಿದ ಹಣ ಮಾನವನ ಶ್ರೇಷ್ಠ ಆವಿಷ್ಕಾರಗಳಲ್ಲೊಂದು. ಬದುಕಿನಲ್ಲಿ ಹಣದ ಪ್ರಭಾವ ಗಣನೀಯವಾಗಿದೆ. ಹಣವೊಲ್ಲದ ಅಣ್ಣಗಳಾರಿದ್ದಾರೆ ಹೇಳಿ ಎಂದಂತಾಗಿದೆ. ಹಣವುಳ್ಳವನಿಗೇ ಮಾತ್ರ ಆ ಕಡೆಗೆ ಬನ್ನಿ ಈ ಕಡೆಗೆ ಬನ್ನಿ ಎನ್ನುತ್ತಾರೆ. ಇಲ್ಲದವರನ್ನು ದರಕಾರ ಮಾಡುವುದಿಲ್ಲ. ಅದಕ್ಕೆ ಕೊಳ್ಳುವ ಶಕ್ತಿಯಿದೆ. ಆದರೂ ಇದಕ್ಕೆ ಇತಿಮಿತಿಗಳಿರಬೇಕು. ಅತಿಯಾದ ಲೋಭ-ಮೋಹ ಅತ್ಯಂತ ಅಪಾಯಕಾರಿ ಎಂಬುದನ್ನು ಈ ಹಿಂದಿನ ಧರ್ಮ ಭಾಗದಲ್ಲಿ ನೋಡಲಾಗಿದೆ. ಆದರೆ ಓರ್ವ ಅರ್ಥಶಾಸ್ತ್ರಜ್ಞ ಹೇಳುವಂತೆ ಹಣಕ್ಕೆಷ್ಟು ಅವಕಾಶ ಕೊಡಬೇಕು. ಅದನ್ನು ನಾವು ನಿರ್ಧರಿಸಿಕೊಳ್ಳಬೇಕು. ಅದುವೇ ಜೀವನದ ಸರ್ವಸ್ವವಲ್ಲ. ಹಣಕ್ಕೆ ಗುಲಾಮರಾದರೆ ನಮ್ಮ ಶಕ್ತಿ-ಸಾಮರ್ಥ್ಯ ಕುಂದುತ್ತದೆ ಎಂದಿದ್ದಾರೆ.

ಹಣವು ಜೀವನದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡು "ಬದುಕಿಗಾಗಿ ಹಣ" ಎಂಬ ಮಾತನ್ನು ಸುಳ್ಳಾಗಿಸಿ "ಹಣಕ್ಕಾಗಿ ಬದುಕು" ಎಂಬ ಮಾರ್ಗ ಇಂದು ಸೃಷ್ಟಿಯಾಗಿದೆ. "ಅರ್ಥಶಾಸ್ತ್ರವು ನೈತಿಕತೆಯ ಪಾತಳಿಯ ಮೇಲೆ

ನಿಲ್ಲಬೇಕು ಮತ್ತು ಮಾನವ ಸಹಜವಾಗಿಯೇ ಸ್ವಾತಂತ್ರ್ಯ ಅನುಭವಿಸಬೇಕು" ಎಂಬುದಾಗಿ ಆ್ಯಡಂಸ್ಮಿತ್‌ರ ಮಾತು ಇಂದಿನ ಸಮಾಜಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇದೇ ಮಾತನ್ನು ಸಾಕಾರಗೊಳಿಸುವಲ್ಲಿ ಬಸವಣ್ಣನವರು ೧೨ನೆಯ ಶತಮಾನದಲ್ಲಿ ಆರ್ಥಿಕವಾಗಿ ಸರಿಸಮಾನತೆಯನ್ನು ತರುವಲ್ಲಿ ಕಾಯಕ ಮತ್ತು ದಾಸೋಹವೆಂಬ ಸೈದ್ಧಾಂತಿಕತೆಯ ನೆಲೆಗಟ್ಟನ್ನು ಕಂಡುಕೊಂಡಿದ್ದರು. ಸಮಾಜದ ಸರ್ವತೋಮುಖ ಬೆಳವಣಿಗೆಗೆ, ಶೋಷಣೆರಹಿತ ಬದುಕಿಗೆ, ಸರಳ ಸೂತ್ರಗಳನ್ನು ಬೋಧಿಸಿದರು. ಇಂದಿನಂತೆ ಅಂದಿನ ವ್ಯವಹಾರ ಚತುರರೂ ಸಹ, ಗಳಿಸಿದ ಸಂಪತ್ತನ್ನು ಕ್ರೋಢೀಕರಿಸುತ್ತಿದ್ದುದುಂಟು. ರಾಜಕೀಯ ಪ್ರೇರಿತರಾಗಿ ಹೊಗಳು ಭಟ್ಟರಾಗಿ, ಆಡಳಿತದ ಮೇಲೆ ಹಿಡಿತ ಸಾಧಿಸುವುದರ ಸಲುವಾಗಿ ಕೆಲವರು ದುರ್ಬಲರ ಶೋಷಣೆ, ಕಪ್ಪುಹಣ, ಅಕ್ರಮ ವ್ಯವಹಾರ ಪ್ರಯತ್ನಗಳಿಂದ ಲಾಭ ಹೆಚ್ಚಿಸಿಕೊಳ್ಳುತ್ತಾ ಆರ್ಥಿಕ ವ್ಯವಸ್ಥೆಯನ್ನೇ ಮಲಿನಗೊಳಿಸುತ್ತಿದ್ದರು. ಇದರಿಂದ ಸಮಾಜೋಭಿವೃದ್ಧಿಯಲ್ಲಿ ಅಸಮತೋಲನ! ನಿರುದ್ಯೋಗ, ಪರಿಸರ ಮಾಲಿನ್ಯ, ಬಡತನ ಮುಂತಾದ ಸಮಸ್ಯೆಗಳು ಉದ್ಭವಿಸಿ ಆರ್ಥಿಕ ಕ್ಷೇತ್ರವು ಅಸಮರ್ಪಕವಾಗಿತ್ತು. ಸಂಪತ್ತಿನ ಸಂಗ್ರಹ ಬೆಳೆದಂತಲ್ಲ ಮನುಷ್ಯ ಮನುಷ್ಯನಲ್ಲಿ ವಿಕಾರ ಗುಣಗಳು ಬೆಳೆಯುತ್ತ ಬಂದವು. ಇದರಿಂದ ತಾರತಮ್ಯ ಭಾವನೆಯುಂಟಾಗಿ ಕದನಗಳು, ಸಾವು–ನೋವುಗಳು ಸಂಭವಿಸಿದವು. ಬಡವ–ಬಲ್ಲಿದರೆಂಬ ಭೇದಭಾವ ಉತ್ಪತ್ತಿಯಾಗಿ ದಬ್ಬಾಳಿಕೆಯ ಅಟ್ಟಹಾಸ ಪ್ರಾರಂಭವಾಯಿತು. ಸಮಾಜದಲ್ಲಿ ಆರ್ಥಿಕ ಅಸಮಾನತೆಯು ಬೆಳೆಯುವಂತಾಯಿತು. ದೇಶವನ್ನಾಳುವವರೂ ಅಂದು–ಇಂದೂ ಕೂಡ ಹಣಕ್ಕೆ ಹೆಚ್ಚು ಮಹತ್ವ ಕೊಟ್ಟು ಏನೆಲ್ಲ ಹೀನ ಕಾರ್ಯಗಳನ್ನು ಮಾಡಬಲ್ಲರು ಎಂಬುದನ್ನು ನಿತ್ಯವೂ ಕಾಣುತ್ತೇವೆ. ಒಬ್ಬನ ಕೂಡಿಕೆಯು ಮತ್ತೊಬ್ಬನ ಇಲ್ಲಮೆಗೆ ಕಾರಣವಾಗುತ್ತದೆ. ಆದುದರಿಂದ ಬಸವಣ್ಣನವರು ಹೇಳಿದ್ದೇನೆಂದರೆ "ಧನವನಿರಿಸದಿರಾ, ಇರಿಸಿದರೆ ಭವಬಪ್ಪುದು ತಪ್ಪದು" ಎಂದಿರುವುದನ್ನು ನಾವಿಂದು ಆಲೋಚನೆ ಮಾಡಿ ಬದುಕು ಸಾಗಿಸಬೇಕಾಗಿದೆ. ಅಂದರೆ ಅವರು ಹೇಳಿದುದೇನೆಂದರೆ ಧನ ಸಂಗ್ರಹದಿಂದ ಘೋರವಾದ ಪಾಪವೇ ಪ್ರಾಪ್ತವಾಗುತ್ತದೆಯೆಂದು. ದ್ರವ್ಯವನ್ನು ಸಂಪಾದನೆ ಮಾಡುವುದು ತಪ್ಪಲ್ಲ, ಆದರೆ, ಮತ್ತೆ ಅದನ್ನು ಬಳಸದೇ ಹಾಗೆಯೇ ಕ್ರೋಢೀಕರಿಸಿಡುವುದು ಸಮಾಜಕ್ಕೆ ಹಾನಿಯಾಗುತ್ತದೆಯೆಂದಿದ್ದಾರೆ. ಹಣವಿದ್ದರೂ ಮಿತವ್ಯಯದ ತತ್ತ್ವಾಚರಣೆಯು ಮಾನವ ಜೀವನವನ್ನು ಪಾರು ಮಾಡುವ ಸೂತ್ರವೆಂದಿದ್ದಾರೆ. ಗಳಿಕೆಯಲ್ಲಿ ನೂರೆಂಟು ದಾರಿಗಳಿದ್ದರೂ ಕಾಯಕದ ಮಾರ್ಗದಿಂದ ಮಾತ್ರ ಅದು ಮನುಕುಲದ ಭಾಗವಾಗಬೇಕು. ಕಾರೆ ಸೊಪ್ಪಾದರೂ ಕಾಯಕದಿಂದ ಬರಬೇಕು. ನೀವು ಆವ ಕಾಯಕವ ಮಾಡಿದರೂ ಸ್ವಕಾಯಕವ ಮಾಡಬೇಕೆಂದಿದ್ದಾರೆ ಬಸವಾದಿ ಶಿವಶರಣರು.



ಹಾಗೆಯೇ ತಿರುವಳ್ಳುವರರು ಮತ್ತು ಮಹಾಯೋಗಿ ವೇಮನರೂ ಅರ್ಥವನ್ನು ಮಡುಗದಿರಿ ಎಂದು ತಮ್ಮ ಪದ–ಪದ್ಯಗಳಲ್ಲಿ ಹೇಳಿರುವುದನ್ನು ಗಮನಿಸುವಂತಿವೆ.

**ತಿರುವಳ್ಳುವರರು ಹೇಳಿದ್ದು ಹೀಗೆ :**

ತಿರುವಳ್ಳುವರರು ಅರ್ಥ ಭಾಗಕ್ಕೆ ಬಳಸಿರುವ ಪರಿಭಾಷೆ **"ಪೊರುಳ್"** ಎಂಬುದು. 'ಅರ್ಥ' ವೆಂದರೆ ಬರೀ ಹಣಗಳಿಕೆಯೆಂದು ತಿಳಿಯಬಾರದು. ವಿದ್ಯೆ, ಜ್ಞಾನ, ಸಜ್ಜನರ ಸ್ನೇಹ, ರಾಜನೀತಿ, ಮಂತ್ರಿಮಂಡಲ, ಪುರುಷ ಪ್ರಯತ್ನ, ರಾಯಭಾರ ರಾಷ್ಟ್ರಭಕ್ತಿ, ಸೈನ್ಯ, ಕೃಷಿ ಉದ್ಯಮ ಮುಂತಾಗಿ ಅರ್ಥ ಭಾಗಕ್ಕೆ ಸಂಬಂಧಪಟ್ಟ ವಿಷಯಗಳಾಗಿವೆ. ಅದರಲ್ಲೂ ನಮ್ಮ ದೇಶ ಕೃಷಿ ಪ್ರಧಾನವಾದುದು. ಪ್ರತಿಶತ ಎಪ್ಪತ್ತರಷ್ಟು ಜನಸಂಖ್ಯೆ ಕೃಷಿ ಆಧಾರಿತವಾಗಿದೆ. ಕೃಷಿಯೇ ವಿಶ್ವದ ಜೀವ ನಾಡಿಯಿದ್ದಂತೆ; "ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲು; ಮೇಟಿಯಿಂ ರಾಟಿ ನಡೆದುದಲ್ಲದೆ ದೇಶದಾಟವೇ ಕೆಡುಗು" ಎಂದು ಸರ್ವಜ್ಞ ಕವಿಯೂ ಹೇಳಿದಂತೆ, ಮಹರ್ಷಿ ತಿರುವಳ್ಳವರರು ವಿಶ್ವದಲ್ಲಿ ಎಷ್ಟೇ ಉದ್ಯಮಗಳಿದ್ದರೂ ಕೃಷಿ ಉದ್ಯಮವೇ ಸರ್ವಶ್ರೇಷ್ಠವೆಂದು ಹೇಳಿದ್ದಾರೆ. ಕೃಷಿಕನೇ ನಿಜವಾದ ಒಡೆಯ ಮತ್ತು ದಾನಿ; "ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜನವೆಲ್ಲ" ಎಂದಿದ್ದಾರೆ. ಆದುದರಿಂದ ನಮ್ಮನ್ನಾಳುವ ಪ್ರಭುಗಳು ಪ್ರಜೆಗಳ ಕಲ್ಯಾಣ ಬಯಸುವ ಅನ್ನದಾನಿಗಳಾದ ಅನ್ನದಾತರನ್ನು ಕೃಪಾ ದೃಷ್ಟಿಯಿಂದ ಕಾಣುವುದೊಳಿತು. ಮಹರ್ಷಿಗಳು ರಾಜನ, ಸಚಿವನ ಲಕ್ಷಣವೇನೆಂಬುದರ ಕುರಿತು ಹೇಳಿರುವುದನ್ನು ಇಂದಿನ ಪಿಎಂ/ಸಿಎಂಗಳು/ಇತರರು ನಮ್ಮನ್ನಾಳ್ವ ಪ್ರಭುಗಳು ಗಮನಿಸಬೇಕು.

ಪಡೆ, ಪ್ರಜೆ, ಸಿರಿ, ಮಂತ್ರಿ, ಮೈತ್ರಿ, ಕೋಟೆ – ಈ ಆರು
ಅಂಗಗಳ ಪಡೆದವನು ಅರಸರಲಿ ಸಿಂಹ

ನಿರ್ಭೀತಿ, ದಾನ ಜ್ಞಾನ, ಉತ್ಸಾಹ ಈ ನಾಲ್ಕನೂ
ನೀಗದಿರುವುದು ರಾಜ ಲಕ್ಷಣವದು.

ಜಾಗೃತಿ, ವಿದ್ಯೆ, ಸಾಹಸ – ಇವು ಮೂರನೂ
ಬಿಡದಿರುವುದು ನೆಲನಾಳುವವರು

ಧರ್ಮವ ಬಿಡದೆ ದ್ವೇಷಗಳ ಕಳೆದು ಶೌರ್ಯದಿಂದಿಹ
ಮಾನವಂತನೇ ಅರಸನು

ಐಸಿರಿಯ ಗಳಿಸಿ, ಉಳಿಸಿ, ರಕ್ಷಿಸಿ, ತಕ್ಕುದಕೆ
ವಿನಿಯೋಗಿಸಬಲ್ಲವನೇ ಅರಸನು

ನ್ಯಾಯದಿಂದ ಪ್ರಜೆಗಳನು ರಕ್ಷಿಸುವ ರಾಜನನು
ಜನರು ದೇವರೆಂದು ಮನ್ನಿಸುವರು

ದಾನ, ದಯೆ, ಋಜು ಪ್ರಭುತ್ವ, ಪ್ರಜಾರಕ್ಷಣೆ ಈ ನಾಲ್ಕು
ಗುಣವುಳ್ಳವನು, ಅರಸರೊಳಗೆಲ್ಲಾ ಜ್ಯೋತಿಯಂತಿಹನು.

ತಿರುವಳ್ಳುವರರು ಹೇಳಿದ ಈ ಪದಗಳಲ್ಲಿರುವ ಉಪದೇಶಾಮೃತವನ್ನು ನಮ್ಮನ್ನಾಳುವವರು ಪರಿಪಾಲನೆ ಮಾಡಿದ್ದೇಯಾದರೆ ಸರ್ವರೂ ಸುಖದಿಂದ ಬಾಳಲು ಸಾಧ್ಯವಾದೀತು. ಧರ್ಮದ ನಡೆ, ದಾನ, ದಯೆಯುಳ್ಳ ಗುಣವುಳ್ಳವರು ಸಮಾಜದಲ್ಲಿ ಸುಖದಿಂದ ಇರಬೇಕಾದರೆ ಆಳುವವರ ಕೈಯಲ್ಲಿಯೇ ಇದೆಯೆಂಬ ಸೂತ್ರವನ್ನು ತಿರುವಳ್ಳುವರರು ಬಹು ಸರಳವಾಗಿ ನಿರೂಪಿಸಿದ್ದಾರೆಯೆಂದು ಹೇಳಬಹುದು. ಪ್ರಜೆಗಳ ಕಲ್ಯಾಣ ಬಯಸುವಂತಹ ಸಚಿವ ಸಂಪುಟ ಇಂದು ನಮಗೆ ಬೇಕಾಗಿದೆಯೆಂದು ಯಾರಿಗಾದರೂ ಅನ್ನಿಸದಿರದು.

ಸರ್ವಕಾಯಕಗಳಲಿ ನೇಗಿಲಯೋಗಿಯದೇ ಮಹತ್ವದ್ದು. ಇಡೀ ದೇಶಕ್ಕೆ ಅನ್ನ ಹಾಕುವವನೇ ನೇಗಿಲಯೋಗಿಯು. ನೇಗಿಲಯೋಗಿಯನ್ನು ನಾವೆಂದೂ ಕಡೆಗಣಿಸಬಾರದು. ಮಣ್ಣಿನ ಮಗನಾಗಿ ದುಡಿದು ನಮಗೆಲ್ಲರಿಗೂ ಅನ್ನ ನೀಡುವ ಯೋಗಿಯಾತ. ಆತನ ಮುಂದೆ ಸಿರಿವಂತರಾರೂ ಇಲ್ಲ. ಆದುದರಿಂದ ರೈತನ ಕುರಿತು ತಿರುವಳ್ಳುವರರು ಹೀಗೆ ಹೇಳಿದ್ದಾರೆ.

ಹಲ ವೃತ್ತಿಗಾಗಿ ಲೋಕ ಪರದಾಡಿದರೂ ನೇಗಿಲ ಕಾಯಕದಿಂದ
ನೆಲಸಿಹುದದು; ಶ್ರಮವಿದ್ದರೂ ಉಳಿಮೆಯೇ ಮೇಲದಕೆ.

ಉಳುವವರೇ ಈ ವಿಶ್ವರಥದ ಕಡಾಣಿಯಾಗಿಹದು, ಗೆಯ್ಮೆ
ಮಾಡಿದಿರುವವರ ಅವರು ಹೊತ್ತಿರುವುದರಿಂದಲಿ.

ತಾವು ಉತ್ತುದನುಂಡು ಬಾಳುವವರೇ ನಿಜದಿ ಬಾಳ್ವವರು
ತಾಳಿದವರು ಅವರ ಮುಗಿದುಂಡು, ಬಾಳ್ವವರು,

ಹಲವು ಬೆಳ್ಗೊಡೆಯ ನೆಳಲನೂ ತಮ್ಮ ಬೆಳ್ಗೊಡೆಯ ಅಡಿಯಲಿಡುವರು
ಹುಲುಸಾದ ಬೆಳೆಯ ಪಡೆದ ಕರುಣಾಳು ಕೃಷಿಕರು.

ಅನ್ಯರನು ಬೇಡದೆ ಬೇಡುವವರಿಗೂ ವಂಚಿಸದೆ ಕೊಡುವರು
ತಮ್ಮ ಪರಿಶ್ರಮದಲಿ ಉಣ್ಣುವ ಗುಣವುಳ್ಳ ರೈತರು.

ರೈತರು ತಮ್ಮ ಕೈಕಟ್ಟಿ ಕುಳಿತರೆ, ಬಯಕೆಗಳ
ಬಿಟ್ಟೆವೆಂಬ ಋಷಿಗಳು ತಮ್ಮ ತಪವ ಕೈಬಿಡುವರು.



ನೆಲದ ಮಣ್ಣೆಲ್ಲವನು ಅವರ ಕಾಲುಭಾಗವಾಗುವಷ್ಟು ಒಣಗಿಸಲು
ಒಂದು ಹಿಡಿ ಗೊಬ್ಬರವಿಲ್ಲದೆ ಬೆಳೆ ಹೆಚ್ಚುವುದು\

ಉಳುವುದಕ್ಕಿಂತ ಗೊಬ್ಬರ ಹಾಕುವುದು ಲೇಸು; ಕಳೆ ತೆಗೆದ ಬಳಿಕ
ನೀರು ಹಾಯಿಸುವುದಕ್ಕಿಂತ ಕಾವಲಿರುವುದು ಲೇಸು

ನೆಲವ ನೆಲನೊಡೆಯ ನಿತ್ಯವೂ ಗಮನಿಸದಿರಲು
ಮುಗಿದ ಮಡದಿಯೊಳು ಮೋರೆ ತಿರುಗಿಸುವುದದು

ನಾವು, ಬಡವರು ಎಂದು ಮೈಗಳ್ಳರಾಗಿರುವ ರೈತರ ಕಂಡು
ನೆಲವೆಂಬ ನಲ್ಲೆ ನಗುವಳು.

ಭೂಮಿ-ನೀರು, ವಾಯು, ಅಗ್ನಿ, ಆಕಾಶವೆಂಬ ಪಂಚ ತತ್ತ್ವಗಳು ಪ್ರತಿ ಜೀವಿಗೂ ಅವಶ್ಯಕವಾದವುಗಳು; ಇವುಗಳಿಲ್ಲದೇ ಬದುಕು ಅಸಾಧ್ಯ. ಇವುಗಳಲ್ಲಿ ಒಂದೂ ಕೊರತೆಯಾಗಬಾರದು. ಪ್ರತೀ ಜೀವಕೋಶಕ್ಕೂ ಬೇಕು. ಇವುಗಳ ಚಲ್ಲಾಟದಲ್ಲಿಯೇ ಮನುಷ್ಯ-ಪಶು-ಪಕ್ಷಿ-ಪ್ರಾಣಿ ೮೪ ಲಕ್ಷ ಜೀವರಾಶಿಗಳ ಚಲ್ಲಾಟ ಅದರಲ್ಲೂ ಮಣ್ಣಿನ ಮಗನೆಂದೇ ಹೆಸರುವಾಸಿಯಾದ ಸರ್ವಯೋಗಿಗಳಿಗಿಂತ ನೇಗಿಲಯೋಗಿಯೇ ಮೇಲು; ಸರ್ವ ಕಾಯಕಗಳಿಗಿಂತ ಕೃಷಿ ಕಾಯಕ ಮೇಲು. ಈ ನುಡಿಗಳನ್ನು ನಾವಿಂದು ಒಪ್ಪಿಕೊಳ್ಳಬೇಕು. ಪ್ರಾಚೀನ ಕಾಲದಲ್ಲಿ ನೇಗಿಲಯೋಗಿಯು ಎತ್ತು, ಎಮ್ಮೆ, ಆಕಳು, ದನಕರುಗಳ ಬಳಕೆಯೊಂದಿಗೆ ಕೃಷಿ ಕಾರ್ಯಗಳನ್ನು ನೀಗಿಸುತ್ತಿದ್ದ. ಆದ್ದರಿಂದ ಯಂತ್ರೋಪಕರಣಗಳ ಸಹಾಯದಿಂದ ಕೃಷಿ ಕಾಯಕಗೈದರೂ, ಬಿಸಿಲು, ಮಳೆ, ಚಳಿ, ಎನ್ನದೇ ದುಡಿಯಲೇಬೇಕಾಗುತ್ತದೆ. ಅಂದಾಗ ಆತನ ಶ್ರಮದ ಬೆವರಿನ ಉಸಿರಾಗಿ ದವಸ ಧಾನ್ಯ ಬೆಳೆದು ನಮಗೆಲ್ಲರಿಗೂ ಅನ್ನ ನೀಡುತ್ತಾನೆ. ಆದುದರಿಂದ ಆತನ ಮಹಿಮೆ ಅಗಾಧವಾದುದೆಂಬುದನ್ನು ಮೇಲಿನ ಪದ್ಯಗಳಲ್ಲಿ ತಿರುವಳ್ಳುವರರು ತಿಳಿಯಪಡಿಸಿದ್ದಾರೆ.

ಹಾಗೆ ನೋಡಿದರೆ ಮನುಜನಿಗೆ ನಿಜವಾದ ಸಂಪತ್ತೆಂದರೆ ವಿದ್ಯೆ; ಬೆಳ್ಳಿ, ಬಂಗಾರ, ವಸ್ತು ಧನವಲ್ಲ. ವಿದ್ಯೆಯಿಲ್ಲದವನ ಮುಖವು ಹಾಳೂರು ಹದ್ದಿನಂತೆ! ಹದ್ದಿಗಿಂತೂ ಕಡೆ ಎಂದಿರುವರು. ವಿದ್ಯೆಯಿದ್ದವನ ಮುಖವು ಮುದ್ದು ಬರುವಂತಿರುತ್ತದೆ. ಈ ವಿದ್ಯೆಯೆಂಬ ಸಂಪತ್ತನ್ನು ಯಾರೂ ಕಸಿದುಕೊಳ್ಳಲಾರರು ಎಂದಿದ್ದಾರೆ ಮೇಧಾವಿಗಳು. ಕಲಿಯಲಾರದವರು ಮನುಜರಿಗೂ ಮೃಗಗಳಿಗೂ ಭೇದವಿರಲಾರದು. ಅವರು ಹೇಗೆಂದರೆ ಪಾರಂಗತರೊಡವಿರುವ ಪಾಮರರಂತೆ! ಕಲಿಯಲಾರದವರ ಸಜ್ಜನರಿದ್ದರೂ ಅವರು ಕಲಿತವರ ಮುಂದೆ ಮಾತನಾಡಲು ಶಕ್ಯವಿರದೇ ಮೌನದಿಂದಿರುವವರು. ಅಲ್ಲದೆ ಅವರು ಫಲಕೊಡದ ಬರಡು ನೆಲದಂತೆ;

ಬದುಕಿಹರೆಂಬ ಎಣಿಕೆ ಮಾತ್ರಕೆ ಇರುವವರು ಕಲಿತವರ ಬಳಿಯಿರುವ ಬಡತನಕ್ಕಿಂತಲೂ ಅಲ್ಪವದು ಮತ್ತು ಕಲಿಯದವರ ಬಳಿಯಿರುವ ಸಿರಿಯು ಎಂದುದಾಗಿ ಅವಿದ್ಯಾವಂತರ ಬಗೆಗೆ ಹೇಳಿದ ತಿರುವಳ್ಳುರರು ಕಲಿತವರ, ವಿದ್ಯಾವಂತರು ಸಿರಿ ಸಂಪತ್ತಿನ ಆಗರವಿದ್ದಂತೆ ಎಂಬುದಾಗಿ ತಮ್ಮ ದ್ವಿಪಾದಗಳಲ್ಲಿ ಬಿಂಬಿಸಿದ್ದಾರೆ.

ಕಲಿಯುವುದು ಕುಂದಿರದೆ ಕಲಿಯತಕ್ಕ ಕೃತಿಗಳನು
ಕಲಿತ ಬಳಿಕ ನಡೆಯುವುದು ಅದಕೆ ತಕ್ಕವೊಲು
ಅಂಕವೆನಿಸುವ ಗಣಿತವನೂ ಅಕ್ಷರವೆನಿಸುವ ಸಾಹಿತ್ಯವನೂ
ಮನುಜರಿಗೆ ಎರಡು ಕಂಗಳೆಂಬರು ಪ್ರಾಜ್ಞರು.

ಕಲಿತರವರೇ ಕಣ್ಣುಳ್ಳವರು ಮೊಗದಿ ಎರಡು
ಕಲಿಯದವರು ಹುಣ್ಣುಳ್ಳವರು.

ಸೇರಿದಾಗ ನಲಿವಂತೆ ಒಡನಾಡಿ, ಅಗಲಿದಾಗ ಮತ್ತವರ
ನೆನೆವಂತೆ ಮಾಡುವುದು ವಿದ್ವಾಂಸರ ಚಾತುರ್ಯವದು.

ಸಿರಿವಂತರ ಮುಂದೆ ಬಡವರು ನಿಲುವಂತೆ, ವಿನಯದಿಂದಲಿ
ವಿದ್ಯೆ ಕಲಿತವರೇ ಶ್ರೇಷ್ಠರು; ಕನಿಷ್ಠರಂತೂ ಕಲಿಯದವರು

ಅಗೆದನಿತು ನೀರೂರುವುದು ಮಳಲ ಚಿಲುಮೆಯೊಳು
ಮಾನವರು ಕಲಿತನಲಿತು ಬೆಳವುದರಿವು

ಒಂದು ಜನ್ಮದಲಿ ತಾನು ಕಲಿತ ವಿದ್ಯೆಯು, ತನಗೆ
ಏಳು ಜನ್ಮಗಳಲಿ ರಕ್ಷೆಯಹುದು

ತಮ್ಮ ವಿದ್ವತ್ತಿನಿಂದ ವಿಶ್ವಜನತೆ ನಲಿವುದನು ಕಂಡು
ಮೇಲೂ ಕಲಿಯಲಿಚ್ಛಿಪರು ವಿದ್ವಜ್ಜನರು,

ವಿದ್ಯೆಯೊಬ್ಬರಿಗೆ ಅಳಿವಿರದ ಶ್ರೇಷ್ಠ ಸಿರಿಯು;
ಸ್ಥಿರವಲ್ಲ ಮತ್ತುಳಿದ ಸಿರಿಗಳು.

ಯಾವುದೇ ಇತರ ಸಿರಿ ಸಂಪತ್ತು ವಿದ್ಯೆಯೆಂಬುದು ಸಿರಿಯ ಮುಂದೆ ಹೆಚ್ಚಿನದಲ್ಲ. ತಮ್ಮ ವಿದ್ವತ್ತಿನಿಂದ ದೇಶವನು ಆಳಬಲ್ಲರು. ವಿಶ್ವಕ್ಕೇ ಅವರು ಮಾನ್ಯರು, ವಂದನೀಯರೆನಿಸಿಕೊಳ್ಳುತ್ತಾರೆ. ಕಲಿತವರು ದೇಹದ ಮಹತ್ವದ ಅಂಗಗಳಾದ ಎರಡು ಕಣ್ಣುಗಳಿದ್ದಂತೆ! ಕೂಡಿದಾಗ ನಲಿಯುವಂತೆ ಒಡನಾಡಿಯಾಗಿ ಓಡಾಡುತ್ತಾರೆ.



ಅಂಥವರು ಅಗಲಿದಾಗಲೂ ಸ್ಮರಣೆಯಲ್ಲಿ ಉಳಿಯುತ್ತಾರೆ. ವಿದ್ಯಾವಂತರಾದವರು ಸಿರಿವಂತರ ಮುಂದೆ ನಿಂತರೂ ಸಿರಿವಂತರಂತೆ ಕಾಣುತ್ತಾರೆ. ಒಂದು ಜನ್ಮದಲಿ ಕಲಿತ ವಿದ್ಯೆಯು ಏಳು ಜನ್ಮದ ತನಕವೂ ಸಾಲುತ್ತದೆ ಎಂಬ ಮಾತು ವಿದ್ಯೆಗಿರುವ ಮಹತ್ವತೆಯನ್ನು ತಿರುವಳ್ಳುವರರು ಭೋದಿಸಿದಂತೆ ಸಾಕ್ಷರರು, ಅಕ್ಷರ ಬಲ್ಲವರಾದಂತೆ ಕಲಿತವರ ಕುಟುಂಬ ಸಮಾಜ-ನಾಡ-ದೇಶ- ವಿಶ್ವವೇ ಸುಧಾರಿಸುತ್ತದೆ ಎಂಬ ಭಾವವಿದರಲ್ಲಿ ಬಿತ್ತರಿಸಲ್ಪಟ್ಟಿದೆ. ಕಲಿತ ವಿದ್ಯೆ ನಿಂತ ನೀರಾಗದೇ ಹರಿಯುತ್ತಿರುವ ನೀರಿನಂತೆ ಪ್ರಸಾರವಾಗುತ್ತಿರಬೇಕು. ಕಲಿಯದವರು ಕೇಳಿ ಅಥವಾ ಶ್ರವಣ ಮಾಡಿಯಾದರೂ ಕಣ್ಣು, ಕಿವಿ, ಮನ, ಎದೆ ತುಂಬಿಕೊಳ್ಳಬೇಕು. ಪ್ರಾಜ್ಞರೊಡನೆ ಸ್ನೇಹದಿಂದಿರುವುದೇ ಜಾಣ್ಮೆ, ತಿಳುವಳಿಕೆಯುಳ್ಳವರೊಡನೆ ಒಡನಾಟದಲ್ಲಿರುವುದು ಕಲಿಯದವರ ಲಕ್ಷಣ. ಅರಿವು ಉಳ್ಳವರು ಸಿರಿಯು ಇಲ್ಲದಿದ್ದರೂ ಸಿರಿವಂತರಿಗೆ ಸಮಾನರು; ಅರಿವಿಲ್ಲದವರು ಸಿರಿಯಿದ್ದರೂ ಬಡವರೆನಿಸಿಕೊಳ್ಳುವರು. ಕಲಿತವರನ್ನು ಕಲಿಯದವರು ಅವರನ್ನು ಅನುಸರಿಸಿಯಾದರೂ ಅರಿವು ಅರಳಿಸಿಕೊಂಡು ಬದುಕು ಸಾಗಿಸಬೇಕು ಎಂದಿದ್ದಾರೆ. ಮನೋಬಲ ಮತ್ತು ಉತ್ಸಾಹವನ್ನು ರೂಢಿಸಿಕೊಂಡು, ಸೋಮಾರಿತನ ಹೊಂದಲಾರದೇ ರೀತಿ ನೀತಿಯನ್ನು ಅಳವಡಿಸಿಕೊಂಡು ಬದುಕಿದರೆ ಸಾರ್ಥಕದ ಜೀವನವಾಗುತ್ತದೆ.

ತಿರುವಳ್ಳುವರರು ಪದೇ ಪದೇ ತಮ್ಮ ನುಡಿಗಳಲ್ಲಿ (ದ್ವಿಪಾದ) ಹೇಳಿದ್ದೇನೆಂದರೆ ಸಕಲರೊಡನೆ ಸಜ್ಜನಿಕೆಯಿಂದಿರುವುದು. ಮಾನವೀಯತೆ ಪ್ರಮುಖ ಪಾತ್ರ ವಹಿಸುತ್ತದೆ. ನ್ಯಾಯದಲಿ ನಿಷ್ಠೆಯಿರಿಸಿ, ಧರ್ಮದಿಂದ ನಡೆದು ಎಲ್ಲರಿಗೂ ಉಪಕರಿಸುವ ಸದ್ಗುಣ ಹೊಂದಿರಬೇಕು. ಮಾನವ ಮಾನವರಲ್ಲಿ ಭಿನ್ನತೆ ಕಾಣಬಾರದು. ಇವನಾರವ ಎಂದೆನ್ನದೇ ಇವ ನಮ್ಮವನೆಂಬ ಭಾವವುಳ್ಳವರಾಗಬೇಕು. ಒಕ್ಕಟ್ಟೇ ಬಲ ಎಂಬ ದಿವ್ಯಶಕ್ತಿಯ ದಾಸರಾಗಬೇಕು.

ಸಜ್ಜನರಿಂದಲೇ ಈ ಜಗವು ಸಾಗುತಿಹುದು; ಇಲ್ಲದಿರೆ
ಅದು ಮಣ್ಣೊಳು ಮಣ್ಣಾಗಿ ಅಳಿವುದು

ಎಲ್ಲರೊಳು ಬೆರೆತು ನಕ್ಕು ನಲಿವ ಸಜ್ಜನಿಕೆಯಿಲ್ಲದವರಿಗೆ
ಈ ವಿಶಾಲ ವಿಶ್ವವದು ಹಗಲಿನಲೂ ಇರುಳಂತಿಹುದು.

ಈ ಪದಗಳನ್ನು ಗಮನಿಸಿದರೆ ಧಾರ್ಮಿಕ ನಿಷ್ಠೆ, ಸತ್ಯ ಪ್ರಾಮಾಣಿಕತೆಯೆಂಬ ನೀತಿ-ನಡತೆಯ ಸೌಧವನ್ನು ಕಟ್ಟುವ ಶಿಲ್ಪಿಗಳಾಗುವ ಕಾಲಾವಕಾಶವಿರುವುದು ಮನುಷ್ಯರಿಗೆ ಮಾತ್ರ. ಅಂತಹ ಪವಿತ್ರವಾದ ಜನ್ಮವನ್ನು ಸಜ್ಜನಿಕೆಯಿಂದ ನಡೆದುಕೊಂಡು ನಡೆಯಿರೆಂದು ಉಪದೇಶ ನೀಡಿದ್ದಾರೆ. ತಿರುವಳ್ಳುವರರು ಸಜ್ಜನಿಕೆಯಿಲ್ಲದವನ

ಹಿರಿಯ ಸಿರಿಯು ಅಪ್ಪಟ ಹಾಲು ಕಲುಷಿತ ಕಲಶದಿಂದ ಕೆಟ್ಟಂತೆಯೆಂದು ಹೋಲಿಕೆಯಿತ್ತು ಸ್ಪಷ್ಟಪಡಿಸಿದ್ದಾರೆ.

ಸಿರಿಯು ಬಂದ ಕಾಲಕೆ ಕರೆದು ದಾನವ ಮಾಡು ಎಂಬಂತೆ, ಐಶ್ವರ್ಯವನ್ನು ಹೊಂದಿದವನ ಜೀವನ ನಿರರ್ಥಕವೆಂದಿದ್ದಾರೆ. ನಿರರ್ಥಕ ಐಶ್ವರ್ಯ ಭಾಗದಲ್ಲಿ ಅವರು ಹೇಳಿದ್ದು ಹೀಗಿದೆ–

ಮನೆಯೊಳು ತುಂಬಿಹ ಅಪಾರ ಸಿರಿಯಿಂದ ಸುಖಿಸದವನು
ಸತ್ತವರಿಗೆ ಸಮಾನನು; ವ್ಯರ್ಥವಹುದವನ ಸಿರಿಯು

ಸಿರಿಯಿಂದಲೇ ಸಕಲ ಸುಖವು ಲಭಿಸುವುದೆಂದೆಣಿಸಿ ಈಯದೆ
ಭ್ರಮಿಪ ಜೀನನು, ಪಡೆವನು ಹೀನ ಜನ್ಮವನು.

ಸಂಪದವ ಬಯಸಿ ಕೀರ್ತಿಯನು ಕಾಮಿಸದ ಜಿಪುಣರ
ಜನ್ಮವದು, ನೆಲಕೊಂದು ಹೊರೆಯಹುದು.

ಸತ್ತ ಬಳಿಕ ತನಗೆ ಉಳಿದಿಹುದೇನೆಂದು ಭಾವಿಪನು,
ಯಾರ ಪ್ರೀತಿಯನೂ ಗಳಿಸದ ಜಿಪುಣನು?

ಅನ್ಯರಿಗೆ ಈಯದೆ ತಾನೂ ಸುಖಿಸದೆ ಇರುವಂಗೆ
ಹಲವು ಕೋಟಿಗಳಿದ್ದರೂ ಫಲವಿಲ್ಲವದು.

ತಾನೂ ಉಣದೆ ಯೋಗ್ಯರಿಗೊಂದನೂ ಈಯದಿಹ ಜಿಪುಣನು
ತನ್ನ ಹಿರಿಯ ಸಿರಿಗೊಂದು ರೋಗದಂತಿಹನು.

ಬಡವರಿಗೆ ಈಯದವನ ಐಸಿರಿಯು ಚೆಲುವೆಯೊಬ್ಬಳು
ಮದುವೆಯಾಗದೆ ಮುದಿಯತನವ ಪಡೆದಂತೆ.

ಬಡವರನು ತನ್ನ ಬಳಿಸಾರಗೊಡಿಸದವನ ಬಲು ಸಿರಿಯು
ಊರ ನಡುವೆ ವಿಷ ವೃಕ್ಷವು ಫಲವ ಬಿಟ್ಟಂತೆ.

ಪರರ ಪ್ರೀತಿಸದೇ, ತಾನೂ ಉಣದೆ, ಧರ್ಮವ ಮಾಡದೆ
ಗಳಿಸಿಟ್ಟವನ ಸಿರಿಯ ದೋಚುವರು ಹೆರರು.

ದಾನ ಕೊಡುವ ಧನಿಕರ ಅಲ್ಪಕಾಲಿಕ ದಾರಿದ್ರ್ಯವದು
ಮೇಘ ಮಳೆಗರೆಯದೆ ಕ್ಷಾಮವಿದ್ದಂತೆ.



ಅದೆಷ್ಟೇ ಸಿರಿ ಸಂಪತ್ತು ಗಳಿಸಿದರೂ ಸಹವದು ಸ್ಥಿರವಲ್ಲ. ಆದರೆ ಅದರ ಸದುಪಯೋಗ ಮಾಡಿಕೊಂಡವನೇ ಜಾಣ. ಬಡಬಗ್ಗರಿಗೆ, ಭಿಕ್ಷುಕರಿಗೆ, ಅನಾಥರಿಗೆ ಕರೆದು ದಾನವ ಮಾಡುವುದು, ತಾನೂ ಸಮಯಕ್ಕೆ ಸರಿಯಾಗಿ ಉಣ್ಣುವುದು, ಪರೋಪಕಾರಿಯಾಗಿ ಬದುಕುವುದೇ ಸಿರಿವಂತನಾದವನ ಕಡ್ಡಾಯ ನಿಲುಮೆಯಾಗಬೇಕು. ಅದನ್ನು ಬಿಟ್ಟು ಜಿಪುಣತನದಿಂದ ಉಣ್ಣದೇ ತಿನ್ನದೇ ಖಿನ್ನ ಮನದಿಂದ ಸಂಪತ್ತು ಕೂಡಿಟ್ಟು, ನೆಲದಲ್ಲಿ ಹೂಳಿಟ್ಟೇನು ಪ್ರಯೋಜನ? ಸಿರಿಯು ಬಂದರೆ ಕರೆದು ಉಣಿಸುವ ಸ್ವಭಾವವುಳ್ಳವನು ಸ್ವರ್ಗದಲ್ಲಿದ್ದಷ್ಟು ಸಂತಸಪಡುವನು. ಇದನ್ನೇ ಮೋಕ್ಷ (ಸುಖ) ಎಂದುದಾಗಿ ತಿರುವಳ್ಳುವರರ ಹೇಳಿಕೆಯಾಗಿದೆ. ಮತ್ತೊಂದು ಮೋಕ್ಷವೆಂಬುದಿಲ್ಲವೆಂದೂ ಹೇಳಿದ್ದಾರೆ. ಆದುದರಿಂದ ದುಡಿದು ತಿಂದುಂಡು ಸಂಗ್ರಹಿಸದೇ ಇಲ್ಲದವರಿಗೆ ದಾನ ಮಾಡುವುದು ಉತ್ತಮ ಗುಣವೆಂದು ಈ ಮೇಲಿನ ಪದಗಳಲ್ಲಿ ಹೇಳಿದ ಕ್ರಮವಿದೆ. ಇಂಥವರ ಸಂದೇಶಗಳನ್ನು ಪಾಲಿಸುವುದೊಳಿತು.

ಮಹರ್ಷಿ ತಿರುವಳ್ಳುವರರು ಹೇಳುವ ಅರ್ಥ ವಿಭಾಗದ ಮಾತುಗಳು ಮನುಕುಲದ ಸಂಜೀವಿನಿಯಂತಿವೆ. ಇವೆಲ್ಲವೂ ನಮ್ಮ ಕೈಯಲ್ಲಿಯೇ ಇವೆ. ಅಂದರೆ ಆಚರಣೆಯಲ್ಲಿ ತಂದರೆ ಸುಯೋಗ್ಯ ಮನುಷ್ಯರಾಗುತ್ತೇವೆ. ಗಂಡು-ಹೆಣ್ಣುಗಳು ಮನವೊಂದಾಗಿ ಕೂಡಿ ಬಾಳುವ ಸಾಮರಸ್ಯ ಜೀವನ ಕುಟುಂಬ ಎನಿಸಿಕೊಂಡಂತೆ ಮಾನವ ಕುಟುಂಬಗಳು ಒಗ್ಗೂಡಿ ನಡೆಸುವ ಸಾಮರಸ್ಯ ಜೀವನವೇ "ಸಮಾಜ" ಎನಿಸಿಕೊಳ್ಳುತ್ತದೆ. ಮಾನವರು ಒಗ್ಗೂಡಿ ಬಾಳದಂತೆ ಜಾತಿ, ಮತ, ಪಂಥ, ಪಂಗಡ ವರ್ಣ, ವರ್ಗ ಇತ್ಯಾದಿ ಕಾರಣಗಳಿಂದ ಪ್ರತ್ಯೇಕಿಸುವ ಹೀನ ಗುಣವನ್ನು ಕೃತಿಕಾರರು (ತಿರುವಳ್ಳುವರರು) "ಇಗಲ್" (ಹಗೆತನ) ಎಂದು ಕರೆದಿದ್ದಾರೆ. ಇದು ಮಾನವ ಕುಲಕ್ಕೆ ಅಂಟಿದ ರೋಗವೆಂದೇ ಅವರು ಹೇಳಿದ್ದಾರೆ. ಮಾನವಕುಲದ ಹಿತಕ್ಕೆ ಮಾರಕವಾಗಿ ಸ್ವಾರ್ಥ ಮೂಲದ ವ್ಯಕ್ತಿ ಅಥವಾ ವಿಶಿಷ್ಟವಾದ ಗುಂಪುಗಳು ಹಾಕಿರುವ ಅಡ್ಡಗೋಡೆಗಳೇ ಈ ಜಾತಿ, ಮತ, ಧರ್ಮ, ಪಂಥ ಇತ್ಯಾದಿ ವಿಭಜನೆಗಳು ಇವುಗಳೆಲ್ಲ ದೇವರ ಸೃಷ್ಟಿ ಎನ್ನುವುದು ಆತ್ಮ ವಂಚನೆಯ ಮಾತಾಗುತ್ತದೆ.

ಕನ್ನಡ ನಾಡಿನಲ್ಲಿ ಉದಿಸಿ ಕೀರ್ತಿ ವಿಶೇಷರಾದ ಬಸವಾದಿ ಶಿವಶರಣರು, ದಾನಶ್ರೇಷ್ಠ-ಸಂತರು-ವಿಶಿಷ್ಟವಾದ ವ್ಯಕ್ತಿಗಳ ಬುದ್ಧಿಯ ಈ ವಿಭಜನೆಗಳನ್ನು ಧಿಕ್ಕರಿಸಿ ಮಾನವ ಸಮಾಜ ಸೇವೆಯೇ ಆತ್ಮೋದ್ಧಾರದ ಮಾರ್ಗವೆಂದು ತಮ್ಮ ವಚನಗಳ ಮೂಲಕ ಮತ್ತು ಕೀರ್ತನೆಗಳ, ತತ್ತ್ವ ಪದಗಳ ಮೂಲಕ ಬೋಧಿಸಿರುವುದು ಇಲ್ಲಿ ಗಮನಿಸಲೇಬೇಕಾದುದು. ಆದ್ದರಿಂದ ಮೃಗ ಶೇಷವುಳ್ಳ ಮಾನವನು ಸ್ವ-ಅರ್ಥಗಳನ್ನು ಮತ್ತು ಸ್ವಂತ ಕಾಮನೆಗಳೆನ್ನುವಂತಹ ಅಸುಖಿ ಗುಣಗಳನ್ನು ಬದಿಗೊತ್ತಿ ಸಮಷ್ಟಿಯ

(ವಿಶ್ವ ಜೀವದ) ಅಂಶ ತಾನೆಂಬ ವಾಸ್ತವತೆಯನ್ನು ಅರಿತು ಸದ್ಬುದ್ಧಿಯನ್ನು ಬೆಳೆಸಿಕೊಂಡು ವರ್ಗಭೇದದ ಅರಿಷ್ಟ ಗುಣಗಳಿಂದ ಬಿಡುಗಡೆ ಹೊಂದಿ ಧರ್ಮದೆಡೆಗೆ ಅಂದರೆ ಮಾನವೀಯತೆಯ ದಾರಿಯಲ್ಲಿ ಕ್ರಮಿಸಬೇಕು. ಈ ಬಗೆಯ ಸಹೃದಯ ಸಮನ್ವಯ ಸುಮಧುರ–ಸುಂದರ ತತ್ತ್ವವೇ ತಿರುವಳ್ಳುವರರು ಕಂಡ ಪುರುಷಾರ್ಥತ್ರಯಗಳ ಜೀವನ ಸಿದ್ಧಾಂತ.

ಇದರಿಂದ ಇಂದಿನ ವಿಶ್ವದ ಮಾನವ ಸಮಾಜವು ಶಿವನಿಗೆ ಶರಣಾಗತನಾಗದೇ ಕಾಮನಿಗೆ ಶರಣಾಗತವಾಗುತ್ತಿದೆಯೆಂಬ ಸತ್ಯಾಂಶವು ಬೆಳಕಿಗೆ ಬರುತ್ತಿದೆ. ಇಂದು ಪುರುಷಾರ್ಥತ್ರಯಗಳಲ್ಲಿ ಅರ್ಥ ಮತ್ತು ಕಾಮಗಳೇ ಜನಮನವನ್ನು ಅಟ್ಟ ಹಾಸದಿಂದ ಆಳುತ್ತಲಿವೆ. ಇವೆರಡೂ ಧರ್ಮದ ಹಾದಿಯನ್ನು ತಪ್ಪಿಸುತ್ತಿವೆ. ಇಂದು ಧರ್ಮವೇ ಅವನತಿಯ ಹಾದಿ ಹಿಡಿದಿದೆ ಎಂಬುದಕ್ಕೆ ನಾವೇ ಕಾರಣರಲ್ಲವೆ? ಇಂದು ಸೈತಾನವೇ (ದುರ್ಬುದ್ಧಿಯುಳ್ಳವನೇ) ಧರ್ಮಗುರುಗಳ ವೇಷ ಧರಿಸಿ, ಸಮಾಜದ ನೇತಾರರ ಪಾತ್ರವಹಿಸಿ, ರಾಜಕೀಯ ನಾಯಕತ್ವ ಪದವಿ ಪಡೆದು ಇಡೀ ಪ್ರಪಂಚವನ್ನೇ ಆಳುತ್ತಿದ್ದಾನೆ. ಪುರಾತನ ಋಷಿ–ಮುನಿಗಳು ಕನಸು ಕಂಡ ದೇವರ ಸಾಮ್ರಾಜ್ಯವು ಅಂದರೆ ವಿಶ್ವಮಾನವ ಧರ್ಮಾಧಾರಿತ ಸಮಾಜ ಮೂಲೆಗುಂಪಾಗಿ ಇಡೀ ವಿಶ್ವವೇ ಇಂದು ದೈತ್ಯ ಸಾಮ್ರಾಜ್ಯವಾಗಿದೆ. ಅಂದ ಮೇಲೆ ವಿಶ್ವದಲ್ಲಿ ಸುಖ–ಶಾಂತಿ ನೆಮ್ಮದಿಯೆಲ್ಲಿ? ಸಮಾಧಾನವೆಲ್ಲಿ? ಆದ್ದರಿಂದ ಪ್ರಾಣಿವರ್ಗ ತಲೆ–ತಲಾಂತರಗಳಿಂದ ತನ್ನಲ್ಲಿ ಮೈಗೂಡಿಸಿಕೊಂಡು ಬಂದಿರುವ ಮೃಗಶೇಷವನ್ನು ಸಾಧ್ಯವಾಗುವಾಗಲೆಲ್ಲಾ ಸಾಧ್ಯವಾದಷ್ಟು ಕಡಿಮೆ ಮಾಡಿಕೊಂಡು ಸತ್ಯ–ಶಿವ– ಸುಂದರದೆಡೆಗೆ ಸಾಗಬೇಕೆಂಬುದೇ ಸಮಷ್ಟಿ ಕಲ್ಯಾಣವನ್ನು ಆಶಿಸುವ ಮಹಾನುಭಾವರಾದ ತಿರುವಳ್ಳವರರು ನೀಡಿದ ಸಂದೇಶ ಎನ್ನುವುದಕ್ಕಿಂತಲೂ ಆದೇಶ ಮತ್ತು ನಿರ್ದೇಶನವಾಗಿದೆ ಎಂಬುದನ್ನು ತಜ್ಞರು, ವಿಚಾರವಂತರು, ಚಿಂತಕರು ಅರಿತುಕೊಂಡು ಶ್ರೀ ಸಾಮಾನ್ಯನಿಗೂ ಹಾಗೂ ಇಂದಿನ ಪೀಳಿಗೆಯವರಿಗೆ ತಿಳಿಯಪಡಿಸುವುದಾಗಬೇಕು. ಇಂತಹ ಮಹಾಪುರುಷರ ತತ್ತ್ವಾದರ್ಶಗಳು ನಮ್ಮೆಲ್ಲರ ದಾರಿದೀಪ, ತೋರುದೀಪ ಆಗಿವೆ ಎಂಬುದನ್ನು ನಾವೆಂದೆಂದಿಗೂ ಮರೆಯುವಂತಿಲ್ಲ.

**ಮಹಾಯೋಗಿ ವೇಮನರು ಹೇಳಿದ್ದು :**

ಭೂ–ಗಗನ ಮಧ್ಯೆ ಪರಮಾತ್ಮನೇ ರಕ್ಷಿಸುವಾಗ, ನಾವೆಲ್ಲರೂ ಉಪಕರಣ ಮಾತ್ರ. ಈ ಭೂಮಿಯ ಮೇಲೆ ಜನಿಸಿದ ರಾಜ–ರಂಕ–ಪ್ರಜೆ–ಸಚಿವ–ಅಧಿಕಾರಿ ವರ್ಗದವರಾರೇ ಆಗಲಿ ಸಮಾನರು. ಸಮಾನತೆಯ ಸೌಮ್ಯ ವಿನಯ ಸದ್ಗುಣಗಳೇ ಪರಮಾತ್ಮನು ಅನುಗ್ರಹಿಸಿದ ದಿವ್ಯಾಭರಣಗಳು. ಅವುಗಳನ್ನು ಅಳವಡಿಸಿಕೊಂಡು



ನಡೆಯುವುದೇ ಶ್ರೇಯಸ್ಕರ. ಕಿವಿಗೆ ಆಹಾರವಾಗಿ ಉತ್ತಮವಾದುದನ್ನು ಕೇಳಿ ಅರಿತು ಆಚರಿಸುವುದು ಮಾನವನ ಶ್ರೇಷ್ಠ ಗುಣ. ಮಹಾತ್ಮರುಗಳು ಹೇಳುವುದನ್ನು ಕೇಳಿ, ಕಂಡು, ವಿವರವನ್ನು ಅರಿತು ಬಾಳುವಂಥ ಜನರೇ ನೀತಿಪರರು. ನೀತಿಯಿಂದ ನಡೆಯುವವನಿಗೆ ಯಾವುದರ ಭಯವೇ ಇಲ್ಲ. ಯಾವುದು ತಕ್ಕುದು, ಯಾವುದು ತಕ್ಕುದಲ್ಲ ಎಂದು ಹೇಳಿದರೂ ಕೇಳದವನು ಮೂರ್ಖನೇ ಸರಿ. ಋಷಿ–ಮುನಿಗಳು ತಿಳಿಸಿ ಹೇಳಿದ ಮಾತುಗಳನ್ನು ಕೇಳದೇ ಮೀರಿ ನಿಂತವನು ಭಂಡ, ಲಫಂಗನೇ ಸರಿ. ಸರಿಯಾದ ಮಾತು ಕೇಳುವವನ ಸಂಗವನ್ನೆಂದೂ ತೊರೆಯಕೂಡದು. ಮಹಾತ್ಮರು ನಡೆದು ನುಡಿದ ಮಾತುಗಳ ವೇದವಿದ್ದಂತೆ. ಅವರು ಬಾಳಿನಲ್ಲಿ ಹೇಗೆ ಇರಬೇಕೆಂಬುದರ ಬಗೆಗೆ ವಿವರವಾಗಿ ತಿಳಿಸಿದ್ದಾರೆ. ಬರೆದಿಟ್ಟ ದಾಖಲೆಗಳಿವೆ. ಧಾರ್ಮಿಕರಿಂದ ಸುಜ್ಞಾನ ಪಡೆದು, ಪಾಪ ನೀಗಬೇಕೆಂದುದಾಗಿ ಧಾರ್ಮಿಕ ವಿಭಾಗದಲ್ಲಿ ಹೇಳಿದ್ದುದನ್ನು ತಾವೆಲ್ಲ ಗಮನಿಸಿದ್ದೀರಿ. ಈಗ ಧರ್ಮ ಮಾರ್ಗವಿಡಿದು ಅರ್ಥ ಸಂಪತ್ತಿಗೆಂದು ದುಡಿದುಣ್ಣುವುದು. ಕ್ರಿಯೆ ಮತ್ತು ಜ್ಞಾನಗಳನ್ನೆಂದೂ ಮರೆಯಬಾರದು. ಸರಿಯಾದ ಕಾರ್ಯವನ್ನು ಸರಿಯಾದ ಸಮಯದಲ್ಲಿ ಮಾಡಬೇಕು.

ಬಂಧುಗಳ ಆದರ–ಸತ್ಕಾರವು ತನ್ನ ಪುಣ್ಯದ ಫಲವೇ ಸರಿ. ಆದರೆ, ಸಿರಿ ಸಂಪದಗಳ ಮಾತಿಗೆ ಸಿಲುಕಿ ಜೀವಿಯು ತನ್ನ ಬಂಧು–ಬಾಂಧವರನ್ನೇ ಮರೆಯುವ ಪ್ರಸಂಗವು ಇಲ್ಲದೇ ಇಲ್ಲ. ಬಂಧು–ವರ್ಗದವರಲ್ಲಿ ನೀತಿಯಿಂದ ನಡೆದುಕೊಂಡರೆ ಅವನ ಸಿರಿ ಸಂಪತ್ತು ಕೊಟ್ಟಷ್ಟು ಇಮ್ಮಡಿಯಾಗುತ್ತದೆ. ಅದನ್ನು ವೇಮನರು ಹೇಳಿದ್ದು ಹೀಗೆ.

ಭಾವ ಬಂಧು ಸಂಬಂಧಿ ಮರ್ಯಾದೆಗಳೊಳು
ನೀತಿ ತಪ್ಪಿದಾಗ ತಾಪಕೀಡು,
ಬಿಡದೆಂದು ಬಪ್ಪುದು ತಪ್ಪದಯ್ಯ ನೋವು ॥ವಿಶ್ವ॥

ಪೂರ್ವ ವಾಸನೆಯಿಹ ಪುಣ್ಯಾತ್ಮನೈಸಿರಿ
ಬುಗ್ಗೆ ಪುಟಿವ ರೀತಿ ಭೂರಿಡುವುದು,
ಎಷ್ಟೋ ಜನಕೆ ಕೊಡಲು ಎಂದಿನಂತಿರುವದು ॥ವಿಶ್ವ॥

ಆಪತ್ತಿರುವಾಗ ನೋಡು; ಬಂಧು–ಬಾಂಧವ
ಭಯದ ವೇಳೆ ನೋಡು; ಬಂಟ ಗುಣವ
ಬಡತನ ಬಂದಾಗ ಮಡದಿಯ ಗತಿ ನೋಡು ॥ವಿಶ್ವ॥

ಕೊಡೆಯು ತಾನೀವುದು ಕಡು ಸುಖಕರ ನೆರಳು
ಶಾಸ್ತ್ರವರಿಯೆ ತನಗೆ ಶುದ್ಧ ಜ್ಞಾನ;
ಇಪ್ಪವಂಗೆ ತಂದೆ, ತಪ್ಪದೆಂದು ರಕ್ಷೆ ॥ವಿಶ್ವ॥

ಐಸಿರಿ ಇದ್ದಾಗ ಪುಣ್ಯ ಕಾರ್ಯವನೇ ಮಾಡು ಮತ್ತು ದೀನದಲಿತರಿಗೆ ಸಹಾಯ ಮಾಡಿ ಪುಣ್ಯವನು ಗಳಿಸಿಕೋ, ಆಪತ್ತು–ವಿಪತ್ತುಗಳಿಗಾದವನೇ ನಿಜ ಮಾನವ ಭೂಷಣನು. ಕೊಡುವಂತಹ ಗುಣವು ಶ್ರೇಷ್ಠವಾದುದು. ಸಾಮರ್ಥ್ಯ ಒಬ್ಬನ ಮಾನಸಿಕ ಸಂಪತ್ತು ಅದನ್ನೇ ವೇಮನರು–

ಆಪತ್ತಿನಲ್ಲಿರುವಾಗ ನೋಡು ಬಂಧು–ಭಾವ,
ಭಯದ ವೇಳೆ ನೋಡು ಭಂಟ ಗುಣವ,
ಬಡತನ ಬಂದಾಗ ಮಡದಿಯ ಗತಿ ನೋಡು ॥ವಿಶ್ವ॥

ಅನ್ಯರಿಗೆ ಬರುತಿಹ ಆಪದ ತನದೆಂದು
ಅನ್ನುವವನು ಜಗದಿ ಮಾನ್ಯನಿಹನು
ಮಾನ್ಯರಿಪ್ಪರೊಳಗೆ ಮಹಿಪರಿರೆ ಲೇಸು
ಕಂಡರಿಪನೆ ಜಗದಿ ಘನನು ವೇಮ.

ಸಂಪತ್ತು ತನಗಿರುವಾಗ ಸರ್ವರೂ ಬಂಧುಗಳಂತೆಯೇ ನಟಿಸುವವರಿಹರು. ಬೇರೆಯವರಿಗೆ ಬಂದ ಆಪತ್ತನ್ನು ತನ್ನದೆಂದೇ ಭಾವಿಸಿ, ಅವರಿಗೆ ನೆರವು ನೀಡುವವನು ಲೋಕದಲ್ಲಿ ಧನ್ಯನಾಗುತ್ತಾನೆ, ಮಾನ್ಯನಾಗುತ್ತನೆ. ಅವನೇ ಘನವಂತನೇ ಸರಿ! ಆಪತ್ತಿಗೊಳಗಾದವನು ಧೈರ್ಯ ಕಳೆದುಕೊಳ್ಳಬಾರದು. ಇಂಥವರಿಂದ ನೆರವು ಪಡೆದುಕೊಂಡ ಮೇಲಾದರೂ ಉಪಕಾರ ಸ್ಮರಣೆ ಮಾಡಿ ಬದುಕಬೇಕು. ಆಳುವವನಿಗೆ ಧನವೂ ಬೇಕು. ಧೈರ್ಯವೂ ಬೇಕು. ಧೈರ್ಯವಿಲ್ಲದಿದ್ದರೆ ಹಣವನ್ನಾತ ಸಂಪಾದಿಸಲಾರ. ಕೆಲಸ ಮಾಡುವಾಗ ದೇಶದ ಹಿತ ಕಾಪಾಡಿಕೊಂಡು ಒಗ್ಗಟ್ಟು ತಾಳ್ಮೆಯಿಂದ ವರ್ತಿಸಬೇಕು.

ಧನವೇ ಮೂಲವು ಜಗಕ್ಕೆ,
ಧನವೇ ಮೂಲವು ಸಕಲ ಧರ್ಮಕ್ಕೆ ನೋಡಾ
ಗುಣವೇ ಮೂಲವು ಸಿರಿಗದು,
ಮನವೇ ಮೂಲವು ಮುಕ್ತಿಯ ಮಹಿಮೆಗೆ ವೇಮಾ.

ಧನ ಹೆಚ್ಚಲು ಮದ ಹೆಚ್ಚಿತು
ಮದ ಹೆಚ್ಚಲು ದುರ್ಗುಣಗಳು ಮಾಣದೆಯಧಿಕಂ



ಧನ ಉಡುಗಲು ಮದ ಉಡುಗಿತು.
ಮದ ಉಡುಗಲು ದುರ್ಗುಣಗಳು ಮಾಯವು ವೇಮಾ.

ಧನದ ಮದವು ತುಂಬಿ ದೈವವನು ಕಾಣರು,
ಕುಟಿಲ ಭಾವವುಳ್ಳ ಕ್ರೂರ ಜನರು,
ಮದವು ಮೀರಿದಾಗ ಮನ್ನಣೆಯು ಉಳಿಯದು ॥ವಿಶ್ವ॥

ಧನ ಇರುವ ನರನು ಕಾಣ ಮದದಲಿ,
ಇಲ್ಲದವನು ಮೊದಲು ಇಟ್ಟೇ ಇಲ್ಲ
ಸಿರಿತನ ಬಡತನವು ಇರದ ಕಾಲವಿಹುದೆ? ॥ವಿಶ್ವ॥

ಶ್ರೀಮಂತರಾಗಿರುವವರು
ಸಾಮಾನ್ಯ ಜನರೊಡನೆಂತು ಸಖ್ಯತೆ ನೋಳ್ಪರ್?
ಪಾಮರ ಗುಣವಾಗದೇನು;
ತಾ ಮೇಲೆಂದು ತಿಳಿಯುವುದು? ತಪ್ಪದು ವೇಮಾ.

ಎಣ್ಣೆಯಿರ್ಪ ದೀಪ, ತೊಳಗಿ ಬೆಳಗುತಿಹುದು
ಹೊನ್ನುಳ್ಳವರ ವಿಚಾರ ಮಾನ್ಯ,
ಹೊನ್ನು ಇಲ್ಲದವನ ಹೊಂಚು ತೀರಿ ಹೋಯ್ತು ॥ವಿಶ್ವ॥

ಧನವು ಗ್ರಹಸ್ಥನಾದವನಿಗೆ ಅವಶ್ಯವಾಗಿ ಬೇಕೇ ಬೇಕು. ಈ ಎಲ್ಲ ಗುಣಗಳೂ ಕಾಂಚನವನ್ನೇ ಆಶ್ರಯಿಸಿವೆ. ಎಲ್ಲಿಯವರೆಗೆ ಐಹಿಕ ಬೇಡಿಕೆಗಳ ದಾಹ ಇದೆಯೋ ಅಲ್ಲಿಯವರೆಗೆ ಧನ ಸಂಚಯವು ಬೇಕೇಬೇಕು. ಧನ ಸಂಚಯವೂ ಬೇಕು. ಆದರೆ, ಅತಿಯಾದ ಆಸೆಯಿರಬಾರದು. ಆದರೆ, ಹಣ ಸಂಗ್ರಹ, ಸಂಪಾದನೆಯ ದಾರಿ ಅಡ್ಡದಾರಿಯಾಗಿರಬಾರದು. ನಿಯತತನದ ದಾರಿ ಹಿಡಿದು ಗಳಿಸಬೇಕು. ಧನ ಸಂಗ್ರಹವಾದಾಗ ಮದವೇರಿದ ಆನೆಯಂತೆ ವರ್ತಿಸುವವರುಂಟು! ಅಂಥವರು ದಾನ–ಧರ್ಮ ಮಾಡಲರಿಯರು, ಹೆಂಡ ಸರಾಯಿ ಮತ್ತಿತರ ಚಟಾದಿಗಳಿಗೆ ಹಾಳು ಮಾಡುವವರೇ ಈ ಜಗದಲಿ ಹೆಚ್ಚಿದರು. ಅಷ್ಟಮದಗಳಲ್ಲಿ ಈ ಧನಮದವಿರೆ ಆತನನ್ನು ದಾರಿ ತಪ್ಪಿಸುತ್ತದೆ. ಸಂಪದವು ಅದು ಕಣ್ಣು ಪರಿಯಂತೆ. ಮದಮೇಲಿರಿಸಿ ಕಾಣಗೊಡದು. ಪರಿ ತೆಗೆದೊಡನೆ ಕಣ್ಣು ಸರಿಯಾಗಿ ಕಾಣುತ್ತವೆ. ಅದೇ ರೀತಿ ಸಂಪತ್ತು ತೀರಿದಾಗ ಸರಿಯಾದ ದೃಷ್ಟಿ ಮರಳುತ್ತದೆ. ಧನವಿರೆ ಪತ್ನಿ–ಮಕ್ಕಳು, ಬಂಧು–ಬಳಗದವರು ಹತ್ತಿರ ಬರುವರು. ಧನವಿರದಿರೆ ಮಾತನಾಡಿಸಲೂ ಬರಲಾರರು. ಇದು ಸೃಷ್ಟಿಯ ಅಥವಾ ಜಗದ ನಿಯಮ. ಧನವಿಲ್ಲದಿರೆ ಬಾಳಿನಲ್ಲಿ

ತಾಳ್ಮೆಯಿರಲಾರದು. ಧನದಿಂದ ಮತ್ತನಾದವನಿಗೆ ಕಣ್ಣಿದ್ದರೂ ಮದದಿಂದ ಸರಿ–ತಪ್ಪೆಂಬುದನ್ನರಿಯಲಾರನು. ಸಿರಿವಂತನೆನಿಸಿಕೊಂಡವನು ಸಾಮಾನ್ಯ ಮನುಷ್ಯರಲ್ಲಿ ಬೆರೆಯಲಾರನು. ತಾನು ಇತರರಿಗಿಂತ ಮೇಲಲ್ಲವೆ? ಎಂದು ಮೆರೆಯುವನು. ಧನ ಸಂಚಯಿಸಿದವನು ತಂದೆ–ತಾಯಿ ಬಂಧು–ಬಾಂಧವರನ್ನೇ ಮರೆಯುವವನು ಎಂದಿದ್ದಾರೆ. ವೇಮನರು ಹೇಳಿದಂತೆ

ಕನಕ ಉಳ್ಳ ನರನು ಕಾಣನು ಮದದಿಂದ
ಇಲ್ಲದವಗೆ ಮೊದಲೆ ಈಯದಿರಲು,
ಕನಕವಿಲ್ಲದಿರುವ ಕಾಲ ಕೊಡಲುಬಹುದೆ? ॥ವಿಶ್ವ॥

ಧನದ ಮದವು ತುಂಬಿ ದೈವವನು ಕಾಣರು,
ಕುಟಿಲ ಭಾವವುಳ್ಳ ಕ್ರೂರ ಜನರು,
ಮದವು ಮೀರಿದಾಗ ಮನ್ನಣೆಯು ಉಳಿಯದು ॥ವಿಶ್ವ॥

ಧನವಿದ್ದವರು ಪರರಿಗೆ ಉಪಕಾರ ಮಾಡುವುದು ಲೇಸೆಂಬುದರ ಅರಿವಿರಬೇಕು. ಕಲಿಯುಗದಲ್ಲಿ ಸಿರಸಂಗಿ ಲಿಂಗರಾಜರು ತಮ್ಮ ಸಮಸ್ತ ಸಾಮ್ರಾಜ್ಯವನ್ನು ಬಡಮಕ್ಕಳ ಶಿಕ್ಷಣ ಪ್ರಸಾರಕ್ಕಾಗಿ ಒಪ್ಪಿಸಿ ಕೃತಾರ್ಥರಾಗಲಿಲ್ಲವೆ? ಹಾಗೆ ಧನವಿದ್ದವರು ಮಾಡಿದರೆ ಕಡು ಬಡವರ ಉದ್ಧಾರವಾಗುತ್ತದೆ ಎಂಬ ಅರಿವಾದರೂ ಇರಬೇಕೆನ್ನುತ್ತಾರೆ ವೇಮನರು.

ನೆರವಿಗೆ ಬಾರದ ಸಿರಿಯಲ್ಲಿ ವೇಮನರು ಹೇಳಿದ್ದು ಹೀಗೆ–

ಸಿರಿ–ಸಂಪತ್ತು ಬಾಳು ಸಾಗಿಸಲು ಎಷ್ಟು ಬೇಕೋ ಅಷ್ಟಿದ್ದರೆ ಸಾಕು! ಸಂಪತ್ತು ಸಂಪಾದನೆಗಾಗಿಯೇ ಚಿಂತಿಸಬಾರದು. ಸಂಪತ್ತು ಸ್ಥಿರವಾದುದಲ್ಲವದು ಬಿಸಿಲು–ನೆರಳಿನಂತೆ ಹಿಂಬಾಲಿಸುವುದು. ಹಣದ ದಾಸರಾದರೆ ಹೆಣವಾಗಿ ಹೋದಿರಿ! ಎಂದುದಾಗಿ ಕಾಲಜ್ಞಾನ ಎಚ್ಚರಿಕೆಯನ್ನು ಕೊಟ್ಟಿದೆ. ವೇಮನರು ಇದನ್ನೇ ಕುರಿತು ಹೇಳುತ್ತಾರೆ.

ಕನ್ನೆಯದೆ ರೀತಿ, ಸಂಪದ
ಇನ್ನು ಕೆಲ ಕಾಲ ಫಲವನು ತೋರುತ ಸರ್ರನೆ ಇಳಿವೋಲ್
ಜೊನ್ನೆಯು ಕತ್ತಲು ಸರಿಯಿರೆ,
ಅಬ್ಬಬ್ಬಾ! ಶಿವಲಿಂಗ ಮಾಯೆ ಅಖಿಲವು ವೇಮಾ!

ಎಷ್ಟು ಸಂಪದವೋ ಅಷ್ಟು ಕಷ್ಟ ಚಿಂತೆ,
ಚಿಂತೆಯಿಂದ ಮಿಗಿಲು ಸೊರಗಿ ದೇಹ,
ಚಿಂತೆಯಿರದೆ ಇರುವ, ಕೆಡದ ಸಂಪದ ಕಾಣು. ॥ವಿಶ್ವ॥



ಗೋವು ಕರೆದ ಹಾಲು ಗುಟುಕು ಮಾತ್ರ ಸಾಕು,
ಕತ್ತೆ ಹಾಲು ಏಕೆ ಗಡಿಗೆ ತುಂಬ?
ಭಕ್ತಿಯುಳ್ಳ ಕೂಳು, ಹಿಡಿಯೆ ಇರಲು ಸಾಕು ॥ವಿಶ್ವ॥

ಕನಸಿನಲಿ ಸಂಪದವೆಲ್ಲ ಕನವರಿಪ!
ಕಾಣಲೇಕೆ ತಾನು ಎಚ್ಚರರಿಯಲ್?
ನೆನೆ ಭೋಗ ಭಾಗ್ಯ ಗುಣಗಳು
ಕನಸಿನ ರೀತಿಯಿದು, ನಂಬೆ ಘನವದು ವೇಮಾ!

ಗಿಡಬಳ್ಳಿ, ಗೋಡೆ ಸುತ್ತು ಕಟ್ಟಿ,
ಅಂತೆ ಗೂಡು ಅಗಲ ಮನೆಯ ಕಟ್ಟಿ,
ಮಹಾ ಗರ್ವಿಪ ನರ ಮೇಲು ಕೇಡರಿಯದೆ, ॥ವಿಶ್ವ॥

ಇದ್ದು ನೀಡದಿರಲು ಇದ್ದ ಜೀವಿಗೆಲ್ಲ
ದೊರಕದವಗೆ ತಿರಿಪೆ ದೀನ ಜನರೆ!
ತಿಳಿದು ಕಂಡುಕೊಳ್ಳಿರಿ, ದೃಷ್ಟಾಂತವಿದು ನಿಮಗೆ ॥ವಿಶ್ವ॥

ಕನಕ ಪಡೆದ ನರನು ಕಾಣನು ಮದದಿಂದ
ಇಲ್ಲದಾಗ ಮೊದಲೆ ಇಲ್ಲ ಕೊಡಲು,
ಕನಕವಿಲ್ಲದಾಗ ಕಾಲ ನಡೆಯಬಹುದೆ? ॥ವಿಶ್ವ॥

ನನ್ನ ನನ್ನೆದೆನುತ ಅನುಕೂಲದಿ ಆಡಿ
ಇಲ್ಲ ಇಲ್ಲವೆನುತ ಇಟ್ಟು ತುಳಿದು,
ಪಟ್ಟ ಪಡೆವ ಯುಕ್ತಿ ಪಡೆಯಲಾರದವಗೆ,
ವಿಷಯ ಜನಕೆ ಮುಕ್ತಿಗೇಡು ವೇಮಾ!

ಮಾನವ ದೇವಮಾನವ, ಶರಣನಾಗುವ ಮಾತುಗಳಿವು, ವೇಮನರ ಈ ವಾಣಿ ಒಂದರ್ಥದಲ್ಲಿ ದೇವವಾಣಿಯೇ ಎಣಿಸುತ್ತದೆ. ಸಂಪತ್ತು ಯಾರಿಗೂ ಸ್ಥಿರವಲ್ಲ. ಕನ್ನೆಯ ಸ್ನೇಹದಂತೆ, ಆಕೆಯ ಸೌಂದರ್ಯ ಕಡಿಮೆಯಾಗದಂತೆ ಸಂಪತ್ತು ಬಂದು ಹೋಗಬಹುದು! ಬೆಳದಿಂಗಳು ಮತ್ತು ಇರುಳನ್ನು ಸಮನಾಗಿ ನೋಡುವವನಿಗೆ, ಎಲ್ಲವೂ ಮಾಯೆಯೆನಿಸುವುದು. ಆದ ಕಾರಣ ಸಂಪತ್ತಿನಲ್ಲಿ ಸುಖವಿಲ್ಲವೇ ಇಲ್ಲ. ಅದರಿಂದ ಚಿಂತೆಯೇ ಹೆಚ್ಚಾಗುತ್ತದೆಯಾದುದರಿಂದ ಮನುಷ್ಯ ಸಂಪತ್ತಿನ ಬಗೆಗೆ ಹಪಹಪಿಪಡುತ್ತಾ ಬಡಕಲಾಗುತ್ತಾನೆ, ದೇಹಧಾರ್ಢ್ಯ ಉಡುಗುತ್ತದೆ.

ಚಿಂತೆಯಿಲ್ಲದಿಹುದೇ ನಿಜವಾದ ಸಂಪತ್ತು. ಅದುವೇ ದೇವನ ನೆನಹು, ನಾಮಸ್ಮರಣೆ, ಧ್ಯಾನವಾಗಿದೆಯೆನ್ನುತ್ತಾರೆ ವೇಮನರು.

ಕನಸಿನಲ್ಲಿ ಸಂಪತ್ತು ಕಂಡಂತಾಗುತ್ತದೆ. ಆದರೆ, ಎಚ್ಚರಾದಾಗ ಅದನ್ನು ಕಾಣಲಾರನು. ಇದ್ದು ಇಲ್ಲವಾಗುವ ಸಂಪತ್ತು ಅದು ಕೂಡ ಕನಸಿನಂತೆ ತಿಳಿ, ಮನುಜ ಎನ್ನುತ್ತಾರೆ. ಲೋಕದ ದೃಷ್ಟಿಯಿಂದ ಬಂಗಲೆ, ಸುಂದರವಾದ ಮನೆ ಕಟ್ಟಿ, ಬಾಗಿಲ ಮುಂದೆ ಮರ, ಗಿಡ, ಬಳ್ಳಿ ನೆಟ್ಟು ಅಂದಗೊಳಿಸಿ ಮೆರೆದರೆ, ಗರ್ವ ಪಟ್ಟು ನಾನೇ ಕಟ್ಟಿಸಿದೆ, ನಾನೇ ಹುಟ್ಟಿಸಿದೆ, ನಾನೇ ಬೆಳೆಸಿದೆ ಎಂದು ಗರ್ವಿಸಿದರೆ ಅದೇನು ಶಾಶ್ವತವೇ, ದೇವರು ತನ್ನ ವಿಧಿನಿಯಮದಂತೆ ಫಲ ನೀಡುವನಲ್ಲವೇ? ಆದ್ದರಿಂದ ತನಗಿರುವಾಗ, ತನ್ನಲ್ಲಿರುವಾಗ, ಇಲ್ಲದವರಿಗೆ ಕರೆದು ಸಹಾಯವೀಯಬೇಕು. ಇದುವೇ ಮಾನವ ಧರ್ಮ, ದೇವರ ಸೇವೆ. ಹಾಗೆ  ಮಾಡದಿದ್ದರೆ ತನಗೆ ತಿರಿಪೆಯೂ ಸಹ ಸಿಕ್ಕದು ಎಂದಿದ್ದಾರೆ ವೇಮನ. ಆದುದರಿಂದ ಇಷ್ಟೆಲ್ಲ ಹೇಳಿದ ಮೇಲಾದರೂ ನಾವು ದಾನ–ಧರ್ಮ ಮಾಡಿ ನಮ್ಮಲ್ಲಿರುವ ಧನ–ಧಾನ್ಯವನ್ನು ವಿನಿಯೋಗಿಸಬೇಕು? ಇರದ ಕಾಲದಲ್ಲಿ ಕೊಡಲಿಕ್ಕೆ ಸಾಧ್ಯವಿಲ್ಲ ಬಿಡಿ; ಆದರೆ, ಇದ್ದಾಗಲಾದರೂ, ಮನೆ ಬಾಗಿಲಿಗೆ ಬಂದು ನಿರ್ಗತಿಕರು ಗೋಗರೆದರೂ ಅವರಿಗೆ ನೀಡದಿದ್ದರೆ ಪಾಪವನ್ನು ಉಡಿಯಲ್ಲಿ ಹಾಕಿಕೊಂಡಂತೆಯೇ ಸರಿ! ಅದು ಕಾರಣ, ತನ್ನದು, ಪರರದು ಎಂದು ಭಿನ್ನ ಭಾವತಾಳಿ, ಬೇರೆಯವರಿಗೆ ಕೊಡದೆ, ಬ್ರಹ್ಮ ಪಟ್ಟವನ್ನು ಪಡೆಯಲಾರದವರಿಗೆ ಮುಕ್ತಿಗೇಡೇ ಗತಿಯಾಗುತ್ತದೆಯೆಂದ ವೇಮನರು. ದುಡಿಯಲಾರದೇ ಶ್ರೀಮಂತನಾಗುವುದಕ್ಕಿಂತ, ದುಡಿದು ಶ್ರೀಮಂತನಾಗುವವನೆಂದರೆ ಅನ್ನದಾತ ಅಥವಾ ನೇಗಿಲಯೋಗಿ (ರೈತ), ಹಾಗೆ ನೋಡಿದರೆ ಕೃಷಿಯೇ ಮೇಲು ಸಕಲ ಉದ್ಯೋಗಗಳಲಿ ಎಂದು ಪ್ರಾರಂಭದಲ್ಲಿ ತಿರುವಳ್ಳವರರು ಹೇಳಿರುವುದನ್ನು ಗಮನಿಸಿದ್ದೇವೆ. ನಮ್ಮೆಲ್ಲರ ರಕ್ಷಕನೇ ರೈತನು. ಆತನೇ ನಮ್ಮೆಲ್ಲರ (ವಿಶ್ವದ) ಬೆನ್ನೆಲುಬು. ವೇಮನರು ಹೇಳಿದಂತೆ –

ಕರಣಿಕ, ಧನಿಕರಲು, ಕಾಪುರೆಲ್ಲ ಕೂಡಿ, (ಒಕ್ಕಲಿಗ),
ಬಾಗುತಿಹರು, ಮನಸು ಬಂದ ಹಾಗೆ,
ನಿಷ್ಠುರ ಕರಣಿಕನಿರಲು, ನಿನ್ನ ಮ್ಕಕಳೆನುವರು ॥ವಿಶ್ವ॥

ಪರರಿಗಾಗಿ ಭೂಮಿ ಉತ್ತಿ ಬಿತ್ತಿ ಬೆಳೆದು,
ಅವನಿಪತಿಗೆ ವಶ್ಯವಾಗಿಹನು,
ಹಾಲಿನಂಥ ಕುಲಜನವನು ಕಾಪು (ರೈತ) ಅರಿಯೆ ॥ವಿಶ್ವ॥



ಬೆಳೆವ ಮಾನಗಳಿಗೆ, ಬೈಗುಳದ ಮಾತೆಗೆ
"ಕಾಪು" ಜಗಳಗಳಿಗೆ ಖಡ್ಗದಂತೆ
ಮಾರು ಮನೆಯ ಮೇಲೆ ಮೂರು ಜಗಗಳೆನಲು ॥ವಿಶ್ವ॥

ಶೇಖ, ಸಯ್ಯದ್, ಮೊಗಲ, ಶೋಭಿತ ಪಠಾಣರು,
ತುರುಕರು, ದೊರೆತನವ ತಾವು ಮಾಡಿ,
ಬರುಬರುತ ರೈತ ಬಂಧುವಾದ ಪೂಜ್ಯ॥ವಿಶ್ವ॥

ಕಾಪು ಜನರೆಂದರೆ, ರಕ್ಷಕರು, ಒಕ್ಕಲಿಗರು ಎಂದರ್ಥ. ಅವರು ಮೃದು ಸ್ವಭಾವದವರು. ಆದರೆ ರೈತರ ಜಮೀನ ಬರೆದಿಡುವ ತಲಾಠಿ (ಕುಲಕರ್ಣಿ–ಕರಣಿಕ) ಮಾಡುವ ಗಲಾಟೆ ಯಾವತ್ತೂ ಇರುವುದು. ಕಾಪುಗಳಿವರು ಬಾಗಿ ನಡೆಯುತ್ತಾರೆ. ವಿನಮ್ರ ಸೇವಕರು ದೇಶಕ್ಕೆ ಅನ್ನ ಹಾಕುವವರು ನಾವೆಂಬ ಅಹಮಿಕೆಯಿಲ್ಲದವರು. ನಾವೇ ಅವನ ಮಕ್ಕಳಿದ್ದಂತೆಯೇ ಸರಿ! ಮಾತೃಹೃದಯಿ, ಕರುಣಾಮುಖಿ, ಅನ್ನದಾತ ಆಳ್ವಿಕೆಯ ಪ್ರಭುಗಳು ಆತನನ್ನು ಕಡೆಗಣಿಸಬಾರದು! ಬರಗಾಲ, ವಿಪರೀತದ ಅನಾವೃಷ್ಠಿಯಾದಾಗ ಅಂದು ರಾಜಮಹಾರಾಜರು ತೆರಿಗೆ ಪಡೆಯದೇ ಸಹಾಯವೀಯುತ್ತಿದ್ದರು. ಇಂದಿನವರು ಯಾವ ರೀತಿ ಆಳ್ವಿಕೆ ಮಾಡುತ್ತಿದ್ದಾರೆಂಬುದನ್ನು ಹೇಳುವುದು ಬೇಡವೇ ಬೇಡ! ಇಂದಿನ ರಾಜಕೀಯ ಹದಗೆಟ್ಟು ಹೋಗಿದೆ. ರೈತನನ್ನು ಕಡೆಗಣಿಸಿದೆ ಎಂದು ಹೇಳಿದರೆ ನಮಗೆ ವಿಧಿಯಿಲ್ಲ! ರೈತರ ಬವಣೆಯನ್ನು ಕಂಡೂ ಕಾಣದಂತೆ ನಡೆದಿರುವರು. ಇದು ತರವಲ್ಲವಷ್ಟೇ! ಹಾಗೆ ನೋಡಿದರೆ, ನಮಗೆ ಅನ್ನ ನೀಡುವ ಅನ್ನದಾತ ಹಾಗೂ ದೇಶ ರಕ್ಷಣೆ ಮಾಡುವ ಸೈನಿಕ ಇವರೀರ್ವರೇ ನಮ್ಮ ಮಾನ ಮರ್ಯಾದೆ ಕಾಯುವವರು ಮತ್ತು ನಿಜವಾದ ದೇಶಭಕ್ತರು (ಉಳಿದವರೆಲ್ಲ ಭಕ್ಷಕರೆ!) ರೈತನು ನಿಷ್ಠುರನಾಗಿದ್ದರೆ, ಎಪ್ಪಾ! ನಾವು ಮಕ್ಕಳಿದ್ದಂತೆ ನಮ್ಮನ್ನು ಉಳಿಸು ಎಂದು ಬೇಡುವರು, ಆದರೂ ತಮ್ಮ ಹಕ್ಕು ಚಲಾಯಿಸಲಾರದ ಮುಗ್ಧ ಜನರು ನಮ್ಮ ಕಾಪು ಜನರು. ಇವರು ಪರರಿಗಾಗಿ ಭೂಮಿಯನ್ನು ಉತ್ತಿ, ಬಿತ್ತಿ ಬೆಳೆಯುತ್ತಾರೆ. ಪಶು–ಪಕ್ಷಿ–ಪ್ರಾಣಿ–ಮನುಜರಿಗೆ ಅನ್ನವನ್ನು ನೀಡುತ್ತಾರೆ, ದೊರೆಗೆ ಸರ್ಕಾರಕ್ಕೆ ಕರ ಕಟ್ಟುತ್ತಾರೆ. ಹಾಲಿನಂತೆ ಮಧುರ ಮನದವರವರು .ಕೂರಿಗೆಗಿರುವ ತಾಳಗಳು ಮೂರು. ಒಂದು ತಾಳು ಆಯಗಾರರಿಗೆ ಹೋದರೆ, ಇನ್ನೊಂದು ತಾಳು ಕರದಾತರಿಗೆ ಹೋಗುತ್ತದೆ. ತನಗೆ ಉಳಿಯುವುದೊಂದೇ ತಾಳು. 'ತಾಳಿದವನು ಬಾಳಿಯಾನು' ಎಂಬೋಕ್ತಿಯಂತೆ ಆ ಒಂದೇ ಒಂದು ತಾಳಿನಲ್ಲಿ ತಮ್ಮ ಮನೆಯ ಜವಾಬ್ದಾರಿಯನ್ನು ನಿಭಾಯಿಸುತ್ತಾನೆ. ಹಾಗೆ ನೋಡಿದರೆ ಯಾವುದೇ ಅಧಿಕಾರಿಗಿಂತಲೂ ಮಿಗಿಲಾದ ಬಂಟನವನು!

ಉಳಿದಾರಿಗೂ ಅವನಂಥ ಎಂಟೆದೆಯ ಬಂಟಸ್ಥನ ಬರಲಾರದು! ಅರಸರು, ದೊರೆಗಳು, ಸರಕಾರದ ಮಂತ್ರಿ–ಮಹೋದಯದವರು ಯಾರೇ ಬಂದರೂ ಅವರಿಗೆ ತಕ್ಕ ಅತಿಥಿ ಸತ್ಕಾರ ಮಾಡಿದರೂ ಮನದಲ್ಲಿ ಏನೂ ಬಯಸಲಾರದವನು. ರೈತ ಮಹಾಶಯನ ಬಗೆಗೆ ಅದೆಷ್ಟು ಬಣ್ಣಿಸಿದರೂ ಕಡಿಮೆಯೇ ಸರಿ! ಅಂತಹ ಅನ್ನದಾತನನ್ನು ದೇವರೇಂದೇ ಬಗೆದು ಪ್ರೀತಿಯಿಂದ ಕಾಣುವ ಭಾಗ್ಯವಾದರೂ ನಮಗೆ ಸಿಗಲೆಂದು ಪ್ರಾರ್ಥಿಸುವೆನು!

ದೇವರು ಕೊಟ್ಟದ್ದು ಕೊನೆಯತನಕ–ಮನುಜಕೊಟ್ಟದ್ದು ಮನೆತನಕ ಎಂಬ ಮಾತೊಂದಿದೆ. ಬಡವನಿರಲಿ–ಸಿರಿವಂತನಿರಲಿ–ತನಗೆ ಕೈಲಾದ ಮಟ್ಟಿಗಾದರೂ ಇಲ್ಲವರಿಗೆ ಕೊಟ್ಟು ಕರುಣಿಸುವ ಮೊಗವಿರಲಿ? ಅದಕೆಂದೇ ವೇಮನರು–

ವಿದ್ಯೆಯಿಲ್ಲದಿರಲು, ವಿತ್ತವಿಲ್ಲದಿರಲು
ಮೂಢನಿರಲಿ, ಮೂಕನಿರಲಿ,
ಇಷ್ಟ ಬಂಧುವಿರಲಿ ಕಷ್ಟವಾಗುತಿಹುದು ॥ವಿಶ್ವ॥

ವಿತ್ತ ಹೀನನಾದ ಕಾಲದಲ್ಲಿ, ತನಯ
ಹೆತ್ತಾಕೆ, ಹೆಂಡತಿ, ಹೃದಯ ಬಳಗ
ಶತ್ರುವಾಗುತಿಹರು, ಸತ್ಯವಿದು ನೋಡಾ ॥ವಿಶ್ವ॥

ಏನೂ ಇಲ್ಲದಾತ (ಬಡವ) ಏನು ಗೆಯ್ದೊಡೇನು?
ಕೈಗೆ ಸಿಗದು ಫಲವು, ಕಾಸು ಕೂಡ,
ಕನಕವಿರುವ ಕಾಲ ತಕ್ಕಡಿ ತೂಗುವುದು ॥ವಿಶ್ವ॥

ಕನಕವುಳ್ಳ ಮನುಜ ಕಾಮ ಮತ್ತೆ ಸೋಮ
ಮಿಗಿಲು ತೇಜದಿಂದ ಮೆರೆಯುತಿಹನು,
ವಿತ್ತ ಹೀನನಾಗೆ, ವ್ಯರ್ಥ ಹೋಹುದೆಲ್ಲ ॥ವಿಶ್ವ॥

ಬಡವನರಿಯದಂತಹ ಬಡತನವದು ಏಕೆ?
ಪೋಷಿಸದಿರೆ ಬಂಧು–ಭಾವವೇಕೆ?
ವ್ಯಾಧಿ ತಿಳಿಯದಿಪ್ಪ ವೈದ್ಯ ಮತ್ತೆ ಏಕೆ? ॥ವಿಶ್ವ॥

ಇದ್ದವನಂತಿರು ಇಲ್ಲದವನಂತಿರು,
ಮತ್ತೆ ಇಲ್ಲದಿಹುದು; ಮರಳಿ ಉಂಟು;
ಆಸೆ ಕೋರಿದಷ್ಟು ಅನುಗ್ರಹಿಸುವ ಶಿವ. ॥ವಿಶ್ವ॥



ಪರಿಕಿಸಿ ಇದುವರೆಗೆ ಪಟ್ಟ ಪಾಡನರಿಯ,
ಘನತೆಗೊಪ್ಪುವ ನರನೆನಿಸಿ ಹುಟ್ಟಿ,
ಕೀಳು–ಮೇಲರಿಯದೇ ಕುಸಿಯುತಿಹ ಚಿತ್ರ ॥ವಿಶ್ವ॥

ಇಹದಲ್ಲಿಯ ಬಹಳ ಇರುಕಿನಲಿ ಬಳಲಿದ
ಬಡವ ಹೊಂದಲಾರ ಪರಮ ಪದವಿ,
ಬಡವ ಪಡೆಯಬಹುದೆ, ಪೃಥ್ವಿಯೊಳಿಹ ಭಾಗ್ಯ ॥ವಿಶ್ವ॥

ಬಡವಗೆ ಕನ್ಯಾ ದಾನವನು ಕಡು ಹರ್ಷದಿಂದ
ಗೈಯ್ಯುವ ಪುರುಷನು ಕೊನೆಯೋಳ್,
ಸಾಧಿಸುವ ಪುಣ್ಯ ಲೋಕವ,
ವೇದಾಂತ ರಹಸ್ಯವಿದನು ವೇಮ ಕೇಳು!

ನೆರೆಹೊರೆಯವರುಂಟು, ನೋಡಿ ಸಂಪದವನು,
ತಮಗೆ ಇಲ್ಲವೆನಲು ಧರ್ಮವೇನು?
ಧರ್ಮ ನಡೆಸಿರೆನಲು ತೊಂದರೆ ಪಡುವರು ॥ವಿಶ್ವ॥

ಹೊಟ್ಟೆಗೆ ಕೂಳು ಇರದೆ, ಹೊಟ್ಟೆ ಡೊಳ್ಳು ಆಯ್ತು,
ಮಮತೆ ಮಾನ ಉಳಿಸನೆ ಮಾನವ ತಾಳಿ
ಅದಕೆ ಧನವ ಗಳಿಸಿ ಆದನವನು ಜ್ಞಾನಿ ॥ವಿಶ್ವ॥

ಎಲ್ಲ ಕಳೆದುಕೊಂಡವ ಎಲ್ಲೂ ಲೆಕ್ಕಕ್ಕಿಲ್ಲ
ಇಂದು ಅಂದು ಅಂತೆ ಏನು ಬಂತು?
ಮಂದ ಮತಿಯಾಗದೆ, ಮಹಿಮೆ ಹೊಂದಿ ಬಾಳು ॥ವಿಶ್ವ॥

ಹಸಿಯಲು ನಶಿಸುವವು ಆಚಾರ ವಿಧಿಯೆಲ್ಲ
ನಿಶೆಯೊಳು ನಶಿಸುವುದು ಚಿತ್ತಶುದ್ಧಿ,
ಗರ್ಭಧರಿಸೆ ಇಲ್ಲ, ಗರ್ವ ಗಡಸು ಎಲ್ಲ ॥ವಿಶ್ವ॥

ದಾತನಿರಲು ಕರೆದು ದಾನ ಕೊಡುವ ಮೊದಲು
ತನಗೆ ಇರದೆ ತಾನು ಕೊಡುವನೇನು?
ಆಲವು ತೃಷೆಗೆ ಮದ್ದು, ಮಲೆತರೆ ತೃಷೆ ಕಳೆವುದೇ? ॥ವಿಶ್ವ॥

ಕನಕವಿರಲು ಅವನೆ ಕಾಮ ಮತ್ತೆ ಭೀಮ;
ಮಿಗಿಲು ತೇಜದಿಂದ ಮೆರೆಯುತಿಪ್ಪ,
ಹೇಮಹೀನ ತಾನು ಹುಚ್ಚು ಪೆದ್ದ ನೋಡು ॥ವಿಶ್ವ॥

ಕನಕ ಕೈಯೊಳಿರಲು ಕಾಮನಂತೆ ಮಾನ;
ಇಲ್ಲವಾಗಲೇನು ಇಲ್ಲ ಇಲ್ಲವಿಲ್ಲ!
ಮದನನಂಥ ಮನುಜನಾಗ ಹೊಲೆಯನಂತೆ ॥ವಿಶ್ವ॥

ಮಣ್ಣು ತಿನ್ನಿರೆನಲು ಮೀರಿ ಕೋಪ ಜನಕೆ
ಮಣ್ಣೊಳಿರುವ ಮೇಲ್ಮೆ ಮರೆವರೇಕೆ?
ನೀರೊಳಗಿನ ಮೇಲ್ಮೆ ನಿಖಿಲವಾಗಿ ಉಂಟು! ॥ವಿಶ್ವ॥

ಹುಲ್ಲು ಪಶುವಿಗಾಯ್ತು, ಹಾವಿಗಾಯ್ತು ಗಾಳಿ,
ಮಣ್ಣನೆರೆ ಹುಳಕಿತ್ತು ಮರೆತ ರೀತಿ,
ಅಂತೆ ಜಗದ ಜನತೆ ಅನ್ನವಾಯಿತಷ್ಟೇ ॥ವಿಶ್ವ॥

ಬೆವರು ಸುರಿಯುವಂತೆ, ಬಹಳ ಕಷ್ಟಪಟ್ಟು,
ದುಡಿಮೆಗೆಯ್ದು ಕೂಳು ತಿನ್ನಬೇಕು.
ತಾಯಿ, ತಂದೆ, ಗಳಿಕೆ ತಾನು ತಿನಲು ಹೊಲ್ಲ ॥ವಿಶ್ವ॥

ಧನಿಕನಲ್ಲದಿದ್ದರೂ ಬಡವನಾದವನಲ್ಲಿ ಹೃದಯವಂತಿಕೆ ಗುಣವಿರಬೇಕಂತೆ! ಎಷ್ಟೋ ಧನಿಕರು ತಮ್ಮಲ್ಲಿದ್ದುದನ್ನು ತಿನ್ನದೆ ಕೊರಗುತ್ತಾರೆ. ನೂರಾರು ಚೀಲಗಟ್ಟಲೇ ಸಕ್ಕರೆಯ ಮೂಟೆಗಳಿದ್ದರೂ ತಿನ್ನುವಂತಿಲ್ಲ, ಕಾಯಿಲೆಗಳಲ್ಲೂ ಶ್ರೀಮಂತರೆನಿಸಿ ಕೊಂಡವರುಂಟು! ಭೋಗ ಭಾಗ್ಯದ ಮಧ್ಯೆ ಅಂಥವರಿದ್ದೂ ಸತ್ತಂತೆ! ಹಸಿಯ ಗಡಿಗೆಯಲ್ಲಿ ನೀರು ಹಾಕಿದರೆ ನಿಲ್ಲದಂತೆ. ಸರಿಯಾಗಿ ದುಡಿದು ಉಪಜೀವನ ಮಾಡದವನದ ಮಾರ್ಗ ಕಂಡುಕೊಳ್ಳದವನ ವಿದ್ಯೆಯು ಸಹ ಅವನಲ್ಲಿ ನಿಲ್ಲಲಾರದು. ಆದ್ದರಿಂದ ವಿದ್ಯೆಯೂ ಬೇಕು, ಜೊತೆಗೆ ವಿತ್ತವೂ ಬೇಕು. ಅವರು ಮೂಢರಿರಲಿ, ಮೂಕರಿರಲಿ, ಯಾರೇ ಇರಲಿ, ಈ ಮಾತು ಅನ್ವಯಿಸುವುದು.

ಹಣವಿಲ್ಲದಿದ್ದರೆ ತಂದೆ-ತಾಯಿ ಹೆಂಡತಿ-ಮಕ್ಕಳು-ಬಂಧು-ಬಳಗವೆಲ್ಲ ಶತ್ರುವಾಗುವರು. ಹಣವು ಕೈಯಲ್ಲಿರುವ ಕಾಲದಲ್ಲಿಯೇ ತಕ್ಕಡಿ ತೂಗುವುದು, ವ್ಯವಹಾರ ಸರಾಗವಾಗಿ ಸಾಗುವುದು. ಏನೂ ಇರದೇನು ಮಾಡುವುದು? ಮಾಡಿದರೇನು? ಧನಕನಕವಿರುವ ಮನುಜನೇ ಕಾಮ ಅವನೇ ಸೋಮ. ಅವನು ತೇಜದಿಂದ ಮೆರೆಯುತ್ತಾನೆ. ವಿತ್ತವಿಲ್ಲದವನು ಏನು ಮಾಡಿದರೇನು? ಆತನದು ವ್ಯರ್ಥ ಸಾಹಸವೇ ಸರಿ! ಇರುವಾಗಲೂ ಒಂದೇ ರೀತಿ; ಇಲ್ಲದಿರುವಾಗಲೂ ಒಂದೇ ರೀತಿ ಬಾಳಬೇಕು. ಆಗ ಅಂಥವರಿಗೆ ದೇವರು ಬೇಡಿಕೆಗಳನ್ನು ತಾನೇ ಪೂರೈಸುತ್ತಾನೆ. ಕಾರಣ ಬಡವರಲ್ಲಿ ದೇವರ ಮೇಲೆ ಅಮಿತವಾದ ಭಕ್ತಿಯಿರುತ್ತದೆ. ಅವರಲ್ಲಿಯೇ ರೀತಿ ನೀತಿ-ನಡತೆ-ದಾನ-ಧರ್ಮದ ಬಯಕೆ ಹೆಚ್ಚುಗಾರಿಕೆಯಿರುತ್ತದೆ.



ಅಂತೆಯೇ ಬಡವರ-ದೀನ-ದಲಿತರ ಅನಾಥ ಬಂಧುಗಳ ರಕ್ಷಕನಾಗಿ ಅವರ ಪರವಾಗಿರುವನು. ಬಡವನಿಗೆ ನೀಡಿ ರಕ್ಷಿಸುವವನು ಆತನೇ ದೀನಬಂಧು ದಯಾಳು! ದೇವರು ಇಂಥವರನ್ನು ಪರಿಶೀಲಿಸಲೆಂದು ಅನೇಕ ವೇಷಾಂತಗಳಲ್ಲಿ ಕಂಡದ್ದುಂಟು? ಬಡವನು ಪರೀಕ್ಷೆಯಲ್ಲಿ ಗೆದ್ದು ಅವನೊಂದಿಗೆ ಹೋದವರುಂಟು! ಅಂಥವರಿಗೆ ದೇವಲೋಕದಲ್ಲಿ ಗಣ ಪದವಿ ಕೊಟ್ಟು ಕರುಣಿಸಿದ ಪುರಾಣಗಳಲ್ಲಿ ಕಥೆಯಾಗಿದ್ದುಂಟು.

ಬಡವನು ತನ್ನ ಮಗಳನ್ನು ಸಿರಿವಂತರಿಗೆ ಕೊಡುತ್ತಾನೆ. ಅವರಿಂದ ಏನೂ ಬಯಸಲಾರನು. ಮಗಳು ಸುಖವಾಗಿರಲೆಂದು ಕನ್ಯಾದಾನ ಮಾಡುತ್ತಾನೆ. ಅವನ ಗುಣಕರ್ಮಗಳನ್ನು ನೋಡಿಯೇ ಕನ್ಯಾದಾನ ಮಾಡಿದರೆ ಅವನಿಗೆ ಪುಣ್ಯ ಬರುತ್ತದೆಯೆಂಬುದೊಂದು ನಂಬುಗೆ. ಬಡವರಿಗೆ ನಂಬಿಗೆಯೇ ಆಸರೆ! ನಂಬಿಕೆಟ್ಟವರಿಲ್ಲೊ ಶ್ರೀ ಹರಿಯೇ ಎಂದು ಬದುಕಿದವರುಂಟು! ತಮ್ಮ ಸುತ್ತ ಮುತ್ತಲಿನವರು ಸಿರಿವಂತರಾಗಿರುವುದನ್ನು ಕಂಡು ಸಂಕಟಪಡುತ್ತಾರೆ. ಆದರೆ, ಧರ್ಮ ಜೀವನ ನಡೆಸಿರೆಂದು ಹೇಳಿದರೆ, ತೊಂದರೆ ಪಡುತ್ತಾರೆ. ಇತರರಿಗೂ ತೊಂದರೆ ಕೊಡುತ್ತಾರೆ. ಧರ್ಮ ಜೀವನ ನಡೆಸದೆ ಸಂಪತ್ತು ಬರುವುದೆಂತು? ಈಗ ಸಂಪತ್ತು ಹೊಂದಿದವರನ್ನು ನೋಡಿದರೆ ಅದೇನು ಅಹಂಕಾರ? ಈದ ಹುಲಿಯಂತೆ ವರ್ತಿಸುತ್ತಾರೆ. ಇಂಥವರಲ್ಲಿ ಸಂಪತ್ತಿದ್ದರೇನು ಪ್ರಯೋಜನ? ಇಂಥವರು ಉಪಕಾರ ಮಾಡಲಾರದ ಅಪಕಾರಿಗಳೇ ಸರಿ! ಆದುದರಿಂದ ವೇಮನರು ಹೇಳಿರುವಂತೆ ಧನವಿರುವಾಗ ಮಿತವ್ಯಯದಿಂದ ಧರ್ಮದ ಜೀವನ ಬಾಳಬೇಕು. ಇದ್ದವರದು ಈ ರೀತಿಯಾದರೆ, ಇಲ್ಲದವರು ಇದ್ದುದರಲ್ಲಿಯೇ ಅಂದರೆ ಹಾಸಿಗೆಯಿದ್ದಷ್ಟು ಕಾಲು ಚಾಚಬೇಕು. ಸಾಲ ಮಾಡಿ ಬದುಕಬಾರದು! ಕಾರಣ ಮಾಡಿದ ಸಾಲ ಶೂಲದಂತೆ ಇರಿಯುತ್ತದೆ. ಇನ್ನು ಇದ್ದವರು ದುಂದು ವೆಚ್ಚ ಮಾಡಿ, ಚಟಾದಿಗಳ ಆಧೀನನಾಗಿಬಿಟ್ಟರೆ? ಎಲ್ಲವನ್ನು ಕಳೆದುಕೊಳ್ಳಬೇಕಾಗುತ್ತದೆ. ಹಣವಿದ್ದರೇನೇ ಕಾಮನು, ಸೋಮನು, ಭೀಮನು. ಹಣ ಕಳೆದುಕೊಂಡರೆ ಪೆದ್ದ-ದಡ್ಡನಾಗುತ್ತಾನೆ. ಅಂಥವನ ಹತ್ತಿರ ಯಾರೂ ಸುಳಿಯರು, ಇದ್ದಾಗಲೂ ಸುಳಿಯಲಾರರು. ಏಕೆಂದರೆ, ಹಣ ಗಳಿಸುವಾಗ ಇತರರಿಗೆ ಉಪದ್ರವಿಯಾಗಿರುತ್ತಾನೆ. ಎಲ್ಲವನ್ನು ಕಳೆದುಕೊಂಡಾಗ ಹುಚ್ಚನಾಗುತ್ತಾನೆ, ಸನ್ಯಾಸಿಯಾಗಲೂ ಮುಂದಾಗುತ್ತಾನೆ. ಆದುದರಿಂದ ಪ್ರತಿಯೊಬ್ಬನೂ ತಾಯಿ ತಂದೆಯರ ಗಳಿಕೆಯ ಮೇಲೆ ಉಪಜೀವಿಸದೇ, ಸ್ವಂತ ಕಷ್ಟಪಟ್ಟು ದುಡಿದು ಉಣ್ಣಬೇಕು ಹಾಗೆಯೇ ಪರೋಪಕಾರ ಜೀವಿಯಾಗಿ ಬಾಳು ಸಾಗಿಸಬೇಕು. ಇದುವೇ ವೇಮನರ ಉತ್ಕೃಷ್ಟ ನೀತಿ ಬೋಧನೆಯಾಗಿದೆ.

ಆದುದರಿಂದ ನಾವು–ನೀವೆಲ್ಲಾ ವೇಮನರು ಹೇಳುವಂತೆ.
ಪರರ ಮೋಸಗೈದು ಭೂರಿ ಕಾಸು ಗಳಿಸಿ
ಹೊರೆಯಲುದರವನ್ನು, ತರವಲ್ಲವೋ,
ಪರರ ಋಣದಿ ಸಿಕ್ಕ ನರಗಿಲ್ಲ ಗೌರವ ॥ವಿಶ್ವ॥

ಪರರ ಆಸ್ತಿಯಲ್ಲಿ ಭ್ರಾಂತಿಯಿಲ್ಲದಂಥ
ಪುರುಷನು ಅವನಿಯಲ್ಲಿ ಪುಣ್ಯ ಮೂರ್ತಿ!
ಪರರ ಆಸ್ತಿಯಾಗೆ ಪಾಪ ಚಿಂತೆಯಹುದು ॥ವಿಶ್ವ॥

ಭೋಗದಾಸೆಯಿಂದ ಪರಿಜ್ಞಾನವಿರದೆ,
ದ್ರೋಹ ಬುದ್ಧಿ ತಳೆದು ದೂರುತಿದ್ದು
ಸಾಹಸಪಡುವವನು ಸರ್ವದಾ ಕೆಡುವನು ॥ವಿಶ್ವ॥

ಪರರ ಮೇಲು ಕಂಡು, ಹಲವು ಕಾಗೆಯಂತೆ
ವ್ಯರ್ಥ ಮಾತನಾಡುವವನು ಅಧಮ,
ಅಂತಿರುವವನ ಬದುಕು ಅದು ಮಣ್ಣಿಗೆ ಸಮವು ॥ವಿಶ್ವ॥

ಎಷ್ಟು ಭಾಗ್ಯವುಂಟೊ, ಅಷ್ಟು ಕಷ್ಟ ಚಿಂತೆ,
ಕಷ್ಟದಿಂದ ಚಿಂತೆ ಮನಸು ಸಪ್ಪೆ ಹೊಲಸು,
ಚಿಂತೆ ಇಲ್ಲದಿಹುದೇ ಕೆಡದ ಸಂಪದವದು ॥ವಿಶ್ವ॥

ಪರರನ್ನು ವಂಚಿಸಿ ಹೊಟ್ಟೆ ಹೊರೆಯುವುದು ತರವಲ್ಲ. ಪರರ ಋಣದಲ್ಲಿ ಸಿಲುಕಿದವನಿಗೆ ಗೌರವವಿರಲಾರದು. ಇಂಥವರಿಗೆ ಕರುಣೆಯೆಂಬುದೇ ಇರಲಾರದು. ಇಂಥವರು ಪತನ ಹೊಂದುವರು. ಕೇಡಿಗತನಕ್ಕೆ ಕೇಡುಂಟು! ಅಂಥವರ ಪಾಡು ಹೇಗೆಂದರೆ ಜೇನು ನೊಣವು ಪರರಿಗೀಯಬೇಕಾದ ಜೇನನ್ನು ತಾನೇ ಸವಿಯಲು ಹೋದರೆ ಅದರಲ್ಲಿ ಸಿಕ್ಕು ಸಾಯುತ್ತದೆ. ಕೇಡಿಗರಿಗೆ ಇದೇ ಗತಿಯಾಗುತ್ತದೆ. ಭಾಗ್ಯ ಹೆಚ್ಚಿದಷ್ಟು ಚಿಂತೆಯೂ ಹೆಚ್ಚುತ್ತದೆ. ಚಿಂತೆಯಿಂದ ಮನಸ್ಸು ಮುದುಡುತ್ತದೆ. ಚಿಂತೆಯಿಲ್ಲದಿರುವುದೇ ಕೆಡದ ಸಂಪತ್ತಾಗಿದೆಯೆಂದಿದ್ದಾರೆ ವೇಮನರು.

ಇಬ್ಬರೂ ಮಹಾತ್ಮರು ಹೇಳಿರುವ ಮೇರು ಗುರಿಯನ್ನು ಹೊಂದಲು ಮನುಷ್ಯ ಪ್ರಯತ್ನಿಸಬೇಕು. ಧನ–ಕನಕದ ಆಸೆಗೆ ಬೆನ್ನು ಹತ್ತಿ ಬದುಕು ಹಾಳು ಮಾಡಿಕೊಳ್ಳಬೇಡ. ಸಂತೋಷದಿಂದ ಜೀವನವನ್ನು ನಡೆಸಬೇಕಾದರೆ ಇಂಥ ಮಹಾತ್ಮರ ನುಡಿಗಳನ್ನು ಮೇಲಿಂದ ಮೇಲೆ ಮೆಲುಕು ಹಾಕುತ್ತ ಅನುಷ್ಠಾನಕ್ಕೆ ತರಲು ಹವಣಿಸುತ್ತಿರು ಮನುಜ ಎನ್ನಲಾಗಿದೆ. ಡಾ.ಡಿ.ವ್ಹಿ.ಜಿ. ಅವರು ಹೇಳಿದಂತೆ–



ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು
ಗುರುತಿಸೊಳಿತಿರುವುದನು ಕೇಡುಗಳ ನಡುವೆ
ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು
ಹರುಷಕಿದೆ ದಾರಿಯೆಲೋ – ಮಕ್ಕುಂತಿಮ್ಮ!!

ನೀನು ಸಂತೋಷದಿಂದಿರಬೇಕಾದರೆ ಡಿ.ವಿ.ಜಿ.ಯವರು ಹೇಳಿದ ಈ ಪದ್ಯವನ್ನು ಓದು, ಅದರಂತೆ ನಡೆ. ನಿನ್ನ ಕೈಗೆ ಬರದಿರುವುದರ ಆಲೋಚನೆಯಲ್ಲಿ ಬಂದಿರುವುದನ್ನು ಮರೆಯಬೇಡ. ಕೇಡುಗಳು ನಮ್ಮನ್ನು ಹೇಳಿ ಕೇಳಿ ಬರಲಾರವು. ಅವುಗಳು ಒಂದಲ್ಲ ಒಂದು ಸಮಯ ಎಲ್ಲರನ್ನು ಕಾಡುತ್ತವೆ. ಆ ಕೇಡುಗಳ ಮಧ್ಯದಲ್ಲೂ ಕೆಲವು ನಮಗೆ ಒಳಿತನ್ನು ಮಾಡುತ್ತಿರುತ್ತವೆ. ಅವುಗಳನ್ನು ಗುರುತಿಸು. ನಿನಗೆ ಇರುವ ಭಾಗ್ಯವನ್ನು ನೆನಪಿಸಿಕೊಂಡು, ಬರದಿರುವ ಕನ್ನಡಿಯೊಳಗಿನ ಗಂಟಿಗೆ ಆಸೆಪಡಬೇಡ. ಈ ಸೂತ್ರಗಳೇ ಸಂತೋಷಕ್ಕೆ ದಾರಿ.

ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ
ನಾನೇನು ಹುಲ್ಲು ಕಡ್ಡಿಯೆಂಬ ನುಡಿ ಬೇಡ
ಹೀನಮಾವುದಿಮಿಲ್ಲ ಜಗದ ಗುಡಿಯೂಳಿಗದಿ
ತಾಣ ನಿನಗಿಹುದಲ್ಲಿ ಮಂಕುತಿಮ್ಮ॥

ಎಂಥ ಬುದ್ಧಿವಾದದ ಮುತ್ತಿನಂತಹ ಮಾತಿದು ನೋಡಿ! ಆಲಸ್ಯದಿಂದ ಕುಳಿತುಕೊಂಡು ಕಾಲಹರಣ ಮಾಡುವುದು ತರವಲ್ಲ. ಸುಮ್ಮನೇ ಸೋಮಾರಿಯಾಗಿ ಕುಳಿತಿರಬೇಡ ಮನುಜನೇ; ಕೈಗೆ ಸಿಕ್ಕಿದ ಕೆಲಸವನ್ನು ತಪ್ಪದೇ ಮಾಡುತ್ತಿರು. ನಾನೊಂದು ಹುಲ್ಲುಕಡ್ಡಿ; ನಾನೇನು ಮಾಡಲಾದೀತು ಎನ್ನುವ ಕೀಳರಿಮೆಯ ಮಾತು ಆಡಬೇಡ. ಜಗತ್ತಿನ ಗುಡಿಯ ಸೇವೆಯಲ್ಲಿ ಯಾವ ಕೆಲಸವೂ ಕೀಳಲ್ಲ ಹೀನವಲ್ಲ. ಈ ಪ್ರಪಂಚದಲ್ಲಿ ನಿನಗೂ ಒಂದು ಸ್ಥಾನವಿದೆಯೆಂದು ಭಾವಿಸಿಕೊಂಡು ಮುನ್ನಡಿಯೆಂದಿದ್ದಾರೆ. ಅವರೇ ಮತ್ತೊಂದು ಪದ್ಯದಲ್ಲಿ–

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ –ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳೊಂದಾಗು ಮಂಕುತಿಮ್ಮ!!

ಇದು ನೀನು/ನಾನು ಪ್ರಪಂಚದಲ್ಲಿ ಹೇಗೆ ನಡೆದುಕೊಂಡರೆ ಚೆನ್ನ ಎಂಬುದರ ಕುರಿತು ಹೇಳಿದಂತಿದೆ. ಬೆಟ್ಟದ ಅಡಿಯಲ್ಲಿರುವ ಹುಲ್ಲಿನಂತಿರು. ಯಾರಾದರೂ ಮೇಲಿಂದ ಬಿದ್ದರೆ ನೀನು ಅವರನ್ನು ಸುಖವಾಗಿಡುವಂತಿರು. ಆ ಹುಲ್ಲನ್ನು ಹಸು

ಕರುಗಳು ಕೂಡ ತಿಂದು ತೃಪ್ತಿ ಪಡುವಂತಾಗಲಿ. ನಿನ್ನ ಮನೆಗೆ ನೀನು ಸುಗಂಧವನ್ನು ಬೀರುವಂಥ ಮಲ್ಲಿಗೆಯ ಹೂವಾಗು. ಎಲ್ಲರೂ ನಿನ್ನನ್ನು ಎದುರು ನೋಡುವಂತಿರಲಿ. ಕಷ್ಟಗಳ ಮಳೆಯನ್ನು ವಿಧಿಯು ನಿನ್ನ ಮೇಲೆ ಸುರಿಸಿದಾಗ ದೃಢಚಿತ್ತನಾಗಿ ಎದೆಗೊಟ್ಟು ನಿಲ್ಲು. ಆ ಕಷ್ಟಗಳು ನಿನ್ನನ್ನು ಏನೂ ಮಾಡಲಾರವು. ಜಗತ್ತಿನಲ್ಲಿರುವ ದೀನರು–ಮತ್ತು ದುರ್ಬಲರು ನಿನ್ನ ಪಾಲಿಗೆ ಸಿಹಿಯ ನರನು ಕೊಡುವ ಬೆಲ್ಲ ಮತ್ತು ಸಕ್ಕರೆಯೆಂದು ಭಾವಿಸಿಕೋ! ಒಟ್ಟಿನಲ್ಲಿ ಎಲ್ಲರನ್ನು ಸಮರಸದಿಂದ ಕಾಣೆಂದರು ಡಿ.ವ್ಹಿ.ಜಿ. ಅವರು. ಜಗತ್ತಿನಲ್ಲಿ ಜೀವನವನ್ನು ನಡೆಸುತ್ತಿರುವಾಗ, ನಿನ್ನ ಜೀವನದ ವ್ಯಾಪ್ತಿ ವಿಸ್ತಾರವಾಗಿರಲಿ ಮನಸ್ಸು ವಿಶಾಲತೆಯಿಂದ ಎಲ್ಲರನ್ನು ಸೇರಿಸಿಕೊಳ್ಳಲಿ ಅದು ಬಿಟ್ಟು ಕತ್ತಲು ತುಂಬಿರುವ ಸಂದುಗೊಂದುಗಳಲ್ಲಿ, ಯಾರಿಗೂ ಕಾಣಿಸದಂತೆ ಜೀವನವನ್ನು ನಡೆಸುವುದು ಉಚಿತವಲ್ಲ. ಸೂರ್ಯನ ಕಿರಣಗಳು ಪ್ರಕಾಶಿಸುವುದರಿಂದ ಜಗತ್ತಿನಲ್ಲಿ ಜೀವಿಗಳು ಬೆಳೆಯಲು ಸಾಧ್ಯ. ಇವುಗಳನ್ನು ಅರಿತಾಗ ಮರಣವೆನ್ನುವುದು ನಿನಗೆ ಒಂದು ಸಣ್ಣ ಸಮಾಚಾರವಾಗಿ ತೋರುತ್ತದೆಯಷ್ಟೇ! ಸರ್ವಜ್ಞ ಕವಿಯು ಹೇಳಿದಂತೆ –

ಸಿರಿಯೆಂಬ ಸಂಸಾರವನು ಸ್ಥಿರವೆಂದು ನಂಬದಿರು
ಹಿರಿದೊಂದು ಸಂತೆ ನೆರೆದೊಂದು – ಜಾವಕ್ಕೆ
ಹರಿದು ಹೋದಂತೆ ಸರ್ವಜ್ಞ!

ಹಣವಳಿದು ಹೋದರೂ, ಹೆಣ ಬೀಳ ಹೊಡೆದರೂ
ಮೊಣಕಾಲು ಗಣಿಕೆ ಮುರಿದರೂ ಹಾದರದ
ಕುಣಿಕೆ ಬೇಡೆಂದ ಸರ್ವಜ್ಞ!

ಐಶ್ವರ್ಯದ ಸಂಸಾರ ಶಾಶ್ವತವೆಂದು ಭಾವಿಸಬೇಡ ಮನುಜನೇ! ಅದು ಬಹುದೊಡ್ಡ ಸಂತೆಯಲ್ಲಿ ಕೂಡಿದಂತಹ ಜನಸಂದಣಿಯು ಅಲ್ಪಾವಧಿಯಲ್ಲಿಯೇ ಇಲ್ಲದಂತಾಗುತ್ತದೆ. ತನ್ನಲ್ಲಿರುವ ಸಿರಿ ಸಂಪತ್ತು ಹಾಳಾಗಿ ಹೋದರೂ ಸಾಯುವಂತೆ ಹೊಡೆದರೂ ಕೂಡ ವ್ಯಭಿಚಾರ ಮತ್ತು ಅವ್ಯವಹಾರಗಳನ್ನು ಮಾಡಬೇಡವೆಂದು ಹಿತನುಡಿದಿದ್ದಾರೆ. ಬಹುಶಃ ಇಂದಿನ ಇರವನ್ನು ಭವಿಷ್ಯ ವಾಣಿ ನುಡಿದ ಪೂಜ್ಯ ಡಿ.ವ್ಹಿ.ಜಿ.ಯವರ ಮಾತು ನನಗೆ ನೆನಪಿಗೆ ಬರುತ್ತದೆ.

ಮಾನವರೋ ದಾನವರೋ ಭೂಮಾತೆಯನು ತಣಿಸೆ
ಶೋಣಿತವನೆರೆಯುವರು ಭಾಷ್ಪ ಸಲುವುದಿರೆ?
ಏನು ಹಗೆ! ಏನು ಧಗೆ! ಏನು ಹೊಗೆ! ಯೀ ಧರಣಿ!
ಸೌನಿಕನ ಕಟ್ಟಯೇಂ? ಮಂಕುತಿಮ್ಮ!!



ಇವರೇನು ಮನುಷ್ಯರೋ, ರಾಕ್ಷಸರೋ, ಈ ಭೂಮಾತೆಯನ್ನು ತೃಪ್ತಿ ಪಡಿಸಲು ಕಣ್ಣೀರು ಸುರಿಸುವುದರ ಬದಲು, ರಕ್ತವನ್ನು ಸುರಿಯುತ್ತಿದ್ದಾರೆ. ಈ ಪ್ರಪಂಚದಲ್ಲಿರುವ ಹೊಗೆ ಮತ್ತು ಹಗೆಗಳನ್ನು ನೋಡಿದರೆ, ಇದು ಕಟುಕನ ಜಗುಲಿಯಂತೆ ಕಾಣುತ್ತಿದೆ. ಇಂದಿನ ವಿಶ್ವದ ದಾರುಣ ಸ್ಥಿತಿಯನ್ನು ಕಂಡು ಅಂದು ಗ್ರಹಿಸಿಯೇ ಪೂಜ್ಯ ಡಿ.ವಿ.ಜಿ. ಅವರು ಕಂಬನಿ ಮಿಡಿದು ನುಡಿದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಆದುದರಿಂದ ತಿರುವಳ್ಳುವರರು, ವೇಮನರು, ಸರ್ವಜ್ಞ– ಡಿ.ವ್ಹಿ.ಜಿಯವರು ಹೇಳಿದ ಮಾತುಗಳನ್ನು ನಾವಿಂದು ಪದೇ ಪದೇ ಮೆಲುಕು ಹಾಕುತ್ತ ಅನುಷ್ಠಾನಕ್ಕೆ ತರಲು ಪ್ರಯತ್ನಿಸುವುದೇ ನಮ್ಮ ಧ್ಯೇಯ ಮತ್ತು ಗುರಿಯಾಗಬೇಕು. ಹಾಗೆ ನಡೆದುಕೊಂಡರೆ ನಮಗೇ ಶೋಭೆ ಮತ್ತು ಶ್ರೇಯಸ್ಕರ.

## ಉ. ಕಾಮ ವಿಭಾಗ

ಚತುರ್ವಿಧ ಪುರುಷಾರ್ಥಗಳಲ್ಲಿ ಕಾಮನದು ಪ್ರಮುಖ ಸ್ಥಾನ, ಏಕೆಂದರೆ ಪಂಚೇಂದ್ರಿಯಗಳಲ್ಲಿದು ಮುಖ್ಯ ಪಾತ್ರ ವಹಿಸುತ್ತದೆ. ಜನಪದರು ಹೇಳಿದಂತೆ –

ಕಾಮಕಲ್ಲಿಗೆ ಸೋತ ಭೀಮ ಬಿಲ್ಲಿಗೆ ಸೋತ
ಕಾಮಣ್ಣ ಸೋತ ರಣದಾಗ – ಪಾಂಡವರು
ಪಗಡ್ಯಾಗ ಸೋತರು ದ್ರೌಪದಿನಾ

ಕುಂತ ಕುದರಿಯ ಸೋತ, ನಿಂತ ಭೂಮಿಯ ಸೋತ
ಕುಂತಾದೇವಿ ನಿನ ಮಗ ಸೋತ– ಧರ್ಮರಾಯ
ಭೂಮಿಯೆಲ್ಲಾನೂ ಸೋತಾನು

ಎಂಬ ಹಾಡುಗಳನ್ನು ನಿರುಕಿಸಿದರೆ ಹೊನ್ನು–ಹೆಣ್ಣು–ಮಣ್ಣಿಗಾಗಿ ಸತ್ತವರು ಕೋಟಿ ಕೋಟಿ ಜನರು. ಸಕಲ ಸಾಮ್ರಾಜ್ಯವನ್ನು ಕಳೆದುಕೊಂಡವರುಂಟು! ರಾವಣ, ದುಶ್ಯಾಸನ, ಧುರ್ಯೋಧನ, ಧರ್ಮರಾಯ, ಅರ್ಜುನ, ಮೊದಲಾದವರು ಕಾಮನಿಗಾಗಿಯೇ ಸೋತವರು. ಶಿವನು ಮನ್ಮಥನನ್ನು ದಹಿಸಿದಂತೆ, ಕಾಮನೇ ಮನುಷ್ಯನ ಸಕಲ ದುರಾಚಾರಗಳಿಗೂ, ಸಕಲ ದೋಷಗಳಿಗೂ ಮೂಲನು, ಕಾಮವೆಂದರೆ ಆಸೆ, ಬಯಕೆ, ಕಾಮನೆ ಎಂದು ಗೀತೆಯಲ್ಲಿ ಹೇಳಲ್ಪಟ್ಟಿದೆ. ಮನುಷ್ಯನಿಗೆ ಕಾಮವು ವೈರಿ ಅರಿಷಡ್ ಗುಣಗಳನ್ನು ವೃದ್ಧಿಸುವ ದೇವ. ಕಾಮದ ದಮನ ಮಾಡಿಕೊಳ್ಳಬೇಕು. ಇದಕ್ಕೆ ಇಂದ್ರಿಯ ನಿಗ್ರಹವೆನ್ನಲಾಗಿದೆ. ಎಂಥೆಂಥ ಋಷಿಮುನಿಗಳನ್ನು ಬಿಟ್ಟಿಲ್ಲ. ಇದು ತ್ರಿಮೂರ್ತಿಗಳ ಉದ್ಭವಕ್ಕೆ ದೇವರದೇವನ

ಕಾಮವೇ ಕಾರಣ, ಬ್ರಹ್ಮ–ವಿಷ್ಣು ಮಹೇಶ್ವರರು ಲೋಕವನ್ನು ಸೃಷ್ಟಿಸುವ, ರಕ್ಷಿಸುವ, ಲಯಗೊಳಿಸುವ ದೇವರುಗಳೆಂದು ಶಾಸ್ತ್ರ ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಬ್ರಹ್ಮ ಸೃಷ್ಟಿಕರ್ತ, ರಕ್ಷಣೆಯ ಭಾರವು ವಿಷ್ಣುವಿನದು. ಸೃಷ್ಟಿಗೆ ಮಿತಿಯಲ್ಲವಾದರೆ ಲೋಕದ ಗತಿಯೇನು? ಅದಕ್ಕಾಗಿಯೇ ಶಿವನು ಲಯಕಾರಿಯಾಗಿ ನಿಂತನು. ಲೋಕದಾಟವು ಸರಾಗವಾಗಿ ಸಾಗಬೇಕಾದರೆ ಈ ಮೂವರೂ ದೇವತೆಗಳ ಪಾತ್ರವೇ ಪ್ರಮುಖ ಮತ್ತು ಅದು ಲಯಬದ್ಧವಾಗಿದೆ. ವೃಷ್ಟಿಯಲ್ಲಿ ಸಮಷ್ಟಿ ಬೆರೆತಾಗಲೇ ಪರಿಪೂರ್ಣತೆಗೆ ಪೂರ್ಣವಿರಾಮವು ದೊರೆಯುತ್ತದೆ. ಈ ಕಾಮದೇವನು ವಿಷ್ಣುವಿಗೆ ಮಗನಾಗಿ, ರತಿಗೆ ಮದುಮಗನಾಗಿ ಸೆಟೆದು ನಿಂತವನು. ಆ ಕಾಮನ ಉಪಟಳ ಹೇಳತೀರದು. ಸಕಲ ಜೀವಿಗಳ ಮನದಲ್ಲಿ ಹೊಕ್ಕು ತೊತ್ತಳದುಳಿದು ಗಂಡು–ಹೆಣ್ಣಿನ ಸಮಾಗಮಕ್ಕೆ ಕಾರಣವಾಗಬಲ್ಲವ ಕಾಮ. ಅಂತಹ ಪ್ರಚಂಡವನ್ನು ಮಣಿಸಬಲ್ಲವನೆನಿಸಿಕೊಂಡವನೇ ಶಿವನು. ಆತ ತನ್ನ ಹಣೆಗಣ್ಣಿನಿಂದ ಸುಟ್ಟು ಕಾಮಾರಿಯೆನಿಸಿಕೊಂಡ ಪುರಾಣಗಳಲ್ಲಿ ಕಥೆಯಾಗಿದೆ.

ಇದು ಕಾಮ ಕಲ್ಪನೆಯಾದರೆ; ಕಾಮ–ಪ್ರೇಮಗಳು ಅನ್ಯೋನ್ಯವಾಗಿದ್ದು; ಅವೆರಡೂ ಒಂದಕ್ಕೊಂದು ಪೂರಕವಾಗಿವೆಯೆಂದೇ ಹೇಳಬೇಕು. ಕಾಮ–ಪ್ರೇಮವಿಲ್ಲದ ಜೀವಿಯೇ ಜಗತ್ತಿನಲ್ಲಿಲ್ಲ. ಕಾಮದ ವಿರಹದ ಕುಲುಮೆಯಲ್ಲಿ ಬೆಂದಾಗ ಪ್ರೇಮವಾಗಿ ನಿಲ್ಲುವುದು. ಕಾಮವು ಜೀವಿಯ ಸಹಜ ಪ್ರವೃತ್ತಿ. ಆದರೆ, ಅದೀಗ ಅತ್ಯಾಚಾರಕ್ಕಿಳಿದಿದೆ. ಅದು ದೇಹದ ಹಸಿವೆ, ಮನದ ಬೇಡಿಕೆ, ಅದು ದೇವನಲ್ಲೂ ಉಂಟು; ದೇವ ನಿರ್ಮಿತ ಸೃಷ್ಟಿಯಲ್ಲಿಯೂ ಉಂಟು! ಬ್ರಹ್ಮ ಸೃಷ್ಟಿಗೆ ಕಾಮವೇ ಮೂಲ. ಅದು ಅನಾದಿ ಮತ್ತು ಅವಿನಾಶಿ. ದೇವಕಾಮ ಇಲ್ಲದೆ ಹೋಗಿದ್ದರೆ ತ್ರಿಮೂರ್ತಿಗಳ ಉದ್ಭವವೂ ಅಸಾಧ್ಯವಾಗಬಹುದಿತ್ತು. ಕಾಮನಿಂದ ಕಾಮ ಬೆಳೆಯಿತು. ಅದೇ ಕಾಮ ಮೂಡಿದಲ್ಲಿ ನೂತನ ಸೃಷ್ಟಿ ಉದ್ಭವಿಸಿತು. ಅದೇ ಚೊಚ್ಚಿಲ ಸೃಷ್ಟಿಗೆ ಆದಿ, ಪುರುಷ ಪ್ರಕೃತಿಗಳನ್ನು ಹೊಂದಿ ಬೆಸೆಯುವುದೇ ಕಾಮದ ಕಾರ್ಯ.

ಕಾಮವೊಂದು ಆಂತರಿಕ ಇಚ್ಛೆ; ಬಹಿರಂಗದ ಸ್ವೇಚ್ಛೆ! ಸೃಷ್ಟಿಕರ್ತನ ಮನದಲ್ಲಿ ಮೊದಲು ಮೂಡಿದ್ದೇ ದೇವಕಾಮ. ದೇವಕಾಮ ಕಾಮದೇವನಾಗಿ ಬ್ರಹ್ಮ ಸೃಷ್ಟಿಗೆ ಇಳಿದನು. ಅಮರವಾಗಿ ಬೆಳೆದನು ಎಂದು ಹೇಳಿದ ಡಾ.ಎಂ.ಎಸ್. ಸುಂಕಾಪುರ ಅವರ ಮಾತು ಯಥೋಚಿತವಾದುದು. (ಜೀವನ ಜೋಕಾಲಿ ಕ.ವಿ.ವಿ. ಪ್ರಸಾರಾಂಗ ಧಾರವಾಡ, ಕೃತಿಯಿಂದ).

ಕಾಮ ತಾಮಸಕ್ಕೆ ಮೂಲ. ಕಾಮಕ್ಕೆ ಕಣ್ಣಿಲ್ಲ; ಪ್ರೇಮಕ್ಕೆ ಮಾತ್ರ ಕಣ್ಣಿದೆ. ಅದು ವಿಚಾರ ಮಾಡಬಲ್ಲುದು; ಪ್ರೇಮ ಸಾತ್ವಿಕಕ್ಕೆ ಮೂಲವಾದುದು ಎಂದೂ ಹೇಳಲಾಗಿದೆ.



ಈ ಸಾತ್ವಿಕ ಪ್ರೇಮವೇ ಭಕ್ತಿಗೆ ಉಸಿರು. ಶುದ್ಧ ಭಕ್ತಿಯ ಮೂಲಕ ಮಾನವ ದೇವನಾಗಬಲ್ಲ. ಅಂಥ ಮಹಾನುಭಾವರಲ್ಲಿ ತಿರುವಳ್ಳುವರ್ ಮತ್ತು ವೇಮನರೂ ಪ್ರಮುಖರೆನಿಸಿಕೊಂಡಿದ್ದಾರೆ. ಕಾಮರತಿಗೆ ಬೇಸರಿಸಿ ವೈರಾಗ್ಯ ತಾಳಿ ದೇವಮಾನವರಾದವರು. ಇದು ಮನುಷ್ಯನಿಗೆ ಮಾತ್ರ ಸಾಧ್ಯವಾಗುವಂಥ ವಿಶೇಷ ಗುಣ. ಉಳಿದ ಪ್ರಾಣಿ ಪ್ರಪಂಚದಲ್ಲಿ ಕಾಮ ಕಾಮವಾಗಿಯೇ ಉಳಿಯುತ್ತದೆ. ಅದಕ್ಕೆ ಬುದ್ಧಿಯ ಸಾಣೆ ಸಿಗದು, ವೃದ್ಧಿಯ ದಾರಿ ತೋರದು. ಇದೆಲ್ಲವೂ ಕಾಮ ಪ್ರೇಮಗಳಲ್ಲಿ ಅಡಗಿರುವ ಅದ್ಭುತ ಶಕ್ತಿಯಾಗಿದೆಯೆಂಬುದನ್ನು ತಿರುವಳ್ಳುವರ್ ಮತ್ತು ಮಹಾಯೋಗಿ ವೇಮನದ ಪರ ಪದ್ಯಗಳಲ್ಲಿ ನೋಡೋಣ! ಒಟ್ಟಾರೆ, ಒಂದು ದೈವಿಕ, ರಾಕ್ಷಸಿ – ಈ ಎರಡಕ್ಕೂ ನಿರಂತರವಾಗಿ ಸೃಷ್ಟಿ ಹುಟ್ಟಿದಾಗಿನಿಂದ ಘರ್ಷಣೆ ನಡೆಯುತ್ತಲೇಯಿದೆ. ತಾಮಸವನ್ನುಳಿದು ಅಥವಾ ತಾಮಸವನ್ನು ತುಳಿದು ಮಾನವನ ದೈವೀ ಗುಣಗಳು ಮೇಲೇಳಲೇಬೇಕೆಂಬುದಾದಾಗಿ ಈ ಇಬ್ಬರೂ ಮಹಾತ್ಮರು ಹೇಳಿದ ಮಾತುಗಳನ್ನು ಅವರವರ ಪದ ಪದ್ಯಗಳಲ್ಲಿಯೇ ಬಣ್ಣಿಸಲು ಪ್ರಯತ್ನಿಸಲಾಗಿದೆ.

**ತಿರುವಳ್ಳುವರರು ಹೇಳಿದ ವಿಚಾರಧಾರೆ :**

ಪ್ರಾರಂಭದಲ್ಲಿ ಹೇಳಿರುವಂತೆ ಪುರುಷಾರ್ಥಗಳಲ್ಲಿ ಮೊದಲನೆಯ ಮೆಟ್ಟಿಲು ಧರ್ಮ; ಧರ್ಮದ ಗಟ್ಟಿ ತಳಹದಿಯ ಮೇಲೆಯೇ ಉಳಿದೆರಡು ಪುರುಷಾರ್ಥಗಳಾದ ಅರ್ಥ, ಕಾಮಗಳನ್ನು ಗಳಿಸಿಕೊಳ್ಳಬಹುದು. ಧರ್ಮ, ಅರ್ಥ, ಕಾಮಗಳನ್ನು ಜಯಿಸಿದಾತನೇ ಮೋಕ್ಷ ಹೊಂದುವನೆಂಬುದು ಸಾಮಾನ್ಯ ನಿಯಮ. ಆದರೆ ತಿರುವಳ್ಳುವರರು ಮೋಕ್ಷದ ಬಗೆಗೆ ಹೇಳಿರುವುದಿಲ್ಲ. ಇನ್ನುಳಿದ ಮೂರರ ಬಗೆಗೆ ಸವಿಸ್ತಾರವಾಗಿ ಹೇಳಿರುವುದುನ್ನು ಗಮನಿಸಿದೆವು. ಲೋಕ ಧರ್ಮವನ್ನು ವಳ್ಳುವರರು ಧರ್ಮ ಭಾಗದಲ್ಲಿ ಗೃಹಸ್ಥ ಧರ್ಮ ಮತ್ತು ಸನ್ಯಾಸ ಧರ್ಮವೆಂದೆರಡು ಬಗೆಯಲ್ಲಿ ವಿಶ್ಲೇಷಿಸಿದ್ದಾರೆ. ಇವೆರಡೂ ಒಂದಕ್ಕೊಂದು ಪೂರಕವೂ, ಆಧಾರವೂ ಆಗಿರಬೇಕೆಂಬುದು ಅವರ ಮತ. ಗೃಹಸ್ಥ ಧರ್ಮದ ಹಿರಿಮೆಯನ್ನು ಹೇಳುತ್ತ ಅದು ಬ್ರಹ್ಮಚರ್ಯ, ವಾನಪ್ರಸ್ಥ, ಸನ್ಯಾಸಗಳೆಂಬ ಇತರ ಮೂರು ಧರ್ಮಗಳಿಗೆ ಬೆಂಬಲವಾಗಿ ಘೋಷಿಸುತ್ತದೆ. ಸಹಜವಾದ ಗೃಹಸ್ಥ ಧರ್ಮವನ್ನು ಪರಿಪಾಲಿಸುವವನು ಪ್ರಯತ್ನಶೀಲರಲ್ಲೆಲ್ಲ ಮೇಲಾದವನು. ಇತರರನ್ನು ಸನ್ಮಾರ್ಗದಲ್ಲಿ ಹಚ್ಚಿ, ತಾನೂ ಧರ್ಮ ಮಾರ್ಗದಲ್ಲಿ ನಡೆದರೆ ಗೃಹಸ್ಥನ ಕುಟುಂಬ ಜೀವನವು ಮುನಿಗಳ ಸಾಧಕ ಜೀವನಕ್ಕಿಂತ ಶ್ರೇಷ್ಠವೆನಿಸಿಕೊಳ್ಳುತ್ತವೆ. ಆಶ್ರಯವಿಲ್ಲದವರು, ದರಿದ್ರದವರು, ಸತ್ತವರು ಎಲ್ಲರಿಗೂ ಗೃಹಸ್ಥನೇ ಆಧಾರವಾಗಿರುತ್ತಾನೆ.

ತಿರುವಳ್ಳುವರರು ಧರ್ಮ, ಅರ್ಥ, ಕಾಮ ಇವು ಮೂರು ಮಾನವನ ಪ್ರಾಪಂಚಿಕ ಬದುಕಿಗೆ ತೀರ ಹತ್ತಿರವಾದವು. ಮನುಷ್ಯನ ಜೀವನಾವಧಿಯಲ್ಲಿ ಸಾಧಿಸಲೇಬೇಕಾದ ಆದರ್ಶಗಳು ಲೋಕದಲ್ಲಿ ವ್ಯಷ್ಟಿ, ಮತ್ತು ಸಮಷ್ಟಿಯ ಕಲ್ಯಾಣವನ್ನು ರೂಪಿಸಲು ಇವು ಮೂರು ಮನುಷ್ಯನಿಗೆ ನೆರವಾಗುವುದರಿಂದ ಲೋಕದ ಬದುಕಿನಲ್ಲಿ ಅವು ಮಹತ್ವವನ್ನು ಪಡೆಯುತ್ತವೆ. ಶುಚಿಯಾದ ಬದುಕನ್ನು ಬಿಟ್ಟು ಇವುಗಳನ್ನು ಗಳಿಸುವಂತಿಲ್ಲ. ಮೋಕ್ಷವೆನ್ನುವುದು ಪಾರಲೌಕಿಕ ಬದುಕಿಗೆ ಬೇಕಾಗುವ ಅಂತಿಮ ಗುರಿ. ಧರ್ಮ ಮಾರ್ಗದಲ್ಲಿ ನಡೆದು ಅರ್ಥ ಮತ್ತು ಕಾಮನೆಗಳನ್ನು ಲೋಕ ಕಲ್ಯಾಣಕ್ಕಾಗಿ ಗಳಿಸಿಕೊಂಡರೆ ಅದೇ ಮೋಕ್ಷ ಏಣಿಯಾಗುತ್ತದೆ ಎಂಬುದು ತಿರುವಳ್ಳುವರರ ಮಾತು. 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ" ಎಂದು ಬಸವಣ್ಣನವರು ಹೇಳಿರುವಂತೆ; 'ಲೋಕ ಬಾಳ್ವ ರೀತಿಯಲಿ ನಡೆವರು ನಾಕದಲಿ ದೇವತೆಗಳ ನಡುವೆ ಸೇರುವರು' ಎಂದು ತಿರುವಳ್ಳುವರರು ಹೇಳಿ, ಲೋಕದ ಬಾಳಿಗೆ ಅರ್ಥ ತುಂಬಿದ್ದಾರೆ.

ತಿರುವಳ್ಳುವರರು ಮೂರನೆಯ ಪುರುಷಾರ್ಥವಾದ ಕಾಮಕ್ಕೆ ಬಳಸಿರುವ ಪರಿಭಾಷೆ 'ಇನ್ಬಮ್' ಎಂಬುದು. ಇದರಲ್ಲಿ ಒಟ್ಟು ೨೫೦ ಕುರುಳುಗಳಿವೆ. ಧರ್ಮ ಮತ್ತು ಅರ್ಥ ವಿಭಾಗದಲ್ಲಿರುವಂತೆ ಯಾವ ರೀತಿಯ ವಸ್ತುನಿಷ್ಠವಾದ ವಿಧಿನಿಯಮಗಳನ್ನು ಇಲ್ಲಿ ಪ್ರಸ್ತಾಪಿಸದೇ ಗಂಡು-ಹೆಣ್ಣಿನ ಕಾಮದೊಲವಿನ ಅಂತರಂಗದ ಸೂಕ್ಷ್ಮಗಳನ್ನು, ಅಂತರಂಗದ ಭಾವನೆಗಳನ್ನು, ನಾಯಕ-ನಾಯಕಿಯರಲ್ಲಿ ಅಂತರ್ಗತವಾದ ಭಾವನೆಗಳ ಹೋರಾಟವನ್ನು ಸಂಗಮ ಸಾಹಿತ್ಯ ಸಂಪ್ರದಾಯದ ರೀತಿಯಲ್ಲಿ ಚಿತ್ರಿಸಿದ್ದಾರೆ. ಸಾಮಾನ್ಯವಾಗಿ ಕಾಮನೆ ಎಂದರೆ ಇಚ್ಛೆ, ಬಯಕೆ ಆಸೆ-ಆಕಾಂಕ್ಷೆ ಎಂದರ್ಥ. ಬಯಕೆಗೆ ಹೋರಾಡಿ ಪಡೆಯುವ ಕ್ರಿಯೆ ಗೃಹಸ್ಥರ ಜೀವನದಲ್ಲಿ ವಿಪರೀತವಾಗಿರುತ್ತದೆ. ಆಸೆ ಅಥವಾ ಕಾಮನೆಗಳು ಸಿವುಡುಗಟ್ಟಲೇ ಹೊರೆಗಟ್ಟಲೇ ಇರುತ್ತವೆ. "ಮಾನವನ ಬೇಡಿಕೆಗಳು ಮಿತಿಮೀರಿರುತ್ತವೆ "ಎಂದು ಅರ್ಥಶಾಸ್ತ್ರಜ್ಞ ಅರಿಸ್ಟಾಟಲ್‌ನು ಹೇಳಿದ್ದಾನೆ. ಮಿತಿಯಲ್ಲಿಯೇ ಇತಿಮಿತಿಯನ್ನು ಕಾಯ್ದುಕೊಂಡು ಬಾಳುವುದೇ ಉತ್ತಮ ಧರ್ಮಜೀವನ ಎನಿಸುತ್ತದೆಯಷ್ಟೇ!

'ಇನ್ಬನ್' ಎಂಬುದು ಇದೊಂದು ಅರ್ಥಗರ್ಭಿತ ಸಾಂಸ್ಕೃತಿಕ ಪದ, ಪ್ರತಿಮೆ, ಮಾನವ ಇತಿಹಾಸವೇ ಇದರಲ್ಲಿ ಅಡಗಿದೆ. ಗಂಡ-ಹೆಂಡಿರು ಕೂಡಿ ಅನುಭವಿಸುವ ಕುಟುಂಬ ಪರಿಮಿತಿಯುಳ್ಳ ಅಲ್ಪಾವಧಿಯ ಸುಖವನ್ನೂ ಈ ಕುಟುಂಬ ಜೀವಿಗಳು ಸ್ವಾರ್ಥ ತ್ಯಾಗ ಮಾಡಿ ಕುಟುಂಬದ ಪರಿಮಿತಿಯಿಂದ ಹೊರಬಂದು ಇಡೀ ಮಾನವ ಜನಾಂಗಕ್ಕೆ ಸೇವೆ ಮಾಡಿ ಅನುಭವಿಸುವ ಪರಮ ಸೌಖ್ಯವನ್ನು ಸೂಚಿಸುತ್ತದೆ. ಆದ್ದರಿಂದ ಈ ಶಬ್ದಾರ್ಥವನ್ನು ಕೇವಲ ಗಂಡ-ಹೆಂಡಿರ ಅಲ್ಪಕಾಲಿಕ ಕಾಮ ಸುಖಕ್ಕೆ



ಸೀಮತಗೊಳಿಸಿ ಸಂಕುಚಿತಗೊಳಿಸಬಾರದು. ಏಕೆಂದರೆ ಇನ್ಬನ್ ಎಂಬ ಶಬ್ದವು 'ಇನಿಮೈ' (ಇನದು-ಸಿಹಿ) ಎಂಬ ಸಾಂಸ್ಕೃತಿಕ ಶಬ್ದ ಪ್ರತಿಮೆಗಳೊಡನೆ ಸಂಬಂಧಿವುಳ್ಳದ್ದಾಗಿದೆ ಎಂದು ಭಾಷಾ ಸಂಶೋಧಕರ ಅಭಿಪ್ರಾಯವಾಗಿದೆ. ಕೃತಿಕಾರರೇ ತಮ್ಮ ಕೃತಿಯಲ್ಲಿ ಬಳಸಿರುವ ಪದ ಸಮುಚ್ಚಯ ಇನ್ಬಮ್, ಸಮಾಜಕ್ಕೆ, ಸಮಷ್ಟಿಗೂ ಸಮಷ್ಟಿ ಸಮಾಜಕ್ಕೂ ವ್ಯಷ್ಟಿಗೂ ಮತ್ತು ಸಮಾಜ ಕುಟುಂಬಕ್ಕೆ ಪರಸ್ಪರ ಶುಭ ಕಾಮನೆಗಳನ್ನಳಿಸಿ ಒಳಿತನ್ನು ಮಾಡಿ ಮಾನವ ಜನ್ಮದ ಕೃತಾರ್ಥತೆಯನ್ನು ಹೊಂದುವುದೇ "ಇನ್ಬತ್ತುಳ್ ಇನ್ಬಮ್" (ಮಹಾಸುಖ) ಎಂಬುದು ಈ ಸಾಂಸ್ಕೃತಿಕ ಪದ ಸಮುಚ್ಚಯದಲ್ಲಿ ಅಡಗಿರುವ ಅಂತರಾರ್ಥ ಎಂದು ತಮ್ಮ ಕೃತಿಯಲ್ಲಿ ಹೇಳಿದ್ದಾರೆ. ಇದೇ ಸತ್ಯ-ಶಿವ-ಸುಂದರ ಅಥವಾ ಸೌಂದರ್ಯ ಇದುವೇ ಸತ್, ಚಿತ್, ಆನಂದ ವಿಶ್ವ ಕುಟುಂಬತ್ವದ ಈ ತತ್ತ್ವವನ್ನು ಪ್ರತಿನಿಧಿಸುವ ಸಿರಿಗನ್ನಡದ ಸೂಕ್ತಿಯಾಗಿದೆ. ಅದು ಹೀಗಿದೆ.

> ಜಗವೆಲ್ಲವ ನೂರ ಮಾಡಿ ಊರೆಲ್ಲವ ಮನೆಯ ಮಾಡಿ
> ಹೊಗದೆನೆಯಿಲ್ಲದ ಸುಳುಹು ನೋಡಾ॥
> ಸುಳುಹಿನ ಭೇದವನರಿಯದ ಕಾರಣ ದೇವಲೋಕ
> ಮರ್ತ್ಯಲೋಕವೆಲ್ಲ ಭ್ರಮೆಗೊಂಡಿತಲ್ಲಾ!

(ಶಿವದಾಸ ಗೀತಾಂಜಲಿ – ಪುಟ-೮೦)
ಸಂ.ಡಾ.ಎಲ್.ಬಸವರಾಜು.

೨೫೦ ಪದಗಳಲ್ಲಿ ಹೇಳಿರುವ ಈ ವಿಭಾಗವು ನಾಯಕ -ನಾಯಕಿಯರ ಪಾತ್ರದಲ್ಲಿ ಚಿತ್ರಿತವಾಗಿದೆ. ಆದರೆ, ಅವರು ಸಂಶಯ ಮೀರಿ ಶೀಲಾಶ್ಲೀಲಗಳ ರೇಖೆಯನ್ನು ದಾಟುವುದಿಲ್ಲ; ಎಲ್ಲಿಯೂ ವಾಸ್ತವ ಪ್ರಣಯದ ನೈಸರ್ಗಿಕ ಹಾಗೂ ದೈವಿಕ ಭಾವನೆಗಳ ಮರ್ಯಾದೆಯನ್ನು ಮಾರುವುದಿಲ್ಲ. ಧರ್ಮ ಮತ್ತು ಅರ್ಥಗಳ ಅಂತರ ಗಂಭೀರವಾದ ವಿಚಾರಗಳನ್ನು ಸಮರ್ಥವಾಗಿ ಹೇಳಬಲ್ಲ ತಿರುವಳ್ಳವರರು ಪ್ರಣಯದ ಸೂಕ್ಷ್ಮ ನವುರು ಭಾವನೆಗಳನ್ನು ಬಿಡಿಸಿ ಹೇಳಬಲ್ಲರು ಎಂಬುದನ್ನು ಕಾಮಭಾಗವು ಪ್ರತಿಪಾದಿಸುತ್ತದೆ. ಇದರಲ್ಲಿ ಕಾವ್ಯವಿದೆ, ನಾಟಕೀಯತೆಯಿದೆ. ನಾಯಕ-ನಾಯಕಿ-ಸಖಿ ಈ ಮೂರು ಪ್ರಧಾನ ಪಾತ್ರಗಳ ಅಂತರ್ಗತವಾಗಿರುವ ಅಭಿವ್ಯಕ್ತಿಯನ್ನು ಸ್ವಗತ -ಸಂಭಾಷಣೆಯ ರೂಪದಲ್ಲಿ ಅಭಿವ್ಯಕ್ತಿಸಿದ್ದಾರೆ. ಪ್ರಣಯ ಕಾವ್ಯದ ನೋವು, ನಲಿವು ಸೊಗಸುಗಳುಳ್ಳ ಭಾವನೆಗಳನ್ನು ಕೆರಳಿಸುವಂತಿದೆ, ಅರಳಿಸುವಂತಿವೆ. ಧರ್ಮ, ಅರ್ಥಗಳಂತೆ ಕಾಮ ವಿಭಾಗವೂ ಮಾನವನ, ಸಮಾಜದ ಉನ್ನತಿಗೆ ಸಾಧನವಾಗಬಲ್ಲುದೆಂಬುದನ್ನು ತಿರುವಳ್ಳುವರರು ಸೂಕ್ಷ್ಮವಾಗಿ ವಿವರಿಸಿದ್ದಾರೆ.

ಹೂವಿಗಿಂತ ಹಗುರವೆನಿಸುವುದು ಒಲವು
ಅದರ ಸವಿಯುಣ್ಣುವರು ಕೆಲರು ಮಾತ್ರ

ಅರಿತಂತೆಲ್ಲ ಅಜ್ಞಾನವನು ಕಂಡ ತೆರದಿ
ಈ ಎಳೆವೆಣ್ಣಿನ ಕೂಟದಲಿ ಮತ್ತು ಮತ್ತು

ಕೂಡದಿರುವ ಭಾವನೆಯ ತೋರುವುದು
ಬೆಂಕಿ ತನ್ನ ಸೋಂಕೆ ಸುಡುವುದಲ್ಲದೆ ಕಾಮದಂತೆ,

ಅಗಲಿ ದೂರ ವಿರ್ಪವರನು ಸುಡದು
ಮಧ್ಯವು ತನ್ನ ರುಚಿ ನೋಡಿದರಿಗಲ್ಲದೆ

ಕಾಮದಂತೆ ಕಂಡವರಿಗೆ ಮಾದಕತೆ ತರದು
ಕಣ್ಮುಚ್ಚಿದ ಕನಸಿನಲಿ ನನ್ನ ತೋಳ ಮೇಲೊರಗಿದವನು
ಕಣ್ಣ ಬಿಟ್ಟೊಡನೆಯೆ ನನ್ನ ಎದೆಯೊಳಗಡಗುವನು.

ಇವು ಕೆಲವು ಬಿಡಿ ಪದ್ಯಗಳಲ್ಲಿರುವ ಪ್ರೇಮದ ವಿವಿಧ ಸ್ತರಗಳನ್ನು ನಿರ್ವಹಿಸಬಲ್ಲರೆಂಬುದಕ್ಕೆ ನಿದರ್ಶನವಾಗಿದೆ. ದಂಪತಿಗಳು ಕೂಡಿ ಬಾಳಿದರೆ ಸ್ವರ್ಗ ಸುಖ ಎನ್ನುವಂತಿದೆ ಈ ಮೇಲಿನ ಸಾಲುಗಳಲ್ಲಿ.

ಮೊದಲ ನೋಟದಲ್ಲಿಯೇ ಪ್ರೇಮಾಂಕುರವಾಗುತ್ತದೆಯೆಂಬಂತೆ ವಳ್ಳುವರರು ಕನ್ಯೆಯ ಚೆಲುವಿನಿಂದಾದ ನೋಟವನ್ನು ಹೇಳಿದ್ದು ಹೀಗೆ–

ಕಾಣುವವರ ಜೀವವನು ಹೀರುವಂತೆ ತೋರುತಿರುವವು
ಹೆಣ್ತನವುಳ್ಳ ಈ ಮುಗ್ಧೆಯ ಕಂಗಳು

ಈ ಹೆಣ್ಣಿನ ಹೊಳೆವ ಹಣೆಗೆ ಸೋತಿತಯ್ಯಾ, ರಣರಂಗದಲಿ
ಹಗೆಗಳನು ಅಂಜಿಸುವ ನನ್ನ ಕಲಿತನವು

ಜಿಂಕೆಯಂಥ ಚಕಿತ ನೋಟವೂ, ಲಜ್ಜೆಯೂ ಉಳ್ಳ ಈ ಬಾಲೆಗೆ
ಬೇರೆ ವಡವೆಗಳ ತಂದು ತೊಡಿಸುವುದೇಕೋ?

ಕುಡಿದವರಿಗೆ ಮಾತ್ರವೇ ಹೆಂಡವು ಅಮಲನು ತರುವುದು
ಕಾಮವದು ಪ್ರೇಮಿಗಳು ಕಂಡ ಮಾತ್ರದಿ ಅಮಲನು ತರಬಲ್ಲದು.

ಈ ಸಾಲುಗಳ ಕಿವಿಗೆ ಅಪ್ಪಳಿಸುತ್ತಿದ್ದಂತೆಯೇ ತಪಸ್ವಿಗಳೂ ಆ ಕನ್ಯೆಗೆ ಬೆನ್ನು ಹತ್ತಬೇಕೆನ್ನುವಂತಿವೆ. ಇಂಥ ಶಬ್ದಗಳು ಬರಬೇಕಾದರೆ ತಿರುವಳ್ಳುವರರು ಮೂಲತಃ ಸಂಸಾರಯಾನದಲ್ಲಿ ಪ್ರಯಾಣಿಸಿದ್ದರು ಎಂಬುದು ತಿಳಿದು ಬರುತ್ತದೆ. ಅಷ್ಟೇ ಏಕೆ



ಅವರು ಯೌವನಕ್ಕೆ ಬಂದಾಗ ವಾಸುಕಿ ಎಂಬ ಹೆಣ್ಣು ಮಗಳು ಅವರ ಜೀವನದಲ್ಲಿ ಪ್ರವೇಶ ಪಡೆದಿದ್ದಳು. ಅವಳು ತನ್ನ ಬಾಳ ಸಂಗಾತಿಯಾಗಲು ಅರ್ಹಳೆಂದು ನಂಬಿದ ಮೇಲೆ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸಿ ದಾಂಪತ್ಯ ಜೀವನ ನಡೆಸಿದವರು. ಅವಳು ಪತಿಯ ಇಂಗಿತವನ್ನರಿತು ಅನುಸರಿಸಿ, ಆದರ್ಶ ಗೃಹಿಣಿಯಾಗಿ ಗೃಹಧರ್ಮದ ಸಾರವನ್ನು ಅವರ ಅನುಭವಕ್ಕೆ ತಂದಳು. ಗ್ರಾಹಸ್ಥ್ಯ ಜೀವನವನ್ನು ಸಮಗ್ರ ದೃಷ್ಟಿಯಿಂದ ಗ್ರಹಿಸಲು, ಅವಳು ಅವರಿಗೆ ನೆರವಾದವಳು. ಮುಂದೆ ಅವರು ಬರೆದ ತಿರುಕ್ಕುರಳಿನ ಧರ್ಮ ವಿಭಾಗದಲ್ಲಿ ಗೃಹಸ್ಥ ಧರ್ಮವನ್ನು ಕುರಿತು ಅವರು ಕೊಟ್ಟ ಸಲಹೆಗಳಿಗೆ ಅವರು ಪಡೆದ ಈ ಅನುಭವವೇ ಆಧಾರವಾಯಿತೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ತನ್ನ ಪ್ರೀತಿಯ ಪತ್ನಿಯನ್ನು ಮಧ್ಯ ವಯಸ್ಸಿನಲ್ಲಿಯೇ ಕಳೆದುಕೊಂಡ ವಳ್ಳುವರರು ವೈರಾಗ್ಯ ತಾಳಿ ಸನ್ಯಾಸ ಧರ್ಮವನ್ನು ಸ್ವೀಕರಿಸಿದರು. ಧಾರ್ಮಿಕ ಚಿಂತನೆಗಳು ಅವರನ್ನು ಪಕ್ವವಾಗಿಸಿ, ತಿರುಕ್ಕುರಳ್ ಕಾವ್ಯ ರಚಿಸಿದ ಮೇಲೆ ಈತ ಮುಂದೆ ಕವಿ ಎಂಬ ಗೌರವಕ್ಕೆ ಪಾತ್ರನಾದ, ಶಿಷ್ಯ ಬಳಗದೊಂದಿಗೆ ತಮಿಳು ನಾಡಿನ ಅನೇಕ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿ, ಮಧುರೆಗೆ ಬಂದರು. ಮಧುರೆಯ ಪಾಂಡುರಾಜನ ಘೋಷಣೆಯಲ್ಲಿ ಸಂಗಪುಲವರ (ಕವಿಗಳ) ಪ್ರಸಿದ್ಧವಾದ ಗೋಷ್ಠಿಯೊಂದು ಕವಿ, ಕಾವ್ಯ ಚಿಂತನೆಯಲ್ಲಿ ಕಾವ್ಯಗಳಿಗೆ ಬೆಲೆ ಕಟ್ಟುತ್ತಿರುವುದನ್ನು ಕೇಳಿದ ಅವರು ತಮ್ಮ ತಿರುಕ್ಕುರುಳನ್ನು ಈ ಗೋಷ್ಠಿಯ ಮುಂದಿಟ್ಟರು; ಅಜ್ಞಾತ ಕವಿಯ ಈ ಕೃತಿಯು ೪೯ ಮಂದಿ ಪಂಡಿತ ಕವಿಗಳಿದ್ದ ಆ ಗೋಷ್ಠಿಯಲ್ಲಿ ಅದು ತಿರಸ್ಕೃತವಾಯಿತು. ಪಾಂಡ್ಯರಾಜನ ಅಪ್ಪಣೆಯ ಪ್ರಕಾರ ಪದ್ಧತಿಯಂತೆ ಮಧುರೆಯ ಮೀನಾಕ್ಷಿ ದೇವಾಲಯದಲ್ಲಿರುವ ಪೊಟ್ಟಾಮೊರೈ ಕೊಳದಲ್ಲಿ ತಿರುಕುರಳ ಕೃತಿಯನ್ನು ಸಂಗಪ್ಪಲಗೈ ಮೇಲಿಟ್ಟು ತೇಲಿ ಬಿಡಲಾಯಿತು. ಈ ಸತ್ವ ಪರೀಕ್ಷೆಯಲ್ಲಿ ಈ ತಿರುಕ್ಕುರಳ್ ಯಶಸ್ವಿಯಾಗಿ ಹೊರಹೊಮ್ಮಿತು; ಇದು ಶ್ರೇಷ್ಠ ಕೃತಿಯೆಂದು ಸಾಬೀತಾಯಿತು. ಪಂಡಿತ ಕವಿಗಳೆಲ್ಲರೂ ಹಣೆ ಮಣಿದು ಕೃತಿಯನ್ನು ಗೌರವಿಸಿದರು. 'ತಿರುವಳ್ಳುವ ಮಾಲೈ' ಎಂಬ ಹೆಸರಿನಲ್ಲಿ ವಳ್ಳುವರರ ವ್ಯಕ್ತಿತ್ವವನ್ನು ಗೌರವಿಸಿ ಹಾಡಿದರು. ಈ ಹಾಡುಗಳು ಮುಂದೆ ಸಂಕಲನದ ರೂಪದಲ್ಲಿ ಪ್ರಸಿದ್ಧವಾಯಿತು. ಕ್ರಮೇಣವಾಗಿ ಇದು ವಿಶ್ವದ ವಿವಿಧ ಭಾಷೆಗಳಲ್ಲಿ ಅನುವಾದಗೊಂಡು ಪ್ರಸಿದ್ಧಿಗೆ ಬಂದಿತು. ತಿರುವಳ್ಳುವರರ ಜೀವನದ ಈ ಸಂಗತಿಗಳು, ದಂತ ಕಥೆಯಾಗಿ ಕಂಡರೂ, ಮಹಾಪುರುಷರ ಜೀವನದಲ್ಲಿ ಇಂಥ ಕತೆಗಳು ಜನಜನಿತವಾಗಿ, ಪ್ರಚಲಿತವಾಗಿ ಜನಪ್ರಿಯತೆಯ ಕುರುಹು ಎಂದು ಭಾವಿಸಬಹುದು. (ಅನುಭವ ಪಥ–ಸಿದ್ಧಗಂಗಾ ಮಠ–೨೦೧೦ ರಲ್ಲಿ ಪ್ರಕಟಿತ ಅ.ಗ್ರಂಥ – ಪುಟ–೪೪೭–೪೪೮–ಲೇಖಕರು–ಪಾ.ಶ.ಶ್ರೀನಿವಾಸ ಲೇಖನ–ತಿರುವಳ್ಳುವರ್‌ರು).

**ತಿರುವಳ್ಳುವರರ ಕಾಲ :**

ನಾನು ಪ್ರಾರಂಭದ ಅವರ ಚರಿತ್ರೆಯಲ್ಲಿಯೇ ಒಂದು ಇಲ್ಲವೆ 2ನೆಯ ಶತಮಾನದಲ್ಲಿದ್ದಿರಬಹುದಾದ ಕವಿಯೆಂದು ಹೇಳಿದ್ದೇನೆ. ಆದರೆ ಶ್ರೀನಿವಾಸ ಅವರ ಲೇಖನ ಓದಿದ ಮೇಲೆ ಕಾಮ ಭಾಗದಲ್ಲಾದರೂ ಸೇರ್ಪಡಿಸಲೇಬೇಕೆಂದು ಅನಿಸಿತು. ಕಾರಣ ದಾಂಪತ್ಯ ಜೀವನ ನಡೆಸಿದವರಿಗೆ ಮಾತ್ರ ಕಾಮದ ಸವಿ–ಸುಖವನ್ನು ಬಣ್ಣಿಸಲು ಸಾಧ್ಯ ಎಂಬುದು ಲೋಕ ಪ್ರಸಿದ್ಧ ಮಾತು. ಮಹರ್ಷಿ, ಮುನಿ, ಋಷಿ, ಸನ್ಯಾಸಿ, ವಿರಕ್ತರಾದವರು ಕಾಮದ ಆಯಾಮಗಳನ್ನು ಹೇಳಲು ಅದು ಹೇಗೆ ಸಾಧ್ಯ? ಎಂದು ನನ್ನ ಮನ ಮಿಡಿಯಿತು. ಅವರ ಸಮಗ್ರ ಚರಿತ್ರೆ ನನಗೆ ದೊರೆಯಲಾರದ್ದಕ್ಕೆ ದೊರೆತ ಸಾಮಗ್ರಿಯಲ್ಲಿಯೇ ನನ್ನ ಬರೆಹವನ್ನು ಕೈಕೊಂಡದ್ದು ಸತ್ಯ. ಡಾ.ಶ್ರೀನಿವಾಸ ಅವರ ಈ ಲೇಖನ ನನಗೆ ತುಂಬಾ ನೆರವು ನೀಡಿತು. ನನ್ನ ಮನದ ದುಗುಡವನ್ನು ಹೊರ ಹಾಕಿತು. ಈ ನಿಮಿತ್ಯವಾಗಿಯಾದರೂ ಈ ಉತ್ತಮ ಕೃತಿ(ಕಾವ್ಯ) ಓದುವ ಬರೆಯುವಂತಹ ಅವಕಾಶ ಸಿಕ್ಕಿತೆಂದು ನಾನು ಸ್ವ ಸಂತೋಷದಿಂದ ಈ ಮಾತನ್ನು ಹೇಳುತ್ತಿರುವೆನು.

ಈ ಕವಿಯ ಕಾಲಘಟ್ಟದ ಬಗೆಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಸಾಮಾನ್ಯವಾಗಿ ಎಲ್ಲರೂ ಈತ ಒಂದು ಎರಡನೆಯ ಶತಮಾನದಲ್ಲಿ ಜೀವಿಸಿದ್ದನೆಂಬ ಹೇಳಿಕೆಯಿದೆ. ಆದರೆ, ನಿಖರವಾಗಿ ಹೇಳುವುದಾದರೆ ಕ್ರಿ.ಶ. ಮೂರನೆಯ ಶತಮಾನದಲ್ಲಿ ಚೇರಮ ಅರಸನಾದ ಶೆಂಗುಟ್ಟವನ್ ಸೋದರ ಕವಿ, ಇಳಂಗೊ ಅಡಿಗಳ್ ವೈರಾಗ್ಯದಿಂದ ಜೈನ ಧರ್ಮವನ್ನು ಸ್ವೀಕರಿಸಿದ ಮೇಲೆ 'ಶಿಲಪ್ಪದಿಕಾರಂ' ಎಂಬ ಮಹಾಕಾವ್ಯವನ್ನು ರಚಿಸಿದನು. ಅದರ ಮುಂದಿನ ಭಾಗವೇ 'ಮಣಿಮೇಖಲೈ' ಇದನ್ನು ಬರೆದವನು ಬೌದ್ಧ ಕವಿ ಶಾಕ್ತನಾರ್ ಎಂಬುವವನು. ಇವೆರಡೂ ಕಾವ್ಯಗಳಲ್ಲಿ "ತಿರುಕ್ಕುರಳ್" ಕಾವ್ಯದ ಉಲ್ಲೇಖನಗಳಿವೆ. "ದೈವಂ ತೊಳಅಳ್" ಎಂಬ ಕುರಳನ್ನು ಉಲ್ಲೇಖಿಸುತ್ತ ಇದರ ಕರ್ತೃತ್ವವನ್ನು 'ಪೊಯಿಲ್ ಪುಲವನ್' ಅಂದರೆ ಸುಳ್ಳು ಹೇಳಿದ ಸತ್ಯಶೀಲನಾದ ಕವಿ ಎಂದುದಾಗಿ ತಿರುವಳ್ಳುವರ ಕವಿಯನ್ನು ಸ್ತುತಿಸಿದ್ದಾರೆ. ಇದರಿಂದ ತಿಳಿದು ಬರುವುದೇನೆಂದರೆ ತಿರುಕ್ಕುರಳ್" ಮಣಿಮೇಖಲೈ ಮತ್ತು ಶಿಲಪ್ಪದಿಕಾರಂ"ಗಳಿಗಿಂತ ಹಿಂದಿನದು ಎಂದು ತೀರ್ಮಾಣಿಸಿ, ವಳ್ಳುವರ್ ಅವರಿಗಿಂತ ಸ್ವಲ್ಪ ಮುಂಚೆಯೇ ಜೀವಿಸಿದ್ದಿರಬಹುದೆಂದು ಅಭಿಪ್ರಾಯಪಡುತ್ತಾರೆ.

ತಿರುವಳ್ಳುವರರು ಹೇಳುವ ಹೆಣ್ತನದ ಲಕ್ಷಣಗಳು ಲಜ್ಜೆ, ಅಂಜಿಕೆ, ಮುಗ್ಧತೆ, ಉದಾಸೀನತೆ, ಪ್ರೇಮವನ್ನು ಸೂಚಿಸದ ನೋಟ, ನೋವ ಪ್ರೇಮವನ್ನು ಸೂಚಿಸುವ ಇನ್ನೊಂದು ನೋಟ ಅದಕ್ಕೆ ತಕ್ಕ ಔಷದ ಮುಂತಾದ ಭಾವನೆಗಳನ್ನು ನಾಯಕಿಯ ಪಾತ್ರದಲ್ಲಿ ಚಿತ್ರಿಸಿದ್ದುದು ಕಂಡು ಬಂದ ಸಂಗತಿಗಳಾಗಿವೆ. ಚೆಲುವೆಯ ರಹಸ್ಯ



ಪ್ರೇಮವನ್ನು ಪರೀಕ್ಷಿಸುವುದು, ನಾಯಕನ ಪಾತ್ರದಲ್ಲೂ ಸ್ವತಃ ಕವಿಯೇ ಹೇಳಿದ್ದಿದೆ. ಆ ಭಾಗವಿಂತಿದೆ. ನಾಯಕನ ಭಾವನೆ ನಾಯಕಿಯ ಭಾವನೆ ಎಂಬುದಾಗಿಯೇ ಉಲ್ಲೇಖಿಸಿದ ಕವಿಯ ಜಾಣ್ಮೆ ಮೆಚ್ಚಲೇಬೇಕು. ಏಕೆಂದರೆ ತನ್ನ ಪತ್ನಿ ವಾಸುಕಿಯ ಹೊರತಾಗಿ ಅನ್ಯ ಸ್ತ್ರೀಯರನ್ನು ತಾಯಿ, ಸಹೋದರಿಯರಂತೆ ಕಂಡವರು ಕವಿ ತಿರುವಳ್ಳುವರರು ಎಂಬುದನ್ನು ಮರೆಯುವಂತಿಲ್ಲ.

**ನಾಯಕನ ಪ್ರೇಮಾಂಜಲಿಯ ಭಾವನೆ**

ಎರಡು ನೋಟಗಳಿರುವವು. ಕಾಡಿಗೆಯಿಟ್ಟ ಈ ಕಾಮಿನಿಯ ಕಂಗಳಲಿ
ಒಂದು ನೋಟವು ನೋವ ತಹುದು, ಮತ್ತೊಂದಕೆ ಮದ್ದಾಗಿಹುದು.

ರಹಸ್ಯದಿಂದ ನನ್ನ ನೋಡುವ ಇವಳ ಕಂಗಳ ಕಿರುನೋಟದ ಸುಖವು
ಕಾಮಸುಖದ ಅರ್ಧಭಾಗಕ್ಕಿಂತ ಅಧಿಕವಹುದು.

ಅವಳೆನ್ನ ನೋಡಿ ತನ್ನ ತಲೆಯ ತಗ್ಗಿಸಿದಳು, ಅದವಳು
ನಮ್ಮ ಪ್ರಣಯದ ಪೈರಿಗೆರೆದ ನೀರು?

ನಾನು ನೋಡುವಾಗ ನೆಲವ ನೋಡುವಳು, ನಾನು ನೋಡದಾಗ
ನನ್ನ ನೋಡಿ ಅವಳು ಮೆಲುನಗೆಯ ಬೀರುವಳು.

ಅವಳು ನೇರವಾಗಿ ನನ್ನ ನೋಡದೇ, ತನ್ನ ಕಡೆಗಣ್ಣಿನ
ನಿಡು ನೋಟದಿಂದ ನೋಡಿ ನಗುವಳು.

ಹೊರಗೆ ಒಲವಿಲ್ಲದವರಂತೆ ನುಡಿದರೂ ಅದು ಒಳಗೆ ಒಲವುಳ್ಳವರ
ನುಡಿಯೆಂಬುದು ಒಡನೆ ಅರಿವಾಗುವುದು.

ಹೊರಗೆ ಕಡುನುಡಿಯನಾಡುವುದು, ಮುನಿಸಿನಿಂದ ನೋಡುವುದು
ಪ್ರೇಮವಿರದಂತೆ ನಟಿಸುವ ಪ್ರೇಮಿಗಳ ತಂತ್ರವದು

ನಾನವಳ ನೋಡಲು ಪ್ರೇಮದಿಂದ ನನ್ನ ನೋಡಿ ನಗುವಳು.
ಬಳುಕುವ ನಲ್ಲೆಯ ನಗೆಯೊಳು ಉಂಟೊಂದು ಚೆಲುವು.

ಅಪರಿಚಿತರಂತೆ ಸಾಮಾನ್ಯ ನೋಟವನು ಬೀರುವುದು.
ಅನುರಾಗವುಳ್ಳವರ ಬಳಿಯಿರುವ ಕಲೆಯಿದು.

ನಲ್ಲ–ನಲ್ಲೆಯರ ಕಂಗೊಳೊಂದಾಗಿ ಒಲವರದ ನುಡಿಯನಾಡಲು
ಅವರ ಬಾಯ್ನುಡಿಗಳು ವ್ಯರ್ಥವಾಗುವವು.

ಮದುವೆಯ ಪೂರ್ವದಲ್ಲಿ ಹಾಗೂ ಮದುವೆಯಾದ ಹೊಸತನದ ಅನುಭವಗಳನ್ನು ಬಿಂಬಿಸುವ ಈ ಸಾಲುಗಳು ಮನಾಕರ್ಷಣೆಯಾಗುವಂತಿವೆ. ಈ ಪದ್ಯಗಳು ಕೆ.ಎಸ್.ನರಸಿಂಹಸ್ವಾಮಿಯವರ "ಮೈಸೂರು ಮಲ್ಲಿಗೆಯ" ಕಂಪನ್ನು ಬೀರುವಂತಿವೆ. ನಾಯಕ –ನಾಯಕಿಯರ ಪಾತ್ರದಲ್ಲಿ ತಿರುವಳ್ಳುವರ್–ವಾಸುಕಿಯರು ನಡೆದುಕೊಂಡ ಭಾವ–ಭಾವನೆಗಳ ದಾಂಪತ್ಯದ ಬದುಕಿಗೆ ಮೆರುಗು ತಂದಿವೆ. ಇದು ಪ್ರೇಮಿಗಳ ಆಂತರಿಕ ಜೀವನ ರಹಸ್ಯ. ಕಲ್ಪನಾ ಲೋಕದಲ್ಲಿ ಕವಿಗಳು ವಿಹರಿಸುವಂತೆ ಪ್ರೇಮಿಗಳೂ ವಿಹರಿಸುತ್ತಾರೆ. ಕಲ್ಪನೆ ಕವಿಗಳಿಗೆ ಕಾವ್ಯರಸಧಾಮ, ಪ್ರೇಮಿಗಳಿಗೆ ಕಾಮರಸಧಾಮ. ಕಾಳಿದಾಸನ 'ಮೇಘದೂತ' ಕಾವ್ಯದ ನಾಯಕನು ಮೇಘವನ್ನು ದೂತನಾಗಿ ಕಳುಹಿಸಿದಂತೆ ವಳ್ಳುವರರು ರಚಿಸಿರುವ ಈ ಶೃಂಗಾರ ಕಾವ್ಯದ ನಾಯಕನು ಕಳುಹಿಸಿದ ದೂತನು ಸ್ವಪ್ನ. ಅಗಲಿದ ಪ್ರಿಯತಮ ಪ್ರೇಯಸಿಯರನ್ನು ಒಂದುಗೂಡಿಸುವುದೇ ಸ್ವಪ್ನ ಸಾಮ್ರಾಜ್ಯದ ಕಲ್ಪನೆ.

ಪ್ರೇಮದುಂಗುರ ತೊಡಿಸಿದ ನಾಯಕ ರತಿಸುಖಕ್ಕೆ ಮನಸೋಲುತ್ತಾನೆ. ಆ ಮನ–ಮೋಹಕ ದೃಶ್ಯಾವಳಿಗಳನ್ನು ಚಿತ್ರಪಟದ ಮೇಲೆ ಬಿಡಿಸಿಟ್ಟಂತೆ ಕವಿ ವರ್ಣಿಸಿದ್ದಾನೆ. ಅಂತಹ ಕವಿ ನಾಯಕನ ಭಾವನೆಗಳನ್ನು ಕೇಳಿ ರತಿ ಸುಖದ ವರ್ಣನೆಯ ಭಾಗದಲ್ಲಿದೆ (ಪುಟ–೧೧೭–ಪದ್ಯ ೧೧೦೧ ರಿಂದ ೧೧೧೦ದ ವರೆಗೆ).

ಕಂಡು, ಕೇಳಿ, ಸವಿದು, ಮೂಸಿ, ಮುಟ್ಟಿ ಸುಖಿಸುವ ಪಂಚೇಂದ್ರಿಯ
ಸುಖಗಳನು, ಬಳೆತೊಟ್ಟ ಈ ಬಾಲೆಯಿಂದ ನಾ ಪಡೆದೆನು.

ನೋವನ್ನು ನಿವಾರಿಸುವ ಮದ್ದು ಬೇರೊಂದಾಗಿಹುದು;
ಈ ಚೆಲುವೆ ತನ್ನಿಂದಾದ ನೋವಿಗೆ ತಾನೇ ಮದ್ದಾಗಿಹಳು.

ತನ್ನ ಇನಿಯಳ ಮೇಲ್ತೋಳಿನಲಿ ಮಲಗಿ ನಿದ್ರಿಸುವುದಕಿಂತಲೂ
ಸುಖವಿರುವುದೋ ತಾವರೆಗಣ್ಣಿನ ದೇವನಿಹಲೋಕ?

ಅಗಲಿದರೆ ಸುಡುವ ಸನಿಹವಿರೆ ತಂಪೀವ
ಬೆಂಕಿಯನು ಎಲ್ಲಿಂದ ಪಡೆದವಳಿವಳು?

ಬಯಸಿದ ವಸ್ತು ಬಯಸಿದಾಗಲೆಲ್ಲಾ ಸುಖ ತರುವಂತಿಹುದು.
ಈ ಕುಸುಮ ಶೋಭಿತ ಕುಂತಳೆಯ ತೋಳ್ಗಳು.

ಅಮೃತದಿಂದಾದ ತನ್ನ ತೋಳ್ಗಳಿಂದ ನನ್ನನ್ನೀ ಮುಗ್ಧೆ ಮುಟ್ಟಿ
ಅಪ್ಪುವಾಗಲೆಲ್ಲಾ ಚೇತರಿಪುದೆನ್ನ ಜೀವ



ತನ್ನ ಉಣಿಸನು ಮನೆಯೊಳು ಹಲರೊಡನೆ ಹಂಚಿಯುಂಡಂತೆ
ಈ ಚೆಂದಳಿರ ಚೆಲುವೆಯ ಆಲಿಂಗನ ಸುಖವು.

ಪ್ರೇಮಿಗಳಿಬ್ಬರಿಗೂ ಸುಖವ ತರುವುದು, ಅವರ ನಡುವೆ
ಗಾಳಿ ನುಸುಳಲಾಗದಂತಹ ಗಾಢಾಲಿಂಗನವು.

ಪ್ರೇಮಕಲಹ, ಕಲಹಶಮನ, ರತಿಮಿಲನ– ಇವು ಮೂರು
ಮದುವೆಯಾದವರು ಪಡೆದ ಫಲಗಳು.

ಓದಿದಂತೆಲ್ಲಾ ಪೂರ್ವ ಅಜ್ಞಾನವು ಅಗಲುವಂತಿಹುದು,
ಕೂಡಿದಂತೆಲ್ಲಾ ಈ ಕಾಮಿನಿಯ ಕಾಮ ಸುಖವು.

ಇಂಥ ಮಧುರ ಮಾತಿನ–ನವುರಾದ ಹಾಸ್ಯದೊಂದಿಗೆ ರತಿಸುಖದ ವರ್ಣನೆಯನ್ನು ಯಾವ ಮಹಾಕವಿಯ ಮಹಾಕಾವ್ಯದಲ್ಲೂ ಕಾಣಲಾರೆವು. ಇದು ಕವಿಯ ಭಾವ–ಭಾವನೆಯ ಚದುರಂಗದಾಟ, ಹೋಳಿಯ ರಂಗರಂಗಿನಾಟದಂತಿರುವ ರತಿ–ಕಾಮ–ರತಿಯರ ರತಿಸುಖದ ವರ್ಣನೆಯಲ್ಲಿ ಶಬ್ದಜಾಲದಲ್ಲಿ ಅನಾವರಣಗೊಂಡಿದೆ. ಇದು ಈ ಜೋಡಿಯ ಮುಕ್ತ ಮನಸ್ಸಿನ ನುಡಿತೋರಣವಾಗಿದೆ, ಓದಿದರೆ ರತಿಸುಖಾನುಭಾವದಲ್ಲಿ ಇವರಂತೆಯೇ ಮಿಂದೇಳಬೇಕೆನ್ನುವಂತಿವೆ ದಾಂಪತ್ಯ ಜೋಡಿಗಳಿಗೆ. ಅದಕ್ಕೆ ಅಂದಿರಬೇಕು ಇವರಂತೆ ದಂಪತಿಗಳು ರತಿಸುಖ ಅನುಭವಿಸುತ್ತಿರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ. ವಾಸುಕಿಯ ಸೌಂದರ್ಯಕ್ಕೆ ಮಾರು ಹೋದ ವಳ್ಳುವರರು ಅತಿ ಕೋಮಲವಾಗಿರುವ ಅನಿಚ್ಚ ಹೂವೇ ಬಾಳಿಗೆ ನೀ ನಿನಗಿಂತ ಕೋಮಲೆ ನನ್ನ ಮನದನ್ನೆ ಎನ್ನುತ್ತಾರೆ. ಅಲ್ಲದೇ ಅವಳ ಮೈಮಾಟವನ್ನು ಕಂಡು ಹೇಳಿದ್ದು ಕವಿ 'ಮಾಂದಳಿರಂಥ ಮೈಯನೂ, ಮುತ್ತಿನಂಥ ಹಲ್ಲನೂ ಸುಗಂಧದುಸಿರನೂ, ಈಟಿಯಂಥ ಕಣ್ಣನೂ, ಬಿದಿರಂಥ ತೋಳುಳ್ಳ ಈ ಬಾಲೆ ಹೊಂದಿಹಳು ಎನ್ನುತ್ತಾರೆ. ವಡವೆ ತೊಟ್ಟ ಈ ಹೆಣ್ಣಿನ ಕಣ್ಣನು ಕಂಡು ಕನ್ನೈದಿಲೆಯೂ ತಲೆತಗ್ಗಿಸಬೇಕು; ಚಂದ್ರನಿಗೂ ಈ ಚೆಲುವೆಯ ಮೊಗಕೂ ಭೇದವನರಿಯದೆ, ಭ್ರಮಿಸುತಿವೆ ತಾರೆಗಳು ಬಾಂದಳದಿ ಎಂದಿದ್ದಾರೆ. ಇಂಥ ವಧುವಿನ ವದನದೊಲು ಶೋಭಿಸಬಲ್ಲದೆ, ನನ್ನೊಲವು ನಿನಗುಂಟು, ನನ್ನ ಬಾಳಿಗೆ ನೀ ಶಶಿಯು. ಆದುದರಿಂದ ಹೂವಿನಂತಹ ಕಣ್ಣುಳ್ಳ ಇವಳ ಮೊಗವನು ನೀ ಹೋಲುವೆಯಾದರೆ, ಹಲವರು ಕಾಣುವ ಮೊದಲು ತೋರದಿರು ಶಶಿಧರನೇ ಎಂದು ಸೆರಗೊಡ್ಡಿ ಬೇಡಿಕೊಂಡಿದ್ದಾನೆ.

ದೇಹದೊಡನೆ ಜೀವಕಿರುವ ನಂಟಿನಂತಿಹುದು,
ಈ ಹೆಣ್ಣಿನೊಡನೆ ನನಗಿರುವ ನೇಹವದು.

ಒಡವೆ ತೊಟ್ಟ ಈ ಬೆಡಗಿ ಪ್ರಾಣವ ನೀಡುವಳು ಕೂಡುವಾಗ;
ಸಾವು ತರುವಂತಿಹಳು ಅಗಲುವಾಗ,

ಮರೆತಿದ್ದರೆ ನೆನೆಯುತ್ತಿದ್ದೆ ಆದರೆ, ನಾ ಮರೆಯಲರಿಯೆ;
ಹೊಳಪಿಂದ ಸೆಳೆವ ಕಂಗಳ ಈ ಬಾಲೆಯ ಗುಣವ

ಎಂದುದಾಗಿ ನಾಯಕ ತನ್ನ ತಳಮಳವನ್ನು ತೋಡಿಕೊಂಡರೆ, ನಾಯಕಿಯು ಹೇಳಿದ್ದು ಗಮನಿಸುವಂತಿದೆ.

ನನ್ನ ಕಣ್ಣಿಂದ ಹೊರಹೋಗನು, ಎವೆಯಿಕ್ಕರೆ ನೋಯಲಾರನು,
ನಿಗಿತು ನವಿರಾದವನು ನನ್ನ ನಲ್ಲನು,

ನಲ್ಲನು ನನ್ನ ಕಣ್ಣಲ್ಲೇ ನೆಲೆಸಿಹನು, ಅವನು ಕಾಡಿಗೆ ಮರೆಸುವುದೆಂದು,
ಕಣ್ಣಿಗೆ ಹಚ್ಚದಿಹೆನು ಕಾಡಿಗೆಯನೂ

ನಲ್ಲನು ನನ್ನ ಹೃದಯದಿ ನೆಲೆಸಿಹನು ಬಿಸಿಯುಣಿಸನುಂಡರೆ
ಅವನದು ಸುಡುವುದೆಂದಂಜಿ ಅದನೂ ಉಣ್ಣದಿಹೆನು

ಮನದನ್ನನು ಮರೆಯಾಗುವನೆಂದರಿತು ಕಣ್ಣೆವೆಯಿಕ್ಕದಿದ್ದೆನು;
ಅವನನದಕೇ ಕ್ರೂರನೆಂಬರು ಈ ಊರವರು.

ನಲ್ಲನು ನನ್ನ ಹೃದಯದಿ ನಲಿವಿನಿಂದ ನೆಲೆಸಿಹನು, ಅವನು ನನ್ನನು
ಅಗಲಿಹನೆಂದು ನಿಂದಿಪರು ಈ ಊರವರು.

ಎಂದು ನಲ್ಲನನ್ನು ಹೃದಯಮಂದಿರದಲ್ಲಿ ನೆಲೆಯಾಗಿಸಿಕೊಂಡಿರುವ ನಾಯಕನ ಪತ್ನಿ ವಾಸುಕಿಯ ಮಾತುಗಳು ದಾಂಪತ್ಯ ಜೀವನದ ಸುಮಧುರ ಗಳಿಗೆಯನ್ನು ಪ್ರತಿನಿಧಿಸುತ್ತವೆ. ಇಬ್ಬರಲ್ಲೂ ಅಗಲಿಕೆಯೆಂಬುದು ಅಸಾಧ್ಯದ ಮಾತು. ಊರವರೇನೇ ಅಂದರೂ ಸಹಿಸಿಕೊಳ್ಳುವ ಶಕ್ತಿ ಕೊಡು ಎಂದು ದೇವನಲ್ಲಿ ಮೊರೆ ಹೋದಂತಿದೆ. ಸಾಮಾನ್ಯವಾಗಿ ಲಲನೆಯರು ಲಜ್ಜೆಯುಳ್ಳವರು ಮತ್ತು ಕರುಣೆಗೆ ಪಾತ್ರರೆಂದುದು ಗೊತ್ತಿದ್ದರೂ ರತಿಸುಖವನು ಅನುಭವಿಸಿ ಮತ್ತದನು ಅನುಭವಿಸಲಾಗದಿಹ ದುಃಖಿತರಿಗೆ ತಾಲಾಶ್ವವಿಲ್ಲದೇ ಬೇರೆ ಆಸರೆಯಿಲ್ಲ ಎನ್ನುತ್ತಾನೆ ನಾಯಕ. ಕಡಲಂಥ ಕಾಮವೇದನೆಯಿದ್ದರೂ, ತಾಲಾಶ್ವನೇರದ ಹೆಣ್ಣು ಜನ್ಮಕ್ಕಿಂತ ಹಿರಿಮೆಯುಳ್ಳದ್ದು ಬೇರಿಲ್ಲವೆನ್ನುತ್ತಾನೆ. ಕುಡಿದು ಮತ್ತೇರಿದಂತೆಲ್ಲಾ ಪದೇ ಪದೇ ಹೆಂಡವನು ಬಯಸಿದಂತೆ ಪ್ರಣಯ ಪ್ರಕಟವಾದಂತೆಲ್ಲಾ ನನಗದು ಇನಿದು ಎಂದ ನಾಯಕನ ಮಾತಿಗೆ ನಾಯಕಿ ಹೇಳಿದ್ದೇನೆಂದರೆ–



ಯಾರೂ ಅರಿಯರೆಂಬ ಎಣಿಕೆಯಲಿ ನನ್ನ ಕಾಮವೂ ಈ ಊರ ಬೀದಿಯಲಿ ಭ್ರಮಿಸಿ ತಿರುಗುತಿಹುದು (೧೧೩೯). ನಾಯಕಿಯ ಪ್ರಣಯದ ಬಗೆಗೆ ಊರ ಜನರು ಬಹಿರಂಗವಾಗಿ ಆಡಿಕೊಳ್ಳುವುದು. ಇದರಿಂದ ಇವರ ದಾಂಪತ್ಯ ಜೀವನ ಮತ್ತಷ್ಟು ಗಟ್ಟಿಗೊಳ್ಳುತ್ತದೆ. ಪ್ರೇಯಸಿಯ ಲೈಂಗಿಕ ಬಯಕೆ ದೋಣಿ; ಪ್ರಿಯತಮನ ಪ್ರೇಮದಾಲಿಂಗನ, ಸಂಸಾರ ಸಾಗರವನ್ನು ದಾಟಲು ದೈವೀ ಕಾರುಣ್ಯವೇ ಒಂದು ದೋಣಿ. ಅದರಂತೆ ಕಾಮಸಾಗರವನ್ನು ದಾಟಲು ಸತಿಗೆ ಪತಿಯ ಪ್ರೇಮವೇ ದೋಣಿ. ದಾಂಪತ್ಯ ಜೀವನದ ದೇಹ ದೇಹಗಳ ಮಿಲನ ಮಾತ್ರವಲ್ಲ ಹೃದಯ–ಹೃದಯಗಳ ಮಿಲನವೆಂಬುದೇ ಇದರ ಅಂತರಾರ್ಥ. ಒಂದು ವೇಳೆ ನಾಯಕ–ನಾಯಕಿಯರ ಅಗಲುವಿಕೆಯಾದಾಗ ಅವರಿಬ್ಬರಿಗೂ ಆದ ನೋವು–ಸಂಕಟ–ದುಃಖ ವೇದನೆ–ಯಾತನೆ ವರ್ಣಿಸಲಸಾಧ್ಯವೇ ಸರಿ!

ಬಳಗವಿರದ ಊರಲಿ ಬಾಳುವುದು ಸಂಕಟ;
ಅದಕಿಂತ ಸಂಕಟ ಇನಿಯನಗಲಿಕೆ

ಮುಟ್ಟಿದರೆ ಸುಡುವುದಲ್ಲದೆ ರತಿ ನೋವಿನೊಲು
ಬಿಟ್ಟಗಲಿದರೆ ಸುಡುವುದೋ ಬೆಂಕಿ?

ನಲ್ಲನು ಅಗಲುವೆನೆಂದು ನುಡಿದಾಗ ಅವನು ಕೇಳಿ ಸಹಿಸಿ,
ವಿರಹ ತಾಪಗಳ ಸಹಿಸಿ, ಬಾಳುವವರು ಹಲರಿಹರು.

ನಾಯಕಿಯರು ಅಗಲುವಿಕೆಯಿಂದಾಗುವ ಅವಾಂತರಗಳನ್ನು ಈ ಪದ್ಯಗಳಲ್ಲಿ ಹೇಳಿರುವರಲ್ಲದೇ ವಿರಹವೇದನೆಯನ್ನು ವಿರಹ ನೂರು ನೂರು ತರಹ ಎಂಬಂತೆ ಹೇಳಿದ್ದು ಹೀಗೆ– ಮರೆಯಲು ಪ್ರಯತ್ನಿಸಿದರೂ ಈ ಮದನ ವೇದನೆ ಎಂಬುದಿದು ಊಟೆ ನೀರಿನಂತೆ ಉಕ್ಕಿ ಬರುವುದು ಕಡಲುಕ್ಕಿ ಬಂದಂತೆ ಎನ್ನುತ್ತಾಳೆ.

ನನ್ನ ದೇಹದಲಿ ಜೀವವೇ ಕಾವಡಿಯಾಗಿ ಅದರಲಿ
ಈ ಕಾಮಲಜ್ಜೆಗಳೆರಡೂ ತೂಗಾಡುತಿಹವು.

ಕಾಮದ ಕಡಲುಂಟು ನನ್ನೊಳು, ಅದನು ದಾಟುವ
ಸುರಕ್ಷಿತ ದೋಣಿಯು ನನ್ನ ಬಳಿಯಿಲ್ಲ.

ಕೂಡುವಾಗ ಕಡಲಂತೆ ಹಿರಿದು ಕಾಮಸುಖವು;
ಅಗಲಿದಾಗ ದುಃಖ ಅದಕಿಂತ ಹಿರಿದು,

ನಲ್ಲನೆಡೆಗೆ ಮನದಂತೆ ಧಾವಿಸಬಲ್ಲಡೆ, ಕಂಬನಿಯ
ಹೊನಲಲಿಂತು ಈಜವು ನನ್ನ ಕಂಗಳು.

ವಿರಹಿಗಳಿಗೆ ರಾತ್ರಿ ವೇಳೆಯು ಒಂದು ಶೋಕ ಸಾಗರ. ರತಿವೇದನೆ ಆಗುವ ಸಂಧ್ಯಾಕಾಲವರಿಗೆ ಶತ್ರು. ಆ ವೇದನೆ ಅಡಗುವ ಪ್ರಾತಃಕಾಲ ಅವರಿಗೆ ಮಿತ್ರ. ಸುಮಧುರ ಸಂಗೀತ ವಿರಹಿಣಿಯ ದುಃಖವನ್ನು ಇಮ್ಮಡಿಗೊಳಿಸುವ ಮನ್ಮಥಾಸ್ತ್ರ. ದಾಂಪತ್ಯ ಜೀವನಕ್ಕೆ 'ಅರ್ಥ' ಅನಿವಾರ್ಯ. ಧರ್ಮಬದ್ಧ ಅರ್ಥವನ್ನು ಸಂಪಾದಿಸಿದ ಬಳಿಕ ತನ್ನ ಸತಿಯೊಡನೆ ಅನುಭವಿಸುವ ಸುಖವೇ ಧರ್ಮಬದ್ಧ ಕಾಮಸುಖ. ಈ ತ್ರಿವರ್ಗಗಳು ಪಾರಮಾರ್ಥಿಕ (ಸಮಷ್ಟಿ) ಜೀವನಪಥದಲ್ಲಿ ಹಾಸು–ಹೊಕ್ಕಾಗಿರುವ ಮೂರು ಮುಖ್ಯ ಅಂಶಗಳು.

ಸತಿಯ ರತಿರೋಗಕ್ಕೆ ಪತಿಯ ಪ್ರೇಮ ಮಿಲನವೇ ದಿವ್ಯ ಔಷಧ, ರಾಮಬಾಣ! ಕಾಮ–ಲಜ್ಜೆಗಳ ಹೋರಾಟದಲ್ಲಿ ಕಾಮಕ್ಕೇ ಗೆಲುವುಂಟು. ಗಂಡ–ಹೆಂಡಿರ ಜಗಳ ಗಂಧ ತೀಡಿದಾಂಗ ಅಥವಾ ಉಂಡು ಮಲಗುವತನಕ. ಹೆಣ್ಣು ಕಾಮವನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಬೇಕಲ್ಲದೇ ಸಂಯಮದಿಂದ ಇರಬೇಕೆಂಬ ಕೃತಿಕಾರರ ಎಚ್ಚರಿಕೆಯಿಲ್ಲಿ ವ್ಯಕ್ತವಾಗುತ್ತದೆ. ಆದರೆ, ಮೃದು ಮಾತುಗಳು ಮುನಿದ ಮಡದಿಯ ಮುಂದೆ ಗಂಡ ಸೆಳೆಯುವ ಸಂಮೋಹನ ಅಸ್ತ್ರ. ವಿರಹಿಣಿಯೂ ಒಬ್ಬ ಆಶಾವಾದಿಯೇ, ಪ್ರಿಯತಮನ ಪುನರಾಗಮನದ ನಿರೀಕ್ಷಣೆ ಅವಳ ಭವಿಷ್ಯದ ಬಾಳಿಗೊಂದು ಆಶ್ವಾಸನೆ. ಎಂತಹ ಸಂಕಷ್ಟ, ಸಂಕ್ಷೋಭ ಸ್ಥಿತಿಯಲ್ಲಿಯೂ ಸತಿಯಾದವಳು ತನ್ನ ಪತಿಯ ಶ್ರೇಯಸ್ಸನ್ನೇ ಬಯಸುತ್ತಾಳೆ. ಕಣ್ಣುಗಳೇ ಪ್ರೇಮಿಗಳ ಪ್ರೇಮ ಸಂಭಾಷಣೆಗೆ ಅನುಕೂಲವಾಗುವ ಮೊದಲ ಅವಯವ. ಚೆಲುವು ಅನಂತರ ಒಲವು ಇವುಗಳ ಸಂಯೋಗ ಸುಖದಿಂದಾದ ಸೌಂದರ್ಯ. ಆ ಸುಖವನ್ನು ಹೊರಗೆ ವಿವರಿಸಲಾಗದ ಲಜ್ಜೆ! ಮುಗುಳು ಮಲ್ಲಿಗೆಯಲ್ಲಿ ಕಂಪುಂಟು. ಅದರಂತೆ ಹೆಣ್ಣಿನ ಎಳೆನಗೆಯಲ್ಲಿ ಕಾಮ ತೃಪ್ತಿಯ ಕುರುಹುಂಟು. ಪ್ರಣಯದ, ರತಿ, ಸುಖದ ಸುಮಧುರ ರಸನಿಮಿಷಗಳನ್ನು ಕವಿ ಸೊಗಸಾಗಿ ನಿಜದ ನಿಲುವನ್ನು ಹೇಳಿದ್ದಿದೆ. ಆತ ನಾಯಕಿಯ ಸಮ್ಮತಿಯನ್ನು ಸಖಿಯ ಮೂಲಕ ಅರಿತುಕೊಳ್ಳುವನು. ನಾಯಕಿ ಹೇಳುತ್ತಾಳೆ– ಏನೆಂದರೆ, ನನ್ನ ನಲ್ಲನು ಅಗಲಿದರೆ ಕೈ ಬಳೆಗಳು ಕಳಚಿ ಬಿಡುವವು. ಬಾಹುಗಳು ಕೃಶವಾಗುವವು. ಮುಖದ ಕಾಂತಿ ಕುಗ್ಗುವುದು. ಆದ್ದರಿಂದ ಅವನ ಜೊತೆಯಲ್ಲಿ ಹೋಗೆಂದು ತನ್ನ ಪಾದಗಳಿಗೆ ಸೂಚನೆ ನೀಡುತ್ತಾಳೆ. ಪತಿ ಎಲ್ಲಿದ್ದರೂ, ಎಂತಿದ್ದರೂ, ಎಂದೆಂದೂ ಅವನ ಜೊತೆಯಲ್ಲಿಯೇ ಇರಬೇಕೆಂದುದಾಗಿ ಬಯಸುತ್ತಾಳೆ.

ಸಾಮಾಜಿಕ ಜೀವನದಲ್ಲಿ ತ್ಯಾಜ್ಯವಾದದ್ದು ಭಿಕ್ಷಾವೃತ್ತಿ. ದಾಂಪತ್ಯ ಜೀವನದಲ್ಲಿ ಶ್ಲಾಘ್ಯವಾದದ್ದು ಪ್ರಣಯ ಭಿಕ್ಷಾವೃತ್ತಿ. ಸತಿಯ ಪ್ರಣಯ, ಕೋಪ ಪ್ರದರ್ಶನ ರತಿಕ್ರಿಯೆಗೆ



ಪತಿಗೆ ಕೊಡುವ ಆಮಂತ್ರಣ. ಮನಸ್ಸು ಮನಸ್ಸು ಒಂದಾದಾಗ ದೇಹದಪ್ಪುಗೆ ಹಿತವಾಗುತ್ತದೆ. ಇದುವೇ ಕಾಮಸುಖದ ಪ್ರಾಪ್ತಿ. ಅದನ್ನು ವರ್ಣಿಸಲಾಗದ ಸ್ಥಿತಿ. ಕಾಮ ಸುಖಾನುಭವದಿಂದ ಉಂಟಾಗುವ ಮನೋಲ್ಲಾಸವೇ ಅದಕ್ಕೆ ಭೂಷಣ. ಇದರಿಂದ ತಿಳಿದು ಬರುವುದೇನೆಂದರೆ ಅನ್ಯ ಜೀವಿಯ ನೋವನ್ನರಿಯದವನು ತಪಸ್ವಿಯಾಗಲಾರ. ಸತಿಯ ನೋವನ್ನು ಅರಿಯದ ಪತಿಯೂ; ಪತಿಯ ನೋವನ್ನರಿಯದ ಸತಿಯೂ ಸಂಗಾತಿಗಳಾಗಲಾರರು. ಸತಿ–ಪತಿಯರ ಸರಸ–ಸಲ್ಲಾಪ ಏಕೋಭಾವದಿಂದೊಡಗೂಡಿರಬೇಕು. ರತಿ ಭೋಗಕ್ಕೆ ಮುಂಚೆ ದಂಪತಿಗಳ ಮಧ್ಯೆ ಸಂಭವಿಸುವ ರಸ ಪ್ರಧಾನವಾದ ಪ್ರಸಂಗ ಸತಿಯು ಕೋಪ ಪ್ರದರ್ಶನವಾಗುವುದು ಸಹಜ ಕ್ರಿಯೆ. ಪ್ರಣಯ ಕೋಪವೆಂದರೆ ಜಗಳವಲ್ಲ, ತಂಟೆ–ತಕರಾರುಗಳಲ್ಲ. ಪತಿಯ ಮೇಲೆ ಸತಿ ತೋರುವ ಹುಸಿ ಮುನಿಸಷ್ಟೇ! ಇದೊಂದು ಪ್ರಣಯ ನಾಟಕದ ಅತಿ ಪ್ರಧಾನವಾದ ಘಟನೆಯು ಮಾತ್ರ. ಸರಸ–ಸಲ್ಲಾಪ ಚೇಷ್ಟೇ–ಚಲ್ಲಾಟಗಳೆಲ್ಲಾ ಇದರಲ್ಲಿ ಅಡಕವಾಗಿವೆ. ಇವು ಅಲ್ಪವಾಗಿದ್ದರೆ ಲೈಂಗಿಕ ಕ್ರಿಯೆ ರಸಹೀನವಾಗುತ್ತದೆ. ಇವು ಅತಿಯಾದರೂ ರಸಭಂಗವಾಗುತ್ತದೆ. ಅದು ಒತ್ತಾಯದ ಕ್ರಿಯೆಯಲ್ಲ; ಮನ ಸುಖದ ಕ್ರಾಂತಿ ಪರಮಾನಂದ ಸುಖದಶಾಂತಿ ಲೈಂಗಿಕ ಕ್ರಿಯೆಯಿಂದ ಸತಿ–ಪತಿಯರು ಪರಮಾನಂದವನ್ನು ಅನುಭವಿಸುವಾಗ ಮೈರೋಮಾಂಚನವಾಗುತ್ತದೆ. ಆದ್ದರಿಂದ ಮಿತಿ ಅನಿವಾರ್ಯವೆಂದು ದಂಪತಿಗಳಿಗೆ ಎಚ್ಚರಿಕೆಯನ್ನು ತಿರುವಳ್ಳುವರರು ನೀಡುತ್ತಾರೆ.

ಮಹರ್ಷಿ ವಳ್ಳುವರರು ಪರಸ್ತ್ರೀಗಮನ ಮತ್ತು ವೇಶ್ಯಾಸಂಗವನ್ನು ಬೇರೆ ಬೇರೆ ಅಧ್ಯಾಯಗಳಲ್ಲಿ ಖಂಡಿಸಿರುವುದರಿಂದ "ಸ್ತ್ರೀ ಲೋಲ" ಎಂಬ ಸತಿಯ ಮೂದಲಿಕೆ ಇಲ್ಲಿ ಕೇವಲ ಕಾಲ್ಪನಿಕ. ಇಲ್ಲಿಯ ನಾಯಕನು ನಿಜವಾಗಿಯೂ ಸದ್ಗುಣಸಂಪನ್ನ ಮತ್ತು ಸಂಯಮಶಾಲಿ. ಪತಿಯ ಪ್ರೇಮ ಉತ್ಕಟವಾಗುವ ಉದ್ದೇಶದಿಂದ ಪ್ರಣಯ ಕೋಪವನ್ನು ಪ್ರದರ್ಶಿಸುವ ಪ್ರಸಂಗದಲ್ಲಿ ಕೃತಕ ಕಾರಣವನ್ನು ಹುಡುಕುವುದು ಸ್ತ್ರೀಯರ ಸಹಜ ಸ್ವಭಾವ ಎನ್ನುವದಷ್ಟೇ ಇಲ್ಲಿಯ ಅಂತಸ್ಥಿತ ಭಾವನೆ ಎನ್ನಲಾಗಿದೆ.

ಒಟ್ಟಿನಲ್ಲಿ ತಿರುವಳ್ಳುವರರು ಕಾಮಸುಖವನ್ನು ದೈವೇಚ್ಛೆಯೆಂದು ಹೇಳಿದ ಪರಿಯಿದೆ. ದೇವಕೃಪೆಯ, ಸ್ತುತಿಯ ನಾಮಸ್ಮರಣೆಯೊಂದಿಗೆ ಕಾಮಸುಖ (ರತಿಸುಖ)ವನ್ನು ಅನುಭವಿಸಿದರೆ ವಂಶಾಭಿವೃದ್ಧಿಯಾಗಿ, ಪರಮಾನಂದ ಸುಖವಾಗುತ್ತದೆಯೆಂಬ ಭಾವವಿದರಲ್ಲಿದೆ. ಕಾಮಸುಖವನ್ನು ಕ್ಷಣಿಕ ಸುಖ, ಅಲ್ಪ ಸುಖವೆಂದೂ ಜಗತ್ತಿನ ಹಲವು ವಿರಕ್ತ ಧರ್ಮೀಯರು ಅಲ್ಲಗಳೆದರೂ ತಿರುವಳ್ಳುವರರು ಸೂತ್ರೀಕರಿಸಿರುವ ಈ ಶೃಂಗಾರ ನಾಟಕದ ಪ್ರಮುಖ

ಪಾತ್ರಧಾರಿಗಳಾದ ನಾಯಕ ನಾಯಕಿಯರು ಪ್ರಣಯಲೀಲೆಯಲ್ಲಿಯೇ ಪರಮಾವಧಿಯ ಆನಂದವನ್ನವರು ಅನುಭವಿಸುತ್ತಾರೆ. ಸಂಯೋಗ ನಡೆಸುವ ಕಾಲ ಅತ್ಯಲ್ಪ. ಅದರಿಂದ ತೃಪ್ತಿ ಹೊಂದಲಾರದ ಅವರು ಇಡೀ ರಾತ್ರಿಯೆಲ್ಲ ಸರಸ ಸಲ್ಲಾಪಗಳಲ್ಲಿ ಕಳೆಯಬೇಕೆಂದು ಬಯಸುತ್ತಾರೆ.

'ಸಖೀಗೀತ'ದಲ್ಲಿ ವರಕವಿ ಬೇಂದ್ರೆಯವರದು ರೋಮ್ಯಾಂಟಿಕ್ ಪರಂಪರೆಗೆ ಸೇರುತ್ತದೆ. ಏಕಾಂತವನ್ನು ಲೋಕಾಂತವನ್ನಾಗಿ ಪರಿವರ್ತಿಸಿದುದರ ಔಚಿತ್ಯವನ್ನು ಹೇಳಿಕೊಂಡಿದ್ದಾನೆ.

ಸಖೀ! ನಮ್ಮ ಸಖ್ಯದ ಆಖ್ಯಾನ ಕಟು ಮಧುರ
ವ್ಯಾಖ್ಯಾನದೊಡಗೂಡಿ ವಿವರಿಸಲೇ

ಕರುಳಿನ ತೊಡಕನು ಕುಸುರಾಗಿ ಬಿಡಿಸಿಟ್ಟು
ತೊಡವಾಗಿ ತಿರುಗೊಮ್ಮೆ ನಾ ಧರಿಸಲೇ?

ತನುಮನ ಧನದಲ್ಲಿ ಪಾಲುಗಾರತಿಯಲ್ಲ
ನೀನೇನೋ ಹಿಗ್ಗಲಿಸ ಬಯಸಿರುವೆ

ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ

ಅನ್ನಕೆ ಬಾಳಾಗಿ ಕಾಮಕೆ ಹೋಳಾಗಿ
ಮಾನಕೆ ಆಳಾಗಿ ಉಸಿರೆಳೆದುದು

ಬಾಳಲ್ಲ ಬದುಕಲ್ಲ ಜೀವ ಜೀವಕೆ
ಉದ್ದೀಪನವಾದುದೇ ಜೀವನವು.

ಅದು ಇದೆ ಎದೆಯಲ್ಲಿ, ಬೆಳಕಿನ ಬದಿಯಲ್ಲಿ
ರಸ ಗಂಗಾನದಿಯಲ್ಲಿ ? ಅದರುಗಮ

ಹೆಸತದಕ್ಕೆ ಪ್ರೀತಿಯು ಹಿಗ್ಗಿನ ರೀತಿಯು
ಆತ್ಮದ ನೀತಿಯು ಮಧು ಸಂಗಮ

ಬೇಂದ್ರೆಯವರು ದಾಂಪತ್ಯದ ಜೀವನದಲ್ಲಿ ಸುಖವೆಂಬುದು ಗಗನಕುಸುಮವಾಗಿತ್ತು. ದುಃಖವನ್ನೇ ಹೆಚ್ಚು ಉಂಡವರು. ಅಳು ನುಂಗಿ ನಕ್ಕವರು. ದಾಂಪತ್ಯದ ವಿರಸವನ್ನು ಎದುರಿಸಿಯೂ ನಾಯಕ, ಪ್ರೀತಿಯಲ್ಲಿನ ತನ್ನ ನಂಬುಗೆಯನ್ನು ಸಖ್ಯದ ಕನಸನ್ನು ಕಳೆದುಕೊಳ್ಳುವುದಿಲ್ಲ. ಕಾಮ ಪ್ರೇಮ ಆತ್ಮ ತತ್ತ್ವದ ರೀತಿ–



ನೀತಿಯು ಮಧು ಸಂಗಮವೆಂದು ಭಾವಿಸಿದ್ದಾರೆ. ತಾನು ಸಖನಾಗಿ ಲಕ್ಷ್ಮೀಬಾಯಿ(ಕವಿಪತ್ನಿ) ಸಖಿಯಾಗಿ ಬಾಳಿನ ಗುಟ್ಟನ್ನು ಅರಿತು ಆಚರಿಸಿದವರು. 'ರಸವೇ ಜೀವನ, ವಿರಸವೇ ಮರಣ, ಸಮರಸವೇ ಜೀವನ'ವೆಂಬುದು ವರಕವಿ ಬೇಂದ್ರೆಯವರ ಸಿದ್ಧಾಂತವಾಗಿತ್ತು ಎಂಬುದನ್ನು ಮರೆಯುವಂತಿಲ್ಲ.

ನವೋದಯದ ಸಂದರ್ಭದಲ್ಲಿ ಕೆ.ಎಸ್.ನರಸಿಂಹಸ್ವಾಮಿಯವರು ಪ್ರೇಮದ ಜತೆಯಲ್ಲಿ ಕಾಮವಿಲ್ಲದಿರುವುದಿಲ್ಲವೆಂದು ಹೇಳಿದ್ದಾರೆ. ಕಾಮವೆಂದರೆ ಮಿಂಚು (ಕ್ಷಣಿಕ), ಪ್ರೇಮ ಅಂದರೆ 'ತಾರೆ' (ನಕ್ಷತ್ರ) ಎಂಬ ಕಲ್ಪನೆ ಅವರ ಕವನಗಳಲ್ಲಿದೆ. ಅವರ "ಮೈಸೂರು ಮಲ್ಲಿಗೆ" ಸುಖ–ದುಃಖ, ಸಿಹಿ–ಕಹಿಗಳ ಅನುಭವದ ಗುಚ್ಛ! ಕಾಮದ ಮೂಲಕವೇ ಪ್ರೇಮದ ಹಂತಕ್ಕೇರುವ ತುಡಿತವಿದೆ.

ನಿನ್ನಿಂದ ನಾನೆಂದು ಕಾಮದಲಿ ಕನವರಿಸಿ
ಕಾಮ ಭೋಗದ ಕನಸ ಕಂಡೆವಲ್ಲ!

ಸುತ್ತಿದೆವು ಕಂಬಗಳ, ಬಳಸಿದೆವು ದೇಗುಲವ
ಒಳಗುಡಿಯ ಮೂರ್ತಿಯನು ನೋಡಲಿಲ್ಲ.

ಹಂಗು–ಹೊಣೆಯಿಲ್ಲದೆಯೆ ಪ್ರೀತಿಯಲಿ ನಲಿವ ಖಾರ
ಮಿಂಚಿಳಿದರೇನೊಳಗೆ? ತಾರೆಯಿದೆ ತುಂಬ ದೂರ

ಎಂಬುದಾಗಿ' ಕಾಮದಹನ' ಕವನದಲ್ಲಿ ಶಿವನು ಕಾಮನನ್ನು ದಹಿಸಿದಾಗ ಅರ್ಧವನ್ನು ಉಳಿಸಿದ. ಮನ್ಮಥ ಚಿರಂಜೀವಿಯಾದ. ದೇವ ದೇವತೆಗಳನ್ನು ಅವನು ಬಿಟ್ಟಿಲ್ಲ. ಮೊದಲು ಕಾಮವೇ ಬರಲಿ; ಕೊನೆಗೆ ಪ್ರೇಮವೇನೇ ತರಲಿ' ಎಂದು ಹೇಳುತ್ತ ಕಾಮನನ್ನು ನಿನ್ನಂಥ ಅಭಿಮಾನದಾತರಿಲ್ಲ ಎಂದೂ ಸ್ತುತಿಸಿದ್ದಾರೆ. ಇದರಲ್ಲೂ ಪ್ರೇಮ ಅಂದರೆ ತಾರೆ ಎಂದದ್ದು ಹೀಗಿದೆ.

ಸ್ವರ್ಗದಾ ದಾರಿಯಲ್ಲಿ ಮಿನುಗುತಿರುವುದು ಪ್ರೇಮ
ಕಿಡಿಯಲ್ಲ ಸುಂದರಿಯೆ ಅದುವೆ ತಾರೆ!

ಕೆ ಎಸ್ ಎನ್‌ರು ಹೇಳಿರುವುದನ್ನು ಗಮನಿಸಬೇಕು.

ನಿನ್ನ ಪ್ರೇಮದ ಪರಿಯ ನಾನರಿಯೆ ಕನಕಾಂಗಿ
ನಿನ್ನೊಳಿದೆ ನನ್ನ ಮನಸು.

ಹುಣ್ಣಿಮೆಯ ರಾತ್ರಿಯಲಿ ಉಕ್ಕುವುದು ಕಡಲಾಗಿ
ನಿನ್ನೊಲುಮೆ ನನ್ನ ಕಂಡು.

"ಸಾಗರನ ಹೃದಯದಲಿ ರತ್ನ ಪರ್ವತ ಮಾಲೆ ಮಿಂಚಿನಲಿ ಮೀವುವಂತೆ ನಿನ್ನೊಲುಮೆಯರಮನೆಗೆ ಒಳಗಡಲ ರತ್ನ ಪುರಿಗೆ" ಮುಂತಾದ ಪ್ರಯೋಗಗಳು ಅವರ ದಾಂಪತ್ಯ ಜೀವನದ ಸುಖ–ದುಃಖಗಳ ಆಗರ ಸಾಗರವಾಗಿದೆ.

ವರಕವಿ ಬೇಂದ್ರೆಯವರು ಮತ್ತು ಮೈಸೂರು ಮಲ್ಲಿಗೆಯ ಕವಿ ಕೆ.ಎಸ್. ನರಸಿಂಹಸ್ವಾಮಿಯವರು ಆತ್ಮ ಪರಮಾತ್ಮನ ಕಡೆಗೆ ಮುಖಮಾಡಿದ ವಿರಳ ವ್ಯಕ್ತಿತ್ವವನ್ನು ಆಧ್ಯಾತ್ಮಿಕ ರಂಗದ ರಸ-ಋಷಿಗಳು. ತಮ್ಮೆಲ್ಲ ಬಾಳಿನ ಸಂಗತಿಗಳನ್ನು ಪರಮಾತ್ಮನಿಗೇ ಅರ್ಪಿಸಿ ಕೃತಾರ್ಥರಾಗಿದ್ದಾರೆ. ಧರ್ಮ, ಅರ್ಥ, ಕಾಮಗಳ ಸದ್ಬಳಕೆ ಮಾಡಿಕೊಂಡ ಶ್ರೇಷ್ಠ ದರ್ಜೆಯ ಕವಿಪುಂಗವರು. ತಿರುವಳ್ಳುವರ, ಮಹಾಯೋಗಿ ವೇಮನ, ಹಾಗೂ ಕರ್ನಾಟಕದ ಸರ್ವಜ್ಞ ಕವಿಗಳ ಹಾದಿಯಲ್ಲಿ ನಡೆದು ಬದುಕಿನ ಅಗ್ನಿಕುಂಡದಲ್ಲಿ ನೊಂದು ಬೆಂದು ಅಪ್ಪಟ ಚಿನ್ನದ ಗಟ್ಟಿಯಾದವರು. ಇಂಥವರು "ಸಾವಿರಕೊಬ್ಬ ಸತ್ಯವಂತ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ ಕಾಣಿರೋ" ಎಂಬುದಾಗಿ ಅವಿರಳಜ್ಞಾನಿ ಚೆನ್ನಬಸವಣ್ಣನವರು ಹೇಳಿರುವುದು ಸಮರ್ಥನೀಯವಾಗಿದೆ. ಕನ್ನಡದ ಗಂಡುಗಲಿ ಸರ್ವಜ್ಞ ಕವಿಯು ಸಿಡಿಲಿನಂತೆ ಆರ್ಭಟಿಸಿ ಹೇಳಿದ ವಚನಗಳಲ್ಲಿ ಇಂತಿದೆ –

ಹೆಣ್ಣಿನಿಂದಲೇ ಇಹವು-ಹೆಣ್ಣಿನಿಂದಲೇ ಪರವು
ಹೆಣ್ಣಿಂದ ಸಕಲ ಸಂಪದವು – ಹೆಣ್ಣೊಲದ
ಅಣ್ಣಗಳು ಯಾರಿಹರು ಸರ್ವಜ್ಞ;

ಕನಕವಿಲ್ಲದ ಊಟ ವನಿತೆಯಿಲ್ಲದ ಬಾಳ್ವೆ
ಎಣಿಕೆಯಿಲ್ಲದವನ ಮನೆವಾರ್ತೆ ಹೊಳೆಯೊಳಗೆ
ಮುಳುಗಿ ಹೋದಂತೆ ಸರ್ವಜ್ಞ

ನಾರಿಯಿಲ್ಲದ ಮನೆಯು ವಾರಿಯಿಲ್ಲದ ದುರ್ಗ
ಮೇರೆದಪ್ಪಿದವನ ಮನ್ನಣೆಯು ಇವು ಮೂರು
ಮಾರಿ ಕಾಣಯ್ಯ ಸರ್ವಜ್ಞ

ಉಪ್ಪಿಲ್ಲದ ಊಟ ಕಣ್ಣಿಗೊಪ್ಪವಿಲ್ಲದ ನಾರಿಯಿರದಿದ್ದರೆ ಬಾಳು ರುಚಿಸಲಾರದು. ಆದುದರಿಂದ ಹೆಣ್ಣಿನಿಂದಲೇ ಸುಖ ಪ್ರಾಪ್ತಿ-ಹಾಗೂ ಹೆಣ್ಣಿನಿಂದಲೇ ಪಾರಮಾರ್ಥದ ಪ್ರಾಪ್ತಿಗೆ ಸಾಧನವಾಗುವುದು. ಹೆಣ್ಣಿನಿಂದಲೇ ಸಕಲ ಸಂಪತ್ತು ಸಿಗುವುದು. ಅಂತಹ ಹೆಣ್ಣನ್ನು ಒಲ್ಲೆನೆನ್ನುವ ಅಣ್ಣಗಳಾರಾದರೂ ಇದ್ದಾರೆಯೆ? ಗೋದಿಯ ಅಡಿಗೆ ಇಲ್ಲದ ಊಟ, ಹೆಂಡತಿಯಿಲ್ಲದವನ ಬಾಳುವೆ ಹಾಗೂ ಲೆಕ್ಕವಿಡದವನ ಸಂಸಾರ ಹೊಳೆಯೊಳಗೆ ಮುಳುಗಿ ಹೋದಂತೆ ವ್ಯರ್ಥ. ಹೆಂಗಸರಿಲ್ಲದಂತಹ ಮನೆಯು, ಕಾವಲಿಲ್ಲದಂತಹ ಕೋಟೆ, ದಾರಿ ತಪ್ಪಿ ನಡೆಯುವಂಥವನಿಗೆ ಮಾಡುವ ಮರ್ಯಾದೆ ಇವು ಮೂರು ಮಾರಿ (ದೆವ್ವ) ಇದ್ದಂತೆಯೇ ಸರಿ. ಹಾಗೆಯೇ ಅಂಗನೆಯರೊಲಿವುದು, ಬಂಗಾರ ದೊರೆಯುವುದು, ಸಂಗ್ರಾಮದೊಳು ಗೆಲುವು ದೊರೆಯುವುದು ಇವು



ಮೂರು ದೇವರ ದಯೆಯಿಂದ ಲಭಿಸುವವು ಎಂದಿರುವ ಸರ್ವಜ್ಞ ಕವಿಯ ಮಾತನ್ನು ಗಮನಿಸಬೇಕು. ಈತ ಸಂಸಾರಸ್ಥನಲ್ಲವಾದರೂ ಸಂಸಾರ ಸಾಗರದಲ್ಲಿ ಮುಳಗೇಳುವವರನ್ನು ಕಂಡು ತಿರುವಳ್ಳುವರ್ ಮತ್ತು ವೇಮನರಂತೆಯೇ ಹೇಳಿದಕ್ಕಿಂತಲೂ ಪರಿಣಾಮಕಾರಿಯಾಗಿವೆ. ಈತನ ತ್ರಿಪದಿಯಲ್ಲಿರುವ ಸಂದೇಶಗಳು. ಇವು ಸಂಸಾರಸ್ಥರ ಬಾಳಿಗೆ ಬೆಳಕು ನೀಡುವಂತಿವೆ.

ದಾಂಪತ್ಯ ಜೀವನದಲ್ಲಿ ಹಾಗೂ ವಿರಾಗಿಗಳಲ್ಲಿ ನಡೆ-ನುಡಿಗಳೆರಡೂ ಶುದ್ಧವಾಗಿರಬೇಕು. ಕೃತಿಗಿಂತ ಮಾತೇ ಮೇಲಾದವರು ಈ ಲೋಕದಲ್ಲಿ ಬಹು ಜನರು ಉಪದೇಶವನ್ನು ಕೊಡುವಷ್ಟು ಧಾರಾಳವಾಗಿ ಬೇರೆ ಏನನ್ನು ಕೊಡಲಾರರು. ಅಂಥವರನ್ನು ತಿರುವಳ್ಳುವರರು 'ನಗೆಯಲಿ ಸವಿ ಮಾತುನಾಡಿ ಕೆಳೆಯನು ಬೆಳೆಸಲರಿಯದವರು ಹಗೆ ಮಾತುಗಳನಾಡಿ ಒಡೆಯಲೆತ್ನಿಸುವರು' ಎಂದು ವ್ಯಂಗ್ಯ ಮಾಡಿದ್ದಾರೆ. ಒಡೆದು ಬಾಳುವ ನೀತಿಗಿಂತ ಕೂಡಿ ಬಾಳುವ ನೀತಿ ಲೋಕದ ನೀತಿಯಾಗಬೇಕೆಂಬುದು ತಿರುವಳ್ಳುವರರ ಆಶಯವಾಗಿದೆ.

**ಮಹಾಯೋಗಿ ವೇಮನರು ಹೇಳಿದ್ದು :**

ಈ ವಿಭಾಗದಲ್ಲಿ ವೇಮನರು ಹೆಚ್ಚು ವಾಸ್ತವಿಕ ದೃಷ್ಟಿಕೋನದಿಂದ ಸಂಸಾರದ ಸಂಗತಿಗಳನ್ನು ವಿಮರ್ಶಿಸಿದ್ದಾರೆ. ಬಾಳು ಸುಖದ ಸುಪ್ಪತ್ತಿಗೆಯಲ್ಲ. ಬಾಳ ಪಥದಲ್ಲಿ ಕಲ್ಲು ಮುಳ್ಳುಗಳೂ ಇರುತ್ತವೆ. ಆದರೆ ಬಾಳ ಪಯಣದಲ್ಲಿ ಸತಿ-ಪತಿಗಳು ಒಂದಾದರೆ ಬಾಳು ಸುಮಧುರವಾಗುತ್ತದೆಂದು ದಂಪತಿಗಳ ಬಾಯಿಂದ ಬರುವ ಮಾತು. ಗಂಡ ಹೆಂಡಿರು ಒಂದು ವೇಳೆ ಕಚ್ಚಾಡಿದರೂ ಉಂಡು ಮಲಗುವತನಕ ಅಷ್ಟೇ ಎಂದು ಜನಪದ ಅನುಭವಿಗಳು ಹೇಳಿದ ಮಾತೂ ನಿಜವೆನ್ನಿ! ವೇಮನರು ವಿವಾಹಿತರಲ್ಲವೇನೋ ನಿಜ; ವೇಶ್ಯೆಯ ಸಂಪರ್ಕದಿಂದಾಗಿ ಕಾಮದ ಬಗೆಗೆ ೩೬೭ ಪದಗಳಲ್ಲಿ ಹೇಳಿಕೊಂಡಿದ್ದುದನ್ನು ವಿಶ್ವಗೀತೆಯಲ್ಲಿ ಕಂಡು ಬಂದಿದೆ. ಇಪ್ಪತ್ತರ ಏರುಜವ್ವನದಲ್ಲಿರುವ ಪೂರ್ವದಲ್ಲಿ ಇವ್ವಟೂರಿನ ಸೋಮಶೇಖರ ಗುರುಗಳಲ್ಲಿ ವಿದ್ಯಾಭ್ಯಾಸ ಪೂರೈಸಿಕೊಂಡದ್ದು ಅಷ್ಟಕಷ್ಟೇ! ಶಾಲೆಯ ಓದಿನಲ್ಲಿ ನಿರಾಸಕ್ತಿ, ಪ್ರಕೃತಿ ಸೌಂದರ್ಯ ಸವಿಯುತ್ತ, ಹೊಳೆ-ಹಳ್ಳಗಳ ಹರಿತ, ಪಶು-ಪಕ್ಷಿಗಳ ಓಡಾಟ-ಹಾರಾಟಗಳಲ್ಲಿ ಮನಸ್ಸನ್ನು ಮಗ್ನವಾಗಿಸಿದ್ದರು. ಗುರುಗಳೂ ಇವನ ಅಂತರಂಗವನ್ನು ಅರಿತವರಾಗಿದ್ದರು. ಮುಂದೊಂದು ದಿನ ಈತ ಶ್ರೇಷ್ಠ ಕವಿಯೂ, ಸಂತನೂ ಆಗುತ್ತಾನೆಂದು ಹೇಳುತ್ತಲಿದ್ದರು.

ತನ್ನ ಕುಟುಂಬ ಏಳು-ಬೀಳು, ಯಾದವೀ ಕಲಹಗಳನ್ನು ಮತ್ತು ಅಧಿಕಾರ ದಾಹದಿಂದ ಪರಸ್ಪರ ಕತ್ತು ಹಿಸುಕುವುದನ್ನು ಕಣ್ಣಾರೆ ಕಂಡು, ಕಿವಿಯಾರೆ ಕೇಳಿ,

ಅವನ ಮನಸ್ಸು ವಿಹ್ವಲಗೊಂಡಿತ್ತು. ಗುರು ಸೋಮಶೇಖರರ ಮಾರ್ಗದರ್ಶನದಂತೆ ದಾರ್ಶನಿಕ ಕವಿಯಾಗಿಯೇ ಹೊರಹೊಮ್ಮಿದ್ದು ನಿಚ್ಚಳವಾಗುವ ಲಕ್ಷಣಗಳು ವೇಮನನಲ್ಲಿ ಕಂಡುಬಂದವು. ವೇಮನ ಗುರುಕುಲ ವಾಸದಿಂದ ಬೇಗ ಮರಳಬೇಕಾಯಿತು. ಏಕೆಂದರೆ, ರಾಜಕೀಯ ಸ್ಥಿತ್ಯಂತರಗಳು, ಅವನ ಮೇಲೆ ತೀರ ಪರಿಣಾಮ ಬೀರಿದ್ದವು. ಯುದ್ಧಗಳು ಸಾಗಿ, ರಾಜ್ಯ ವಿಸ್ತಾರದ ದಾಹದಿಂದ ಅಮಾನುಷ ಕೃತ್ಯಗಳು, ಸಂಚು–ಹೊಂಚು–ವಿಶ್ವಾಸ ದ್ರೋಹಗಳು ಅವ್ಯಾಹತವಾಗಿ ನಡೆದು ಈತನ ಮನಸ್ಸಿನ ಮೇಲೆ ಆಘಾತವನ್ನುಂಟು ಮಾಡಿದ್ದವು. ಮೇಲಾಗಿ ತಂದೆಯು ತನ್ನ ಪ್ರೇಯಸಿಯ ಜೊತೆಗೆ ನೃತ್ಯ ಸಂಗೀತಗಳಲ್ಲಿ ಲೋಲುಪ್ತನಾಗಿ, ತನ್ನ ಹಿಂದಿನ ರಾಜಭೋಗದಲ್ಲಿ ಮೆರೆದಿದ್ದುದನ್ನು ಕಂಡಿದ್ದನು. ತಂದೆಯ ಪ್ರೇಯಸಿ ಲಕುಮಾದೇವಿಯ ಮನೆಯ ಪರಿಸರದಲ್ಲಿ; ದೇವದಾಸಿ ಕನ್ಯೆಯರ ದೇಹದಲ್ಲಿ ವೇಮನ ಸಿಲುಕಿಕೊಂಡ ಸ್ಫುರದ್ರೂಪಿ ದೇಹ ಸುಂದರ ಮುಖ, ಕಾವ್ಯ ರಚನೆಯ ಸೂಕ್ಷ್ಮ ದೃಷ್ಟಿ ಇವು ವೇಮನರನ್ನು ಭಾವುಕರನ್ನಾಗಿ ಮಾಡಿದವು. ತಂದೆಯಂತೆ ವೇಶ್ಯಾವಾಟಿಕೆಯಲ್ಲಿ ಬೆಳೆದನೆಂಬುದು ತಿಳಿದು ಬಂದ ಸಂಗತಿ. ಚಿತ್ತರಂಜನಿ ಎಂಬ ಓರ್ವ ಸುಂದರ ದೇವದಾಸಿ ಕನ್ಯೆಯ ಬಂಧನದಲ್ಲೂ ಸಿಲುಕಿದ ವೇಮನರು ಕಾಮನ ಹಬ್ಬದಿಂದ ಬಿಡುಗಡೆ ಹೊಂದುವುದು ಕಠಿಣವೇ ಆಯಿತು. ಆದರೆ, ವೇಮನರ ಅತ್ತಿಗೆ ಮಲ್ಲಮ್ಮನವರ ಹಿತೋಕ್ತಿಯಿಂದ ಪರಿವರ್ತನೆ ಹೊಂದಿದ ಎಂಬುದನ್ನು ಚರಿತ್ರೆಯಲ್ಲಿ ಹೇಳಲಾಗಿದೆ. ಕಾಮದಾಹಕ್ಕಾಗಿ ಅತ್ತಿಗೆಯ ನತ್ತು ಬೇಡಿಕೆಯಿಟ್ಟ ಆ ವೇಶ್ಯೆಯ ಆಸೆ ಈಡೇರಿತಾದರೂ ಆ ಪರೀಕ್ಷೆಯಲ್ಲಿ ವೇಮನರು ಕಾಮಭೋಗಿಯಾಗದೇ ತ್ಯಾಗಯೋಗಿಯಾದ. ಈತನದಲ್ಲಿದ್ದ ಭೌತಿಕ ಆಕರ್ಷಣೆಯು ಹಿಂಗಿ ಹೋಯಿತು. ಇನ್ನು ಅದರಾಚೆಯ ಮನಸಿನ ಹೂರಣವು ಹೊರಬಿದ್ದಿತು. ಅತ್ತಿಗೆಯ ಮನಸ್ಸಿನ ವಾತ್ಸಲ್ಯಪೂರ್ಣ ಕಲ್ಯಾಣ ಚಿಂತನೆಯ ಆಳ ಹಾಗೂ ವ್ಯಾಪ್ತಿಗಳು, ಮೈ ಮಾರಿಕೊಂಡು ಹಣ ದೋಚುವ ದೇವದಾಸಿಯ ಕ್ಷಣಿಕ ಭೋಗದಾಸೆಯ ಜಾಲದ ಹಿನ್ನೆಲೆಯಲ್ಲಿ ಪ್ರಕಾಶಿಸಿದವು. ಈ ಪ್ರಕಾಶದೆದುರು, ಕಾಮ ಚೋದಿತ ಮೋಹಾಂಧಕಾರವು ತೊಲಗಿತು. ಸ್ಥಿತಿಯು ಶೂನ್ಯಾವಸ್ಥೆ ತಲುಪಿತು. ಈ ಅವಧಿಯಲ್ಲಿ ಅನುಭವಿಸಿದ ಮೋಹದ ಕಾಮದ ರಸ ನಿಮಿಷಗಳನ್ನು ತಮ್ಮ ಪದಗಳಲ್ಲಿ ಕಾಮ ವರ್ಗದಲ್ಲಿ ಹೇಳಿರುವರು.

ಕಾಮವು ಮಾನವನಲ್ಲಿರುವ ಹುಟ್ಟು ಗುಣ. ಅದರ ವ್ಯಾಪಾರ ವಹಿವಾಟದ ವಸ್ತು ಸ್ಥಿತಿಯನ್ನು ಅವರ ಪದಗಳಲ್ಲೇ ನೋಡೋಣ! ಯೌವನದಲ್ಲಿ ಎಲ್ಲವೂ ಅಂದ ಚಂದವಾಗುತ್ತದೆ. ಏಕೆಂದರೆ ಆಗ ಒಳಿತು ಕೆಡುಕಿನ ಅರಿವೇ ಇರಲಾರದು. ಸಂಸಾರಿಯು ಮಾಡಿಕೊಂಡ ಹೆಂಡತಿಯೊಡನೆ ಕೂಡಿಕೊಂಡು ಬಾಳುವೆ ಮಾಡಬೇಕು. ಅವಳನ್ನು ತೊರೆದರೆ ಕಾಮನ ಬಿಲ್ಲು ನಾಚಿ, ಕಾಮಾಸಕ್ತಿ ಹೆಚ್ಚಿ,



ಭೂಗಗನ ಮಧ್ಯೆ ಮಿಡುಕಬೇಕಾಗುತ್ತದೆ. ಹೆಂಡತಿ ಸಾನುಕೂಲಳಾಗಿದ್ದರೆ ಒಳಿತು. ಅವಳೊಂದು ವೇಳೆ ಮಾತು ಕೇಳದವಳಾಗಿದ್ದರೆ ಹೆಡೆ ತೆರೆದ ಸರ್ಪದಂತೆ ಇರುವಷ್ಟು ದಿನ ಚೆನ್ನಾಗಿರಬೇಕು. ಸಂಸಾರ ಕಲಹದಲ್ಲಿ ಹೀಗೆ ಹೇಳಿದ್ದಾರೆ –

ಮಾತು ಕೇಳದ ಸತಿ, ಮನೆಯವರಿಗೆ ಮೃತ್ಯು
ಹೆಡೆಯ ತೆರೆದ ಸರ್ಪ ಬಡಿದ ಗ್ರಹವು
ತನಗೆ ಆಗದವಳು, ದಾನವರಾಕೆಯ್ಯೆ ॥ವಿಶ್ವ॥

ನಾರಿನಾಥನ ಮಾತಿಗಡ್ಡ ನುಡಿಯುತಿರೆ
ಭಾರ್ಯೆಯಲ್ಲ; ಬರೆದ ಹಣೆಯ ಬರಹ!
ಮಡದಿ ಸಂಗಕಿಂತ ಅಡವಿ ವಾಸಲೇಸು ॥ವಿಶ್ವ॥

ಕೂಲಿ ಕುಂಬಳಿ ಮಾಡಿ ಗುಲಾಮಾಗಿ ದುಡಿದು
ಮಡದಿಗೀಯೆ ಗಳಿಕೆ ಮೆಚ್ಚುತಿಹಳು,
ಅಲ್ಪದಂಥ ಪತಿಗೆ ಸಲ್ಲುತಿಹುದು ನಿಂದೆ ॥ವಿಶ್ವ॥
ರೂಪುಗೇಡಿ ವನಿತೆ ರೂಢಿಯ ಪತಿವ್ರತೆ
ಸೊಬಗು ಇಲ್ಲದವನು ಸಮರ ಬಂಟ
ತಿಳಿಯಬಹುದು ಎಂತು ದೇವರ ಬಂಟರನು ॥ವಿಶ್ವ॥

ತ್ವಚೆಯು ದೇಹದಿಂದ ತೊಲಗದಿರುವ ತನಕ
ಗಂಡ ಹೆಂಡಿರೊಲುಮೆ ಕುದುರುತಿಹುದು
ಘಟವ ಬಿಡಲು ಜೀವಿ, ಗಂಟು ಬಿಚ್ಚುತಿಹುದು ॥ವಿಶ್ವ॥

ವ್ಯಥೆಯು ತೀರಿದವನು, ವೇದಾಂತ ವೇದ್ಯನು
ರತಿಯನಾಳುವವನು ರಾವಣನೆನಿಪ,
ಸತಿಯನಾಳುವವನು ಸಂಸಾರಯೋಗಿಯು ॥ವಿಶ್ವ॥

ಮೇಲೆ ಹೇಳಿದಂತೆ ಸತಿ–ಪತಿಯ ಸಂಬಂಧ ಒಳ್ಳೆಯದಾದರೆ ಸುಮಧುರ ಮತ್ತು ಬಾಳು ಹೂವಿನ ಹಾರದಂತಾಗುತ್ತದೆ. ದೇಹವಿರುವ ತನಕ ಕಾಮನೆ ಬಿಡದು ದೇಹವಳಿದ ಮೇಲೆಯೇ ಅದರ ಅಧೋಗತಿ ಸತಿಯನಾಳುವವನು ಸಂಸಾರಯೋಗಿ ಎಂಬ ಪದವನ್ನು ಬಳಸಿರುವುದು ಗಮನಾರ್ಹವಾದುದು.

**ಕಾಮಾನುಭವದ ದಿವ್ಯಾನುಭವದ ನೋಟ :**

ಇದು ಯಾರೂ ಕಲಿಸಲಾರದ ವಿದ್ಯೆ. ವಯೋಮಾನಕ್ಕನುಗುಣವಾಗಿ ಆಕ್ರಮಿಸುವಂಥದ್ದು! ಅದರಲ್ಲೂ ವೇಮನರು ಹೇಳುತ್ತಾರೆ.

ಯೌವ್ವನದೊಳು ನೋಡೆ, ಎಷ್ಟು ಅರಿವೆ ಇಲ್ಲ
ಯೌವ್ವನವದೆಂದೂ ಎಷ್ಟೋ ಹೆಚ್ಚು
ಯೌವ್ವನದೊಳು ತನಗೆ ಎಲ್ಲ ಅಂದ ಚಂದ ॥ವಿಶ್ವ॥

ಅಂಗವೆಲ್ಲ ಸಡಲಿ ಅಂತೆ ಹಲ್ಲು ಹೋಗಿ
ತನುವು ಮುಪ್ಪಿನಿಂದ ತೀರ ಒಣಗಿ
ಮುಪ್ಪು ಅಪ್ಪಿದರೂ ಮೋಹ ಬಿಡನು ಭೋಗಿ ॥ವಿಶ್ವ॥

ಕಾಂತೆ ಮೇಲಾಸೆ, ಕನಕದ ಮೇಲಾಸೆ
ಇಲ್ಲದವನು ಜಗದಿ ಇಲ್ಲದವನು
ಹೇಳಲೇಕೆ ಸುದ್ದಿ? ಹೊಳೆಯದೆ ಕಂಡೊಡನೆ ॥ವಿಶ್ವ॥

ವಿಟನು ಹೇಸಿಕೊಂಡು ವನಿತೆ ಬಿಟ್ಟ ಬಳಿಕ
ಎಲ್ಲಿ ಇಹುದು ಲಜ್ಜೆ ಎಣಿಸಲೇಕೆ?
ಉಂಡು ಒಗೆದ ಎಲೆಯು ಕಂಡಲ್ಲಿ ಉರುಳದೆ ॥ವಿಶ್ವ॥

ಇಹಪರಗಳಲ್ಲಿ ಇನಿಯಳ ಮೇಲಾಸೆ
ಸಹಜ ವೃತ್ತಿ ಉದಿಸಿ ಸಾಯುತಿಹರು
ರಹಿತ ಅಮರ ಭಕ್ತಿ ರಾರಾಜಿಸರಲ್ಲ ॥ವಿಶ್ವ॥

ಯೌವ್ವನದಲಿ ನೋಡೆ ಅದರ ಅರಿವು ಇರದು
ಯೌವ್ವನವದು ಎಷ್ಟು, ಅಧಿಕವಹುದು!
ಯೌವ್ವನ ತನಗೆ ಸಿಗದೆ ಮುಳುಗಿಸುತ್ತಿರುವುದು ॥ವಿಶ್ವ॥

ಸ್ತ್ರೀ ಮೋಹಕೆ ಭಾರಿ ಧನವ ಸುರಿವ ಜನರು
ಪುರುಷ ಮೇಳಕಿನಿತು ಕೈ ನೀಡರು.
ಹುಣ್ಣ ಬಯಸುವ ನೊಣ ಹೂವಿಗೆ ಹಾರುವುದೆ? ॥ವಿಶ್ವ॥

ಎಂಥವನಿಗಾದರೂ ಅಂಟುತಿಹುದು ಮೋಹ,
ಹುಟ್ಟಿದೆಲ್ಲ ಮೋಹ, ಹೂಳಿ, ತುಳಿದು
ಗಟ್ಟಿಯಾಗಿ ನೋಡೆ, ಗುರುತಿಸುವ ಬ್ರಹ್ಮ ॥ವಿಶ್ವ॥

ಕಾಮುಕರಾದವರು ಧನಕಾಂಕ್ಷಿ ಹೊಂದಿದವರು, ಹೆಚ್ಚಾಗಿಪ್ಪರ
ಪಾಮರರಾದವರು, ಭುವಿ ಪಾಲನೆಗೆಯ್ಯದವರು ಮೂರ್ಖರ್ರೈ
ಗೆಯ್ಯುರವರು ಮತ್ತೆ ಮುಕ್ತಿ ಕಾಣುವದೆಷ್ಟು ಭಂಗಿಯೊಳ್
ವೇಮನ ವಾಕ್ಯ ಒಂದನಾಲಿಸೆ ದೋಷದ ದಾರಿ ಹಿಡಿದು ಸಾಗದೈ



ಇವು ವೇಮನರ ಸ್ವಾನುಭವದ ಮಾತುಗಳೆನಿಸುತ್ತವೆ. ಕಾಮದ ಕಣ್ಣು ದಾರಿ ತಪ್ಪಿಸುತ್ತದೆ, ಧನ ಸಂಪತ್ತು ಸೂರೆಗೆಯ್ಯಲು ಹಚ್ಚುತ್ತದೆ. ಯೌವ್ವನದಲ್ಲಿ ಬಂದ ಕಾಮಾಲೆ ಕಾಯಿಲೆ ಮುಪ್ಪಾವಸ್ಥೆಯಾದರೂ ಬಿಡಲಾರದು ಮೋಹ! ಎಂದಿದ್ದಾರೆ. ಇದು ಋಷಿ ಮುನಿಗಳನ್ನು ಬಿಟ್ಟಿಲ್ಲ ಇನ್ನು ಸಂಸಾರಸ್ಥರ ಪಾಡೇನು? ಎನ್ನುವಂಥದು. ಮೋಹದ ರೋಗ! ಆದುದರಿಂದ ಕಾಮತೃಷೆ ತ್ಯಜಿಸಿ ಮುಕ್ತಿ ಮಾರ್ಗ ಹಿಡಿಯಿರೆಂದು ಕೊನೆಯ ಪದ್ಯದಲ್ಲಿ ಹೇಳಿದ್ದಿದೆ.

**ಜಾರೆಯರು-ಜಾರೆ ಪುರುಷರು :**

ಸಂಗದ ಫಲದಿಂದ ಇಂಥ ಸಂಗತಿಗಳು ಬರುವವು. ತಂದೆ-ತಾಯಿಗಳ ಹಿತೋಕ್ತಿ ಪ್ರಮುಖವಾಗುತ್ತದೆ. ತಂದೆಯ (ಕುಮಾರಗಿರಿ ರೆಡ್ಡಿ) ಸಂಗ ಸಹವಾಸವೇ ವೇಮನರು ಚಿತ್ತರಂಜನಿಯ ವಶವಾದುದು. ಅನಂತರದಲ್ಲಿ ಸಂಪೂರ್ಣ ತ್ಯಜಿಸಿ ಮಹಾಯೋಗಿಯಾಗಿ ಮಹಾಪುರುಷರಾದರಲ್ಲದೇ ಪೂಜನೀಯರಾದರು, ಜಾರೆಯರು ಪರ ಪುರುಷನಿಂ ಸೆಳೆಯುವ ಕನ್ನೋಟವಷ್ಟೇ ಧನ-ಕನಕ- ಮುಂತಾದ ಅಂದ ಚಂದದ ವಸ್ತುವಡವೆಗೆ ವ್ಯಾಮೋಹಿತಳಾಗುವವು. ಕಾಸಿದ್ದರೆ ಕೈಲಾಸವೆನ್ನುವಂತಹ ಗುಣ.

ಪರಪುರುಷರ ಮೇಲೆ ಪ್ರಾಣವನ್ನು ನಿಲಿಸಿ
ಪತಿಯ ಸೇವಿಸುವಳು ಮರುಳುಗೊಳಿಸಿ
ಅಂಥ ರೀತಿ, ಯೋಗಿ ಆತ್ಮಭಾವಿಸುವನು ॥ವಿಶ್ವ॥

ಹಿತ್ತಲಗಿಡ ನೆಟ್ಟು, ಪರಿಕಿಸುತಿದ್ದೊಡೆ
ಬೇಲಿದಾಟಿ ಬಳ್ಳಿ ಬಯಲು ಹೊಕ್ಕಿತು
ಅಂಗನೆಯರ ಗುಣವು ಅಂತೆ ಆಗುತಿಹುದು ॥ವಿಶ್ವ॥

ಜನಾನಾದದೊಳಿರುವ ಸ್ತ್ರೀಯರು ಬೀದಿಯತ್ತ
ಕಣ್ಣೋಡಿಸೆ ಹೊಲ್ಲ, ಕಾಣು ಬಳಿಕ
ಮಾಡುತಿರಲು ಅಂತೆ, ಕೇಡು ಘಟಸದೇನು? ॥ವಿಶ್ವ॥

ಹೆಣ್ಣು ಗುಂಗು ಇರಲು ಪ್ರಿಯರು ಗುಂಗಿನವರು
ಸರಸ ವಿಟರನೇಕೆ ಸಮ್ಮತಿಪಳು
ಸಗಣಿ ತಿನುವ ಹುಳಕೆ ಸೇರದು ಬೆಲ್ಲದ ರುಚಿ ॥ವಿಶ್ವ॥

ಮುದ್ದು ಯುವತಿಗೇಕೆ ಮುದುಕ ಗಂಡ? ಮನದಿ
ವಶಕ್ಕೆ ಬರಳು, ವಿಟನ ಬಲೆಗೆ ಸಿಕ್ಕು
ಹುಚ್ಚು ಮೂಢ ಜನಕೆ ಹೆಚ್ಚು ಶಾಸ್ತ್ರವೇಕೆ ॥ವಿಶ್ವ॥

ಮದನನಂಥ ಪತಿ, ಮುದದ ಬಾಳಿರಲೇನು
ನೀತಿಗೇಡಿ ಜಾತಿಗುಣ, ತೊರೆವಳೆ?
ಹಾಲು ಕುಡಿವ ನಾಯಿ, ಹೊಲಸಿಗೆ ಹೋಗದೇ? ॥ವಿಶ್ವ॥

ಪುರುಷನರಿಯೆ ಮರಣ, ಅರಸನರಿಯೆ ಕಠಿಣ;
ಸಕಲ ನಿಂದೆಗಳಿಗೆ ಒಂದೆ ನೆಲೆಯು
ಪರ ಪುರುಷ ಗಮನವು ಪ್ರತ್ಯಕ್ಷ ನರಕವು ॥ವಿಶ್ವ॥

ಎಷ್ಟು ಗೈದೊಡೇನು? ಹುಟ್ಟು ಗುಣವಳಿಯದು
ನೀಟ ಮಾಡಬಹುದೇ ನಾಯಿಬಾಲ?
ಕೆಟ್ಟ ನಾರಿ ಪತಿಗೆ ಮಾರುವ ಬುಟ್ಟಿ ಗತಿ ॥ವಿಶ್ವ॥

ಚಿಲಿಪಿಲಿ ಮಾತಾಡುವಂಥ
ಕುಲಟೆಯನು ನಂಬಲುಬೇಡ; ಡಾಂಭಿಕಳಪ್ಪಳ್
ತಿಳಿವಿಲಿ ಅವಮಾನಿಸುವಳು
ತೊಲಗುವುದು ಮೊದಲ ಪ್ರೀತಿಯು, ತೋರದೆ ವೇಮಾ॥

ಸಹಜ ಗುಣವು ಬಿಡದು, ಜಾರಿಣಿಗೆ ಸತತವು
ತನಯ, ಪತಿಯ ಬಿಟ್ಟು, ತಪ್ಪಿ ದಾರಿ
ಗೃಹವ ಬಿಡುತ ಸಕಲ ತಳಮಳಗೊಳಿಸುವರು ॥ವಿಶ್ವ॥

ನಾರಿಯಂದ ಕಂಡು, ಮರುಳನಾಗಬೇಡ
ನಾರಿಗೆಂದೆಂದೂ ಒಳಿತು ಗುಣವು;
ಜಾರೆಗೇನು ರೂಪು ತಾನು ಇರದಿಹುದೆ? ॥ವಿಶ್ವ॥

ಹೆಣ್ಣು ಧರ್ಮನಡೆಯಲ್ಲಿ ಜಾರಿ ಎಡವಬಹುದಾದ, ಹಾದಿ ತಪ್ಪಿ, ತಪ್ಪು ಹಾದಿ ಹಿಡಿಯಬಹುದಾದ ಪ್ರಸಂಗಗಳನೇಕ, ದುಡಿದು ಪೋಷಿಷಲಾಗದ ಪುರುಷನ ಹೊಣೆಗೇಡಿತನದಿಂದಾಗಲಿ, ಇಲ್ಲವೆ ತನ್ನ ಅಂಕೆಗೆ ಮೀರಿದ ಹೊಲಸು ದಾಟಿದ ಒತ್ತಡದಿಂದಾಗಲಿ, ಅಥವಾ ಸ್ವಂತ ಮಾನಸ ಚಂಚಲದಿಂದಾಗಲಿ, ಚಪಲಗುಣದಿಂದಾಗಲಿ, ಹೊಸ್ತಿಲು ದಾಟಿದ ವಿವಾಹಿತ ಹೆಣ್ಣಿನ ಹಲವು ಮುಖಗಳನ್ನು ವೇಮನಯೋಗಿಗಳು ಹಲವು ಈ ಮೇಲಿನ ಪದ್ಯಗಳ ಮೂಲಕ ತಿಳಿಯಲು ಸಾಧ್ಯವಾಯಿತು. ಜಾರ ಹೆಣ್ಣು ತನ್ನ ಮಾರ್ದವತೆಯ ಮಾತುಗಳಿಂದ ತನ್ನ ಪತಿಯನ್ನು ಮರುಳಗೊಳಿಸಿ ಸಟೆಯ ನಟನೆಗೈಯ್ಯುತ್ತ ಪರಪುರುಷನ ಮೇಲಿರಿಸಿ ಬರಸೆಳೆಯುತ್ತಾಳೆ. ಅದೇ ಯೋಗಿಯು, ಆತ್ಮವನ್ನೇ ತನ್ನ ಗಂಡನನ್ನಾಗಿ ಭಾವಿಸಬೇಕಿತ್ತು. ಆದರೆ ಸಂಸಾರವೆಂಬ ಜಾರೆಯಲ್ಲಿ ನಿರತನಾಗಿ ಕೆಡುತ್ತಾನೆಂದಿದ್ದಾರೆ.



ಜಾರಿಣಿಯು ಎಂದೂ ಜಗಳವಾಡುವುದಿಲ್ಲ. ಚಂಚಲ ಸ್ವಭಾವದವಳಾದ ಆಕೆ ಹಿತ್ತಲದಲ್ಲಿ ಬೇಲಿಗುಂಟ ಬಳ್ಳಿ ಬೆಳೆಸಿದರೆ, ಅದು ಬೀದಿಯತ್ತ ಕುಡಿ ಬಿಡುತ್ತದೆ. ಅದೇ ರೀತಿ ಜಾರ ಸ್ತ್ರೀ ತನ್ನ ಮರ್ಯಾದೆಯ ಹದ್ದು ಮೀರಿ ಬೀದಿ ಕಾಮಣ್ಣಗಳತ್ತ ನೋಟ ಬೀರುತ್ತಾಳೆ. ಇದು ಆಕೆಯ ಸಹಜ ಗುಣ. ವಿಟನ ಆಗಮನ, ಆತನ ಧನದ ಕಡೆಗೆ ಮೋಹ. ಮೋಹಕ ಯುವತಿಯು ವಿಟನ ಮೋಹ ಪಾಶದಲ್ಲಿ ಸಿಲುಕುತ್ತಾಳೆ. ಅವಳಿಗೆ ಮುದುಕ ಗಂಡನಿಂದೇನಾಗಬೇಕು.? ಅದೇ ರೀತಿ ? ಭೋಗದಾಸೆಗೆ ಬಲಿಯಾದ ಮೂಢರಿಗೆ ಹೆಚ್ಚಿನ ಶಾಸ್ತ್ರಗಳೇಕೆ ಬೇಕು? ಏನೇ ಆಗಲಿ ಪರಪುರುಷ ಗಮನವು ಪ್ರತ್ಯಕ್ಷ ನರಕವಿದ್ದಂತೆ. ಗಂಡನಿಗೆ ಗೊತ್ತಾದರಂತೂ ಮರಣವೇ ಗತಿ. ಆಕೆ ನಿಂದೆಗಳಿಗೂ ಆಲಯನಾಗುತ್ತಾಳೆ. ಆಕಾಶವನ್ನು ಹಿಡಿಯಬಹುದು, ಆನೆಯನ್ನು ಮಣಿಸಬಹುದು, ಆದರೆ ವ್ಯಭಿಚಾರಿ ಜಾರೆಯ ನಿಗ್ರಹವು ತುಂಬಾ ಕಷ್ಟಕರ. ನಾರಿಯ ರೂಪ ಕಂಡು ಮರುಳಾಗಬಾರದು. ನಾರಿಗೆ ಗುಣವೇ ಮುಖ್ಯ. ಜಾರಿಗೇನು ರೂಪುವಿರುವುದಿಲ್ಲವೇ? ನಾರಿಗೆ ಬರೆಯ ಗುಣವಾಗಿದೆ ಎಂದು ಬಣ್ಣಿಸಿದ್ದಾರೆ ವೇಮನರು.

ಜಾರ ಪುರುಷರು : ಇಂತಹ ಅಂದಚಂದದ ರೂಪುಳ್ಳ ಜಾರೆಗೆ ಬಲಿ ಬೀಳದವರಾರು? ವೇಮನರು ಹೇಳುತ್ತಾರೆ.

ಭಾರ್ಯೆ ರಂಭೆಯಿರಲು, ಸುಶೀಲವತಿಯಿರಲು
ಜಾರ ಪುರುಷನೆಂತು ಜಾಡು ಬಿಡುವ?
ಹೊಲಗೇರಿಯ ನಾಯಿ ತಿರುಗುತಿರುವ ರೀತಿ ॥ವಿಶ್ವ॥

ಅಂಗ ಭಾವವೆಲ್ಲ ಅರಿತು ನೋಡಲಾಗ
ಅಖಿಲ ಹೇಯಗಳಿಗೆ ಆಲಯವದು
ಅನ್ಯ ಲಲನೆ ಸಂಗ ಅದು ಪ್ರತ್ಯಕ್ಷ ನರಕ ॥ವಿಶ್ವ॥

ಪರನಾರಿಯ ಸಂಗ ಕೋರಿ ಹಾರೈಸಲು
ಬರಿದೆ, ಕೋಟಿ ಪೂಜೆ ಸರಿಯುತಿಹುದು
ಉರಿಯ ತಾಪದಿಂದ ಬೆಣ್ಣೆ ರೂಪುಗೆಡದೆ? ॥ವಿಶ್ವ॥

ಮನೆಯ ಮಡದಿ ಬಿಟ್ಟು ಜಾರಕಾಂತೆಯೊಡನೆ
ಬೆನ್ನು ಹತ್ತಿ ತಿರುಗುತ್ತಿಪ್ಪ ಹುಚ್ಚ
ತೆನೆಯ ಪೈರು ಬಿಟ್ಟು, ಕರಿಕೆ ಕೀಳುವಂತೆ ॥ವಿಶ್ವ॥

ಪರನಾರಿ ಪ್ರೀತಿಯು; ಸ್ಫುರಿಸದು
ಮತ್ತೆ ಸ್ಫುರಿಸಲು ಕಡೆಗಾಣಿಸದೈ
ನರರನಿಬರು ನಡು–ಕೆಡುವರು
ಬರಿ ಮೋಹ ಮೊಳೆವುದು–ಮೊಳೆಯೆ ಬೆಳೆಯದು ವೇಮಾ॥ವಿಶ್ವ॥

ತಾತ್ಪರ್ಯವಿಷ್ವೇ ಪರನಾರಿಯ ಸಂಗವನ್ನು ಕೋರಿ ಹಾರೈಸಿದರೆ, ಮಾಡಿದ ಪುಣ್ಯವೆಲ್ಲ ಹಾಳಾಗುತ್ತದೆ. ಬೆಂಕಿಯು ಬಳಿಗಿಟ್ಟರೆ ಬೆಣ್ಣೆಯು ಕರಗಿ ರೂಪುಗೆಡುವುದಿಲ್ಲವೆ? ಜಾರ ಪುರುಷನು ಜೇನು ನೊಣವು –ಜೇನಿಗಾಗಿ ಆಸಿಸಿ ಅದರಲ್ಲಿಯೇ ಬಿದ್ದು ಸತ್ತಂತೆ.

ಪ್ರಕೃತಿ ಪುರುಷರ ಕ್ರೀಡೆಯೇ ಜೀವನ. ಪುರುಷನನ್ನು ಪ್ರಕೃತಿಯು ತನ್ನ ತ್ರಿಗುಣಗಳ ಬಂಧದಿಂದ ಗೋಳಾಡಿಸುತ್ತಾಳೆ. ಪುರುಷನಿಗೆ ಪ್ರಕೃತಿಯು ಅಧೀನವಾಗುವವರೆಗೆ ಪುರುಷನಿಗೆ ಪೇಚಾಟಗಳಿಲ್ಲ. ಯಾವಾಗ ಪ್ರಕೃತಿಯು ಪುರುಷನನ್ನು ಲೆಕ್ಕಿಸದೆ, ಪ್ರಕೃತಿಯ ತ್ರಿಗುಣಗಳ ಆಟಕ್ಕೆ ಕೇಡು ಮಾಡುವಳೋ ಆಗ ಅವಳ ಅಭಿಚಾರ ವ್ಯಭಿಚಾರ, ರಂಡೆತನ ರಂಭಾಟ ಪಡೆಯುತ್ತದೆ. ಪ್ರಕೃತಿಯಲ್ಲಿ ರಮಣನಾದ ಪುರುಷನು ಅವಳ ರಂಡೆತನವನ್ನು ಅರಿತೊಡನೆ, ಅವನು ಪರಮ ತತ್ತ್ವವನ್ನು ತಲುಪುತ್ತಾನೆ, ಗುಣಾತೀತನಾಗುತ್ತಾನೆ. ಇಂಥವರ ಸಂಗದಿಂದ ದೂರವಿರಲು ವೇಮನರು ತಮ್ಮ ಅನೇಕ ಪದ್ಯಗಳ ಮೂಲಕ ಜನತೆಗೆ ಕರೆ ಕೊಟ್ಟಿದ್ದಾರೆ. ಇಂಥ ಅಡ್ಡದಾರಿ ಪರನಾರಿಗೂ ಪರಪುರುಷನಿಗೂ ಸರಿಯಾದುದಲ್ಲ. ಏಕಪತ್ನಿ ಏಕ–ಪತಿ ವ್ರತವೇ ಬದುಕನ್ನು ಪಾರುಗಾಣಿಸುವುದು. ಪಾರುಗಾಣಿಸುವುದೆಂದರೆ ಪರಮಾತ್ಮ ಮೆಚ್ಚುವುದು ಎಂದರ್ಥ. ಪರಮನೆಡೆಗೆ ಹೋಗುವ ಹಾದಿಯೇ ಮಾನವನಿಗಿರುವ ಅತಿ ಗುಣಮೌಲ್ಯ! ಇದುವೇ ದಾಂಪತ್ಯ ಜೀವನದ ಮೌಲ್ಯ॥ ಎಂದು ಪ್ರತಿಪಾದಿಸಿದ್ದಾರೆ ವೇಮನರು.

**ಸಾಧನೆ ಮತ್ತು ಕಾಮ :**

ಒಳ್ಳೆಯ ಕಾಮನೆಗಳು ಆದರ್ಶ ಮಾನವನನ್ನಾಗಿ ರೂಪಿಸುತ್ತದೆ. ತನ್ನ ಸತಿಯ ಹೊರತು ಅನ್ಯರನ್ನು ತಾಯಿಯಂತೆ, ಸಹೋದರಿಯರಂತೆ ಕಂಡು ಜೀವನ ಪಥದಲ್ಲಿ ಸನ್ನಡತೆಯಿಂದ ಸಾಗಬೇಕು. ನೀತಿಯೇ ಮೋಕ್ಷಕ್ಕೆ ಅಥವಾ ಪಾರಮಾರ್ಥ ಸಾಧನೆಗೆ ನಾಂದಿ. ವೇಮನರು ಇದರಲ್ಲಿ ಹೇಳಿದ್ದು ಹೀಗಿದೆ–

ಕಾಮಿಯಾದ ನರನು ಘನನು ಆಗನೇನು?
ಕಾಮಿಯಲ್ತೆ ಕೃಷ್ಣ ಸ್ವಾಮಿ ಮುನ್ನ;
ಕಾಯಿಯಿರದ ಜನರು ಗಣಪತಿಯಾಗನೇಕೆ? ॥ವಿಶ್ವ॥



ಇಂದ್ರನಾದ ಕಾಮಿ ಹೀನನಾಗಿ ಹೋದ?
ಮಾರನಾದ ಕಾಮಿ ಮೈಯ ಮರೆತ
ಬ್ರಹ್ಮನಾದ ಕಾಮಿ : ಬಹಳ ಲಜ್ಜೆಗೆಟ್ಟ ॥ವಿಶ್ವ॥

ಈಶ್ವರನಿಗೆ ಇದುವೆ ಇನಿತಾದರೂ ದೋಷ
ಬ್ರಹ್ಮನಿಗೊದಗಿದ ಪಾಡು ಮೋಹ,
ವಿಷ್ಣುದೇವನಿಗಿದುವೆ ವಿಪರೀತದ ದೋಷ ॥ವಿಶ್ವ॥

ಮತದ ದಾರಿ ಮರೆತು, ಮಧುರ ಅಧರಕೋರಿ
ಬಹಳ ನೀತಿಗೆಟ್ಟು ಬಿಂಕ ಬಿಡನು
ಯುವತಿ ಕಂಡು ಪರಮಯೋಗವನೆ ಮರೆವರು ॥ವಿಶ್ವ॥

ನಾರಿರೂಪ ಕಂಡು ಸಿರಿಯ ಸೊಬಗ ಸವಿದು
ಸಾರವಿಪ್ಪ ರಸದ ಮಹಿಮೆ ಕೇಳೆ,
ಆರ್ಯನಾದರೇನು, ಆಸೆ ಉದಿಸದಿಹುದೆ? ॥ವಿಶ್ವ॥

ನಾರಿ ಪಾಪ ಜಾತಿ ನಿಖಿಲ ವಸ್ತುಗಿಂತ
ಆಸೆಯಿಂದ ಯತಿಯು ಮೋಸಗೊಳಿಸೆ?
ನೋಡಿ ಬಿಡುವ ಅವರು, ನೋಡು ಶುದ್ಧಾತ್ಮರು ॥ವಿಶ್ವ॥

ಪುರುಷ ಚಿನ್ಹೆ ನೋಡಿ ಹುಟ್ಟಿತು ಸ್ತ್ರೀಗೆ ಭ್ರಮೆ
ಪುರುಷನಸಹ್ಯವಾಗಿ ಹುಟ್ಟುವನಲ!
ಶಿವನು ಪುರುಷನಿರಲು ಸ್ತ್ರೀಗೆ ಸಿಕ್ಕುವನೆ? ॥ವಿಶ್ವ॥

ಸೋಮ ಸುಖಿಯರೊಡನೆ ಸುಖಿಸುವವನಿಗೆಂತು
ರಾಮ ಶಿವ ಮಂತ್ರ ಜಪವು ರುಚಿಸಬಹುದು?
ಪಾಮರತ್ವ ಅವನು ಬಿಡನು ಎಂದಿಗೂನು । ।ವಿಶ್ವ॥

ಅಧರ ಸುಧೆಯ ಕಂಡು, ಅಖಿಲವನು ಮರೆವನು,
ತರುಣಿ ರೂಪು ಕಂಡು, ತನ್ನ ಮರೆವ
ಮಾತುಗಳನಾಲಿಸಿ, ಮರೆಯುವನು ಯೋಗವ ॥ವಿಶ್ವ॥

ತ್ಯಾಜ್ಯಳೆನಿಪಳನ್ನು ತೊರೆದು ಬಿಡದ ನರನು
ಕೆಡುವತನಕ ಗುಡಿಸಲೊಳಿರಲು,
ಭಾಗವತ ಪದವಿಯ ಪಡೆಯನವನು ನೋಡು ॥ವಿಶ್ವ॥

ಎಂಥ ಯೋಗಿಯೇನು? ಎಳಸಿ ಮನ್ಮಥ ಸ್ಥಿತಿ
ಸವಿಯ ಬಲ್ಲೆನೆಂದು, ಸೃಷ್ಟಿ ಕಾಣೆ
ಯೋಗವೆಲ್ಲ ಮರೆತು ಜೋಗಿ ಪಾಡುಪಡುವ ॥ವಿಶ್ವ॥

ಬಾರು ಮಾಡಿ ಜಡೆಯ ಭಸ್ಮಾಂಗ ಲೇಪಿಸಲು
ಮದನನು ಮುದದಿಂದ ಮರುಕಳಿಸಲು
ಅರಿವೆ ಕಳಚಿ ಹೋಗಿ ಅಂಗ ಉಬ್ಬದಿಹುದೆ? ॥ವಿಶ್ವ॥

ಕಾವಿ ಬಟ್ಟೆಯುಟ್ಟು, ಘನ ಯೋಗಿಯ ರೀತಿ
ಅರೆದು ಸಂಜೆಯಾಗೆ, ಅರಿವು ಬಿಟ್ಟು
ಬೆನ್ನು ಹತ್ತಿ ತಿರುಗೆ, ಭಂಡ ಸನ್ಯಾಸಿಯು ॥ವಿಶ್ವ॥

ಕಾಮ ಮೋಹಗಳನು ಕೂಡಿ ಇರುವ ನರನು
ದೇವ ಇಷ್ಟ ಗುರುವ ತಿಳಿಯಲಾರ
ಇಷ್ಟು ಅರಿಯುವವನೆ ಇಳೆಯಲಿ ಸಜ್ಜನನು ॥ವಿಶ್ವ॥

ಹೆಣ್ಣು ನೋಡಿದೊಡನೆ, ಹೊನ್ನು ನೋಡಿದೊಡನೆ
ಚಿತ್ತದಲಿ ಚಿಂತೆ ಹತ್ತದಿರಲು
ಅವನೇ ಪರಮ ಯೋಗಿ; ಅವನಿಯಲಿ ಬಣ್ಣಿಸು ॥ವಿಶ್ವ॥

ಪಂಕಜಾಕ್ಷಿನೋಡೆ, ಪೊನ್ನಿನೊಡವೆ ನೋಡೆ
ದಿಗಿಲುಗೊಳುವ ಯೋಗಿ ನಂಬಬೇಡ.
ಮನಸು ನಿಲಿಸಿದವನೆ ಮಹಿಯೊಳಿಪ್ಪ ಯೋಗಿ ॥ವಿಶ್ವ॥

ಕಚ್ಚೆ ಮೇಲಾಸೆ, ಕನಕ ಮೇಲೆ ಆಸೆ.
ಇಲ್ಲದವನು ಜಗದಿ ಇಲ್ಲದವನು
ಇರುವಂಥವನು ಇಳೆಯಲಿ ಕಾಣನಲ್ಲ? ॥ವಿಶ್ವ॥

ಸ್ತ್ರೀಯ ವ್ರತವ ಕೆಡಿಸಿ ಶಿಷ್ಯರಿಗೂ ಶಿಷ್ಯ
ಆಗೆ ನೇಮವೆಲ್ಲ ಅಡವಿ ಪಾಲು,
ವಿಶ್ವಕರ್ಮ ಕುಲವ ಅವನು ಹೋಗುವನೇಕೆ? ॥ವಿಶ್ವ॥

ಹಾಲು, ಮೊಸರು ತುಪ್ಪ ಹೆಚ್ಚು ಉಂಡು
ಸ್ತ್ರೀಯ ಕಾಣದವನು ಶೀಲವಂತ
ಓರ್ವನಿಪ್ಪ ಅವನೇ ಉತ್ತಮ ಶಿವನಯ್ಯ ॥ವಿಶ್ವ॥



ಸ್ತ್ರೀಯರ ಸುಖ ಕೋರಿ, ಚಿತ್ತವನು ನಿಲಿಸದ
ಕಾಪುರುಷರು ಬಹಳ ಕೆಡುವ, ನಿಜವು
ಕೆರೆಕಟ್ಟೆಯ ಗಿಡಕೆ ಕಡೆತನಕ ಚಲನೆಯೆ ॥ವಿಶ್ವ॥

ಮನಸು ನಡುಗಳೆರಡಕ್ಕೂ
ಘನವಾದಿನಿತಾದರೂ ತಿಳಿಯಬೇಕು ಕಾಣಾ
ತನು ಮುಚ್ಚಿ ತೆರೆಯೆ ಕೊನೆಯಲಿ
ಘನವಾಗಿ ವಿಹರಿಸುವ ಮನ ಕಾಣರು ವೇಮಾ।

ಈ ಮೇಲ್ಕಾಣಿಸಿದ ವೇಮನಯೋಗಿವರ್ಯರ ಪದ್ಯಗಳು ಯೋಗ ಸಾಧಕರಿಗೆ ಪೂರಕ ಮತ್ತು ಆದರ್ಶವಾಗಿವೆ. ಯೋಗಿಗಳು ಹೇಗಿರಬೇಕೆಂಬುದಕ್ಕೆ ಅವು ನಿದರ್ಶನವಾಗಿವೆ. ಅವರು ತಮ್ಮ ಬಿಚ್ಚು ಮಾತುಗಳಲ್ಲಿ ಚರ್ಚಿಸುವುದರ ಮೂಲಕ ಕಾಮನಿಗ್ರಹವು ಸಾಧ್ಯವೆಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ವೇಮನರು ಈ ವಿಚಾರ ಪ್ರಣಾಲಿಯ ಹರಿಕಾರರು.

ತಮ್ಮ ಏರುಜವ್ವನದಲ್ಲಿ ಜಾರೆಯೊಬ್ಬಳ ಸಂಗದಲ್ಲಿ ಯೋಗಿವರ್ಯರು ತಮ್ಮ ಸಾಧನಾ ಆರಂಭಕ್ಕಿಂತ ಮುನ್ನ ಸಿಲುಕಿದ್ದರೆಂಬ ವಿಮರ್ಶಕರ ಮಾತು ಸತ್ಯ ಇರಬಹುದು. ಆದರೆ, ಪೂರ್ವಾಶ್ರಮದ ಸಂಸ್ಕಾರಗಳು ಸಾಧನಾ ಸಿದ್ಧಿಯ ನಂತರ ಸುಟ್ಟ ಹಗ್ಗದಂತೆ ಮಾತ್ರ ಕೃಷ್ಣನು ಗೋಪಿಕೆಯರೊಂದಿಗೆ ರತಿಕ್ರೀಡೆಯಾಡಿದ ಬಗೆಗೆ ಭಾಗವತದಲ್ಲಿ ಬಣ್ಣಿಸಲಾಗಿದೆ. ಆದರೆ, ಅವನೇ ಪಾರ್ಥಸಾರಥಿಯ ಪಾತ್ರದಲ್ಲಿ ಧರ್ಮಯುದ್ಧದ ಕೇಂದ್ರಬಿಂದುವಾಗಿ, ಉದ್ದೀಪ್ತಪುರುಷನಾಗಿ ಕಂಗೊಳಿಸುತ್ತಾನೆ. ಹೀಗೆ ಪೂರ್ವದ ಕಾಮಿಯು ಪುರುಷೋತ್ತಮನೆನಿಸಿ ಮೆರೆಯುತ್ತಾನೆ. ಇನ್ನು ಕಾಮಿಯಲ್ಲದವರೆಲ್ಲ ಗಣಪತಿಯಾಗಲಾರರು? ನಮ್ಮ ಪುರಾಣಗಳಲ್ಲಿ ಇಂದ್ರ, ಶಿವ, ಬ್ರಹ್ಮರನ್ನು ಕಾಮಿಗಳೆಂದು ಚಿತ್ರಿಸಿದ್ದುದನ್ನು ಮತ್ತು ತಮ್ಮ ಕಾಮ ಕ್ರೀಡೆಗಾಗಿ ಶಾಪಗ್ರಸ್ತರಾದುದನ್ನು ಚಿತ್ರಿಸುತ್ತದೆ.

ಹೀಗೆ ಕಾಮವು ಇಷ್ಟೊಂದು ಪ್ರಭಾವ ಬೀರಲು ಕಾರಣವೆನಿಸಬಹುದು? ಹೆಣ್ಣಿನ ರೂಪವೇ ಇದಕ್ಕೆಲ್ಲ ಕಾರಣ. ಕಾಮಿನಿಯಾದವಳ ಅಂಗಾಂಗಗಳನ್ನು ಕಂಡು ಬೆರಗು ಆಗದವರಾರು? ಕಾಮಪ್ರಚೋದಕ ಸೌಂದರ್ಯದ ಖಣಿಯೇ ಹೆಣ್ಣು ಅಲ್ಲವೇ? ಋಷಿಮುನಿಗಳು ಕೂಡ ಎಡವಿದ ದೃಷ್ಟಾಂತಗಳು ನಮ್ಮ ಕಣ್ಮುಂದಿವೆ. ವಿಶ್ವಾಮಿತ್ರ ಮೇನಕೆಯ ಕಾಮಾಸಕ್ತಿ, ಪರಾಶರಮುನಿ –ಮತ್ಸ್ಯಗಂಧಿಯರ ರತಿಕ್ರೀಡೆಗಳು ಯಾರಿಗೆ ತಿಳಿದಿಲ್ಲ? ಮತ ಧರ್ಮಗಳ ಸೂತ್ರಗಳಲ್ಲಿ ನೈಷ್ಠಿಕ ಬ್ರಹ್ಮಚರ್ಯದ ಮಾತೂ ಬರುತ್ತದೆ. ಆದರೆ, ಮಧುರ, ಅಧರ ನೋಡಿ, ಮಹಿಳೆಯ ರೂಪವನ್ನು

ನೋಡಿ ಎಲ್ಲ ಯೋಗವನ್ನು ಮರೆತು ಕಾಮಕ್ರೀಡೆಗಳಲ್ಲಿ ತೊಡಗುವವರು ಸಾಕಷ್ಟು ಜನರುಂಟು! ಹಾಗೆಯೇ ಪುರುಷ ಚಿನ್ಹೆಗಳನ್ನು ಕಂಡು ಹೆಣ್ಣು ಭ್ರಮಿತಳಾಗುವಳು, ಆದರೆ ಪುರುಷನು ಅಸಹ್ಯವಾಗಿ ಹುಟ್ಟುವನಷ್ಟೇ! ಶಿವನು ಪುರುಷನಾದರೂ ಸ್ತ್ರೀಗೆ ವಶವಾಗುವುದಿಲ್ಲ. ಆ ರೀತಿ, ಯೋಗ ಸಾಧಕನು ತನ್ನ ಆದರ್ಶವನ್ನು ಶಿವನಲ್ಲಿ ಕಾಣಬೇಕು. ಎಲ್ಲಿಯವರೆಗೆ ಮನಸ್ಸು ಸುಂದರಿಯರಲ್ಲಿ ಆಸಕ್ತವಾಗುವುದೋ ಆಗ ರಾಮನಾಮ, ಶಿವಮಂತ್ರವು ಹಿಡಿಸಲಾರದು. ಭಗವುಳ್ಳವನು ಭಗವಂತ. ಭಗ ಎಂದರೆ ಶ್ರೀ ಧೀ ಶಕ್ತಿ ಇತ್ಯಾದಿ ಷಡ್ಗುಣಗಳು ಭಗವನ್ನು ಕೋರುವವರೇ ಎಲ್ಲರೂ ಭಗ ಕೋರುವವರು ಯಾರಿಲ್ಲ? ಯಾರುಂಟು?

ಎಂಥ ಯೋಗಿಯಾಗಿರಲಿ, "ಸ್ತ್ರೀರೂಪಮೇ ರೂಪಂ" ಎಂದಂತೆ ಸ್ತ್ರೀಯ ರೂಪಾಲಂಕಾರಗಳನ್ನು ಕಂಡು ಮೋಹಗೊಳ್ಳದವರು ಯಾರಿದ್ದಾರೆ ಈ ಜಗದಲಿ? ಕಾಲು ಜಾರುವವರೇ ಇದ್ದಾರೆ. ಹಾಗೆ ಕಾಲು ಜಾರಿ ಬೀಳದ ಅಪರೂಪದ ಯೋಗಸಾಧಕನೇ ಯೋಗ ಪುರುಷನಾಗಿ ಕಂಗೊಳಿಸುತ್ತಾನೆ. ನಮ್ಮ ಮನಸ್ಸು ಸರಿಪಡಿಸಿಕೊಳ್ಳಬೇಕು. ಜಗತ್ತಿನ ಯಾವುದೇ ವಸ್ತುವನ್ನು ಸರಿಯಾಗಿ ನೋಡುವ ದೃಷ್ಟಿ ಬೆಳೆಸಿಕೊಳ್ಳಬೇಕೆಂದು ಮಹಾಯೋಗಿ ವೇಮನರು ನಮಗೆಲ್ಲ ಹಿತನುಡಿದಿದ್ದಾರೆ.

ಇವರಿಬ್ಬರೂ ಯೋಗಿಗಳು ಈ ಭಾಗದಲ್ಲಿ ಕಾಮ ತ್ಯಾಗ ಮಾಡಿ ಮೋಕ್ಷ ಸಂಪಾದನೆಯ ಕಡೆಗೆ ಮುಖ ಮಾಡಲು ಪ್ರಯತ್ನಿಸಿರಿ. ಅದು ಅಲ್ಪತೃಪ್ತಿ. ಕ್ಷಣಿಕ ಸುಖ ಮಾತ್ರ! ಶಾಶ್ವತ ಸುಖಕ್ಕಾಗಿ ಅಂದರೆ ಸತ್ಯದ ಬೆಳಕಿನೆಡೆಗೆ ಸಾಗುವುದು, ಸಮಾಜ ಸೇವೆಯಲ್ಲಿ ತೊಡಗುವುದು, ಪರರ ಹಿತಕ್ಕಾಗಿ ಶ್ರಮಿಸುವುದು – ಇಂಥ ಉದಾತ್ತ ಸತ್ಕಾರ್ಯಗಳಿಗೆ ತೊಡಗುವುದೇ ಲೇಸೆಂದು ಪ್ರತಿಪಾದನೆ ಮಾಡಿದ್ದಾರೆ. ಕಾಮ–ಕಾಮನೆಗಳೇ ವಿಪರೀತವಾದರೆ ಬಾಳು ನಿರರ್ಥಕ. ಈ ಸುಂದರವಾದ ದೇಹವನ್ನು ನಿರ್ಮಿಸಿ, ಬದುಕಲು ಕೊಟ್ಟ ಪರಮಾತ್ಮನನ್ನು ಸ್ಮರಿಸುವುದೇ ನಮ್ಮೆಲ್ಲರ ಕರ್ತವ್ಯವಾಗಬೇಕು.

## ಊ. ಮೋಕ್ಷ ವಿಭಾಗ

ಪ್ರಾರಂಭದಲ್ಲಿ ತಿರುವಳ್ಳುವರರ ಪರಿಚಯ ಮಾಡಿಕೊಡುತ್ತ ಕವಿಯೇ ತನ್ನ ಕಾವ್ಯ 'ತಿರುಕ್ಕುರಳ್'ದಲ್ಲಿ ಹೇಳಿರುವಂತೆ 'ಮುಪ್ಪಾಲ್'ದಲ್ಲಿ (ಈ ಕೃತಿಯ ಮೂಲ ಹೆಸರು) ಅರಂ (ಧರ್ಮ), ಪೊರುಳ್ (ಅರ್ಥ), ಇನ್ಬ್‌ನ್ (ಕಾಮ) ಎಂಬ ಮೂರು ಪುರುಷಾರ್ಥಗಳನ್ನು ಆಯ್ಕೆ ಮಾಡಿಕೊಂಡು ಹೇಳಿರುವರು. ಆದುದರಿಂದ ಅದಕ್ಕೆ "ಮುಪ್ಪಾಲ್" ಎಂಬ ಹೆಸರು ಪ್ರಾಪ್ತವಾಗಿದೆ. ಆದರೆ ನಾಲ್ಕನೆಯ ಪುರುಷಾರ್ಥವಾಗಿರುವ ಮೋಕ್ಷದ ಬಗೆಗೆ ಚಕಾರ ಶಬ್ದವನ್ನೆತ್ತಿಲ್ಲವೆಂದು ಹೇಳಿದರೆ



ಮೋಕ್ಷದ ಬಗ್ಗೆ ಏನೂ ಹೇಳಿಲ್ಲವೆಂಬ ಭಾವನೆಯಲ್ಲ. ಈ ಮೂರೂ ಪುರುಷಾರ್ಥಗಳನ್ನು ಸತ್ಯ, ಪ್ರಾಮಾಣಿಕತೆ, ನಿಷ್ಠೆ ವ್ರತದ ನಡೆ–ನುಡಿಯಲ್ಲಿ ಪಾಲನೆ ಮಾಡಿದವರು ಅವರು, ವಿರಕ್ತರೇ ಆಗಿರಲಿ, ಸದ್ಗೃಹಸ್ಥರೇ ಆಗಿರಲಿ, ಯಾರಾದರಾಗಲಿ ಅವರು ಸ್ವರ್ಗ ಅಥವಾ ಮೋಕ್ಷವನ್ನು ಹೊಂದುತ್ತಾರೆಂದೂ, ಅದು ತನ್ನಿಂದ ತಾನೇ ಪ್ರಾಪ್ತವಾಗುತ್ತದೆಯೆಂಬುದು ಇದರೊಳಗಿರುವ ಗೂಢಾರ್ಥವಾಗಿದೆ. ಹನ್ನೆರಡನೆಯ ಶತಮಾನದ ಶರಣರು ಇದೇ ಮಾತನ್ನು ಹೇಳಿರುವರು. ಇಲ್ಲಿ ಸಲ್ಲುವವರು ಅಲ್ಲಿಯೂ, ಎಲ್ಲೆಲ್ಲಿಯೂ ಸಲ್ಲುತ್ತಾರೆ. ದೇವಲೋಕ–ಭೂಲೋಕ (ಮರ್ತ್ಯ) ಲೋಕವೆಂಬಿವುಗಳು ಬೇರೆ ಎಲ್ಲೆಲ್ಲಿಯೂ ಇಲ್ಲ. ನಾವು ನಿಂತ ನೆಲದಲ್ಲಿಯೇ ಆ ಎರಡೂ ಲೋಕಗಳಿವೆ. ಒಳಿತು ಮಾಡಿ ಬದುಕು ಸಾಗಿಸಿದವರು ಸದ್ಗತಿ, ಸ್ವರ್ಗ ಅಥವಾ ಮೋಕ್ಷ ಇಲ್ಲವೆ ಕೈವಲ್ಯ ಹೊಂದುತ್ತಾರೆ. ಕೇಡು ಮಾಡಿದರೆ, ಪರರಿಗೆ ಪೀಡನೆ ಕೊಟ್ಟು ಹಿಂಸಿಸಿದರೆ, ಪಾಪ ಕೃತ್ಯವೆಸಗಿದರೆ ಅವರು ನರಕ, ಯಮಯಾತನೆಗೆ ಅರ್ಹರಾಗುತ್ತಾರೆ ಎಂಬುದನ್ನು 'ಅಯ್ಯಾ ಎಂದರೆ ಸ್ವರ್ಗ–ಎಲವೋ ಎಂದರೆ ನರಕ' ಎಂಬ ಪರಿಕಲ್ಪನೆಯಲ್ಲಿ ಶರಣರು ಹೇಳಿರುವುದನ್ನಿಲ್ಲಿ ನೆನೆಯಲೇಬೇಕು. ಇಂಥ ಆಶಯವನ್ನೇ ತಿರುವಳ್ಳುವರರು ತಮ್ಮ ಕಾವ್ಯದಲ್ಲಿ ಹೇಳಿರುವುದನ್ನು ಈ ಮೂರೂ ವಿಭಾಗಗಳನ್ನು ಓದಿ ಅನುಭವಿಸಿಯಾದ ಮೇಲೆ, ಅನುಷ್ಠಾನಕ್ಕೆ ತಂದವರು ಸದ್ಗತಿ (ಮೋಕ್ಷ) ಪಡೆಯುತ್ತಾರೆ ಎಂಬುದರ ತಿರುಳು ಇದರಲ್ಲಿ ಕಂಡರಣೆಗೊಂಡಿದೆ. ಆದುದರಿಂದ ಇದನ್ನು ಸಂಸಾರಸ್ಥರೂ ಪಾಲನೆ ಮಾಡಬಹುದಾದ ಮತ್ತು ಅಂಥ ಸನ್ಮಾರ್ಗದ ಹಾದಿ ತೋರಿದ ಪಥಿಕ ಮಹಾಕವಿ ತಿರುವಳ್ಳುವರರು ಎಂಬುದನ್ನು ನಾವೆಂದೂ ಮರೆಯುವಂತಿಲ್ಲ.

ಮಾನವನಿಗೆ ಹಿತಾಹಿತಗಳ ವಿವೇಚನಾ ಶಕ್ತಿಯಿದೆ. ಪಶು–ಪಕ್ಷಿಗಳಿಗೆ ಈ ವಿವೇಚನಾ ಶಕ್ತಿಯಿರುವುದಿಲ್ಲ. ಸತ್ಯ, ನೀತಿ, ಪ್ರಾಮಾಣಿಕತೆಗಳು ಎಲ್ಲ ಕಾಲ–ದೇಶಗಳಲ್ಲಿಯೂ ಎಲ್ಲ ಜೀವಿಗಳಿಗೂ ಒಂದೇ ಇರುವುದು. ಅಧ್ಯಾತ್ಮ ವಿದ್ಯೆಯ ಪ್ರಭಾವದ ಪ್ರಥಮ ಪಾಠಗಳಾದ ನೀತಿಯ ನಿಯಮಗಳನ್ನೇ ಪಾಲಿಸದಿದ್ದರೆ ಅಧ್ಯಾತ್ಮದ ಉನ್ನತ ಮಟ್ಟಕ್ಕೇರುವುದು ಹೇಗೆ ಸಾಧ್ಯ. ಮಾನವನಾಗಿ ಹುಟ್ಟಿ ಬಂದ ಮೇಲೆ ಅಧ್ಯಾತ್ಮದ ಕಡೆಗೆ ಮುಖ ಮಾಡಬೇಕು. ಪ್ರತಿಯೊಬ್ಬ ಜೀವಿಯು ಸ್ವಲ್ಪಾದರೂ ಸ್ವಾರ್ಥ ತ್ಯಾಗ ಮಾಡದಿದ್ದರೆ ಜೀವಿಗಳ ಆಸೆಗಳು ಒಂದಕ್ಕೊಂದು ಅತ್ಯಂತ ವಿರೋಧಿಯಾಗಿ ಜೀವಿಗಳು ಸಮಾಜದಲ್ಲಿ ಜೀವಿಸಲು ದೊಡ್ಡ ಹೋರಾಟವೇ ಪ್ರಾರಂಭವಾಗುವುದು.

ಅಧ್ಯಾತ್ಮ ಕ್ಷೇತ್ರದಲ್ಲಿ ಬುದ್ಧಿ ಬೆಳವಣಿಗೆಯ ಜೊತೆಗೆ ನೈತಿಕ ಬೆಳವಣಿಗೆಯ ಅವಶ್ಯಕತೆಯಿದೆ. ಅದನ್ನು ಕ್ರಮೇಣವಾಗಿ ಸಾಧಿಸಬಹುದು. ಆದರೆ, ಅದು

ಅತ್ಯವಶ್ಯ. ಕ್ರಮೇಣವಾಗಿ ನೀತಿ ಪಾಲನೆಯಿಂದ ವೈರಾಗ್ಯ ಬೆಳೆಯುತ್ತ ಹೋಗುವುದು. ನಂತರ ಆತ್ಮ ನಿರೀಕ್ಷಣೆಯು ಸುಲಭ ಸಾಧ್ಯವಾಗುವುದು. ಇದು ಮಾನವನ ಪರಮ ಪುರುಷಾರ್ಥವಾದ ತೂರ್ಯಾವಸ್ಥೆಯನ್ನು ಹೊಂದುವುದರ ಮುಖಾಂತರ ಸ್ವರೂಪಾವಸ್ಥಿತಿಯನ್ನು ಹೊಂದುವಂತೆ ಮಾಡುವುದು.

ಈಗಾಗಲೇ ಹೇಳಿದಂತೆ ಧರ್ಮ–ಅರ್ಥ–ಕಾಮಗಳನ್ನು ತೃಪ್ತಿ ಪಡಿಸುವಲ್ಲಿಯೇ ದೇಹವನ್ನು ಕಳೆದುಕೊಳ್ಳುತ್ತಿದ್ದೇವೆ. ಧರ್ಮ ನೀತಿಯಿಂದ ನಡೆಯುವವನು ಕಾಮವನ್ನು ತಡೆಯುವ, ತ್ಯಜಿಸುವ ಶಕ್ತಿ ಗಳಿಸಿಕೊಳ್ಳುವುದು ಅಗತ್ಯ. ನಮಗೆ ಯಾವುದರ ಬಗ್ಗೆ ಉತ್ಕಟ ಇಚ್ಛೆ ಇರುವುದೋ ಅದು ಈಡೇರುವುದು. ವೈರಾಗ್ಯ ತಾಳುವುದೆಂದರೆ ಅಷ್ಟೇನು ಹಗುರವಾದುದಲ್ಲ. ಅದರಂತೆ ನಮಗೆ ಮೋಕ್ಷದ ಬಗ್ಗೆ ಉತ್ಕಟ ಇಚ್ಛೆಯಾದರೆ ಅದೂ ಈಡೇರಲು ಸಾಧ್ಯ. ನಾನಿಂದು ಸಮಾಧಿ ಸ್ಥಿತಿ ಪಡೆದೇ ತೀರುವೆನೆಂಬ ಉತ್ಕಟ ಇಚ್ಛೆಯಾದರೆ ಅದೂ ಈಡೇರಲು ಸಾಧ್ಯವಿದೆ. ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಿಲ್ಲ. ಮನಸ್ಸಿದ್ದಲ್ಲಿ ಮಾರ್ಗವಿದೆ ಮತ್ತು ಮಹಾದೇವನಾಗುವ ಶಕ್ತಿ ಮಾನವನಿಗಿದೆ. ಬುದ್ಧ, ಮಹಾವೀರ, ಯೇಸು, ಪೈಗಂಬರ, ಬಸವಣ್ಣ, ರಮಣಿ ಮಹರ್ಷಿ, ಅರವಿಂದಶ್ರೀ ಅಡವೀಶ್ವರ, ಉದ್ದಾನ ಶಿವಯೋಗಿ, ಶಿವಕುಮಾರರು, ಅಥಣಿ ಶಿವಯೋಗಿಗಳು ಮುಂತಾದವರು ಉತ್ಕಟ ಇಚ್ಛೆಯ ಮೂಲಕವೇ ತಮ್ಮ ಸ್ವರೂಪ ಸ್ಥಿತಿಯನ್ನು ಹೊಂದಿದರು. ವಿಷಯಗಳಲ್ಲಿ ಸುಖ ದೊರೆಯಲಾರದು ಎಂಬ ತಿಳುವಳಿಕೆ ಯಾವಾಗ ಬರುವುದೋ ಆಗ ಬಿಡುಗಡೆ ಪ್ರಯತ್ನ ನಡೆಯುವುದು. ವಿಷಯಾದಿಗಳನ್ನು ಮನಸ್ಸಿನಲ್ಲಿ ಅಹಿತವೆಂದು ತಿಳಿದು ಅವುಗಳ ಮೋಹವನ್ನು ವಿಷವತ್ ತ್ಯಾಗ ಮಾಡಬೇಕು. ಶಾಶ್ವತ ಸುಖ ಹೊಂದುವುದೇ ನನ್ನ ಜನ್ಮ ಸಿದ್ಧ ಹಕ್ಕು ಎಂಬ ದೃಢವಾದ ಹಠವು ಪ್ರತಿಯೊಬ್ಬ ಜೀವನಿಗೂ ಅತ್ಯವಶ್ಯವಾಗಿ ಬೇಕು. It is the birth right of every soul ಎಂಬಂತೆ. ಇದಕ್ಕೆ ಅಂತಃಕರಣ ಪರಿಪಕ್ವತೆ ಮಾತ್ರ ಅತ್ಯವಶ್ಯ. ಈ ಅಂತಃಕರಣ ಪರಿಪಕ್ವತೆಯ ಕಾರ್ಯ ಕೈಕೊಳ್ಳಲು ಹೊರಗಿನ ಯಾವ ವಿಷಯವೂ ಅಡ್ಡಿಯಾಗಬಾರದು. ಇಹಪರಗಳ ಆಸಕ್ತಿ ಹೋಗಿ ಪೂರ್ಣ ವೈರಾಗ್ಯ ಬರಬೇಕು. ಶಾಶ್ವತ ಸುಖ (ಮೋಕ್ಷ) ಹೊಂದಲು ಅರ್ಹತೆ ಎಂದರೆ ಉತ್ಕಟ ಇಚ್ಛೆ. ದೃಢ ನಿರ್ಧಾರ, ವಿವೇಕ, ವೈರಾಗ್ಯ ಮತ್ತು ಸತತಾಭ್ಯಾಸದಿಂದ ರಾಗದ್ವೇಷಾದಿ ಮಲಿನತ್ವವನ್ನು ಕಳೆದುಕೊಂಡು ಅತೀ ಪರಿಶುದ್ಧವಾದ ಮನಸ್ಸು ಬೇಕಾಗುತ್ತದೆ. ನಿರ್ಮಲ, ಶುದ್ಧವಾದ ಮನಸ್ಸೇ ಮೋಕ್ಷ ಸಂಪಾದನೆಗೆ ಮೂಲ ಕಾರಣವಾಗುತ್ತದೆ.

“ಕೂಡಲ ಸಂಗಮದೇವನೊಲಿಸ ಬಂದ ಪ್ರಸಾದ ಕಾಯವನು ಕೆಡಿಸಲಾಗದು” ಎಂಬ ಬಸವಣ್ಣನವರ ವಿಚಾರ ಮಾನವ ಜನ್ಮದ



ಗುರಿಯೇನೆಂಬುದನ್ನು ತಿಳಿಸುತ್ತದೆ. ಅಷ್ಟಾವರಣಗಳೇ ಅಂಗ, ಸದಾಚಾರಗಳೇ ಪ್ರಾಣ, ಷತ್‌ಸ್ಥಲಗಳೇ ಆತ್ಮ ಎಂದುದಾಗಿ ಬಸವಾದಿ ಶಿವಶರಣರು ಲಿಂಗಾಯತ ಧರ್ಮ ಸೂತ್ರತ್ರಯಗಳನ್ನು ಕೊಡ ಮಾಡಿದ್ದಾರೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ–ಈ ತತ್ತ್ವಗಳನ್ನು ಶರಣನು ಹಂತಹಂತವಾಗಿ ಆಚರಿಸುತ್ತ ಮೇಲೇರುವನು. ಅಂದರೆ ಐಕ್ಯ, ಕೈವಲ್ಯ, ಮೋಕ್ಷ, ಸದ್ಗತಿ, ಸ್ವರ್ಗ, ಕೈಲಾಸದಲ್ಲಿರುವ ಶಿವನನ್ನು ಸೇರುವನು. ಇದುವೇ ಅಂತಿಮ ಮತ್ತು ಶಾಶ್ವತ ಸುಖವಾಗಿದೆ. ಆದರೆ ಶರಣರ ಸಿದ್ಧಾಂತವೆಂದರೆ ಕ್ರಿಯೆ ಮತ್ತು ಜ್ಞಾನ ಹೊಂದಿದ್ದುದಲ್ಲದೇ ಕಾಯಕ–ದಾಸೋಹಗೈಯುವುದೇ ಆತನ ಧ್ಯೇಯವಾಗಿರಬೇಕಾಗುತ್ತದೆ. ಜ್ಞಾನ ಮತ್ತು ಕ್ರಿಯೆ ಇವುಗಳ ಪರಸ್ಪರ ಸಂಬಂಧದ ರಹಸ್ಯವನ್ನು ಶರಣ ಮನಕಂಡು ಅದನ್ನು ತನ್ನ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತಂದು ಸಮಾಜ ಜೀವನವನ್ನು ಹಸನುಗೊಳಿಸುವ ಭವರೋಗ ವೈದ್ಯನಾಗುತ್ತಾನೆ. ‘ಅಂತರಂಗದಲ್ಲಿ ಅರಿವಿಲ್ಲದವರಿಗೆ ಬಹಿರಂಗದಲ್ಲಿ ಕ್ರಿಯೆ ಇದ್ದು ಫಲವೇನು?’ ಇದು ಕಣ್ಣಿಲ್ಲದವನ ಬಾಳುವೆಯಂತೆ, “ಬಹಿರಂಗದಲ್ಲಿ ಕ್ರಿಯೆಯಿಲ್ಲದವಂಗೆ ಅಂತರಂಗದಲ್ಲಿ ಅರಿವಿದ್ದು ಫಲವೇನು? ಅದು ಶೂನ್ಯಾಲಯದ ದೀಪದಂತೆ, ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಈ ಉಭಯಂಗ ಒಂದಾಗಬೇಕು” ಎಂಬುದು ಶರಣರ ನಿಶ್ಚಿತ ಅಭಿಪ್ರಾಯ. ‘ಅಂತರಂಗದ ಅರಿವು ಬಹಿರಂದ ಕ್ರಿಯೆ ಈ ಉಭಯ ಸಂಪುಟ ಒಂದಾದ ಶರಣಂಗೆ ಹಿಂಗಿತ್ತು ತನು ಸೂತಕ, ಹಿಂಗಿತ್ತು ಮನಸೂತಕ’ ಎಂಬ ಚೆನ್ನಬಸವಣ್ಣನವರ ಮಾತನ್ನಿಲ್ಲಿ ಗಮನಿಸಬಹುದಾಗಿದೆ.

ಲಿಂಗ–ಅಂಗ ಸಾಮರಸ್ಯ ಹೊಂದುವುದೇ ಶರಣರ ಸಿದ್ಧಾಂತ! ‘ಶರಣ ಸತಿ–ಲಿಂಗಪತಿ’ ಎಂಬ ಭಾವ. ಷಟ್‌ಸ್ಥಲದ ಐದೂ ತತ್ತ್ವಗಳನ್ನಿಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸಿದ ಅನುಭಾವಿ, ಸಂಪೂರ್ಣ ಸಾಮರಸ್ಯದಲ್ಲಿ ಲೀನವಾಗುವುದು ಮುಖ್ಯ. ಅದ್ಹೇಗೆಂದರೆ “ಘೃತ ಘೃತವ ಬೆರೆತಂತೆ, ಕ್ಷೀರ–ಕ್ಷೀರವ ಬೆರಸಿದಂತೆ, ತೈಲ–ತೈಲವ ಬೆರಸಿದಂತೆ, ಜ್ಯೋತಿ ಜ್ಯೋತಿಯ ಬೆರಸಿದಂತೆ, ಬಯಲು–ಬಯಲು ಬೆರಸಿದಂತೆ” ಪ್ರಾಣ–ಪ್ರಾಣ–ಸಂಯೋಗವಾಗಿ ಲಿಂಗಸಮರಸವಾಗುತ್ತದೆ. ಕರ್ಪೂರ ಅಗ್ನಿ ಸಂಯೋಗವಾಗಿ ಕರ್ಪೂರದ ಗುಣವಳಿದು ಅಗ್ನಿಯಾದಂತೆ, ಲಿಂಗವೇ ನೆನೆದು, ಲಿಂಗವೇ ತಾನಾಗಿ ಪರಿಣಮಿಸುತ್ತಾನೆ. ಲಿಂಗ ಲಿಂಗಗಳಲ್ಲಿ ಎರಡೆಂಬ ಭಾವವಳಿದು ಏಕೋಭಾವ ಮೂಡುತ್ತದೆ. ಭಿನ್ನದಲ್ಲಾದ ಪ್ರಾಪ್ತಿಯಳಿದು ಅವಿರಳ ಸಮರಸ ಸೌಖ್ಯದೆ ಅದ್ವೈತ ಸಿದ್ಧಿಸುತ್ತದೆ. ಅದು ನದಿಯೊಳಗೆ ನದಿ ಬೆರೆತಂತಾಗುತ್ತದೆ. ಇದಕ್ಕೆ ವೈರಾಗ್ಯ ನಿಧಿ ಅಕ್ಕಮಹಾದೇವಿಯ ವಚನದ ಮೂಲಕ ವಿವರಿಸಲಾಗಿದೆ.

ಕದಳಿ ಎಂಬುದು ತನು, ಕದಳಿ ಎಂಬುದು ಮನ
ಕದಳಿ ಎಂಬುದು ವಿಷಯಂಗಳು,
ಕದಳಿ ಎಂಬುದು ಭವ ಘೋರಾರಣ್ಯ,
ಕದಳಿ ಎಂಬುದು ಗೆದ್ದು ಬದುಕಿ ಬಂದು.
ಕದಳಿಯ ಬನದಲ್ಲಿ ಭವಹರನ ಕಂಡೆನು;
ಭವಗೆಟ್ಟು ಬಂದ ಮಗಳೆಂದು ಕರುಣದಿಂ ತೆಗೆದು ಬಿಗಿದಪ್ಪಿದಡೆ
ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು.

ಎಂಬ ವಚನದಲ್ಲಿ ಅಕ್ಕಮಹಾದೇವಿ ತನ್ನ ಇಡೀ ಸಾಧನೆಯ ಮಾರ್ಗವನ್ನು ಸೂಚಿಸಿ ಕೊನೆಯಲ್ಲಿ ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದ್ದುದನ್ನು ಹೇಳುತ್ತಾಳೆ. "ಭಕ್ತಿಯೆಂಬ ಪೃಥ್ವಿಯ ಮೇಲೆ.... ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ ಕೂಡಲಸಂಗಮದೇವ ತನಗೇ ಬೇಕೆಂದು ಎತ್ತಿಕೊಂಡ" ಎಂಬ ಬಸವಣ್ಣನವರ ಮಾತಿನಲ್ಲಿಯೂ ಅವನು ಶಿವನ ಹೃದಯಕ್ಕೆ ಅರ್ಪಿತನಾಗಿ ಅಲ್ಲಿ ಸಾಮರಸ್ಯವನ್ನು ಪಡೆದು ಹಣ್ಣಾಗಿ ಪರಿಣಮಿಸಿರುವುದು ಕಂಡು ಬರುತ್ತದೆ.

ಶರಣರ ನಿಲುಮೆಯನ್ನು ಗಮನಿಸಿ ಹೇಳುವುದಾದರೆ– ಇದು ಒಂದು ಬಗೆಯ ನಿವೃತ್ತಿ ಮಾರ್ಗ. ತನು, ಮನ, ಪ್ರಾಣ, ಭಾವಗಳು ನಿವೃತ್ತಿಯಾಗಿ ಲಿಂಗ ಸ್ವರೂಪವಾಗುತ್ತವೆ; ಲಿಂಗಲೀಯವಾಗುತ್ತವೆ. ತನು ನಿಮ್ಮನಪ್ಪಿ ಮಹಾತನುವಾದ ಬಳಿಕ ಮನವೆಂಬುದು ಮತ್ತೆಲ್ಲಿಯದೋ? ಮನವು ನಿಮ್ಮನಪ್ಪಿ ಘನಮನವಾದ ಬಳಿಕ ಭಾವವೆಂಬುದು ಮತ್ತೆಲ್ಲಿಯದೋ? ಎಂದು ಚೆನ್ನಬಸವಣ್ಣನವರು ಕೇಳಿದ್ದುದು ಸತ್ಯವಿದೆ. ಹೀಗೆ ತನು, ಮನ, ಪ್ರಾಣ, ಭಾವಗಳ ನಿವೃತ್ತಿಯಾದಂತೆಲ್ಲ ಗುರು ಲಿಂಗ–ಜಂಗಮಗಳೂ ಒಂದಾಗಿ ತನ್ನಲ್ಲಿ ಐಕ್ಯವಾಗುತ್ತವೆ. 'ತನ್ನ ತಾನರಿದೊಡೆ ತನ್ನರಿವೇ ಗುರು, ತಾನೇ ಲಿಂಗ, ತನ್ನ ನಿಷ್ಠೆಯೇ ಜಂಗಮ'. ಗುರಿಯನ್ನು ಮುಟ್ಟುವವರೆಗೆ ಈ ಎಲ್ಲ ಪರಿಕರಗಳ ಸಾಧನೆಗಳ ಅವಶ್ಯಕತೆಯಿದೆ. ಕರ್ತವ್ಯ ನಿರ್ವಹಣೆಯ ನಿಲುಗಡೆಗೆ ಬಂದ ಮೇಲೆ ಅವು ಒಂದರಲ್ಲೊಂದು ಐಕ್ಯವಾಗುತ್ತವೆ.

ಅರಿವು–ಆಚಾರ–ವಿಚಾರ–ಕಾಯಕ–ದಾಸೋಹ ಈ ಪಂಚ ತತ್ತ್ವಗಳನ್ನು ಯಾವಾತನು ಅನುಸರಿಸುತ್ತಾನೋ ಅವನೇ ನಿಜಶರಣ! ಕಾಯಕಾಂತಾರವನ್ನು ಗೆದ್ದವನವನು. ಕಾಯ ಹೊತ್ತು ಬಂದ ಜೀವಾತ್ಮ ಬರೀ ತಿಂದುಂಡು ಬದುಕಲೆಂದು ಬಂದವನಲ್ಲ! ತಾನಾರು, ತಾನು ಎಲ್ಲಿಂದ ಬಂದೆ?, ಏನಾಗಬೇಕಾಗಿದೆ? ಎಂದು ತನ್ನನ್ನು ತಾನು ತಿಳಿದುಕೊಂಡು ನಡೆಯಬೇಕಿದೆ. ತನ್ನಲ್ಲಿ ತಾನು ಪ್ರಶ್ನಿಸಿಕೊಳ್ಳಬೇಕಿದೆ. ಥಟ್ಟನೇ ಉತ್ತರ ಸಿಗಲಿಕ್ಕಿಲ್ಲ. ಬಲ್ಲ ಸತ್ಪುರುಷರನ್ನು, ಮಹಾತ್ಮರನ್ನು ಕೇಳಬೇಕು. ಸದುವಿನಯದ ಬಿನ್ನಹಕ್ಕೆ ಉತ್ತರ ಸಿಕ್ಕಲೇಬೇಕು. ಪರಮಾತ್ಮನ ಚೇತನದಿಂದ ಈ



ಜೀವಾತ್ಮ ಬಂದವನು. ಈ ಕಾಯ (ದೇಹ) ಆತ್ಮಕ್ಕೆ ಆಶ್ರಯವನ್ನು ನೀಡಿದ ವಸ್ತು. ಈ ದೇಹಕ್ಕೆ ಆತ್ಮವೇ ಜೀವಾಳ. ಇದು ಪರಮ ಶ್ರೇಷ್ಠ ಮತ್ತು ಪವಿತ್ರವಾದುದು. ಜೀವಾತ್ಮ ಪರಮಾತ್ಮನಾಗುವುದೇ ಮಾನವ ಜನ್ಮದ ಮುಖ್ಯ ಗುರಿ. ಪರಮಾತ್ಮನಿಂದ ಬಂದು ಮತ್ತೇ ಪರಮಾತ್ಮನಾಗಬೇಕಾದ ಮಾನವ ಜನ್ಮ ದೊಡ್ಡದಲ್ಲವೆ? ಜೀವಾತ್ಮಕ್ಕೆ ಆಶ್ರಯ ನೀಡಿದ ದೇಹ ಪ್ರಸಾದ ಕಾಯವಲ್ಲದೇ ಮತ್ತೇನು? ಅಂಥ ಪ್ರಸಾದ ಕಾಯವನ್ನು ಆಸೆ–ಆಮಿಷಗಳಿಗೊಡ್ಡಿ ಪ್ರಸಾದ ಕಾಯವನ್ನು ಕೆಡಿಸಿಕೊಳ್ಳುವುದು ಯೋಗ್ಯವಲ್ಲ ಎನ್ನುತ್ತಾರೆ ಬಸವಾದಿ ಶರಣರು.

ಹುಟ್ಟು, ಸಾವು, ಜೀವಾತ್ಮ–ಪರಮಾತ್ಮ, ಬ್ರಹ್ಮಾಂಡ, ಪಂಚಭೂತ, ಸೃಷ್ಟಿ, ಸ್ಥಿತಿ, ಲಯ, ಶಿವಯೋಗ, ಅಹಂಬ್ರಹ್ಮಾಸ್ಮಿ, ಅಥವಾ ಶಿವೋಹಂ ತತ್ತ್ವವೇನೂ ಸುಳ್ಳಲ್ಲ. ಸತ್ಯದ ಅನುಸಂಧಾನಕ್ಕೇರುವ ಮಾರ್ಗಗಳು, ಇವುಗಳಿಲ್ಲದೇ ಬದುಕಿಲ್ಲ. ಸ್ವಾರ್ಥವಾದ ಬದುಕು ನಿರರ್ಥಕ! ಅದು ಹಾವು–ಏಣಿಯಾಟವಿದ್ದಂತೆ! ಯೋಗಿಯಾಗುವುದೇ ಪರಮ ಸುಖ. ಯೋಗಿ ತಪಸ್ವಿಗಳು ಯೋಗಾನುಸಂಧಾನ ಮಾಡಿದ ಫಲವಾಗಿ ಅವರ ಮನದ ಕೊನೆಯ ಮೊನೆಯ ಮೇಲೆ ಹೊಳೆದಂಥ ದರ್ಶನವಿದು. ಬರೀ ಮಾತಿನ ಮೋಡಿಯಲ್ಲ ಅಹಂಕಾರವಳಿದು, ನಿರಹಂಕಾರ ಸಾಧನೆ ಮಾಡಿ, ನಿಜದ ನೆಲ ಕಂಡಾಗ ಉಕ್ಕಿ ಬಂದ ಪರಮಾನಂದದ ಉದ್ಗಾರವಿದು. ಐಕ್ಯಸ್ಥಲ ಮುಟ್ಟಿದವರ ಅನುಭಾವವಿದು.

ಪರಮಾತ್ಮನ ಚೇತನವೇ ಜೀವಾತ್ಮ–ಆದರೆ, ಹೇಳಿದ ಮಾತ್ರಕ್ಕೆ ಜೀವಾತ್ಮ ಪರಮಾತ್ಮನಾಗುವದು ಸಾಧ್ಯವಿಲ್ಲ. ಅದು ಪರಮೋನ್ನತ ಅವಸ್ಥೆ, ಅದನ್ನು ಸಾಧಿಸುವುದಕ್ಕೆ ಸಾಧನೆ ಬೇಕು. ಸಾಧನೆಯಷ್ಟೇ ಅಲ್ಲ ಸದಾಚಾರಬೇಕು. ವಿನಮ್ರತೆ, ಕಾಯಕ ನಿಷ್ಠೆ, ದಾಸೋಹಂಭಾವ, ಫಲಬೇಕು. ಈ ಬಗೆಯ ಅನುನಯನವನ್ನು 'ಶರಣಸತಿ ಲಿಂಗಪತಿ' ಎಂದು ಶಿವಶರಣರು ಕರೆದಿದ್ದಾರೆ. ಶರಣನೆಂದರೆ ಕೇವಲ ವಿಭೂತಿ, ರುದ್ರಾಕ್ಷಿ ಧಾರಣ ಮಾಡಿದವನಲ್ಲ ಹಾಗೂ ವಿರಕ್ತನಾದ ಮಾತ್ರಕ್ಕೆ ಶರಣನಲ್ಲ. ಲಿಂಗದ ಅವಗುಣಗಳಿಗೆ ಶರಣು ಹೊಡೆದಾತ ಶರಣ. ಕರಣೇಂದ್ರಿಯಗಳಲ್ಲಿ, ಜೀವಭಾವಗಳಲ್ಲಿ ವೈರಾಗ್ಯಭಾವ ತುಂಬಿಕೊಂಡವ ಶರಣ. ಬೇಕು–ಬೇಡವೆಂಬುದನ್ನು ಹುರಿದು ಪರಸ್ತ್ರೀ ವ್ಯಾಮೋಹವಳಿದು, ಮಾಂಸಪಿಂಡವನ್ನು ಮಂತ್ರ ಪಿಂಡವನ್ನಾಗಿ ಮಾಡಿಕೊಂಡಾತ ಶರಣ. ಇಂಥ ಗುಣ ಲಕ್ಷಣವುಳ್ಳ ಶರಣನೇ ಐಕ್ಯಸ್ಥಲದ ನೆಲೆಯನ್ನು ಸುಲಭವಾಗಿ ಹತ್ತ ಬಲ್ಲರು, ಅಂತಿಮ ನೆಲೆ ಕಂಡುಕೊಳ್ಳಬಲ್ಲರು.

ಐಕ್ಯಸ್ಥಲ ಶಿವ–ಜೀವರ ಐಕ್ಯ. ಸತ್ತ ಮೇಲೆ ಅನುಭವಿಸುವ ಸ್ಥಿತಿಯೆಂದು ಕೆಲವರ ಗ್ರಹಿಕೆಯಾಗಿದೆ. ಬದುಕಿದ್ದಾಗ ಸಾಧಿಸಬಹುದಾದ ಪರಮೋನ್ನತ ಸ್ಥಿತಿಯದು.

ತತ್ ಪದದಲ್ಲಿ 'ತ್ವಂ' ಪದ ಎರಡಿಲ್ಲದಂತೆ ಕೂಡಿಕೊಳ್ಳುವುದು ಐಕ್ಯಸ್ಥಲ. ಇದುವೇ ಯೋಗ; ಶಬ್ದಕ್ಕೆ ನಿಲುಕದ ವಿಚಾರ/ ವಿಷಯ. ಹಸಿದುಂಡವರಿಗೇ ಊಟದ ರುಚಿ ಗೊತ್ತು ಎಂಬಂತೆ ಜಿಜ್ಞಾಸೆಯಿಂದ ಯೋಗ ಸಾಧನೆ ಮಾಡಿ ಸಿದ್ಧಿ ಪಡೆದ ಯೋಗಿಗಳಿಗೇ ಗೊತು ಐಕ್ಯ ಸ್ಥಲದ ನೆಲೆಬೆಲೆ. ಅದೊಂದು ಸಚ್ಚಿದಾನಂದ ಸ್ಥಿತಿ, ಆಚರಿಸಿ ಅನುಭವಿಸುವ ಸ್ಥಿತಿ. ಈ ಐಕ್ಯಸ್ಥಲ ಮುಟ್ಟಿದವನು ಪ್ರಾಪಂಚಿಕನಾಗಿದ್ದರೂ ವಿರಕ್ತನೇ ಆಗುವನು. ಐದು ಅವಸ್ಥೆಗಳನ್ನು ಸಾಧಿಸಿ ಸಿದ್ಧಿ ಪಡೆದವನು ಪುನಃ ಶರೀರ ಗುಣಗಳಿಗೆ ಅಂಟಿಕೊಳ್ಳಲಾರದು. ಉತ್ತಿ ಬಿತ್ತಿ ಬೆಳೆದ ಮೇಲೆ ಬೆಳೆ. ಚಿತ್ತವನು ನಿಗ್ರಹಿಸಿ ಯೋಗಾನುಷ್ಠಾನ ಮಾಡಿದ ಮೇಲೆ ಶಿವೊಹಂ. ಅಥವಾ ಅಹಂಬ್ರಾಹ್ಮಸ್ಮಿ. ವ್ಯರ್ಥ ಮಾತುಬೇಡ; ಮಾತಾಡಿ ದಣಿಯುವುದಕ್ಕಿಂತ ಆಡಿದಂತೆ ಮಾಡಿ ಉದ್ಧಾರ ಆಗಬೇಕೆಂಬುದು ಐಕ್ಯಸ್ಥಲ ಮುಟ್ಟಿ, ಶಿವಸ್ವರೂಪ ತಾನಾಗಿ, ಹೇಳಿಯೂ ಹೇಳದಂತಿದ್ದ ಬಸವಣ್ಣನವರು ಹೇಳಿದ ದಿವ್ಯಾನುಭವದ ವಚನದಲ್ಲಿ ಹೀಗಿದೆ.

ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇರವ ನೋಡಾ
ಬೆಳಗಿಗೆ ಬೆಳಗು ಸಿಂಹಾಸನವಾಗಿ
ಕೂಡಲ ಸಂಗಯ್ಯ ತಾನೇಬಲ್ಲ! (ಬ.ವ. ೯೫೮)

ಬಸವಣ್ಣನವರು ಹೇಳಿರುವ ಈ ವಚನದಂತೆ ಅನುಭಾವದ ನುಡಿಯೊಂದಿಗೆ ನಡೆದು ತೋರಿದ ಮಹಾನುಭಾವರು, ಮಹಾತ್ಮರು. ಅವರ ಹಾದಿಯಲ್ಲಿ, ಮಾರ್ಗದಲ್ಲಿ ನಡೆದವರು ವೇಮನ-ಸರ್ವಜ್ಞ ಮುಂತಾದವರು.

ಈಗಾಗಲೇ ಚರ್ಚಿತವಾದಂತೆ ಯೋಗವಿಚಾರ, ಐಕ್ಯಸ್ಥಿತಿ ಎಲ್ಲರಿಗೂ ಒಲಿಯುವ ನಿಧಿಯಲ್ಲ. ಅದು ಸಾಧಕರ ಸಿದ್ಧಿಯ ಸ್ಥಿತಿ! ಐಕ್ಯಸ್ಥಲ ಷಟ್‌ಸ್ಥಲದಲ್ಲಿರುವ ಕೊನೆಯ ಅವಸ್ಥೆ. ಯೋಗಾಂಗದಲ್ಲಿ ಎರಡನೆಯದೇ ಐಕ್ಯ! ಐಕ್ಯನಿಗೆ ಆತ್ಮನೇ ಅಂಗ. ಆತ್ಮಾನಂಗನಾದ ಐಕ್ಯನು ಪರಮಾತ್ಮನೊಡನೆ ಸಮರಸವಾಗುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಆತ್ಮ ಬೇರಿಲ್ಲ; ದೂರಿಲ್ಲ. ಆತ್ಮ ತಾನೇ! ತಾನೇ ತನ್ನನ್ನು ಅರಿತಿಲ್ಲ. ಅನುಭವ ಪಡೆದಿಲ್ಲ. ಭಾಗ್ಯವೆಂಬುದು ತನ್ನರಿವಿಗಿಂತ ಬೇರಿಲ್ಲ. ತನ್ನೊಳಗೆ ತಾನಿರುವುದಕ್ಕಿಂತ ಬೇರಿಲ್ಲ ಸೌಖ್ಯ, ತನ್ನ ಗಳಿಕೆಯೇ ಗಳಿಕೆ. ಆ ಗಳಿಕೆಯಿಂದ ಮನೆ ತುಂಬುವುದಿಲ್ಲ; ಮನ ತುಂಬುತ್ತದೆ. ಅಂತೆಯೇ ಅದಕ್ಕೆ ಶೂನ್ಯ ಸಂಪಾದನೆಯೆಂದರು ಶರಣರು. ಮನದುಂಬುವುದೆಂದರೆ ಮನವರಿಕೆ ಯಾಗುವಿಕೆ; ಮಹದನುಭವ-ವುಂಟಾಗುವಿಕೆ, ಆತ್ಮವಿಕಾಸವಾಗುವಿಕೆ. ಶರಣಕವಿ ಬಸವರಾಜ ಗಿರಿಮಲ್ಲಪ್ಪ ಯಲ್ಲಟ್ಟಿಯವರು ಷಟ್‌ಸ್ಥಲ ಅಥವಾ ಯೋಗ ಸಿದ್ಧಾಂತದ ಸ್ಥಲವನ್ನು ಆತ್ಮ



ವಿಕಾಸ ಯೋಗವೆಂದು ಕರೆದಿರುವರು. ಸರ್ವಾತ್ಮ ಭಾವದಿಂದ ಸತ್ಯದತ್ತ ಸಾಗುವಿಕೆ. ಪೂರ್ಣಾಖಂಡ ಭಾವ ತೋರುವಿಕೆ. ಕ್ರಿಯಾ ಘನತೆಯನ್ನು ಜ್ಞಾನಪೂರ್ಣತೆಯನ್ನು ಸಂಪಾದಿಸುವಿಕೆ, ಸಮದರ್ಶಿಯಾಗಿ ಬಾಳುವಿಕೆ ಇದುವೇ ಐಕ್ಯನ ಸಾಧನೆಯ ಸಿದ್ಧಿಯೆನಿಸುತ್ತದೆ.

ಇಂದಿನ ವಿಜ್ಞಾನ ಯುಗದಲ್ಲಿ ಮಾನವನ ಸಾಧನೆಗಳು ಹಲವಾರು. ಆದರೆ ತಾನಾರೆಂಬ ವಿಚಾರ ಮಾತ್ರ ದೂರವುಳಿದಿದೆ. ಹನ್ನೆರಡನೆಯ ಶತಮಾನದಲ್ಲಿ ಪ್ರತಿಪಾದಿಸಿದ ಶರಣರ ಸತ್ಯ ಇಂದಿಗೂ ಮೌಲಿಕವಾಗಿದೆ; ಮುಂದೆಯೂ ಶಾಶ್ವತವಾಗಿ ಉಳಿಯುತ್ತದೆ.

ಏನಾದಡೆಯೂ ಸಾಧಿಸಬಹುದು.
ಮತ್ತೇನಾದಡೆಯೂ ಸಾಧಿಸಬಹುದುಯ್ಯ
ತಾನಾರೆಂಬುದ ಸಾಧಿಸಬಾರದು
ಕೂಡಲಸಂಗಮದೇವರ ಕರುಣವುಳ್ಳಂಗಲ್ಲದೇ (ಬ.ವ. ೯೨೫)

ಸದ್ಗುರುವಿನ ಕೃಪೆಯಿಲ್ಲದೆ ತಾನಾರೆಂಬುದನ್ನು ಸಾಧಿಸಲು ಆಗಲಾರದು. ಅದನ್ನು ಸಾಧಿಸಲಾಗದಿದ್ದರೆ ಮಾನವನಾಗಿ ಹುಟ್ಟಿದ್ದೂ ಸಾರ್ಥಕವಾಗುವುದಿಲ್ಲ.

ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು ಮನವಿಲ್ಲದನ್ನಕ್ಕ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ?
ಚೆನ್ನಮಲ್ಲಿಕಾರ್ಜುನ.... (ಅಕ್ಕನ ವಚನ-೧೨೧)

ವೈರಾಗ್ಯ ನಿಧಿ ಅಕ್ಕಮಹಾದೇವಿಯವರೂ ಈ ವಚನದ ಮೂಲಕ ಸಾರ್ವಕಾಲಿಕ ಸತ್ಯವನ್ನೇ ಸಾರಿದ್ದಾರೆ. ಸದ್ಗುಣಗಳಿಲ್ಲದಿದ್ದರೆ ಪುರುಷಾರ್ಥಕ್ಕೆ ಅರ್ಥ ಬರಲಾರದು. ಆದುದರಿಂದ ಮಾನವ ಜನ್ಮ ದೊಡ್ಡದು. ಅದು ಪದೇ ಪದೇ ಬರುವಂಥದಲ್ಲ! ಅದು ಬಂದಾಗಲೇ ತಿರುವಳ್ಳುವರರು, ವೇಮನರು ಆಚರಿಸಿ ನುಡಿದಂತೆ ನಡೆದಂತೆ ನಾವೂ ಅವರು ಪ್ರತಿಪಾದಿಸಿದ ಮಾರ್ಗದಲ್ಲಿ ಕ್ರಮಿಸುವ ಪ್ರಯತ್ನಮಾಡಬೇಕು. ಪೂರ್ವ ಜನ್ಮದ ಪುಣ್ಯದ ಫಲದಿಂದ ಅರಿವಿನ ಈ ಜನ್ಮವನ್ನು ಪಡೆದೂ ಪರಮಾತ್ಮನ

ಜ್ಞಾನವನ್ನು ಸಂಪಾದಿಸದಿದ್ದರೆ ಮಾನವನಾಗಿ ಜನಿಸಿದ್ದು ಸಾರ್ಥಕವಲ್ಲ. ಆದುದರಿಂದ ವೇಮನರು ಪ್ರತಿಪಾದಿಸಿದ ಕೆಲವು ಪದ ಪದ್ಯಗಳ ಮೂಲಕ ಐಕ್ಯ ಅಥವಾ ಮೋಕ್ಷ ಸುಖದ ಅನುಸಂಧಾನವನ್ನು ಗಮನಿಸಿ ತಿಳಿಯಪಡಿಸಲು ಪ್ರಯತ್ನಿಸಲಾಗಿದೆ.

**ಮೋಕ್ಷದ ಕುರಿತಾದ ಚರ್ಚೆ ವೇಮನ ಯೋಗಿ :**

ವೇಮನರು ಮೋಕ್ಷ ಮಾರ್ಗ ವಿಭಾಗದಲ್ಲಿ ಸುಮಾರು ೨೨೬೧ ರಿಂದ ೩೮೧೩ರ ವರೆಗೆ ಅಂದರೆ ಸುಮಾರು ೧೧೮೭ ಪದ್ಯಗಳಲ್ಲಿ ವಿವರಿಸಿದ್ದು ಶ್ರೀ ಎಸ್.ಪಾಟೀಲ ಅವರು ಸಂಪಾದಿತ "ವಿಶ್ವಗೀತೆ" ಎಂಬ ಬ್ರಹತ್ ಗ್ರಂಥದಲ್ಲಿ ಹೇಳಿರುವರು. ಅವು ಮನೋಶುದ್ಧಿ, ಗುರುದೀಕ್ಷೆ, ತತ್ತ್ವ ನಿರ್ಣಯ, ಜೀವ–ಶಿವೈಕ್ಯ, ನಿಜ ಬೋಧೆ, ಹಠಯೋಗಗಳಲ್ಲಿ ನಾಡಿ, ಚಕ್ರ ದೇವತೆ, ವಿಮರ್ಶೆ, ನಿಮ್ನ ಸಿದ್ಧಿ, ಮುದ್ರೆಗಳು, ಕುಂಭಕ ಯೋಗ, ಗುಣಾತೀತ ಭಾವ, ಊರ್ಧ್ವಗತಿ, ಪರಾಗತಿ, ಪರಮ ಹಂಸ ಪಟ್ಟ, ಫಲ ಹೀಗೆ ೧೧ ಅಧ್ಯಾಯಗಳಲ್ಲಿ ಹೇಳಿದ್ದಾಗಿದೆ. ಲಯಯೋಗ, ಭಕ್ತಿಯೋಗದಲ್ಲಿ ಭಕ್ತಿ ಎಂದರೇನು? ಯೋಗ, ಭಕ್ತನ ಧ್ಯಾನ ಮೂರ್ತಿ, ಶಿವಪೂಜೆ, ಶಿವನು ಇರುವುದೆಲ್ಲಿ? ಶಿವ ದರ್ಶನ, ಭಕ್ತನ ಸ್ಥಿತಿ, ನಿರ್ಗುಣೀ ಭಕ್ತ, ಈ ಮುಂತಾದ ಎಂಟು ಉಪ ಅಧ್ಯಾಯಗಳಲ್ಲಿ ಬಣ್ಣಿಸಿದ್ದಾರೆ. ಅನಂತರದಲ್ಲಿ ಗುರು–ಶಿಷ್ಯರ ಲಕ್ಷಣ, ಸಾಧುಗಳ ಲಕ್ಷಣ, ಜೀವನ್ಮುಕ್ತಿ ಸ್ಥಿತಿ, ಅವಧೂತ ಚರ್ಯೆ, ಅಧ್ಯಾತ್ಮ ಸುಖಬೋಧೆ ಎಂಬ ಉಪ ಅಧ್ಯಾಯಗಳಲ್ಲಿ ವಿವರಿಸಿ ಸಾಧಕನ ಮಹತ್ವತೆಯ ಅರಿವು ಮೂಡಿಸಿದ ಕೀರ್ತಿ ವೇಮನರಿಗೆ ಸಲ್ಲುತ್ತದೆ.  ಅವರು ಹೇಳಿದ್ದುದನ್ನೇ ಸಂಕ್ಷಿಪ್ತದಲ್ಲಿ ಹೇಳಿದ್ದು ಹೀಗೆ–

'ಜೀವನು ದೇಹಾಭಿಮಾನದಿಂದ, ಮನಸ್ಸಿನ ಉಪಾಧಿಯಿಂದ ದೂರವಾಗಿ ನಿರಪೇಕ್ಷವಾಗಿ ತದ್ಬಯಲು ಸೇರಿ, ಸಗುಣ ಬ್ರಹ್ಮನಲ್ಲಿ ಲಯಿಸಿದರೆ, ಮುಕ್ತಿ ಇಲ್ಲವೆ ಬಿಡುಗಡೆ ಎನ್ನುತ್ತಾರೆ.  ಆಗ ಜೀವಿಯು ಸಂಸಾರ ತಾಪತ್ರಯ ಅಷ್ಟ ಪಾಶ, ಸಪ್ತ ವ್ಯಸನಗಳು ಬಾಧೆ ತಟ್ಟದಂತಾಗುತ್ತಾನೆ. ಸಗುಣ ಬ್ರಹ್ಮಸ್ಥಿತಿಯಿಂದ ನಿಸರ್ಗೋಪಾಸನೆಯ ಮೂಲಕ, ಗುಣಾತೀತ ಅರ್ತಾಥ್ ನಿರ್ಗುಣ ಸ್ಥಿತಿ ತಲುಪಿದರೆ ಮೋಕ್ಷವೆನ್ನುತ್ತಾರೆ.  'ನೀರು ಮುತ್ತಾದ ಬಳಿಕ ಮತ್ತೇ ಆ ನೀರು ನೀರಾಗದು. ಇದುವೇ ಪರಮ ಸ್ಥಿತಿ, ಜೀವನದ ಅಂತಿಮ ಧ್ಯೇಯವೇ ಮೋಕ್ಷ ಪ್ರಾಪ್ತಿ. ಮೋಕ್ಷ ಪ್ರಾಪ್ತಿಯೆಂಬುದಿದು ಸಾಮಾನ್ಯರ ತುತ್ತಲ್ಲ. ಇದು ಸರ್ವ ಸಾಮಾನ್ಯರ ಅನುಭವಕ್ಕೆ ದೂರವಾದ ವಿಷಯವೆಂದು ಹಲವರು ಹೇಳಿದ್ದರೂ ಯಾವನೊಬ್ಬನೂ ಜಾತಿಯ ಮೇಲು–ಕೀಳಿನಿಂದಾಗಲಿ, ಧನ–ಕನಕದ ಏರು–ಪೇರಿನಿಂದಾಗಲಿ, ಓದಿನ ಹೆಚ್ಚು–ಕಡಿಮೆಗಳಿಂದಾಗಲಿ. ಮೋಕ್ಷ ಸಾಧನೆಗೆ ಅಧಿಕಾರಿಯಾಗನು. ಮಾನವ ಜನ್ಮ ಧರಿಸಿ ಬಂದರೆ ತೀರಿತು.  ಆತ ಮೋಕ್ಷಕ್ಕೆ ಅಧಿಕಾರ ಪಡೆದಂತೆಯೇ. ತನಗೆ ದಕ್ಕಿದ



ಅಧಿಕಾರವನ್ನು ದೈವೀ ಸಂಕಲ್ಪಕ್ಕನುಗುಣವಾಗಿ ಬಳಸಿಕೊಳ್ಳುವುದಷ್ಟೇ ಮಾನವನ ಕರ್ತವ್ಯ; ಮನೋಶುದ್ಧಿ, ಗುರುದೀಕ್ಷೆ, ತತ್ತ್ವವಿವೇಚನೆ, ಜೀವಶಿವೈಕ್ಯ, ನೀತಿ ಬೋಧೆ, ಹಠ, ಲಯ, ರಾಜ ಮತ್ತು ಭಕ್ತಿ ಯೋಗಗಳು, ಸಾಧಕನನ್ನು ಸಹಜ ಸಮಾಧಿಯ ಸ್ಥಿತಿಗೆ ತಲುಪಿಸುತ್ತವೆ.

ಇಹದಲ್ಲಿಯೇ ಮುಕ್ತಿ ಅಥವಾ ಜೀವನ್ಮುಕ್ತಿಯೇ ಪರಮ ಪದ.  ಹೀಗೆ ವೇಮನ ಯೋಗಿ, ಈ ಅಂತಿಮ ಅಪವರ್ಗ ಕುರಿತು ೧೧೮೭ ಪದ್ಯಗಳಲ್ಲಿ ಸುಸ್ಪಷ್ಟ ಶಬ್ದಗಳಲ್ಲಿ ಶ್ರುತಿ, ಯುಕ್ತಿ ಮತ್ತು ಅನುಭವ ಪ್ರಮಾಣ ಮೂಲಕ ಮುಮುಕ್ಷುಗಳಿಗೆ ತಿಳಿಸಿ ಹೇಳಿದ್ದಾರೆ. ಅವರ ಮಾತು ಜ್ಯೋತಿರ್ಲಿಂಗ, ಅಲ್ಲಿ ಹೊಯ್ದಾಟವಿರದು, ಸಂದಿಗ್ಧತೆಯೂ ಇರದು. ಹಸಿ ಗೋಡೆಯ ಮೇಲೆ ಹರಳು ಒಗೆದಂತೆಯೇ ಶ್ರೋತೃವಿನಲ್ಲಿ ಅಂಟಿಕೊಳ್ಳುತ್ತದೆ" ಎಂದುದಾಗಿ ಪ್ರಸ್ತಾವನೆಯಲ್ಲಿ ನಿರೂಪಿತವಾದುದನ್ನೇ ಎತ್ತಿಕೊಳ್ಳಲಾಗಿದೆ!' ಇದು ಚತುರ್ವಿಧ ಪುರುಷಾರ್ಥಗಳಲ್ಲಿ ನಾಲ್ಕನೆಯ ಭಾಗವಲ್ಲದೇ ಅಂತಿಮ ಭಾಗ. ಹುಟ್ಟಿದವನು ಸಾಯಲೇಬೇಕೆಂಬುದು ಸೃಷ್ಟಿಯ ನಿಯಮ.  ಆದರೆ, ಹುಟ್ಟು ಸಾರ್ಥಕತೆ ಪಡೆಯಬೇಕಾದರೆ ವೇಮನರು ಹೇಳಿರುವ ತತ್ತ್ವ–ಸಿದ್ಧಾಂತಗಳನ್ನು ಸರಿಯಾಗಿ, ಸಮರ್ಪಕವಾಗಿ, ಕ್ರಮಬದ್ಧವಾಗಿ ಜೀವನದಲ್ಲಿ ಅಳವಡಿಸಿಕೊಂಡು ಮಾನವನು ದೇವಮಾನವ, ಮಹಾಮಾನವನಾಗಲು ಪ್ರಯತ್ನಿಸಬೇಕೆಂದಿದ್ದಾರೆ. ಸದ್ಗುಣಗಳ ಖಣಿಯಂತಿರುವ ಜನರು ಜ್ಞಾನವನ್ನು ಗ್ರಹಿಸಿ, ಜೀವನಕ್ಕೆ ಹೊಂದಿಸಿಕೊಳ್ಳುವರು. ಅವರೇ ಮುಕ್ತಿಗೆ ಅರ್ಹರಾಗಿರುತ್ತಾರೆ.

'ಅರಿತರೇ ಶರಣ–ಮರೆತರೇ ಮಾನವ ಮರೆಯದೇ ಪೂಜಿಸು ನಿಮ್ಮ ನಿಮ್ಮ ಇಷ್ಟದೇವತೆಯ' ಎಂಬಂತೆ ಆಚರಿಸುವುದೊಂದೇ ಮಾನವನಿಗಿರುವ ಭಾಗ್ಯ. ಅದರ ಸದುಪಯೋಗದ ಲಕ್ಷಣಗಳಿರಬೇಕೆಂಬುದರ ನೀತಿಯ ಪಾಠವೇ ಇಂತಹ ಪುಣ್ಯ ಪುರುಷರ ದಿವ್ಯ ದರ್ಶನ ಮತ್ತು ಅವರ ಚರಿತ್ರೆ ಹಾಗೂ ತತ್ತ್ವಾದರ್ಶ ಸಿದ್ಧಾಂತಗಳನ್ನು ಮೆಲುಕು ಹಾಕುವುದು ಅದರಂತೆ ಆಚರಿಸುವುದೇ ಪ್ರಮುಖ ಭಾಗ. ಅದು ಯೋಗ ಸಾಧನೆಯಿಂದ, ಸಮಾಜ ಸೇವೆಯಿಂದ, ಉತ್ತಮರೊಡನಾಟದಿಂದ  ಸದ್ಗುರುವಿನ ಉಪದೇಶ ಇಲ್ಲವೆ ದೀಕ್ಷೆಯಿಂದ ಪ್ರಾಪ್ತವಾಗುವಂಥದು. ಯೋಗ ಸಾಧಕನು, ಗೃಹಸ್ಥನಾಗಿರಬಹುದು, ಸನ್ಯಾಸಿಯಾಗಿರಬಹುದು. ಯಾವಾತನು ಪರಮ ಪುರುಷಾರ್ಥಗಳನ್ನು ಅರ್ಥವತ್ತಾಗಿ ಬಳಸಿಕೊಂಡು ಜೀವನ್ಮುಕ್ತಿಯನ್ನು ಹೊಂದಲು ಪ್ರಯತ್ನಿಸುವುದು. ನಿರ್ಮಲ ಮತಿಯುಳ್ಳವನಿಗೆ ಇದು ಹೊಳೆಯುತ್ತದೆ. ಕರ್ಮಿಗಳಿಗೆ, ದುಷ್ಕರ್ಮಿಗಳಿಗೆ ಮುಕ್ತಿ ದೊರೆಯಲಾರದು. ಕಳ್ಳ ಗುರು ಕರ್ಮಗಳನ್ನು ಕಟ್ಟಿ ಅದರಲ್ಲಿ ಸಿಲುಕಿಸುತ್ತಾನೆ. ಮೋಕ್ಷ ಗುರು ಯೋಗವನ್ನೇ ಬೋಧಿಸಿ ಮುಕ್ತ

ಮಾಡುತ್ತಾನೆ. ಚಿತ್ತ ಶುದ್ಧವಾದ ಬಳಿಕ ಶಿವನ ಪೂಜೆಗೆ ತೊಡಗಬಹುದು. ಆತ್ಮ ಶುದ್ಧವಾಗದ ಆಚಾರದಿಂದೇನು? ದೇಹದ ಸೊಬಗಿನಿಂದ ದಿವ್ಯ ಬೋಧೆಯನ್ನು ಪಡೆಯಲಾರೆವು. ಅದಕ್ಕೆ ಶುಚಿಯಾದ, ಪರಿಶುದ್ಧವಾದ ಮನಸ್ಸು ಬೇಕು. ಮನಸ್ಸೇ ಮಹಾದೇವನನ್ನಾಗಿಸುವ ಶಕ್ತಿ ಹೊಂದಿದೆ. ಕ್ರಮಬದ್ಧ ನಡೆಗೆ ಮನಸ್ಸೇ ಮೂಲ ಕಾರಣ. ಒಬ್ಬನು ಇನ್ನೊಬ್ಬನಿಗೆ ತಿಳಿಸುವುದು ಕಷ್ಟ ಸಾಧ್ಯ. ಗುರುವಿನಿಂದ ದೀಕ್ಷೆ ಪಡೆದು ಪ್ರತಿಯೊಬ್ಬನೂ ಅರಿತುಕೊಳ್ಳಲು ಪ್ರಯತ್ನಿಸುವುದು ತನ್ನೊಳಗೆ ತಾನು ಅರಿತುಕೊಂಡು ನಡೆಯಬೇಕು. ಅಲ್ಲದೇ ತನ್ನೊಳಗಿನ ಶತ್ರು ಮಿತ್ರರನ್ನು ಅರಿಯಬೇಕು. ಅರಿಷಡ್ ವರ್ಗಗಳನ್ನು ನಿಗ್ರಹಿಸಬೇಕು. ಸದಾಚಾರ ಸತ್ಸಂಗಗಳನ್ನು ಬೆಳೆಸಿಕೊಳ್ಳಬೇಕು. ಸಾಧನವು ತ್ರಿಕರಣ ಪೂರ್ವಕ ನಡೆಯಬೇಕು. ಮಾತಿನಂತೆ ಮನವಿರಬೇಕು; ಮನಸ್ಸು ಹೃದಯದ ಭಾವಕ್ಕೆ ಅನುಗುಣವಾಗಿರಬೇಕು. ಕಾಯಾ-ವಾಚಾ-ಮನಸಾ ಏಕವಾಗಿ ಕಾರ್ಯಸಿದ್ಧಿಗೆ ಹಾತೊರೆಯುತ್ತಿರುವುದೇ ಯೋಗ. ಹೀಗೆ-

ಧರ್ಮಾರ್ಥ ಕಾಮ ಮೋಕ್ಷವ
ಉರ್ಮೆಯಲಿ ಮನದಿ ತಿಳಿದೊಡೆ ಆಮೋದಂ,
ನಿರ್ಮಲ ಗತಿ ಕಾಣಬೇಕು.
ಕರ್ಮಿಗಳಿಗಿರದು ಮುಕ್ತಿಯು, ಅಲ್ಲವೆ, ವೇಮಾ?

ಎಂದು ವೇಮನರು ಪ್ರತಿಪಾದಿಸಿದ್ದಾರೆ. ಕಾಲವು ತನಗಿದೆ ಅತಿಶಯ, ಆದುದರಿಂದ ಇರುವಿಕೆಯ ಅವಧಿಯಲ್ಲಿಯೇ ಇದನ್ನು ಸಾಧಿಸುವ ಹಂತದಲ್ಲಿರುಯೆಂದುದಾಗಿ ಹಿತ ನುಡಿದಿದ್ದಾರೆ ವೇಮನ.

ಪಂಚಶತ್ರುವ ಕೊಚ್ಚಿ ಪಂಚ ಬಾಣವ ಗೆಲಿದು
ಪಂಚ ವರ್ಗಗಳನು ಪಠಣ ಮಾಡಿ
ಪಂಚ ಮುಖವ ಹೊಂದೆ, ಭವ ಸಂಜ್ಞೆಯುಳ್ಳವನು
ಪಂಚ ಸೇರುವವನೇ ಬ್ರಹ್ಮ ವೇಮ

ಮನಸ್ಸು ಮಾಡಿದರೆ ಬ್ರಹ್ಮನಾಗುವ ಶಕ್ತಿ ಪ್ರತಿಯೊಬ್ಬರಿಗಿದೆ. ಮನಸ್ಸಿಗೆ ವಿಷಯಗಳೇ ಆಹಾರ. ವಿಷಯವಿದೂರವಾಗುವುದೇ ಮನೋಶುದ್ಧಿ.

**"ಮನೋಏವ ಮನುಷ್ಯಾಣಾಂ ಕಾರಣಂ, ಬಂಧ ಮೋಕ್ಷಯೋಃ**
**ವಿಷಯಾಸಕ್ತಃ ಬದ್ಧ ಉಚ್ಯತೇ ನಿರ್ವಿಷಯಂ ವಿಮುಕ್ತ ಚ"**

ಅಂದರೆ ಮನುಷ್ಯನ ಬಂಧ ಮತ್ತು ಮೋಕ್ಷಕ್ಕೆ ಮನಸ್ಸೇ ಕಾರಣವು. ವಿಷಯಗಳಲ್ಲಿ ಆಸಕ್ತನಾಗುವುದೇ ಬದ್ಧತೆಯು. ವಿಷಯಗಳಿಂದ ದೂರ ಸಾಗುವುದೇ



ವಿಮುಕ್ತತೆಯು. ಪಂಚೇಂದ್ರಿಯಗಳಿಗೆ ಸಂಬಂಧಿಸಿದಂತೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೇ ಪಂಚ ವಿಷಯಗಳೆಂದು ಹೇಳಲಾಗಿದೆ. ಇವುಗಳ ದಾಸನಾಗದಿರುವುವುದೇ ಮನುಷ್ಯನ ಲಕ್ಷಣವಾಗಬೇಕು. ಅರಿಷಡ್ ವರ್ಗಗಳನ್ನು ಮೆಟ್ಟಿ ನಿಲ್ಲಬೇಕು. ಸದ್ಗುಣಗಳನ್ನು ಅಳವಡಿಸಿಕೊಳ್ಳಬೇಕು. ಅಷ್ಟಾಂಗ ಯೋಗಗಳಲ್ಲಿ ಮನಸ್ಸು ತಲ್ಲೀಣವಾಗಿರಬೇಕು. ಬ್ರಹ್ಮವು ಬಯಲಿನಲ್ಲಿಯ ಬಯಲು ಇದ್ದಂತೆ. ಅದು ವಿಷಯಗಳಲ್ಲಿಲ್ಲ. ದೇಹಕ್ಕೆ ಸಂಬಂಧಿಸಿದ ವಿಷಯ-ವ್ಯಾಮೋಹವನ್ನು ತೊರೆಯಬೇಕು. ದೇಹಾಭಿಮಾನವನ್ನು ತೊರೆಯಬೇಕು. "ಸೋಹಂ' ಎಂಬುದನ್ನು ಅರಿಯಬೇಕು. ಜ್ಞಾನನು ಇಂತಹ ಸಿದ್ಧಿ ಪವಾಡಗಳಿಂದ ಭ್ರಮಿತನಾಗಿರುವುದಿಲ್ಲ. ಮನಸ್ಸೇ ಭುಕ್ತಿಗೂ ಮುಕ್ತಿಗೂ ಕಾರಣ. ನಿನ್ನನ್ನು ನೀನರಿಯಬೇಕಾದರೆ ಸಂಕಲ್ಪಗಳನ್ನು ತೊರೆಯುವುದೇ ಲೇಸೆಂದು ವೇಮನರು ಅರುಹಿದ್ದಾರೆ.

ಗುರು ತೋರದೇ ವಿದ್ಯೆಯಿಲ್ಲ-ಮೋಕ್ಷವಿಲ್ಲ;

ಗುರುವೇ ಸರ್ವರೊಳು ಪರಮನು, ಗುರುವಿನ ಮಾರ್ಗದರ್ಶನದ ಬೆಳಕಿನಲ್ಲಿ ಸಾಗುವುದೇ ಶಿಷ್ಯನಾದವನ ಧರ್ಮ, "ಗುರುವಿನಾ ಗುಲಾಮನಾಗದತನಕ ದೊರೆಯದಣ್ಣ ಮುಕುತಿ" ಎಂದಿದ್ದಾರೆ ನಿಜಗುಣ ಶಿವಯೋಗಿ. ವೇಮನರೂ ಇದೇ ಮಾತನ್ನು ತಮ್ಮ ಗುರುದೀಕ್ಷೆ ಅಧಿಕರಣದಲ್ಲಿ ಹೇಳಿದ್ದಾರೆ-

ಗುರುವೇ ತಾನಾಗುವ, ಹರನ ತೋರುವವನು
ಬ್ರಹ್ಮ ಲೋಕವನೇ ಪ್ರತ್ಯಕ್ಷಿಸುವ,
ಕಿಂಕರನ ಶೋಧಿಸಿ ಕತ್ತಲೆಯ ತೊಡೆವನು ॥ವಿಶ್ವ॥

ಗುರುವೆನಲಾ ಪರಮಾತ್ಮನು
ಪರಿಕಿಸಿ ನೋಡಲು, ಶಿಷ್ಯರೆನೆ ಸಕಲ ಜೀವ
ಗುರುಶಿಷ್ಯ ಜೀವ ಸಂಪದ,
ಗುರುತರಮಾಗಿ ಬೆರೆತೊಡಾತನೆ ಗುರು ವೇಮಾ

ಗುರು ಹೇಳಿದ ವಿದ್ಯೆ ಗುರುವಿಗೇ ತಿಳಿವುದು
ಗುರು ಹೇಳುವ ವಿದ್ಯೆ ಗುರುವು ಅರಿವ
ಗುರುವಿನ ಮಹಿಮೆ ಪರಮ ಗುರುವಿಗೆ ತಿಳಿವುದು
ಗುರುತು ಕಂಡು ಹೇಳೆ ಗುರುವು ಯಾವನಿಲ್ಲ ॥ವಿಶ್ವ॥

ಗುರು ದೊರೆಯಲಾಗ ಗುರುತನರಿವೆಯೆಂದು
ಕಾಲವೆಲ್ಲ ವ್ಯರ್ಥ ಕಳೆಯುತಿಹುದು,
ಗುರುವು ದೊರೆವ ವೇಳೆ ಗತಿಸುತಿಹುದು ದೇಹ ॥ವಿಶ್ವ॥

ಗುರುವು ಪರಮ ಗುರುವಿನ ಗುರುತನ್ನು ತಿಳಿಯದೆ
ಗುರುವು ತಾನುಂಟು ಕುರುಡನಂತೆ
ಗುರುವಿಗೂ ಗುರುವಿಹ ಗುರುವು ಪ್ರಾಣೇಶನು ॥ವಿಶ್ವ॥

ಸಾದೃಶ ಪಡೆದವನು ಸುಮ್ಮನಿರಕೂಡದು
ಗುರುವಿನೊಡನೆ ಕೂಡಿ ಸೇರಬೇಕು
ಗುರುವು ನಡೆದ ನುಡಿದ ರೀತಿ ಗುರಿ ಮೀರಕೂಡದು ॥ವಿಶ್ವ॥

ನಿತ್ಯಾನಂದ ವಿವೇಕವು
ಸತ್ಯವನು ತಿಳಿದಿದ್ದೊಡೆ, ತಕ್ಕವಿರುವುದೇಂ।
ಮುಕ್ತಿಗೆ ಸಮ ಗುರು ಮರ್ಮವ
ಭೃತ್ಯನಿರುತ ಮನದರಿವುದು, ಪೆಂಪಿಲಿ ವೇಮಾ।

ಗುರುವು ಇರದೆ ವಿದ್ಯೆ ಗುರುತಾಗಿ ದೊರಕದು
ದೊರೆಯು ಇರದೆ ಧರೆಗೆ ತೃಪ್ತಿಯಿಲ್ಲ
ಗುರುವು ವಿದ್ಯೆಯಿರದೆ ಗುರುತರ ದ್ವಿಜನೆಂತು? ॥ವಿಶ್ವ॥

ಅರಿವು ಅರಳಿಸುವವನೇ ಗುರುವು. ಗುರುವಿನಿಂದಲೇ ವಿದ್ಯೆಯು ಸಕಲ ಅರಿವು ಪ್ರಾಪ್ತಿ! ಅರಿವೇ ಗುರುವೆಂದು ಭಾವಿಸಿಕೊಂಡು ಅರಿವು ಹಿಗ್ಗಿಸಿಕೊಳ್ಳಬೇಕು. ಕೈ ಹಿಡಿದು ಶಿಕ್ಷಣ ಕಲಿಸಿ, ಪರಮ ಪದವನ್ನು ತೋರುವ ಗುರುವನ್ನು ಬೇಡಿ, ಅಪರೋಕ್ಷವಾಗಿ ಅನುಭೂತಿಯನ್ನು ಹೊಂದಬೇಕು. ಜ್ಞಾನವೇ ಗುರುವು. ಆದ್ಯಂತವೇ ಗುರು. ಜಗತ್ತಿನಲ್ಲಿ ಗುರುವಾಗುವವನು ಉದಯಿಸಿದರೆ, ಜಗದೊಳಿರುವ ಜನರು ಶರಣರಾಗುತ್ತಾರೆ. ಜಗವನ್ನರಿತು, ಮಣಿದು ಕಾಣಲು, ಗುರುವು ನಿಗಮಾಗ ಮಗಳಲ್ಲಿ ತಿಳಿಸಿದ ನಿರ್ವಿಕಾರ ನಿಪುಣನೆನಿಸುತ್ತಾನೆ. ಮನದ ಆದಿಯೂ ಗುರು. ಅಂತ್ಯವೂ ಗುರು. ಸಕಲ ಕಾರ್ಯ–ಕಾರಣಕ್ಕೂ ಗುರುವೇ ಸರ್ವೋತ್ತಮನು. ಹರ ಕಾಯದಿದ್ದರೂ ಗುರು ಕಾಯುವವನೆಂದೂ ಹರಿಹರಕವಿಯು ಹೇಳಿರುವುದನ್ನು ನಾವು ಗಮನಿಸಬೇಕು. ಧ್ಯಾನದಿಂದ ಈ ರಹಸ್ಯವನ್ನರಿಯಬಹುದಾದರೂ ಗುರುವಿನ ಮಾರ್ಗದರ್ಶನ ಬೇಕೇಬೇಕು. ಆದುದರಿಂದ ಗುರುವಿನ ಒಲುಮೆಯನ್ನು ಪಡೆದು, ನಿಟಿಲ ದುರ್ಗದಲ್ಲಿ ಧ್ಯಾನ ಮೂಲಕ ಕಂಡು, ಕೃಪಾ ಕಟಾಕ್ಷದಿಂದ, ಆತ್ಮರೂಪವನ್ನು ಕಾಣಬಹುದು.

ಗುರುವಿನಿಂದ ದೀಕ್ಷೆ ಪಡೆಯಬೇಕು. ಮಂತ್ರವೇ ಸದ್ಗುರು ಚಿಂತನೆಯಾಗುತ್ತದೆ. ಸಾವಿರ ಯಜ್ಞಗಳನ್ನು ಮಾಡಿದರೇನು? ಮನಸ್ಸಿನಲ್ಲಿ ಗುರು ಭಕ್ತಿಯು ತಪ್ಪದೇ



ತಪ್ಪದಂತಿರುವುದೇ ಮುಕ್ತಿಗೆ ಹಾದಿಯಾಗಿದೆ. ಯೋಗ ಸಾಧಕನು ರಾಗ–ವೈಷಮ್ಯಗಳ ರಕ್ತಿಯನ್ನು ತ್ಯಜಿಸಿ, ಬೇಗ ಗುರು ಭಕ್ತಿ ತಾಳಿ, ಮುಂದುವರೆದರೆ ಯಶಸ್ಸು ಲಭಿಸುವುದು. ಗುರುವು ಸ್ಪರ್ಶ ಮಣಿಯಂತೆ. ಶಿಷ್ಯನು ಕಬ್ಬಿಣ ತುಂಡಿನಂತೆ. ಸ್ಪರ್ಶಮಣಿಯನ್ನು ಸೋಂಕಿ ಕಬ್ಬಿಣವು ಬಂಗಾರವಾಗುವಂತೆ ಗುರುವಿನ ಸಂಗದಲ್ಲಿ ಶಿಷ್ಯನು ಗುರುವೇ ಆಗುತ್ತಾನೆ. ಸದ್ಗುರುವು ಸದ್ಗತಿಯನ್ನು ಪಡೆಯುವಂತೆ ಮಾಡುತ್ತಾನೆ. ಅವನೇ ದೈವ ಜ್ಞಾನದ ಮೂಲಕ ಗುರುವಿನಿಂದ ವಿದ್ಯೆ ಪಡೆದುಕೊಂಡು ಮೋಕ್ಷ ಹೊಂದಿರೆಂದುದಾಗಿ ಗುರುದೀಕ್ಷೆ ಭಾಗದಲ್ಲಿ ಮೇಲಿನಂತೆ ಹೇಳಿರುವುದನ್ನು ನಾವೂ ಅರಿತು ಆಚರಿಸುವಂತಾಗಬೇಕು.

ನರಜನ್ಮವ ತಾನೆತ್ತಿಯು
ಪರಮಾತ್ಮನರಿಯದಿರಲು ಪಾಪಾತ್ಮನವಾ
ಬರಿ ದುಡಿತ ಕರ್ಮ ಗೆಯ್ದೊಡೆ
ಮರಳಿ ಅಧೋಗತಿ ಪಡೆಯುವನು ಅರಿಯೈ ವೇಮಾ!

ತನುವು ಅಸ್ಥಿರವೆಂದು, ಧನವು ಅಸ್ಥಿರವೆಂದು
ತಿಳಿವು ಹೊಂದಿ ತನ್ನ ತಾ ತಿಳಿದುಕೊಂಡು
ಪಾತ್ರನಪ್ಪ ಯೋಗಿ ಪರಮಾತ್ಮನೇ ಕಾಣು ॥ವಿಶ್ವ॥

ಅರಿವುಗೇಡಿ ಜೀವಿ ಅನಿತು ಕಾಲವಿರಲು
ಸತ್ತು ಹುಟ್ಟುತಿಹನು ಸಹಜವಾಗಿ
ಅರಿವು ಮರೆವು ತಾಣ ಅರಿಯುವುದೇ ಬ್ರಹ್ಮ ॥ವಿಶ್ವ॥

ಸಾಯುವವರ ಕಂಡು ಸಾವು ನಿಶ್ಚಿತವೆಂದು
ತತ್ತ್ವವೆಲ್ಲ ಆತ್ಮ; ತಿಳಿದುಕೊಂಡು
ಬೆದರಿ ಅದರದಂತೆ ಬಾಳುವವನೇ ಭಕ್ತ ॥ವಿಶ್ವ॥

ಹುಟ್ಟುವವರಾರೋ;? ಹುಟ್ಟದವರಾರೋ?
ಹುಟ್ಟಿ–ಸಾಯುವಂಥ ಪುರುಷರಾರೋ?
ಹುಟ್ಟಿ ಹುಟ್ಟದಂಥ ಬೋಧೆಯ ಕಾಣಿರೋ ॥ವಿಶ್ವ॥

ಸಾಯದಿರುವರಾರೋ? ಸತ್ತವರಿನ್ನಾರೋ?
ಕಾಣುವವರು ಯಾರೋ? ಕಾಣದವರಾರೋ?
ಇರುವ ಸತ್ತ ಕಂಡ ಒಬ್ಬನ ನೋಡಿರೋ ॥ವಿಶ್ವ॥

ಮರಣವು ಹತ್ತಿರದಲ್ಲಿದೆ.
ಸ್ಥಿತ ಬುದ್ಧಿಯಲಿ ಪರಮ ಕಾಣೆ, ಲಭ್ಯ ಮೋಕ್ಷಂ
ಅರಿವುದು ಪುರದಲಿ ಮಿಂಚಲು
ಪರಮಾರ್ಥವೇ ಬಟ್ಟಬಯಲು, ಮುನ್ನವೇ ವೇಮಾ ॥ವಿಶ್ವ॥

ಹುಟ್ಟು-ಸಾವು ತಪ್ಪಿದ್ದಲ್ಲ; ಜನನ-ಮರಣವೆಲ್ಲ ಸ್ವಪ್ನ ನಿದ್ರೆಯಂತೆ. ಅದು ಭೂಮಿಯ ಮೇಲೆ ತೋರುವ ಬಿಸಿಲುಗುದುರೆ ಅಥವಾ ನೀರ ಮೇಲಿರುವ ಗುಳ್ಳೆಯಂತೆ! ಆದರೆ ಈ ಎರಡರ ನಡುವಿನ ಅವಧಿಯಲ್ಲಿ ಪರಮನ ಕಾಣುವ ಧಾವಂತದೊಳಿರುಯೆಂದ ವೇಮನ ಯೋಗಿ, ಜನನ-ಮರಣಗಳ ಮಧ್ಯದ ಕಾಲವು ಮಾನಸಿಕ ಕಲ್ಪನೆಯ ಕಾಲವಾಗಿದೆ. ಗಡಿಯಾರದ ಮುಳ್ಳಿನ ಮೂಲಕ ಗುರುತಿಸುವ ದಿನ ರಾತ್ರಿ, ದಿನ ಮಾಸಗಳು ಭೌತಿಕ ಕಾಲವೆನಿಸುತ್ತದೆ. ಹುಟ್ಟು ಸಾವುಗಳ ಮಧ್ಯೆ ಬಾಳಿನಲ್ಲಿ ಪರಮಾತ್ಮನನ್ನು ಅರಿಯಬೇಕು. ಅರಿತು ಬಾಳಿ ಪರಮನ ಸೇರಬೇಕು.

ಜನನ-ಮರಣಗಳು ವಿಧಿವಶವಾಗಿವೆ. ಮಾನವನು ಇಲ್ಲಿ ಸ್ವತಂತ್ರನಾಗಿಲ್ಲ. ಶರೀರವು ಕ್ಷಣ ಭಂಗುರವಾದುದು. ಆದರೆ, ತನುವಿನಲ್ಲಿ ಸ್ಥಿರವಾದುದು ಆತ್ಮವೊಂದೇ. ಭೌತಿಕ ದೇಹಕ್ಕೆ ನಾಶವುಂಟು! ಆದ್ದರಿಂದ ಸ್ಥಿರ ಯಾವುದು? ಅಸ್ಥಿರವಾದುದು ಯಾವುದು ಎಂಬುದನ್ನು ವಿವೇಚಿಸಿ ನೋಡಬೇಕು. ಈ ವಿವೇವಚನೆಯಿಂದ ಆತ್ಮ ನಿಷ್ಠನಾಗಿ ಬಾಳುವವನು ಪರಮಾತ್ಮನೇ ಸರಿ! ದೇಹವು ಅರಿವಿನಲ್ಲಿಯೇ ಉದಿಸಿದೆ.

ಆದರೆ, ಅದು ಹೊಲಸಿನಲ್ಲಿಯೇ ಕೊಳೆಯುತ್ತಿದೆ. ತನುವಿನ ಮೂಲಕ ಬಾಳಿ ಅರಿವನ್ನು ಕೂಡಿದರೆ ಬೇರೆ ತನು ಬಾರವು. ಜನನ-ಮರಣಗಳ ಜಾಡನ್ನು ಹಿಡಿದು ತಿಳಿದು, ತನ್ನನ್ನು ಕುರಿತು ತಾನೇ ಮರುಕಬಟ್ಟು ತತ್‌ಮಯ ಆಕೃತಿ ಹೊಂದುವುದೇ ತತ್‌ಪದವಾಗಿದೆ, ತತ್ತ್ವದರ್ಶನವಾಗಿದೆಯೆಂದಿದ್ದಾರೆ ವೇಮನರು. ಸದಾ ಅರಿವು ಹೊಂದಿದವನು ಇಹ-ಪರಗಳ ಅಂತರ ಉಳಿಯದು; ಪ್ರಳಯ ಸಂಭವಿಸಿದರೂ ಪ್ರಾಣ ಹಾನಿಯಾಗದು; ಪ್ರಳಯದಲ್ಲೂ ಪರಮಾತ್ಮನನ್ನು ಸೇರುವನು ಎಂದಿದ್ದಾರೆ.

ತನುವಿನೊಳಗೆ ಆತ್ಮ ತತ್ತ್ವವನು ಅರಿಯದೆ,
ಬೇರೆ ಇರುವುದೆಂದು ಹುಡುಕಲಾಗ
ಭಾನುವಿರಲು ದೀಪ ಬೆಳಗಿ ಹುಡುಕಬಹುದೇ? ॥ವಿಶ್ವ॥

ಎಂದು ಪ್ರಶ್ನಿಸಿದ್ದಾರೆ ವೇಮನರು.

ಬಯಲಲಿ ಸರ್ವವೂ ಹುಟ್ಟಿತು
ಬಯಲಲ್ಲಿಯೇ ಲೀನವಹುದು ಆ ಬ್ರಹ್ಮವೆನಲ್



ಬಯಲನು ಮನದೊಳು ತಿಳಿವೊಡೆ
ಬಯಲಲಿ ಮುಕ್ತಿಯ ಬಟ್ಟ ಬಯಲ್ಕೈ ವೇಮಾ?

ಬಯಲಿನೊಳಗೆ ಬಯಲು ಪರೀಕ್ಷಿಸಿ ನೋಡಲು
ಬಯಲು ರೂಪು ಕಂಡು ಪ್ರೀತಿ ಹೊಂದಿ,
ಮಲಿನ ದೇಹದಲ್ಲಿ ಮೋಹ ತೊರೆಯರಲ್ಲ ॥ವಿಶ್ವ॥

ಬಯಲಾದುದು ಎಷ್ಟೆಂದೆನೆ
ಬಯಲಿಗೆ, ಬ್ರಹ್ಮಾಂಡಗಳಿಗೆ, ಹಿಡಿಸುವಷ್ಟಿಹುದ್ಯೆ
ದಯದಲಿ ರವಿಯಷ್ಟೆಂದೆನೆ
ಭಯಪಡುವರನ ನೋಡಲು ಬಯಲಲಿ ವೇಮ ॥ವಿಶ್ವ॥

ಬಯಲಲಿ ಬಂಧವ ಬೆರೆಸದೆ
ಪಾಲಿಪ ಪರಮಾತ್ಮನಿಗೇ ವಾಂಛಿತನಪ್ಪಂ
ಬೈಲಲಿ ಬಂಧವ ಬೆರೆಸಿದೆ
ಕೈಲಾಸವ ಸೇರಿ ಮುಕ್ತಿ ನೋಳ್ಪರು ವೇಮಾ! ॥ವಿಶ್ವ॥

ಪುರುಷ-ಪ್ರಕೃತಿ, ಶಿವ-ಜೀವ, ವಿದ್ಯೆ-ಅವಿದ್ಯೆ ಎಂಬೀ ಎರಡರ ಜೊತೆಯೊಳಗೆ, ದ್ವೈತವನ್ನು ಮೀರಿದ ಏಕದ ಎಣಿಕೆಯಲ್ಲಿ ಭೃಕುಟೀಸ್ಥಲದಿಂದೆ ಗುಡ್ಡವೇ ಸಹಸ್ರಾರ ತಲುಪಬೇಕು. 'ಓಂ ನಮಃ ಶಿವಾಯ' ಎಂಬ ಷಡಕ್ಷರ ಸಾಧನೆಯಿಂದ ಮನದಲ್ಲಿ ನಿರ್ವಾಣ ಪದವು ಬೆಳಗುವುದು. ಅಲ್ಲಿಂದ ಬಯಲು ಸೇರಿದರೆ ನಿತ್ಯವಾದ ಪರಮಾನಂದ ಮೂರ್ತಿಯು ಕಾಣಬಹುದು. ಆದ್ಯಂತಗಳಿಲ್ಲದ ಪರಮನು ಕೇವಲ ಅನುಭವಗಮ್ಯನು, ವಾದ-ಭೇದಗಳು ಅಡಗಿ ಅದನ್ನು ವರಿಸುವವನೇ ಶಿವಯೋಗಿ. ತ್ರಿಗುಣಗಳ ಪ್ರಾತಿನಿಧಿಕರಾದ ಅಜ, ಹರಿ, ಹರರು ಸೃಷ್ಟಿ-ಸ್ಥಿತಿ-ಲಯಗಳ ಕಾರಣಕರ್ತರು. ಈ ಮೂರೂ ಗುಣಗಳಲ್ಲಿ ಯಾವುದು ಅಧಿಕ? ಮೂವರಿಗೂ ಎಟುಕುವಂತಹ ನಿರ್ಗುಣವಾದ ಪರಬ್ರಹ್ಮನೊಬ್ಬನುಂಟು; ಈ ಪರಬ್ರಹ್ಮವನ್ನು ಸ್ತುತಿಸಬೇಕೆಂದ ಮಹಾಯೋಗ ವೇಮನರು. ಮೂರನ್ನು ಗ್ರಹಿಸಿ; ತಮರಜ-ಸತ್ತ್ವ ಗುಣಗಳೆಂಬ ಮೂರನ್ನು ವಿಸರ್ಜಿಸಿ, ಧಾರೇಷಣ, ವಿತ್ತೇಷಣ, ಪುತ್ರೇಷಣಗಳೆಂಬ ಮೂರನ್ನು ಜಾಗೃತ-ಸ್ವಪ್ನ-ಸುಷುಪ್ತಿಗಳೆಂಬ ಮೂರನ್ನು ಮೀರಿ ಇಚ್ಛಾ, ಜ್ಞಾನ, ಕ್ರಿಯೆಗಳೆಂಬ ಶಕ್ತಿ ತ್ರಯಗಳೂ, ಸಾರ, ಬಿಂದು, ಕಳೆಗಳೆಂಬ ತತ್ತ್ವಮೂಟೆಯೂ ಪರತತ್ತ್ವವೆನಿಸುತ್ತವೆ.

**ಜೀವ–ಶಿವೈಕ್ಯ :**

ತಾನೇ ತಾನು ಎಂಬ ತತ್ತ್ವ ಸಂಕುಲದೊಳು
ಅನ್ಯವರಿಯುತಿಪ್ಪ: ಅಪ್ಪನಾಣೆ
ತಾನು ತಾನೇ ಇರಲು; ತಲ್ಲಣ ಇವು ಏತಕೆ? ॥ವಿಶ್ವ॥

ತನ್ನಯ ತನ್ನೊಳಗೇ ಸಕಲವು
ತನುವೇ ತಾನೆಂದು ಅರಿತು ತಾರಕವಾತ್ಮ.
ತಾನೇ ಎಂದು ಪರಿಣಮಿಸಿರ್ಪ
ಮನುಜರ್ಗೆ ಮುಕ್ತಿಯುಂಟೈ ಮಹಿಯಲಿ ವೇಮಾ!

ತಾನು ಸಕಲವಿರಲು, ತನ್ನೊಳಗೇ ಸಕಲವು,
ತನ್ನ ಒಳಗೆ ಬೆಳಗೆ ತಾನೇ ತಿಳಿದು
ಇಂಥ ಮಾನವನಿಗೆ ಇಹುದು ಒಪ್ಪ ಮುಕ್ತಿ ॥ವಿಶ್ವ॥

ಚಿತ್ತವುಳ್ಳ ಯೋಗಿ ಶಿವನ ಹಾಗೆ ಉಂಟು!
ಮಿಥ್ಯ ಯೋಗಿಯುಂಟು ಮಿಡತೆಯಂತೆ
ನಿತ್ಯನಾದ ಯೋಗಿ ನಿನ್ನ ರೀತಿ ಇರುವ ॥ವಿಶ್ವ॥

ತಾನಾದುದನರಿತು ಸರ್ವ
ತಾನಾಗುವದ ತಿಳಿದೆಲ್ಲ ತತ್ತ್ವವು ತಾನೇ
ತಾನರಿತು ಪರಣಮಿಸದಿರೆ,
ಮಾನವಗೆ ಮುಕ್ತಿಯಿಲ್ಲವು ಮಹಿಯಲಿ ವೇಮಾ!

ಅಂಗವು ಪರಮಶಿವನು; ಅಂಗವು ಜೀವನಿಹ
ಜೀವಿ ಸ್ವಚ್ಛವಾಗೆ ಸೇರ್ವೈ ಶಿವನ
ಎರಡು ತೆರದಲುಂಟು, ಯಾವ ಕಡೆಗೆ ಬ್ರಹ್ಮ? ॥ವಿಶ್ವ॥
ಅಂಗದಲ್ಲಿ ನೋಡೆ ಲೀನವಾಗಿ ಉಂಟು.
ಅಂಗದಲ್ಲಿ ಲಿಂಗ ಅಮರಿದುಂಟು
ಲಿಂಗಭಾವವಂತು ಲೀನವಾಗಿರಿರೇ ॥ವಿಶ್ವ॥

ಲಿಂಗ ಅಂಗಗಳಲಿ, ಲೀಲೆ ತಿಳಿಯುವನಕ
ಮನಸು ಲಿಂಗದಲ್ಲಿ ಮರಳುತಿಹುದು
ಮನಸು ನಿಲಿಸಿದಲ್ಲೆ ಮತ್ತೆ ಲಿಂಗವಿಹುದು ॥ವಿಶ್ವ॥



ನಿಮಿಷವಾದರೂ ಮನ ನಿಲಿಸಿ ನಿರ್ಮಲಾಗಿ
ಲಿಂಗ ಜೀವೇಶ್ವರ ಕಂಡು ಭಂಗಪಡದೆ
ಪೂಜಿಸಿ ಮನದಲ್ಲಿ, ಸೇರುವುದು ಪೂರ್ಣ ಪದವಿ
ಪರಮನ ಕೋರುತ ಇದ ಮಾಡಿ ಬೆಳಗು ವೇಮಾ!

ನೀರಿನಲಿ ಹುಟ್ಟಿತು ಕ್ಷಾರವು
ಕ್ಷಾರವು ನೀರಾಯ್ತು, ನೀರು ಕ್ಷಾರವು ಒಂದೇ
ಈ ರೀತಿ ಶಿವನು ಜೀವನು
ಧಾರುಣಿಯಲಿಹುದ, ಮನದಲಿ ಅರಿಯೈ ವೇಮಾ!

ಜೀವಿ ಜೀವಿ ಕೊಲಲು, ಶಿವನ ಕೊಲೆಯೇಆಯ್ತು
ಜೀವನರಸಿ ತಿಳಿಯೆ, ಶಿವನೆ ಅಲ್ತೆ?
ಭಾವದಲ್ಲಿ ಬೇಗ ಪರಿಕಿಸಿ ನೋಡಿರೋ ॥ವಿಶ್ವ॥

ಜೀವಿ ಕೊಲ್ಲಲೆಲ್ಲ ಶಿವನು ಭಕ್ತಿ ದೂರ
ಜೀವಿಯರಸಿ ನೋಡೆ ಶಿವನಲ್ಲವೆ?
ಜೀವಿಯೇ ಶಿವ'ನೆಂಬ ನುಡಿಯೆ ಸಿದ್ಧಾಂತವು ॥ವಿಶ್ವ॥

ಈ ಪದಗಳಲ್ಲಿ ಜೀವ–ಶಿವೈಕ್ಯರ ಅವಿನಾಭಾವ ಸಂಬಂಧವಿದೆ. ಶರಣರು–ಹೇಳಿದಂತೆ "ಶರಣ ಸತಿ–ಲಿಂಗಪತಿ" ಎಂಬ ಭಾವವಿದರಲ್ಲಿದೆ. ಜೀವಿಯು ಶಿವನಾಗುವುದೆಂದರೆ ಲಿಂಗಾಂಗ ಸಾಮರಸ್ಯ ಹೊಂದುವದಾಗಿದೆ. ಶಿವನಲ್ಲಿ ಒಂದಾಗುವ ಸೂತ್ರವಿದಾಗಿದೆ. ತಾನೇ ಪರಮಾತ್ಮನಿದ್ದಾನೆ. ಶಿವನು ಈ ಘಟ (ದೇಹ) ದಲ್ಲಿ ಸೇರಿರುವಾಗಲೂ ಘಟ–ಪಟಗಳಿಗೆ ಸಿಕ್ಕದೆ ತಾನು ತಾನಾಗಿ, ಘನವಾಗಿ ಆಟವಾಡುತ್ತಾನೆ. ಆ ಸೂತ್ರ ಹಿಡಿದು ತಾನೂ ಶಿವನಾಗಬೇಕು. ಜೀವ ಸಂಜ್ಞೆಯು ಜೀವ ತತ್ತ್ವದ ಸಂಚಯದಲ್ಲಿಯೇ ಇದೆ. ಜೀವಿಯು ಗುರುವನ್ನು ಸೇರಿ, ಆತನ ಮಾರ್ಗದರ್ಶನದ ಮೂಲಕ ಸರಿಯಾಗಿ ಅರಿತು, ತನ್ನನ್ನು ನಿಲ್ಲಿಸಿದರೆ, ತಾನೇ ತಾನಾಗಿ ಉಳಿಯುವನು. ಜೀವವೂ ಮತ್ತು ಜೀವಭಾವವೂ ಎಲ್ಲಿಯಿದೆಯೆಂದು ವಿಚಾರಿಸಿದರೆ, ಆ ತ್ರಿಗುಣಮಯಿ ದೇಹದಲ್ಲಿಯೇ ಎಂಬುದು ತಿಳಿದು ಬರುತ್ತದೆ. ಕಾರಣ, ದೇಹಭಾವ ತೊರೆದು, ಪರಮಧಾಮದಲ್ಲಿ ಸತ್ಯವನ್ನರಿಯಬಹುದಾಗಿದೆ. ಜೀವನನ್ನು ಅರಿಯುವವರೆಗೂ ದೇವರು ಬೇಕೆಂಬ ಭ್ರಮೆಯು ಹಿಂಗಲಾರದು. ನರನು ದೇವನನ್ನು ಅರಿತು ಜೀವ ಭಾವದ ಜನನ ಮತ್ತು ಅಭಾವಗಳನ್ನು ಮೀರಿಸಬಲ್ಲನಾದರೆ ಮುಕ್ತಿಯು ಬಟ್ಟಬಯಲಾಗುತ್ತದೆ.

ಈ ಜಗತ್ತು ಭಗವಂತನ ಪ್ರತಿಬಿಂಬವೇ ಆಗಿದೆ. ಆ ದೇವನು ಸರ್ವಾಂತರ್ಯಾಮಿ, ಆತ ಎಲ್ಲೆಡೆಗೂ ಇರುವವನು, ಸೃಷ್ಟಿಯ ಚರಾಚರ ವಸ್ತುಗಳಲ್ಲಿಯೂ ಆತ ತುಂಬಿರುವನು. ಜೀವನೇ ಶಿವನಾಗಿರುವನು. ಹೀಗಿರುವಾಗ ಶಿವನು ಬೇರೆಯೆಂದೇಕೆ ಹುಡುಕುವುದು? ಜೀವ ಭಾವವನ್ನು ಅರಿತುಕೊಂಡರೆ ಮತಿ ಭ್ರಮೆಯಾಗದು. ದೈವವನ್ನು ಅರಿತು ಬಿಟ್ಟರೆ ತನ್ನ ಮತಿಯು ನಿಶ್ಚಿತವಾಗುವುದು. ಅಷ್ಟಾದರೆ ತೀರಿತು, ಜೀವ ಭಾವವು ನಶಿಸುತ್ತದೆ. ಜೀವಿಯು ಶಾಶ್ವತ ರೂಪವನ್ನು ಭಾವದಲ್ಲಿ ನಿಲಿಸಿ ಅಂತರ್ಮುಖಿಯಾದಾಗ ಕೇವಲ ನಿರ್ಗುಣ ಪ್ರಾಪ್ತವಾಗುತ್ತದೆ. ಆಗ ಅನಾವಶ್ಯಕವಾದುದನ್ನು ತ್ಯಜಿಸಬೇಕು.

ಉಪ್ಪು ಮತ್ತು ನೀರು ಒಂದೇ, ಉಪ್ಪು ನೀರಿನಿಂದಲೇ ಲವಣ ಹೊಂದಿರುತ್ತದೆ. ಮರಳಿ ಆ ಉಪ್ಪು ಕರಗಿ ನೀರೇ ಆಗುತ್ತದೆ. ಅದೇ ರೀತಿ ಶಿವ ಮತ್ತು ಜೀವರು ಭೂಮಿಯಲ್ಲಿರುತ್ತಾರೆ. ಶಿವನೆಂಬ ಜಲಧಿಯಿಂದ ಜೀವನೆಂಬ ಲವಣ ಹುಟ್ಟಿ ಮರಳಿ ನೀರಿನಲ್ಲಿ ಕೂಡಿ ನೀರೇ ಆಗುವಂತೆ ಮುಕ್ತಿಯಿದೆ. ಜೀವನದಲ್ಲಿ ಶಿವನು ಅಂದ ಮೇಲೆ ಜೀವಿಯನ್ನು ಕೊಂದರೆ ಶಿವನ ಕೊಲೆಯೇ ಆದಂತೆ! ಶಿವ-ಜೀವವೊಂದಾಗುವುದೆಂದರೆ ಜೀವೇಶ್ವ ಐಕ್ಯವಾಗುವುದೇ ಅಮಲವಾದ, ಅವ್ಯಯವಾದ ಅಸಿ ಪದವು. "ತತ್ತ್ವಮಸಿ" ಎಂಬುದದಲ್ಲಿ ತತ್ ಅಂದರೆ ಪ್ರತ್ಯಕ್ಷ ಆತ್ಮನೇ. ತ್ವಂ ಎಂದರೆ ಜೀವ ಬ್ರಹ್ಮನು. ಅಸಿ ಪದದಲ್ಲಿ ಲಕ್ಷ್ಯದೊಂದಿಗೆ ಜೀವನು ಐಕ್ಯನಾಗುವ ಸಂಕೇತವಿದೆ. 'ಸಃ ಅಹಂ ಎಂದರೆ ಅವನೇ ತಾನು ಎಂಬ ಸೋಹಂ ಏರ್ಪಡುತ್ತದೆ. ಎಲ್ಲಿ ತಿಳಿವು ಮರೆವುಗಳಿಲ್ಲವೋ, ಆ ಸ್ಥಿತಿ ತಾಕಿ, ಬ್ರಹ್ಮದಲ್ಲಿ ಸೇರಿ ತೊಡಗಿದ್ದರೆ ಆ ತತ್ ಪದವೇ ತನಗುಂಟು. ಅದುವೇ ಜ್ಞಾನ ಸ್ಥಿತಿ ಎಂದು ವೇಮನರು ಪ್ರತಿಪಾದಿಸಿದ್ದಾರೆ.

**ನಿಜಬೋಧೆ :**

ನಾನಾರೆಂಬುದನರಿಯದೆ
ಮಾನಸದಿ; ಜಗದೊಳು ಮನುಜನಿರುತಿಹರಕಟಾ
ಕಾಣನು ತನ್ನಯ ಸಕಲವ
ಮಾಣದೆ, ಕಂಡವರನೆಂತು ಮಹಿಯಲಿ ವೇಮಾ?
ತನ್ನ ತಾನೇ ಬಯಲೆನ್ನುತ
ಅನುಮಾನವಿರದೆ ತಾನೆ ಅಚಲನಾಗಿ ಇರಲ್
ವಿಷಯ ವಿಧೇಯತೆಯಗೂಡಿ
ಮನವೇ ಆನಂದರೂಪಮಯವ್ಯೆ ವೇಮಾ;



ತನುವ ಶೋಧ ಮಾಡಿ, ದೈವ ಮುಖ್ಯ ಮಾಡಿ
ಮುನ್ನಕರ್ಮಗಳನು ಮೂಲೆಗಿರಿಸಿ
ಮನವ ನಿಜವ ಮಾಡಿ, ಮಮತೆಯನ್ನಳಿಸಿ
ಮನಸು ನಿಲಿಸುವವನು ಮೋಕ್ಷಿ ವೇಮಾ!

ತಾನಾಗುವ ಅರಿತು ಸರ್ವವು
ತಾನಾಗುವ ತಿಳಿದು ಎಲ್ಲ ತತ್ತ್ವ ತಾನೇ,
ತಾನರಿತು ಪರಿಣಮಿಸದೆ,
ಮಾನವನಿಗೆ ಮುಕ್ತಿ ಇಲ್ಲ ಮಹಿಯಲಿ ವೇಮಾ

ತಾನೇ ತತ್ತ್ವವೆಂದು ತನ್ನನರಿಯದಿದ್ದು
ಮಾಯೆ ತತ್ತ್ವವೆಂದು ಮರುಗುತಿಹನು
ಧರ್ಮ ಕರ್ಮಗಳನು ತೆಗೆದೊಗೆಯೆ ತತ್ತ್ವ ॥ವಿಶ್ವ॥

ನಾನು ಎನ್ನುತಿಹುದು ನೀನು ಎನ್ನಬಹುದು
ನೀನು ನಾನು ಎನುವ ನಿಷ್ಠೆಯರಿತು
ನಾನು ನೀನೇ, ನೀನೇ ನಾನು, ಎನ್ನಬಹುದು ॥ವಿಶ್ವ॥

ತನ್ನನು ತಾ ತಿಳಿಯೆ ತತ್ತ್ವ
ತನಗನ್ಯರು ಬೋಧನೆಗೈಯೆ ಧರೆಯಲಿ ಇತರೆ?
ತನ್ನನು ತಾನು ತಿಳಿಯದೆ ಇರೆ
ತನಗಾರು ತಿಳಿಸಲಾರರು, ತಥ್ಯವು ವೇಮಾ?

ಧ್ಯಾನದಿಂದ ಉಂಟು, ತಾರಕ ಬ್ರಹ್ಮವು
ಧ್ಯಾನಿಸಿ ನೋಡೆ ತಾ ತತ್ತ್ವವಿಹನು
ಧ್ಯಾನದಿಂದ ಧ್ಯಾನ ತನ್ನ ತಾನು ಅರಿವ ॥ವಿಶ್ವ॥

ತನ್ನೊಳು ಸರ್ವವೂ ಇರುತಿರೆ
ತಾನೇಕದಿ ತಾನೆ ತನ್ನ ತಪ್ಪಿಸಿಕೊಳುವಂ
ತಾನೇ ಅಖಿಲ ವಿಧಿಗಳಲಿ
ತಾನೇ ಪರಮಾತ್ಮನೆಂದು ತಿಳಿಸೆಲೋ ವೇಮಾ!

ಬ್ರಹ್ಮವೆನಲು ಬೇರೆ ಪರದೇಶದೊಳಿಲ್ಲ
ಬ್ರಹ್ಮವೆನಲು ತಾನು ಬಟ್ಟಬಯಲು
ತನ್ನ ತಾನರಿಯಲು, ತಾನೇ ಹೋಗು ಬ್ರಹ್ಮ ॥ವಿಶ್ವ॥

ಶಿವ ಮತದಲಿ ಇರಲಿ, ವಿವರಿಸುವವನು ಗುರುವು,
ಹರಿ ಮತದಲಿ ಇರಲಿ, ಅರಿವ ಗುರುವು,
ಗುರುವು ಅರಿಯದಿರಲು ಗುಣಹೀನನರಿವನೇ? ||ವಿಶ್ವ||

ಹಗಲು, ಇರುಳು ಮರೆತು, ಭಾವವನ್ನೇ ಮರೆತಾ
ತಾನು ನಾನು ಎನುವ, ತಿಳಿವು ಮರೆತು
ಉಳ್ಳ ಮನುಜನೆ ತಿಳಿ, ಉತ್ತಮ ಯೋಗಿಯವ ||ವಿಶ್ವ||

ಇಲ್ಲಿ ನಾನು ನೀನಾಗುವುದೆಂದರೆ ಪರಮಾತ್ಮನಾಗುವುದು. ಮನುಷ್ಯನಾದರೂ ಯೋಗ ತತ್ತ್ವದ ಹಾದಿಯಲಿ ನಡೆದು ಮುಕ್ತಿಯನ್ನೈದುವವನು ಎಂಬುದಕ್ಕೆ ವೇಮನು ನಿಜದ ಬೋಧನೆಯನ್ನು ಈ ಪದಗಳಲ್ಲಿ ಮನುಕುಲಕ್ಕೆ ತಿಳಿಯಪಡಿಸಿದ್ದಾರೆ.

ನನ್ನದೆನ್ನುವ ಎಲ್ಲವನ್ನು ಅಲ್ಲಗೊಳಿಸಿದರೆ ನಾನಾರೆಂಬುದು ತಿಳಿಯಬಹುದು. ತಾನು ದೇಹವಲ್ಲ; ಇಂದ್ರಿಯಗಳಲ್ಲ; ಮನವಲ್ಲ, ಬುದ್ಧಿಯಲ್ಲ, ಇವುಗಳ ಬಯಲೇ ತಾನೆನ್ನುತ್ತ, ಅನುಮಾನವೇನೇನೂ ಇರದೆ, ಅಚಲವಾಗಿದ್ದರೆ, ಮನವು ಆನಂದರೂಪವಾಗಿ ಉಳಿಯುತ್ತದೆ. ನಾನು ದೇಹವಂತೂ ಅಲ್ಲ, ಆದರೆ ತನ್ನನ್ನು ಮನಸ್ಸಿನಿಂದ ಅರಿಯಲೆಳಸುವ ಮಾನವರಿಗೆ ನೀನು ಅರಿಯಬೇಕಾದರೆ, ಮೊದಲು ಮನಸ್ಸಿನ ಸಂಕಲ್ಪಗಳನ್ನು ಇಲ್ಲವಾಗಿಸಬೇಕು. ಸಂಕಲ್ಪರಹಿತನಾಗಿ, ನಿಸ್ಸಂದೇಹವಾಗಿ ಗುರಿಯನ್ನು ತಲುಪುವ ನಿಶ್ಚಿಯವಿದ್ದರೆ, ಗುರುವನ್ನು ಕೇಳಿ ದಾರಿ ಹುಡುಕಬೇಕೆಂದಿದ್ದಾರೆ.

'ನಾನು' ಎಂಬ ಅಹಂಕಾರವನ್ನು ತೊರೆದು ನೀನು ಎನ್ನಬಹುದು. ನಿಷ್ಠೆ ತಿಳಿದ ಬಳಿಕ ನಾನೇ ನೀನು; ನೀನೇ ನಾನು. ಮನವನು ಆತನನ್ನು ಕಾಣಲು ತತ್ತ್ವವು ಚೆನ್ನಾಗಿ ಗೋಚರಿಸುತ್ತದೆ. ಆದರೆ ತನ್ನನ್ನು ನೋಡಿದರೆ ಮಾಯೆ ತಗಲುತ್ತದೆ. ಆದ್ದರಿಂದ ಆತ್ಮವನ್ನು ಅರಿತ ಮೇಲೆ ತಾನಾರೆಂಬುದನ್ನು ಅರಿಯುತ್ತಾನೆ. ಆದರೆ ಸೋಜಿಗವೆಂದರೆ, ಆತ್ಮವನ್ನು ನೋಡುತ್ತಿದ್ದರೆ ತನ್ನನ್ನೇ ಮರೆಯುತ್ತಾನೆ. ಆದರೆ, ತನ್ನತ್ತ ನೋಡುತ್ತಿದ್ದರೆ, ಆತ್ಮವನ್ನೇ ಮರೆಯುತ್ತಾನೆ. ಆದ್ದರಿಂದ ಆತ್ಮ ನಿಷ್ಠೆ ಹೊಂದಿ ತನ್ನನ್ನು ತಾ ಅರಿಯಬೇಕು.

ಹಾಗೆ ನೋಡಿದರೆ ಲೋಕವೆಲ್ಲವೂ ಮಾಯೆ. ಈ ಮಾಯೆಯ ಮರ್ಮವನ್ನರಿಯಲು ಜನ್ಮವೇ ದಿವ್ಯ ಮಾಯೆಯೆನಿಸುತ್ತದೆ. ಮನದಲ್ಲಿ ಆತ್ಮನುಸಂಧಾನವನ್ನು ನಡೆಸಿ, ನೇತಿ, ನೇತಿ ಎಂದು ಮನಸ್ಸಿಗೆ ತೋಚಿದುದನ್ನೆಲ್ಲ ಅಲ್ಲಗಳೆಯಬೇಕು. ಅನಂತರ ಒಳಗಣ್ಣು ತೆರೆದು ಆತ್ಮವನ್ನು ತಿಳಿಯಬಹುದು. ತಾವು ಇರದ ಜಾಗೆಯಲ್ಲಿಯೇ ಆತ್ಮನು ತಾನುಂಟು; ಆದರೆ, ತಾವಿರುವ ಜಾಗೆಯಲ್ಲಿ



ಆತ್ಮನು ಇರಲಾರನು. ತಾವು ತಾನಾಗಿ ಇರಲು ತತ್ತ್ವ ತಿಳಿಯುವನು ಅಖಿಲವನ್ನು ನೋಡಿದರೆ ಎಲ್ಲೆಲ್ಲೂ ಆತ್ಮನೇ ಕಾಣಬರುತ್ತಾನೆ. ಅಖಿಲವನ್ನು ತುಂಬಿರುತ್ತಾನೆ. ಆತ್ಮವನ್ನು ನೋಡುವ ನೋಟವು ಬೇರೆಯೇ ಆಗಿದೆ. ಒಳನೋಟದಿಂದ ವೀಕ್ಷಿಸಿ ನೋಡುವವನು ಬೇರಾಗದೆ, ನೋಟವೇ ಆಗುತ್ತಾನೆ. ಇಂಥ ಆತ್ಮವನ್ನು ತನ್ನೊಳಗೆ ಹುಡುಕದೆ, ಧರೆಯಲ್ಲಿ ಅರಸುವವರು ಸಾರಿಗೆ ಸುತ್ತುತ್ತಾರೆ. ತನ್ನ ಅಂತರಂಗವನ್ನು ನೋಡಿ ತಿಳಿದರೆ, ಅವನೇ ಹರನು. ಅವನೇ ಗುರುವು. ಅವನೇ ಆರ್ಯ ಶ್ರೇಷ್ಠನು. ಅವನೇ ಶಿವಯೋಗಿ ಇರುವ ತಥ್ಯವೆಂದರೆ ಪೂರ್ಣ ತಥ್ಯವು ನಿನ್ನೊಳಗೇ ಇದೆ. ಮಿಥ್ಯವಾದುದನ್ನು ಅರಿತರೆ, ಆತ್ಮನು ಮಿತ್ರನಾಗುವನು. ಆತ್ಮವೇ ಪರಮಾತ್ಮ ಭಾವವೆಂದು ತಿಳಿದರೆ ಇದೆಲ್ಲವೂ ಬ್ರಹ್ಮವೇ ಎಂದು ತಿಳಿಯುತ್ತದೆ. ಆ ಅರಿವೇ ತಾನಾಗುತ್ತಾನೆ. ಮನಸು ನಿಲಿಸಿದವನು ಸರ್ವ ಸಮತೆಯಲಿ ಅನುಭವವನ್ನೇ ಕೋರಿ ಅಚಲನಾಗುತ್ತಾನೆ. ವೇದಾಂತ ವೇದ್ಯನನ್ನು ತಿಳಿಯುತ್ತಾನೆ. ತಾನು ತನ್ನನ್ನು ತಿಳಿದರೆ ತೀರಿತು. ತಾನೇ ಶಿವನು ಮನಸ್ಸಿನಲ್ಲಿರುವ ಮಹಿಮೆಯನ್ನರಿಯುವವನೇ ಯೋಗಿ, ಶಿವಯೋಗಿ, ಇದರ ತಾತ್ಪರ್ಯವೇನೆಂದರೆ, ಆತ್ಮಾನುಸಂಧಾನವು ಸ್ವಯಂ ಸ್ಫೂರ್ತಿಯಿಂದಾಗಬೇಕು.

ಮಹಾಯೋಗಿ, ವೇಮನರು, ಅಷ್ಟಾಂಗಯೋಗಗಳನ್ನೂ ಆಚರಿಸಿ ಮೋಕ್ಷ ಸಂಪಾದಿಸಿಕೊಳ್ಳಬಹುದೆಂದುದಾಗಿ ಸಹಸ್ರಾರು ಪದಗಳ ಮುಖಾಂತರ ತಿಳಿಯಪಡಿಸಿದ್ದಾರೆ. ಒಟ್ಟಿನಲ್ಲಿ ಮಾನವ ಮಹಾಮಾನವ, ದೇವಮಾನವ, ಶಿವಯೋಗಿಯಾಗುವ ಬಗೆಯಲ್ಲಿ ಗುರು ಮಾರ್ಗದರ್ಶನದಲ್ಲಿ ಸಾಗಬೇಕೆಂಬುದಾಗಿ ತಾತ್ವಿಕಾಂಶಗಳ ಹಿನ್ನೆಲೆಯಲ್ಲಿ ಶ್ರೀ ಸಾಮಾನ್ಯನಿಗೂ ತಿಳಿಯುವ ರೀತಿಯಲ್ಲಿ ಹೇಳಿದ್ದಾರೆ. ಮೋಕ್ಷಾಪೇಕ್ಷಿತನಾಗುವುದೇ ಮನುಕುಲದ ಧ್ಯೇಯ ಧೋರಣೆಯಾಗಬೇಕು. ಮನುಷ್ಯನಾಗಿ ಜನ್ಮಧರಿಸಿ ಹೇಗೋ ಬಾಳು ಸವೆಯಿಸುವುದಲ್ಲ. ಸತ್ಯಂ ಶಿವಂ ಸುಂದರಂ (ಮೋಕ್ಷ)ವನ್ನು ಕಾಣುವ ಹಂಬಲವಿದ್ದರೆನೇ ಮಾನವ ಜನ್ಮ ಸಾರ್ಥಕವಾಗುತ್ತದೆ. ಅಂತಹ ರಹದಾರಿಯಲ್ಲಿ ಹೋಗುವ ಪ್ರಯತ್ನ ಮಾಡೋಣ! ಮೋಕ್ಷ ಸಂಪಾದನೆಯೇ ನಮ್ಮ ಗುರಿಯೆಂದು ವೇಮನರ ತತ್ತ್ವ ಸಿದ್ಧಾಂತಗಳನ್ನು ಅನುಸರಿಸಿ ಅನುಷ್ಠಾನಕ್ಕೆ ತರೋಣವೇ?

■■

# ಸಮಾರೋಪ

ನಮ್ಮ ದೇಶ ಭವ್ಯ ಪರಂಪರೆ ಧರ್ಮ ಅಧ್ಯಾತ್ಮ-ಸತ್ ಸಂಸ್ಕೃತಿಯುಳ್ಳದ್ದು. ಆದುದರಿಂದ ಜಗತ್ತಿನ ಇನ್ನುಳಿದ ದೇಶಗಳ ಚಿತ್ತ ಭಾರತದತ್ತ ಎಂದು ಹೇಳಿದರೆ ತಪ್ಪಾಗಲಾರದು. ಇಂಥ ಭಕ್ತಿಯ ಯೋಗದ-ಧರ್ಮ-ಅಧ್ಯಾತ್ಮಗಳ ಭದ್ರ ಬುನಾದಿಯನ್ನು ಹಾಕಿದವರು. ಅನೇಕ ಪುಣ್ಯಪುರುಷರನ್ನು ನೆನೆಯುವಂತಹ ಪುಣ್ಯಕಾಲವಿದು. ನಾವು ಇಂದು ಎಷ್ಟೋ ವೈಜ್ಞಾನಿಕವಾಗಿ ಮುಂದುವರೆದಿದ್ದೇವೆ ಯೆಂದರೂ ಪಂಚ ಮಹಾಭೂತ (ತತ್ತ್ವ) ಗಳಿಲ್ಲದೇ ಬದುಕಲಾರೆವು. ಅವುಗಳನ್ನು ಕರುಣಿಸಿದವರು ಯಾರು? ಎಂಬುದರ ಅರಿವಾದರೂ ಮಾನವನಿಗಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ವಿಚಾರ ಮಾಡಿದಾಗ ಅನೇಕ ದಿವ್ಯ-ಮಹಾಪುರುಷರಲ್ಲಿ ಮಹರ್ಷಿ ತಿರುವಳ್ಳುವರರು ಮತ್ತು ಮಹಾಯೋಗಿ ವೇಮನರು ಹೇಳಿದ ಪತ್ಯಾಧಾರಿತ ಕೃತಿಗಳ ಮೂಲಕ ನಾನಿಲ್ಲಿ ಅವರ ಉನ್ನತೋನ್ನತ ವಿಚಾರಗಳನ್ನು ಅವರದೇ ಆಗಿರುವ ಕಾವ್ಯ ಕೃತಿಗಳಲ್ಲಿರುವ ಪದ್ಯಗಳನ್ನೇ ಆಯ್ದುಕೊಂಡು ವಿವರಿಸಲು ಪ್ರಯತ್ನ ಮಾಡಿರುವೆನು. ಅವರ ಪ್ರತಿಯೊಂದು ಪದ್ಯವೂ ಮನುಕುಲದ ಉದ್ಧಾರದ ಕೀಲಿಯಕೈಯಿದ್ದಂತೆ, ದರ್ಪಣವಿದ್ದಂತೆ! ಆದುದರಿಂದ ಸಹೃದಯರು ಗಮನಿಸಬೇಕೆಂದು ಹರಸಾಹಸ ಮಾಡಿ, ಪ್ರಯತ್ನಪಟ್ಟು ಅಧ್ಯಯನ ಮಾಡಿ ಬರೆಯಲಾಗಿದೆ. ಮನುಷ್ಯ ಜನ್ಮ ಸಾರ್ಥಕವಾಗಬೇಕಾದರೆ ಸಾರ ಸಜ್ಜನರ ಸಂಗವನು ಮಾಡಬೇಕು ಅವರಿಂದ ಸತ್ಸಂಗದ ಸವಿಜೇನು ಸವಿದು ಸಂಸಾರವನ್ನು ಜೇನುಗೂಡನ್ನಾಗಿಸಿಕೊಳ್ಳಬೇಕೆಂಬುದಾಗಿದ್ದು; ಅಂತಹ ನುಡಿಗಡಣಗಳು ಈ ಇಬ್ಬರೂ ಮಹಾತ್ಮರ ಕೃತಿಗಳಲ್ಲಿ ಮೂಲದಲ್ಲಿರುವುದನ್ನೇ ಅವರು ನೀಡಿದ ನಾಲ್ಕು ವಿಭಾಗಗಳಲ್ಲಿ ಹೇಳಲು-ನಾನಿಲ್ಲಿ ಪ್ರಯತ್ನಿಸಿದ್ದೇನೆ. ಅದು ಕಾರಣ, ಅನನ್ಯ ಭಕ್ತಿಯಿಂದ ಈ ಕೃತಿಯನ್ನು ಓದಿಕೊಂಡು, ಅದರಂತೆ ನಡೆಯುವ ಪ್ರಯತ್ನ ತಮ್ಮಿಂದಾಗಬೇಕೆಂಬುದಾಗಿ ನನ್ನ ವಿನಮ್ರ ಕಳಕಳಿಯಿದೆ.

ಮೋಕ್ಷ ಪ್ರಾಪ್ತಿಗಾಗಿ ಗವಿ-ಗುಹೆ-ಗುಡ್ಡ-ಬೆಟ್ಟಗಳನ್ನು ಸೇರಿ ತಪಸ್ಸುಗೆಯ್ಯಬೇಕಾಗಿಲ್ಲ. ನಾವಿರುವ ಸ್ಥಳದಲ್ಲಿಯೇ ಸ್ವರ್ಗವಿದೆ. 'ಸತ್ಯ ಶಿವಂ ಸುಂದರಂ' ಇದೆ. ಅಂದರೆ ಪ್ರತಿಯೊಂದು ವಸ್ತುವಿನಲ್ಲಿಯೂ ಆ ಭಗವಂತನಿದ್ದಾನೆ. ಪ್ರತಿಯೊಬ್ಬರ ಹೃದಯ ಮಂದಿರದಲ್ಲಿಯೂ ಆತ್ಮನ ರೂಪದಲ್ಲಿ ವಾಸವಾಗಿದ್ದಾರೆ. ಆದರೆ,



ಒಳಗಿರುವ, ಅಂತರಂಗದೊಳಿರುವ ಆತ್ಮನಿಗೆ ದೋಷ ಅಂಟದಂತೆ ನೋಡಿಕೊಳ್ಳುವ ಕಾಳಜಿ ನಮ್ಮೆಲ್ಲರ ಮೇಲಿದೆ. ಅಂತೆಯೇ ಈ ಇಬ್ಬರೂ ಮಹಾತ್ಮರುಗಳು ಹೇಳಿದ್ದುದೇನೆಂದರೆ ಹಂತ ಹಂತವಾಗಿ ನಿಚ್ಚಣಿಕೆಯ ಪಾವಟಿಗೆ (ಮೆಟ್ಟಿಲು)ಗಳನ್ನು ಏರುತ್ತೇರುತ್ತ ಮೇಲ್ಮಟ್ಟದ ಹಂತವನ್ನು ತಲುಪುವಂತೆ ಧರ್ಮ ಮಾರ್ಗ, ಅರ್ಥಮಾರ್ಗ, ಕಾಮ ಮಾರ್ಗ, ಮೋಕ್ಷ ಮಾರ್ಗಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಅನುಸರಿಸಬೇಕು ಎಂಬುದಾಗಿ ಇಬ್ಬರೂ ಮಹಾತ್ಮರು ತಮ್ಮ ತಮ್ಮ ಗ್ರಂಥಗಳಲ್ಲಿ ಕೊಡಮಾಡಿದ್ದಾರೆ. ತಿರುವಳ್ಳುವರದು 'ತಿರುಕ್ಕುರಳ್' ಕಾವ್ಯ ಕೃತಿಯಾದರೆ; ವೇಮನರದು- 'ವೇಮನ ವಿಶ್ವಗೀತೆ' ಎಂಬುದಾಗಿದೆ. ಅವರಿಬ್ಬರೂ ತಮಿಳಿನಲ್ಲಿ ತಿರುವಳ್ಳುವರರು ಬರೆದರೆ; ವೇಮನರು ತೆಲುಗಿನಲ್ಲಿ ಬರೆದಿರುವರು. ಅವುಗಳನ್ನು ಕ್ರಮವಾಗಿ ನ.ಮುನಿಸ್ವಾಮಿಯವರು ತಿರುಕ್ಕುರಳ್ ಕಾವ್ಯವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಹಾಗೆಯೇ ಶ್ರೀ ಎಸ್.ಆರ್.ಪಾಟೀಲ ಅವರು ವೇಮನರ ಪದ್ಯಗಳನ್ನು ಸುಮಾರು ೪೦೦೦ ರಷ್ಟು ತೆಲುಗು ಮೂಲದವುಗಳನ್ನು ಕನ್ನಡಕ್ಕೆ ಅನುವಾದಿಸಿ "ಮಹಾಯೋಗಿ ವೇಮನ ವಿಶ್ವಗೀತೆ" ಎಂಬುದಾಗಿ ಕರ್ನಾಟಕ ವಿಶ್ವವಿದ್ಯಾಲಯದ ವೇಮನ ಪೀಠದ ವತಿಯಿಂದ ಪ್ರಕಟಿಸಿದ್ದಾರೆ. ನಾವೆಲ್ಲರೂ ಅವರಿಬ್ಬರನ್ನೂ ತುಂಬು ಮನದಿಂದ ನೆನೆಯಲೇಬೇಕಾದುದು. ಬೇರೆ ಭಾಷೆಯ ಮೌಲಿಕ ಗ್ರಂಥಗಳನ್ನು ಓದಿ ಅವರ ವಿಚಾರಗಳನ್ನು ತಿಳಿದುಕೊಳ್ಳುವ ಸದಾವಕಾಶವೆಂದೇ ನಾನು ಭಾವಿಸಿಕೊಂಡಿದ್ದೇನೆ.

ಈ ಎರಡೂ ಕೃತಿಗಳಲ್ಲಿ ಉದಾತ್ತ ತಾತ್ತ್ವಿಕ ಸಂಪತ್ತು ಹಾಗೂ ಮಾನವನಿಗೆ ಬೇಕಾಗಿರುವ ಜೀವನ ಮೌಲ್ಯಗಳನ್ನು ಕೊಡುತ್ತವೆ. ಅವರಿಬ್ಬರೂ ಮಹಾತ್ಮರ ಪ್ರತಿಯೊಂದೂ ಪದ್ಯವೂ ಮಿಗಿಲಾದವುಗಳೇ ಆಗಿದ್ದು; ಮನುಕುಲದ ಉದ್ಧಾರದ ಕೈದೀವಿಗೆಗಳಂತಿವೆ. ಕತ್ತಲೆಯಿಂದ ಬೆಳಕಿನೆಡೆಗೆ ಸಾಗುವ ನುಡಿ ತೋರಣಗಳಂತಿವೆ. ಆದುದರಿಂದ ನಾವೆಲ್ಲರೂ ಅನನ್ಯ ಭಕ್ತಿಯಿಂದ ಓದಿ ಅರ್ಥೈಸಿಕೊಂಡು ಸನ್ಮಾರ್ಗದಲ್ಲಿ ನಡೆಯುವಂತಹ ಸದಾಶಯವು ನಮ್ಮದಾಗಬೇಕು. ಇವರ ಎರಡೂ ಕೃತಿಗಳು ನಮ್ಮ ಬದುಕಿಗೆ ಪೂರಕವಾಗುವಂತಿವೆ. ಮನುಷ್ಯ ಜನ್ಮ ಧರಿಸಿ ಬಂದ ಮೇಲೆ ಅಗತ್ಯವಾಗಿ ಓದಲೇಬೇಕಾದ ಕಾವ್ಯಗಳಿವು ಎಂಬುದನ್ನು ಹೇಳಲೇಬೇಕಾದುದು. ಒಟ್ಟಿನಲ್ಲಿ ಈ ಇಬ್ಬರೂ ಮಹಾತ್ಮರ ಕೃತಿಗಳ ಮೂಲ ರೂಪವನ್ನು ಸರಳವಾಗುವ ರೀತಿಯಲ್ಲಿ ಬರೆಯಲು ಮಾಡಿದ ಒಂದು ಸಣ್ಣ ಪ್ರಯತ್ನ ನನ್ನದಾಗಿದೆ. ಇಂದಿನ ವೈಚಾರಿಕತೆಯು, ವೈಜ್ಞಾನಿಕ ಯುಗದಲ್ಲಿದ್ದರೂ ಅಧ್ಯಾತ್ಮದೊಂದಿಗೆ ಅನುಸಂಧಾನದಲ್ಲಿದ್ದರೆ ಮನಸ್ಸಿಗೆ ನೆಮ್ಮದಿ ಮತ್ತು ಶಾಂತಿ ಸಮಾಧಾನ ನೆಲೆಸಲು ಸಾಧ್ಯವಾಗುತ್ತದೆ.

■■

## ಆಧಾರ ಗ್ರಂಥಗಳು

೧. ತಿರುಕ್ಕುರಳ್–ತಿರುವಳ್ಳುವರರು–ಕನ್ನಡ ಅನುವಾದಕರು ನ.ಮುನಿಸ್ವಾಮಿ, ಪ್ರಕಾಶಕರು: ನಲ್ವಾಳ್ವಗಂ, ಬೆಂಗಳೂರು, ೧೯೮೫.

೨. ವೇಮನ ವಿಶ್ವಗೀತೆ, ಸಂ. ಶ್ರೀ ಎಸ್.ಆರ್.ಪಾಟೀಲ, ಮಹಾಯೋಗಿ ವೇಮನ ಪೀಠ, ಕ.ವಿ.ವಿ. ಧಾರವಾಡ, ೧೯೯೮.

೩. ವೇಮನ ಗೀತೆ ಭಾಗ–೧ ವೇಮನ ಸಾಹಿತ್ಯ ಮಾಲೆ) ೧೯೬೭; ೧೯೬೮ ಮತ್ತು ಭಾಗ–೨ ಲೇಖಕರು, ಶ್ರೀ ಎಸ್.ಆರ್.ಪಾಟೀಲ ವಿಶಾಲಕರ್ನಾಟಕ ಪ್ರಕಟನಾಲಯ, ಹುಬ್ಬಳ್ಳಿ.

೪. ಮಂಕುತಿಮ್ಮನ ಕಗ್ಗದ ತಾತ್ಪರ್ಯ– ಡಾ. ಡಿ.ವ್ಹಿ.ಜಿ. ಬೆಂಗಳೂರು, ೨೦೦೮.

೫. ಷಟ್‌ಸ್ಥಲ: ಒಂದು ಅಧ್ಯಯನ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಶಿವಯೋಗಿಗಳು, ಸಂಸ್ಥಾನಮಠ, (ಬಸವೇಶ್ವರ ಪೀಠದ ಬೆಳ್ಳಿ ಹಬ್ಬದ ಪ್ರಕಟಣೆ), ಮುಂಡರಗಿ, ಪ್ರಕಾಶಕ: ಶ್ರೀ ಮುರಗೋಡ ಮಹಾಂತ ಶಿವಯೋಗೀಶ್ವರ, ಶತಮಾನೋತ್ಸವ ಸ್ಮಾರಕ, ಶ್ರೀ ಬಸವೇಶ್ವರ ಪೀಠ ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ, ೨೦೦೩.

೬. ವಚನ ಮುಖದಲ್ಲಿ ಶರಣ ದರ್ಶನ–ಪ್ರೊ. ಬ.ಗಿ.ಯಲ್ಲಟ್ಟಿ, ಪ್ರಕಾಶಕರು, ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಧರ್ಮ ಪ್ರಸಾರಕ ಮಂಡಲ, ಇಲಕಲ್ಲ, ೧೯೯೭.

೭. ಶ್ರೀ ಸದ್ಗುರು ಆತ್ಮಾನಂದ– ಪ್ರೊ. ಎಸ್.ಎಸ್.ಕುರಬರ, ಸ್ವಾಮಿಗಳವರ ಪ್ರವಚನ ಸಾರ ಅದ್ಯಾತ್ಮ ಜ್ಞಾನ ಪ್ರಕಾಶನ, ಸುಖಯೋಗಾಶ್ರಮ.

೮. ಅನುಭಾವ ಪಥ–೨೦೧೦ ರಲ್ಲಿ ಪ್ರಕಟವಾದ ಗುಂಡೇನಟ್ಟಿ, ಪ.ಪೂ.ಡಾ. ಶಿವಕುಮಾರ ಸ್ವಾಮಿಗಳ ೮೧ನೆಯ ಮಹೋತ್ಸವ ಸಂಪುಟ–ಸಿದ್ಧಗಂಗಾ ಶ್ರೀಮಠ, ತುಮಕೂರು.

■■